ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ.





ಸಂಶೋಧಕಿ
ಡಿ.ಎಸ್.ಶ್ವೇತ

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ

ವಿದ್ಯಾರಣ್ಯ
೨೦೧೨

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಡಿ. ಎಸ್. ಶ್ವೇತ



ಮಾರ್ಗದರ್ಶಕರು

ಡಾ. ಎಸ್. ಸಿ. ಪಾಟೀಲ್

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೨

ಪ್ರಮಾಣ ಪತ್ರ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 30-6-2012

ಸ್ಥಳ: ವಿದ್ಯಾರಣ್ಯ

(ಡಿ. ಎಸ್. ಶ್ವೇತ)

ಸಂಶೋಧನ ವಿದ್ಯಾರ್ಥಿನಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದೃಢೀಕರಣ ಪತ್ರ

ಡಿ.ಎಸ್. ಶ್ವೇತ ಇವರು ಬರೆದು ಸಾದರಪಡಿಸಿದ **ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ** ಎಂಬ ಶೀರ್ಷಿಕೆಯ ಸಂಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.


ಪ್ರಸ್ತುತ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: 30-6-2012

ಸ್ಥಳ: ವಿದ್ಯಾರಣ್ಯ

(ಡಾ.ಎಸ್.ಸಿ.ಪಾಟೀಲ)

ಮಾರ್ಗದರ್ಶಕರು
ಡೀನ್, ಲಲಿತಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ದೃಶ್ಯಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ



ಪರಿವಿಡಿ



RAJA RAVI VARMA
THE PAINTER PRINCE
1848–1906



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಕಲಾ ಜಗತ್ತಿಗೆ ಕಾಲಿಟ್ಟಿರುವ ದೇಶಿಯೊಬ್ಬನು ತನ್ನ ನಾಡಿನಲ್ಲಿ ಬಾಳಿ, ಬದುಕಿ ಅದರ ನೆಲದಲ್ಲಿ ನಡೆದು, ನೀರಲ್ಲಿ ಈಸಿ, ಗಾಳಿಯಲ್ಲಿ ತೇಲಾಡಿ, ಅಲ್ಲಿನ ಆವರಣದಲ್ಲಿ ಆಗುವಂತಹ ಅನುಭವಗಳಿಂದ ತನ್ನ ಮನಸ್ಸನ್ನು ಒಳ್ಳೆಯ ಅಂಶಕ್ಕೆ ಬೆಳೆಯಿಸಿಕೊಂಡು ಪ್ರಬುದ್ಧನಾಗುತ್ತಾನೆ. ಆ ಆವರಣವು ಅವನಲ್ಲಿ ಹುಟ್ಟಿಸಿದ ನೂರಾರು ಸಿಹಿ-ಕಹಿ ಅನುಭವಗಳನ್ನೆಲ್ಲ ಒಂದೊಂದು ಕಲಾಸಾಧನದ ಮೂಲಕ ಪ್ರಕಟ ಪಡಿಸಲು ಪ್ರಯತ್ನಿಸುತ್ತಾನೆ. ಅವನು ಜೀವನವನ್ನು ನೋಡುವ ನೋಟ ನಡೆಸುವ ದಾರಿಗಳಿಗೂ, ಕಲಾವಿದ ನಡೆದು ಬಂದಿರುವ ಆವರಣವು ಮುಖ್ಯ ಕಾರಣವಾಗುತ್ತವೆ. ಈ ಆವರಣದಲ್ಲಿ ಅವನ ದೇಶಿಯ ಸಂಸ್ಕೃತಿಯೂ ಪ್ರಧಾನ ಪಾತ್ರವಹಿಸುತ್ತದೆ[೦೧] ಎಂಬುದು ಯಾವುದೇ ವಿಷಯದಲ್ಲಿ ಸಾಧನೆಗೈದ ಹಿರಿಯರ ಪ್ರಬುದ್ಧತೆಯನ್ನು ಗುರುತಿಸಿ ಅವರ ಬದುಕು, ಬರಹ ಅಥವಾ ಕಲಾಕೃತಿಗಳ ಅಧ್ಯಯನದ ವಿಷಯಕ್ಕೆ ಸೂಕ್ತವಾಗಿದೆ.

ಕಲಾಪ್ರಪಂಚದಲ್ಲಿ ಭಾರತೀಯ ಚಿತ್ರಕಲೆಯ ಕೊಡುಗೆ ಅಪಾರವಾದದ್ದು, ಇಲ್ಲಿನ ಕಲಾಕೃತಿಗಳ ವಸ್ತು ವೈವಿಧ್ಯತೆ ಮತ್ತು ಶೈಲಿಯ ವೈಶಿಷ್ಟ್ಯ ಇವುಗಳ ದೃಷ್ಟಿಯಿಂದ ನಮ್ಮ ಚಿತ್ರಕಲಾ ಪರಂಪರೆಯ ಸಂಪತ್ತು ಅಪೂರ್ವವಾಗಿದೆ. ಭಾರತದಾದ್ಯಂತ ಕಂಡುಬರುವ ಈ ಚಿತ್ರಕಲೆಯ ಅಭಿವ್ಯಕ್ತಿ ತನ್ನ ಆದರ್ಶವನ್ನು

೦೧. ಡಾ. ಎಸ್. ಸಿ. ಪಾಟೀಲ (ಸಂ) : ಶಿಕ್ಷಣ ಸಂಪದ, ಪುಟ – ೧೦೧

ಎಲ್ಲಾ ಕಾಲದಲ್ಲಿ ಉಳಿಸಿಕೊಂಡು ಬಂದಿದೆ. ಇಂತಹ ಅನನ್ಯವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ಕಲಾಕೃತಿಗಳು, ಕಲಾತತ್ವಗಳು ಮತ್ತು ಅವುಗಳ ವಿಮರ್ಶೆ ಕಲಾ ಇತಿಹಾಸ ಮುಂತಾದ ಅಂಶಗಳು ಹಾಗೂ ಕಲಾವಿದರ ಕುರಿತು ಅಧ್ಯಯನಗಳು ಅಷ್ಟೊಂದು ಗಂಭೀರವಾಗಿ ನಮ್ಮದೇಶದಲ್ಲಿ ನೆಡೆದಿಲ್ಲವೆಂದರೂ ಕಲಾವಿದರು ಬಾಳಿ ಬದುಕಿದ ಪರಿಸರ ಮತ್ತು ಕಲಾವಿದರ ಕಲೆಯ ಹಿನ್ನೆಲೆಯನ್ನು ಕುರಿತು ಯುರೋಪಿನ ಜನರು ಹೆಚ್ಚು ಆಸಕ್ತಿವಹಿಸಿದ್ದರು.

ಸುಮಾರು ಕ್ರಿ.ಶ. ೧೪-೧೫ನೇ ಶತಮಾನದಿಂದ ಲಿಖಿತ ಸಾಹಿತ್ಯದ ಮೂಲಕ ಕಲಾಕೃತಿಗಳಲ್ಲಿಯ ಅವರ ಸಂಸ್ಕೃತಿಯ ಪರಿಚಯವನ್ನು ನಾಡಿಗೆ ಸಮರ್ಪಿಸುತ್ತಾ ಬಂದಿದ್ದಾರೆ. ಇದರಿಂದ ಗೊತ್ತಾಗುವುದು ಪಾಶ್ಚಾತ್ಯರಲ್ಲಿ ಕಲಾಪ್ರಜ್ಞೆ ಉನ್ನತ ಮಟ್ಟಕ್ಕೇರಿದೆಯೆಂದು ಭಾರತದೇಶವೂ ಕೂಡ ಸುಂಸ್ಕೃತವುಳ್ಳದ್ದಾಗಿದ್ದು, ಇತ್ತೀಚಿನ ದಿನಗಳಲ್ಲಿ ಕಲಾ ಸಾಹಿತ್ಯವು ತುಂಬಾ ವೇಗವಾಗಿ ಚಲಿಸುತ್ತಿದ್ದು, ಅದಕ್ಕೆ ಹಿರಿಯ ತಜ್ಞರು ಕಲಾ ಸಾಹಿತಿಗಳು ವಿಶ್ವವಿದ್ಯಾಲಯಗಳು ಸಂಶೋಧಿಸುವ ನಿಟ್ಟಿನಲ್ಲಿ ಉತ್ತಮ ಕೆಲಸಗಳನ್ನು ಮಾಡುತ್ತಿರುವುದರಿಂದ ಚಿತ್ರಕಲಾ ಕ್ಷೇತ್ರದಲ್ಲಿ ಅನೇಕ ಉತ್ತಮ ಅಂಶಗಳನ್ನೊಳಗೊಂಡ ಕಲಾಸಾಹಿತ್ಯ, ಕಲಾವಿದರ ಬದುಕು, ಕಲಾಕೃತಿಗಳ ಕುರಿತು ದೀರ್ಘ ಅಧ್ಯಯನ ಮಾಡುವ ಮೂಲಕ ಸಂರಕ್ಷಿಸುವ ಜೊತೆಗೆ ಪ್ರಪಂಚಕ್ಕೆ ಪರಿಚಯಿಸುವ ಕೆಲಸ ಕಾರ್ಯಗಳು ಈ ಕ್ಷೇತ್ರದಲ್ಲಿ ಭರದಿಂದ ಸಾಗಿದ್ದೂ, ಡಾ. ಶಿವರಾಮ ಕಾರಂತರು ಅಭಿಪ್ರಾಯ ಪಡುವಂತೆ ನಮ್ಮ ದೇಶದ ಮಟ್ಟಿಗೆ ಹೇಳುವಲ್ಲಿ ಬಹುಮಂದಿ ವಿದ್ಯಾವಂತರಿಗೆ ಜಗತ್ತಿನ ವಿವಿಧ ಕಲೆಗಳ ಪರಿಚಯ ಇರುವುದಂತಿರಲಿ ಸ್ವದೇಶದ ಚಿತ್ರ, ಶಿಲ್ಪಾದಿ ಕಲೆಗಳ ಪರಿಚಯವೂ ಸಾಕಷ್ಟಿಲ್ಲ. ಅವನ್ನು ಕುರಿತು ದೇಶ ಭಾಷೆಗಳಲ್ಲಿ ತಿಳಿಸಿ ಹೇಳುವ ಸಾಹಿತ್ಯಕ್ಕೂ ಕೊರತೆ ಇದೆ.

ನಮ್ಮ ದೇಶ ಭಾಷೆಗಳಲ್ಲಿ ಕಾಣಿಸುವ ಈ ನೂನ್ಯತೆ ಬೃಹತ್ ಗಾತ್ರದ್ದು,[೨] ಎಂಬ ಅಂಶವನ್ನು ಕಾರಂತರು ಹೇಳಿರುವುದು ಅವರ ಸಂದರ್ಭದ ದಿನಗಳಿಗೆ ಹೊಂದಿಕೊಳ್ಳಬಹುದೇ ಹೊರತು ಪ್ರಸ್ತುತ ದಿನಕ್ಕೆ ಅಲ್ಪ ಬದಲಾವಣೆ ಆಗಿದೆ ಎಂಬುದು ಇಲ್ಲಿ ಮುಖ್ಯ ಅಂಶ. ಈ ದಿನಗಳಲ್ಲಿ ಬದಲಾವಣೆಯ ಹಂತದಲ್ಲಿ ಕಲಾ ಸಾಹಿತ್ಯವು ಮುನ್ನುಗುತ್ತಿರುವಂತೆ ಅನೇಕ ವಿಷಯ (ಚಿತ್ರಕಲೆ)ಗಳು ಬೆಳಕಿಗೆ ಬರಲಾರಂಭಿಸಿದ್ದು, ಕಳೆದು ಹೋಗಿರುವುದನ್ನು ಸಹ ಪತ್ತೆ ಹಚ್ಚಿ ಸಂರಕ್ಷಿಸಿರುವ ಉದಾಹರಣೆಗಳು ಇದ್ದಾವೆ. ಹೀಗೆಯೇ ಮುಂದುವರೆದಂತೆ ಪಾಶ್ಚಾತ್ಯ ದೇಶಗಳಿಗೆ ಸರಿಸಮವಾಗಿ ನಿಲ್ಲುವಂತಹ ಸಮಯ ದೂರವಿಲ್ಲ.

ಜೀವನ ಸಾದೃಶ್ಯದ ಮಾನಸಿಕ ರೂಪವನ್ನು ಕಾಣಿಸುವುದೇ ಕಲೆಯೆಂದು ನುಡಿದ ಭಾವಿಕ ಒಮ್ಮೆಲೇ ಅನೇಕ ಸೌಂದರ್ಯಗಳನ್ನು ನಮ್ಮ ಮುಂದೆ ತೆರೆಹರಿದು ತೋರಿದ್ದಾನೆ. ಜೀವನದ ಸ್ಪಷ್ಟ ಅನುಕರಣವನ್ನು ಉತ್ತಮ ಕಲೆಯೆಂದು ಕಲೆಯೆಂದು ಕರೆಯಲು ಸಾಧ್ಯವಿಲ್ಲ. ಕಲೆಯ ಉದ್ದೇಶ ಅನುಕರಣೆಯಲ್ಲಿ ಸೃಷ್ಟಿ.

೦೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ – ೩



ಆದರೆ ಗಹನವಾದ ಮಾನಸಿಕ ರೂಪವನ್ನು ಇಂದ್ರಿಯಾತೀತವಾದುದ್ದನ್ನು ಇಂದ್ರಿಯಗಳಿಗೆ ಗೋಚರವಾಗುವಂತೆ ಮಾಡಬೇಕಾದರೆ ಅವುಗಳಿಗೆ ತಕ್ಕ ಮಟ್ಟಿನ ಜೀವನ ಸಾದೃಶ್ಯವನ್ನು ಕಲ್ಪಿಸಬೇಕಾಗುತ್ತದೆ. ಇಂದ್ರಿಯಗಳಿಗೆ ಗೋಚರವಾಗುವಂತಹ ರೂಪದ ಕಟ್ಟಡದಲ್ಲಿ ಅವುಗಳನ್ನು ನಿಲ್ಲಿಸಬೇಕಾಗುತ್ತದೆ[೦೩] ಈ ರೀತಿಯ ಅಂಶವನ್ನು ಅನಕೃರವರು ಕಲೆಯ ಕುರಿತು "ಭಿನ್ನ"ವಿರುವ ಅಂಶವು ಉಪಯುಕ್ತವೆನಿಸಿದರೂ ಕಲೆಯು ಅನೇಕ ಭಿನ್ನತೆ ಹಾಗೂ ಗಾಂಭೀರ್ಯದ ಜೊತೆಗೂಡಿ ವಿವಿಧ ಆಯಾಮಗಳ ನೆಲೆಯಾಗಿರುವುದರಿಂದ ರೂಪಕೊಡುವುದು ತುಂಬಾ ಸೂಕ್ಷ್ಮವಾಗಿದೆ.

ಸಂಪ್ರದಾಯಗಳ ಮಾನದಂಡದಿಂದ ಕಲೆಯನ್ನು ಕಲಾವಿದನನ್ನು ಅಳೆಯುವುದಕ್ಕಿಂತ ಅವನ ಕಲೆಯ ಅಂತಿಮ ಗುರಿ ಅದರ ಸಾಧನೆಯ ಸಾಹಸ ಅದಕ್ಕೆ ನೆರವಾದ ಜೀವನ ಶಿಕ್ಷಣ ಸಂಸ್ಕೃತಿಗಳನ್ನು ಗಮನಿಸಿದರೆ ಕಲೆಯ ಮೃಗ ಜಲದ ಮೊಬ್ಬು ಹರಿಯಬಹುದು. ಕಲಾವಿದನ ಮತ್ತು ಅವನ ಕೃತಿಗಳ ಶಸ್ತ್ರ ಚಿಕಿತ್ಸೆ ಮಾಡುವುದೇ ವಿಮರ್ಶಕರ ಮತ್ತು ಪ್ರೇಕ್ಷಕರ ಉದ್ದೇಶ ಆಗಿರಬಾರದು, ಕಲೆಯು ಮಾನವನ ಮನಸ್ಸನ್ನು ಉಲ್ಲಾಸ ತರುವಂತಹದ್ದಾಗಿದೆ. ಆದ್ದರಿಂದ ಕಲಾವಿದ ರಚಿಸುವಂತಹ ಕಲಾಕೃತಿಗಳು ಎಷ್ಟರ ಮಟ್ಟಿಗೆ ಜನರ ಮನಸ್ಸನ್ನು ಮುಟ್ಟುತ್ತವೆ ಎಂಬ ಬಿಂಬತೆಯನ್ನು ಕಂಡುಹಿಡಿಯುವುದು. ಅದರ ಕುರಿತು ಚರ್ಚಿಸುವುದು, ಪ್ರೋತ್ಸಾಹಿಸುವುದರಿಂದ ಕಲಾವಿದನ ಕಣ್ಣು ಮಂದವಿದ್ದರೂ ಚುರುಕಾಗಿ ಉಪಯುಕ್ತ ಅಂಶಗಳನ್ನೊಳಗೊಂಡ ಕೃತಿಗಳನ್ನು ಹೊರತರಲು ಸಾಧ್ಯವಾಗುತ್ತದೆ.

ಅಧ್ಯಯನದ ಉದ್ದೇಶ

'ಕಲೆ'ಯೆಂಬ ಮಾತಿನ ಮರ್ಮವು ಎಲ್ಲಾರಿಗೂ ತಿಳಿದಂತಿದೆ. ತಿಳಿಯದಂತೆಯೂ ಇದೆ. ಕಲೆಯೆಂದರೆ ಸೌಂದರ್ಯ. ಆದರೆ ಸೌಂದರ್ಯವೇನೆಂದು ಇವರೆಲ್ಲರೂ ಅರಿತವರೋ ಎಂಬುದು ಸಂಶಯ ಸಾಮಾನ್ಯವಾಗಿ ಒಬ್ಬನಿಗೆ ಸುಂದರವಾಗಿ ಕಾಣಿಸಿದುದೂ ಇನ್ನೊಬ್ಬನಿಗೆ ಅಷ್ಟೇ ಚೆಲುವಿನದಾಗಿ ಕಾಣಿಸದು. ಉದಾಹರಣೆಗೆ ಒಬ್ಬನ ಕಣ್ಣಿಗೆ ಕತ್ತೆಗಿಂತ ಕುದುರೆಯು ಚೆಂದವೆಂದು ಕಂಡರೇ ಇನ್ನೊಬ್ಬನಿಗೆ ಕುದುರೆಗಿಂತ ಕತ್ತೆಯೇ ಅಂದವೆಂದು ಕಾಣಬಹುದು. ಆದರೆ ಇದನ್ನು ಎಲ್ಲರೂ ಬಲ್ಲರು, ಕಲೆಯು ಸೌಂದರ್ಯ, ಸೌಂದರ್ಯವು ಆನಂದ ಎಂದು. ಸೌಂದರ್ಯವುಳ್ಳಂತಹ ಕಲಾಕೃತಿಯನ್ನು ನೋಡುಗರ ಮುಂದಿಟ್ಟು ಯಶಸ್ವಿಯಾಗುವುದರ ಜೊತೆಗೆ ಗುರುತಿಸಿಕೊಂಡು ಸಮಾಜಕ್ಕೆ ನಾಡಿನ ಜನತೆಗೆ ಸಂತೋಷವನ್ನುಂಟು ಮಾಡುವವನೇ ಕಲಾವಿದನು ಕಲಾಕುಶಲನೂ ಆಗಿರುತ್ತಾನೆ. ಕಲೆಯೆನ್ನುವುದು ಮೂಲತಃ ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವ ಸ್ವಭಾವಕ್ಕೆ ಸಂಬಂಧಿಸಿದ್ದು, ಅವನ ತುಡಿತ ಮಿಡಿತ ದುಡಿತಗಳಿಗನುಗುಣವಾಗಿ ಅನುಭವಗಳಿಗೆ ಜೀವ ಕೊಡುವ ಕ್ರಿಯೇ ಸಹಜವಾಯಿತು. ಈ ಅನುಭವ ಭಾಷಾ ಮಾಧ್ಯಮದ ಮೂಲಕ ಅಭಿವ್ಯಕ್ತಗೊಂಡರೆ, ಸಾಹಿತ್ಯವಾಗಿ ಅಭಿನಯ ಮಾಧ್ಯಮದ ಮೂಲಕ ಹೊರಹೊಮ್ಮಿದರೆ

೦೩. ಅ.ನ.ಕೃ : ಚಿತ್ರಕಲೆ, ಪುಟ – ೫೬



ನೃತ್ಯವಾಗಿ ಬಣ್ಣದ ಮಾಧ್ಯಮದಲ್ಲಿ ಅರಳಿದರೆ ಚಿತ್ರಕಲೆಯಾಗಿ ರೂಪ ಪಡೆಯಿತು. ಹೀಗೆ ಕಲೆಗಳಿಗೆ ಬದುಕಿನ ಅನುಭವವೇ ಮೂಲದ್ರವ್ಯವೆಂದು ಹೇಳಬಹುದು. ಇಂಥಹ ಕಲೆಗಳು ಸಾಂಸ್ಕೃತಿಕ ಬದುಕಿನ ಜೀವಂತ ಸಾಕ್ಷಿಗಳೆನಿಸಿಕೊಂಡಿರುವಂತೆ[೦೪] ಚಿತ್ರಕಲೆಯಲ್ಲಿ ತಮ್ಮದೇ ಆದ ವ್ಯಕ್ತಿಗತ ಕಲೆಯನ್ನು ಕಲಾಕೃತಿಗಳ ರಚನೆಯಲ್ಲಿ ಯಶಸ್ಸನ್ನು ಕಾಣುವುದಾಗಿದೆ.

ಭಾರತದ ಮತ್ತು ಕರ್ನಾಟಕದ ಚಿತ್ರಕಲೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇಲ್ಲಿ ಅನೇಕ ಕಲಾವಿದರು ಹುಟ್ಟಿ, ತಮ್ಮ ಪ್ರತಿಭೆಯಲ್ಲಿ ಮಿಂಚಿ ಮರೆಯಾಗಿದ್ದಾರೆ. ಆದರೆ ಅವರ ಇತಿಹಾಸ ಮಾತ್ರ ಮಾಸದೇ ಜ್ಯೋತಿಯ ರೀತಿ ಬೆಳಗುತ್ತಿದೆ. ನಮ್ಮ ಭಾರತದಲ್ಲಿ ಚಿತ್ರಕಲೆಗೆ ಅಷ್ಟಾಗಿ ಬೆಂಬಲ ವಿಲ್ಲದಿದ್ದರೂ ಬಾಹ್ಯವಾಗಿ ಅಲ್ಪ ಸ್ವಲ್ಪವಾದರೂ ಮನಸ್ಸಿನಲ್ಲಿರುವಂತೆ ಪ್ರೋತ್ಸಾಹ ಹಿಂದಿನ ಕಾಲದ ಕಲಾವಿದರ ಕಲಾಕೃತಿಗಳನ್ನು ನೋಡಿದಾಕ್ಷಣ ಗುರುತಿಸುವ ಹಾಗೇ ಚಿತ್ರಗಳಿರುತ್ತಿದ್ದವು. ಈಗಿನ ಹಾಗೇ ಹಿಂದೆ ಚಿತ್ರಕಲಾಕೃತಿಗಳಿಗೆ ಹೆಸರನ್ನಾಕುತ್ತಿರಲಿಲ್ಲ.

ಕಾರಣ ವಿಷ್ಣೇ ಅವರಲ್ಲಿ ಚಿತ್ರಕಲೆ, ಶ್ರೇಷ್ಠ ಕಲೆ ಎಂಬ ಭಾವನೆ ಅವರಲ್ಲಿತ್ತಲ್ಲದೆ, ಅದು ಧರ್ಮಾರ್ಥಕಾಮ ಮೋಕ್ಷ ಪ್ರಧಾನವಾದವೆಂದು ನಂಬಿಕೆಯಿತ್ತು ಅಂತೆಯೇ ಚಿತ್ರಕಲೆ ಸರ್ವ ಕಲೆಗಳಲ್ಲಿ ಶ್ರೇಷ್ಟವೆಂಬುದಕ್ಕೆ ಖಚಿತಪಡಿಸುವ ಉಲ್ಲೇಖ ಹೀಗಿದೆ. ಮಾರ್ಕಂಡೇಯ ಪುರಾಣದ ಕಲಾನಾಂ ಪ್ರವರಂ ಚಿತ್ರಂ ಧರ್ಮ ಕಾಮಾರ್ಥ ಮೋಕ್ಷ ಪ್ರದಮ್ ಮಾಂಗಲ್ಯಂ ಪ್ರಥಮಂ ಚೈತದ್ಗೃಹೇತ್ ಪ್ರತಿಷ್ಠಿತಮ್[೦೫] (ಕಲೆಗಳಲ್ಲಿ ಚಿತ್ರಕಲೆ ಉತ್ತಮವಾದದ್ದು, ಧರ್ಮ, ಅರ್ಥ, ಕಾಮ, ಮೋಕ್ಷಕ್ಕೆ ಸಾಧನವಾದುದು ಮನೆಯಲ್ಲಿ ಮಂಗಳಕರವೆಂದೂ ಗೃಹ ದೇವತೆಯನ್ನು ಸಂತೃಪ್ತಿಪಡಿಸುವ ಸಾಧನವೆಂದು ಅರ್ಥ) ಆದ್ದರಿಂದ ಕಲೆಯ ಮುಂದೆ ತಾನು ಅಲ್ಪನೆಂದು ಬಾವಿಸಿದ ಕಲಾವಿದರು ತಮ್ಮ ಹೆಸರನ್ನು ಸೂಚಿಸಿರುವುದಕ್ಕಿಲ್ಲ. ಕನ್ನಡ ಕಾವ್ಯದಲ್ಲಿ ಚಿತ್ರಕಲೆಯ ಪ್ರಸ್ತಾಪ ಬಂದಾಗಲೆಲ್ಲಾ "ಚಿರಘಟ್ಟಿ" ಎಂಬ ಕಲಾವಿದನೊಬ್ಬನ ಹೆಸರು ಮಾತ್ರ ಕೇಳಿಬರುತ್ತದೆ. ಅವನ ಕುರಿತು ಹೆಚ್ಚಿನ ಯಾವ ವಿವರಗಳು ಲಭ್ಯವಿರುವುದಿಲ್ಲ. ಹೀಗೆ ಅಲ್ಲಲ್ಲಿ ಕೇವಲ ಹೆಸರುಗಳನ್ನು ಮಾತ್ರ ಸೂಚಿಸಿರುವ ಅಂಶ ಕಂಡುಬಂದಿದ್ದು, ವಿವರವಾದ ಪರಿಚಯವಿರುವುದಿಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಕಲಾವಿದರ ಪರಿಚಯ ಹಾಗೂ ಕಲೆಯ ಬಗ್ಗೆ ಸ್ವಲ್ಪ ಮಟ್ಟಿನ ಪ್ರಯತ್ನಗಳು ನಡೆದಿದ್ದು, ಆದರೆ ಕಲೆ ಕಲಾವಿದರ ಕಲಾಕೃತಿಗಳು ಜೀವನ ಕುರಿತಾದ ಸಂಶೋಧನೆಗಳು ಮಾತ್ರ ಇಲ್ಲವೆ ಇಲ್ಲ ಎನ್ನುವಷ್ಟು ಕಡಿಮೆ.

ಕಲಾವಿದನ ಬದುಕು, ಪರಿಸರ, ವ್ಯಾಸಂಗ, ಧ್ಯೇಯ, ಧೋರಣೆ, ಸಾಧನೆ, ಸಿದ್ದಿ ಮುಂತಾದವುಗಳು ಕಲಾವಿದನ ಕಲಾಕೃತಿಯ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ. ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಲ್ಲಿ

೦೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೩
೦೫. ಅದೇ.



ಅಭಿವ್ಯಕ್ತಗೊಂಡಿರುತ್ತದೆ. ಎಂಬುದು ಮುಖ್ಯವಾಗುತ್ತದೆ. ಕಲಾ ವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ವಸ್ತುವಿನ ಬಗ್ಗೆ ತೋರುವ ಅವಸ್ಥೆ ಇಲ್ಲವೇ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ. ಯಾವುದೇ ಕಲಾವಿದನ ದೋರಣೆಯೂ ಅವನದೇ ಆದ ಅಭಿವ್ಯಕ್ತಿಯ ವೈಯಕ್ತಿಕತೆಯಲ್ಲಿ ಅವನ ಕಲಾ ಸೃಷ್ಠಿಯ ವಿಶಿಷ್ಟತೆಯನ್ನು ಗುರುತಿಸಬಹುದು.[೬] ಕಲಾವಿದ ಈ ಹಿನ್ನೆಲೆಯಲ್ಲಿ ನಡೆದು ಬಂದ ಜೀವನ ಚರಿತ್ರೆಯ ಜೊತೆಗೆ ಸ್ತ್ರೀ ಕಲಾಕೃತಿಗಳ ಕುರಿತು ಅಧ್ಯಯನ ಮಾಡುವುದೂ ಅಷ್ಟೇ ಮಹತ್ವದ್ದಾಗಿದೆ.

ಭಾರತೀಯ ಚಿತ್ರಕಲೆಯಲ್ಲಿ ತನ್ನದೇ ಆದ ವಿಶಿಷ್ಠ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದು, ಈ ಕ್ಷೇತ್ರದಷ್ಟು ಕುರಿತು ನಡೆದ ಸಂಶೋಧನೆಗಳು ಬೆರಳೆಣಿಕೆಯಷ್ಟು ಮಾತ್ರ ಇದರ ಜೊತೆಯಲ್ಲಿಯೇ ಇರುವ ಸಂಗೀತ, ಶಿಲ್ಪ ಸಾಹಿತ್ಯ, ವಾಸ್ತುಶಿಲ್ಪದ ಕುರಿತು ಸಾಕಷ್ಟು ರೀತಿಯಲ್ಲಿ ಸಂಶೋಧನೆಗಳು ನಡೆದಿವೆ. ಆದರೆ ಚಿತ್ರಕಲೆಯ ಕ್ಷೇತ್ರವು ರಾಷ್ಟ್ರೀಯ ಮಟ್ಟದಲ್ಲಿ ಕಲೆಯ ಕುರಿತು. ಕಲಾವಿದರ ಕುರಿತು ಇಲ್ಲಿಯವರೆಗೆ ಅಷ್ಟೊಂದು ಗಂಭೀರವಾದ ಅಧ್ಯಯನಗಳು ನಡೆಯದೇ ಇರುವುದನ್ನು ಗಮನಿಸಿ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಕೇರಳದ ತಿರುವನಂತಪುರದ ಹತ್ತಿರವಿರುವ ಕಿಲಮನೂರಿನ ಖ್ಯಾತಿಯ ರಾಜ ರವಿವರ್ಮನ ವಿಶೇಷ ಆಸಕ್ತಿಯ ಚಿತ್ರಕಲಾಕೃತಿಗಳೆಂದೇ ಬಿಂಬಿಸಲ್ಪಡುವ ಸ್ತ್ರೀಯರ ಚಿತ್ರಕೃತಿಗಳ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹದಿನೆಂಟನೆಯ ಶತಮಾನದಲ್ಲಿಯೇ ಚಿತ್ರಕಲೆಗೆ ಅಧಿಕ ಬೆಂಬಲ ಬಂತು. ಹಂತಹಂತವಾಗಿ ಚಿತ್ರಕಲಾ ಗ್ಯಾಲರಿಗಳು, ಶಾಲಾ-ಕಾಲೇಜುಗಳು ಪ್ರಾರಂಭವಾಗಿರುವ ಅಂಶವನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. ಅನೇಕ ಪಾಶ್ಚಾತ್ಯ ಕಲಾವಿದರು. ವಿವಿಧ ಶೈಲಿಯ ಬಣ್ಣಗಳನ್ನು ತಯಾರಿಸಲು ತಂತ್ರಜ್ಞರ ಜೊತೆ ಕೈ ಜೋಡಿಸಿದರು. ವಿಶಿಷ್ಟ ರೀತಿಯ ಕ್ಯಾನ್ವಾಸ್ ತಯಾರಿಕೆ, ಸಜೀವ ವಸ್ತುಗಳಿಗೆ ಜೀವ ತುಂಬುವುದು. ಹೀಗೆ ವಿಶಿಷ್ಟದ್ವೈತ ಕೆಲಸವನ್ನು ಮಾಡಿ ಯಶಸ್ಸನ್ನು ಕಂಡ ಪಾಶ್ಚಾತ್ಯ ಕಲಾವಿದರು ಭಾರತಕ್ಕೆ ಬಂದು ಇಲ್ಲಿನ ಸಂಸ್ಕೃತಿಯ ವೈಭವವನ್ನು ಕಂಡು ಬೆರಗಾದರು. ಇಂತಹ ಸ್ಥಿತಿಯಲ್ಲಿ ಕೆಲವೇ ಕೆಲವು ಕಲಾವಿದರ ಗುರುತನ್ನು ಪತ್ತೆಹಚ್ಚಿದ ಕಲಾವಿದರು ಮಾರ್ಗದರ್ಶನ ನೀಡಿರುವ ನಿದರ್ಶನಗಳುಂಟು, ಅದರಲ್ಲಿ ಮುಖ್ಯವಾಗಿ ಪಾಶ್ಚಾತ್ಯ ಕಲಾವಂತಿಕೆಗೆ ಬೆಂಬಲ ಸೂಚಿಸಿದ ವ್ಯಕ್ತಿ ಎಂದರೆ ರಾಜ ರವಿವರ್ಮ ಹೆಸರೇ ಸೂಚಿಸುವಂತೆ ರಾಜರ ವಂಶದಲ್ಲಿ ಬೆಳೆದು ಇವನು ಹುಟ್ಟುತ್ತಲೇ ಚಿತ್ರಕಲೆಯ ಆಭರಣ (ಪೆನ್ಸಿಲ್, ಬ್ರೆಷ್)ಗಳನ್ನು ಇಣುಕಿ ನೋಡಿ ನಕ್ಕು ಆನಂದ ಪಟ್ಟವನು, ಮುರ್ನಾಲ್ಕು ವರ್ಷಗಳಿರುವಾಗಲೇ ಪೆನ್ಸಿಲ್‌ನ್ನು ಬಾಚಿಕೊಂಡವನು ಹನ್ನೆರಡನೇ ವಯಸ್ಸಿನಲ್ಲಿಯೇ ಚಿತ್ರಕಲೆಯಲ್ಲಿ ಗುರುತಿಸಿಕೊಂಡವನು.

ಹೀಗೆ ಹಂತ ಹಂತವಾಗಿ ಚಿತ್ರಕಲೆಯಲ್ಲಿ ಪ್ರಬಲಗೊಳ್ಳುತ್ತಾ ಹೋದನು, ಇದರ ಹಿಂದೆ ಪ್ರತಿ ನಿತ್ಯ ಪಡುವ ಶ್ರಮದ ಪ್ರತೀಕವೆಂದರೆ ತಪ್ಪಾಗಲಾರದು, ಇವನ ಕಾಲದಲ್ಲಿ ಭಾರತೀಯ ಕಲೆ ಅಷ್ಟಾಗಿ

---

೦೬. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು, ಪುಟ – ೬



ಗುರುತಿಸಿಕೊಂಡಿರಲಿಲ್ಲ. ಅದರಲ್ಲೂ ಸೃಜನಶೀಲ (ರಿಯಾಲಿಸ್ಟಿಕ್) ವರ್ಣ ಚಿತ್ರಗಳಲ್ಲಿನ ಆಸಕ್ತಿ ಸ್ಥಳಿಯ ಕಲೆಯ ಕಡೆಗೆ ತಿರುಗಿ ನೋಡದೆ ಯುರೋಪಿಯನ್ ಕಲಾವಿದರ ಶೈಲಿಗೆ ಮಾರುಹೋಗಿದ್ದು, ಅವರ ಪ್ರಭಾವ ತುಂಬಾ ಬಿದ್ದಿತು. ನಂತರದಲ್ಲಿ ಅನೇಕ ಭಾವಚಿತ್ರ, ವ್ಯಕ್ತಿಚಿತ್ರ ಹಾಗೂ ಸಂಯೋಜನಾ ಚಿತ್ರಗಳನ್ನು ರಚಿಸಿ ಯಶಸ್ಸನ್ನು ಕಂಡವನು ರಾಜ ರವಿವರ್ಮ. ಭಾರತೀಯ ಹಿಂದೂ ಪುರಾಣಗಳಲ್ಲಿ ಕಂಡುಬರುವ ದೇವಾನೂ ದೇವತೆಗಳ ಪ್ರತಿರೂಪವನ್ನು ಸೆರೆಹಿಡಿಯುವಲ್ಲಿ ಇವರ ಪಾತ್ರ ಪ್ರಮುಖವಾಗಿದ್ದು, ಅಂತಹ ಹಿರಿಯ ಕಲಾವಿದನ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಈ ಅಧ್ಯಯನವು ಹೊಂದಲಾಗಿದೆ.

ರವಿವರ್ಮನು ಹೆಚ್ಚು ಸ್ತ್ರೀ ಚಿತ್ರಕೃತಿಗಳನ್ನು ರಚನೆ ಮಾಡಿರುವುದು ವಿಶೇಷ ಅವುಗಳಲ್ಲಿ ಮುಖ್ಯವಾಗಿ ಲಕ್ಷ್ಮಿ, ಸೀತೆ, ಸರಸ್ವತಿ, ಮೇನಕೆ, ರಾಧ. ಹೀಗೆ ಪಟ್ಟಿಯೇ ದೊಡ್ಡದಾಗುತ್ತಾ ಹೋಗುತ್ತೆ, ಅನೇಕ ಹಿರಿಯರು, ಇತಿಹಾಸ ತಜ್ಞರು, ವಿಮರ್ಶಕರು, ಕಲಾವಿಮರ್ಶಕರು, ರವಿವರ್ಮನ ಕಲಾಕೃತಿಗಳ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಅದರಲ್ಲಿ ಕೆಲವರು ಉತ್ತಮವಾಗಿವೆ ಎಂದರೆ ಮತ್ತೋರ್ವರು ವಿರೋಧಿಸಿರುವುದುಂಟು. ವಿರೋಧಕ್ಕೆ ಅನೇಕ ಕಾರಣಗಳಿದ್ದು, ಮುಖ್ಯವಾಗಿ ಭಾರತೀಯ ಕಲೆಗೆ ಸ್ಪಂದಿಸದೆ ಇರುವುದು ಜೊತೆಗೆ ಪಾಶ್ಚಾತ್ಯ ಕಲೆಗೆ ಮಾರುಹೋಗಿರುವುದಕ್ಕೆ ಮತ್ತೊಂದು ಹಿಂದೂ ದೇವಾನೂ ದೇವತೆಗಳನ್ನು ಚಿತ್ರಿಸುವ ಸಂದರ್ಭವು ವೈಶ್ಯರನ್ನು ಕರೆತಂದು ಆಭರಣ, ವಸ್ತ್ರಗಳೊಂದಿಗೆ ಸುಂದರವಾಗಿಸಿ ಅಲಂಕರಿಸಿರುವ ಚಿತ್ರಗಳನ್ನು ಚಿತ್ರಿಸಿರುವುದು ಅವು ಪ್ರಸ್ತುತ ಹಿಂದೂ ಸಮಾಜ ಬಾಂಧವರ ಮನೆಯಲ್ಲಿರುವುದು. ಸರ್ವೇಸಾಮಾನ್ಯ ಹಾಗೆಯೇ ಕಲಾಕೃತಿಗಳನ್ನು ರಚನೆಮಾಡುವುದು ಸುಲಭದ ಮಾತಲ್ಲ. ಇಲ್ಲಿನ ಚಿತ್ರರಚನೆ ಮಾಡಲು ಹೊರದೇಶಗಳಿಂದ ಬಣ್ಣ, ಕ್ಯಾನ್ವಾಸ್‌ಗಳನ್ನು ತರುತ್ತಿದ್ದ ರವಿವರ್ಮನು ಅನೇಕ ಕಡೆ ಕಲಾಕೃತಿಗಳನ್ನು ವೀಕ್ಷಿಸುತ್ತಿದ್ದನು.

ಈ ಕಲಾವಿದ ಪಾಶ್ಚಾತ್ಯರ ವರ್ಣಗಳಿಗೆ ಮಾರುಹೋದನೇ ಹೊರತು ಬೇರೆ ಯಾವುದಕ್ಕೂ ಅಲ್ಲ, ರಾಜರು, ರಾಜ್ಯಪಾಲರು, ಹಿರಿಯರು, ಗಣ್ಯರು ಇವನ ಕಲೆಯನ್ನು ಮೆಚ್ಚಿ ಕರೆಸಿ ಭಾವಚಿತ್ರ, ವ್ಯಕ್ತಿಚಿತ್ರಗಳನ್ನು ರಚಿಸಿಕೊಳ್ಳುತ್ತಿದ್ದುದು ವಿಶೇಷ, ರಾಮಾಯಣ, ಮಹಾಭಾರತದ ದೃಶ್ಯಾವಳಿಗಳನ್ನು ಸಹ ಚಿತ್ರಿಸಿದ್ದಾರೆ. ನಿರಂತರವಾಗಿ ರಚಿಸುತ್ತಾ ತನ್ನ ಗಟ್ಟಿನಿಲುವನ್ನು ಪ್ರದರ್ಶಿಸಿದವರನ್ನು ಒಟ್ಟು ಕಲಾಕೃತಿಗಳ ಕುರಿತು ಕೆಲವು ಇಂಗ್ಲೀಷ್‌ನಲ್ಲಿ ಪುಸ್ತಕ ರೂಪದಲ್ಲಿ ಬಂದಿರುಬಹುದು, ಆದರೆ ಸ್ತ್ರೀ ಚಿತ್ರಕೃತಿಗಳ ಕುರಿತು ಎಲ್ಲಿಯೂ ಯಾವ ರೂಪದಲ್ಲೂ ಬಂದಿರುವುದಿಲ್ಲ. ಇಂತಹ ವ್ಯಕ್ತಿಯ ಆ ಸುಂದರ, ಮುತ್ತಿಡುವಂತಹ ಸ್ತ್ರೀ ಕಲಾಕೃತಿಗಳ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು



ಅಧ್ಯಾಯಗಳನ್ನು ಕೂಲಂಕುಷವಾಗಿ ಚರ್ಚಿಸಿ, ಹೇಳುವುದರ ಜೊತೆಗೆ ಸಂಕ್ಷೀಪ್ತ ವಿವರಗಳನ್ನು ಕೊಡುವುದು ಈ ಅಧ್ಯಯನ ಮುಖ್ಯ ಭಾಗವಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈದಾನಿಕತೆಗಳೊಂದಿಗೆ ಆಕರ ಸಾಮಗ್ರಿಗಳ ಕುರಿತ ವಿವರಣೆ ಇರುವುದು.

ಎರಡನೆಯ ಅಧ್ಯಾಯದಲ್ಲಿ ಭಾರತದಲ್ಲಿ ಹುಟ್ಟಿ ಪ್ರಪಂಚದ ಶ್ರೇಷ್ಠ ಕಲಾವಿದರ ಸಾಲಿಗೆ ನಿಂತ ಕಲಾವಿದ ರವಿವರ್ಮನ ಬಾಲ್ಯ ಪರಿಸರ ಹಾಗೂ ಚಿತ್ರಕಲೆಯಲ್ಲಿ ಕಂಡುಕೊಂಡಂತಹ ಅನುಭವಗಳು, ಜೀವನದ ಮುಖ್ಯ ಘಟ್ಟ ತಲುಪಿದ ಪ್ರಮುಖ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ರವಿವರ್ಮನು ರಚಿಸಿದ ಸ್ತ್ರೀಯರ ವ್ಯಕ್ತಿಚಿತ್ರ ಹಾಗೂ ಭಾವಚಿತ್ರಗಳ ಕಲಾಕೃತಿಗಳನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ರವಿವರ್ಮ ಕಲಾಕೃತಿಗಳು ವಿಶೇಷವಾದವು ಎಂದು ಕರೆಯಲ್ಪಡುವ ಉದ್ದೇಶ ಅವನ ಸಂಯೋಜನ ಚಿತ್ರಕೃತಿಗಳು ಅದರಲ್ಲೂ ಸ್ತ್ರೀಯರಿಗೆ ಶ್ರೀಮಂತಿಕೆಯನ್ನು ಮೂಡಿಸಿರುವುದು, ಅಂತಹ ವಿಶಿಷ್ಟವುಳ್ಳಂತಹ ಸಂಯೋಜನಾ ಸ್ತ್ರೀ ಕಲಾಕೃತಿಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ರವಿವರ್ಮನು ತೈಲವರ್ಣದ ಪ್ರಿಯ ಎಂದೇ ಹೇಳಬೇಕು. ಆದ್ದರಿಂದ ಹೆಚ್ಚು ತೈಲವರ್ಣದಿಂದಲೇ ಚಿತ್ರಕೃತಿಗಳನ್ನು ರಚನೆಮಾಡಿಲಾಗಿದ್ದು, ಭಾವಚಿತ್ರ, ವ್ಯಕ್ತಿಚಿತ್ರ ಸಂಯೋಜನಾ ಚಿತ್ರಗಳನ್ನು ರಚನೆ ಮಾಡಿರುವುದು ವಿಶೇಷ ಅಂತಹ ಒಟ್ಟು ಸ್ತ್ರೀ ಕಲಾಕೃತಿಗಳ ಪರಿಚಯದ ಜೊತೆಗೆ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯವು ಕಲಾವಿದ ರವಿವರ್ಮನ ಕುರಿತು ಬಂದಿರುವ ಗ್ರಂಥಗಳು, ಪುಸ್ತಕಗಳು, ಲೇಖನಗಳ ವಿವರಗಳ ಜೊತೆ ಚರ್ಚಿಸಿ ವಿವರವನ್ನು ಕೊಡುವುದು.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಈ ಅಧ್ಯಯನದಲ್ಲಿ ಕಂಡುಬರುವ ಒಟ್ಟು ಅಧ್ಯಾಯಗಳ ಕುರಿತು ಚರ್ಚಿಸುವುದು.

ಅಧ್ಯಯನದ ವ್ಯಾಪ್ತಿ

ಕಲಾವಿದನು ಕಲೆಯನ್ನು ಬಹುವಾಗಿ ಇಷ್ಟಪಡುತ್ತಾನೆ. ಹಾಗೆಯೇ ಕಲೆಯ ಶ್ರಮದ ದಣಿವ ಹಾರಿಸುವತ್ತಾ ಹೆಜ್ಜೆ ಇಟ್ಟು ನವನವೀನ ಸೃಜನ ಚೇತನ ಕಲೆಯ ಚಿತ್ರಗಳನ್ನು ರಚಿಸಲು ಉತ್ತೇಜಿಸುವ ಶಕ್ತಿ ಇದೆ, ಹಾಗೆಯೇ ಲಲಿತಕಲೆಗಳಲ್ಲಿ ಒಂದಾಗಿರುವ ಚಿತ್ರಕಲೆಯಲ್ಲಿ ಕಲಾವಿದರಾಗಿ ಗುರುತಿಸಿಕೊಳ್ಳುವುದು ಸಾಮಾನ್ಯದ ಕೆಲಸವಾದವಲ್ಲ. ಹಾಗೆಯೇ ನಮ್ಮ ಭಾರತದ ಕಲಾವಿದ ರವಿವರ್ಮ. ೧೯ನೇ ಶತಮಾನದಲ್ಲಿ ಪಾಶ್ಚಾತ್ಯ ಕಲಾವಿದರ ಮೊರೆ ಹೋದ ಎಂಬುದು ಈ ಕಲಾವಿದನಿಗೆ ಕರೆದರೂ ಇವನ ಕೆಲಸ ಅಸಾಮಾನ್ಯ, ಹೊರರಾಜ್ಯ ಕೇರಳದಲ್ಲಿ ಹುಟ್ಟಿದರೂ ಭಾರತಾದ್ಯಂತ ಸಂಚರಿಸಿ, ಕಲಾಕೃತಿಗಳನ್ನು ರಚನೆಮಾಡಿ

ಯಶಸ್ಸನ್ನು ಕಂಡಿದ್ದಾನೆ. ಮುಖ್ಯವಾಗಿ ಸಂಶೋಧನಾ ದೃಷ್ಟಿಯಿಂದ ಕೆಲಸವಾಗಿರುವುದಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಸ್ತ್ರೀಚಿತ್ರಗಳ ಕುರಿತು ಒಂದು ಅಧ್ಯಯನವಾಗಿರುವುದರಿಂದ ರವಿವರ್ಮನ ಸ್ತ್ರೀ ಚಿತ್ರಕಲಾ ಕೃತಿಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು

ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಹೆಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಹೆಚ್.ಡಿ. ಪ್ರಬಂಧಗಳು. ೨. ಎಂ.ಫಿಲ್. ಪ್ರಬಂಧಗಳು, ೩. ಡಿ. ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಎಸ್.ಸಿ. ಪಾಟೀಲ ಅವರು ೧೯೮೩ರಲ್ಲಿ **"ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ"**[೭] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ನಡೆದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ.

ಆನಂತರದ ೧೯೮೭ರಲ್ಲಿ ಡಾ. ಚುಡಾಮಣಿ ನಂದಗೋಪಾಲರವರ **"ಡ್ಯಾನ್ಸ್ ಅಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್"**[೮] ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ **"ಬಿ.ಕೆ. ಹಿರೇಮಠರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ"**[೯] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಬಂದಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಕೆಲವು ಪ್ರಯತ್ನಗಳಾಗಿವೆ.

೧. ಪಿಎಚ್.ಡಿ. ಪ್ರಬಂಧಗಳು


ದೃಶ್ಯಕಲೆಯನ್ನೇ ಅಧ್ಯಯನದ ಪ್ರಧಾನ ಉದ್ದೇಶವಾಗಿಟ್ಟುಕೊಂಡು ಬಂದ ಸಂಶೋಧನ ಅಧ್ಯಯನ ೧೯೯೧ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಎಸ್.ಸಿ. ಪಾಟೀಲ ಅವರ **"ಕರ್ನಾಟಕದ**

---

೦೭. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ.ಧಾರವಾಡ, ೧೯೮೩.

೦೮. ಡಾ. ಚೂಡಾಮಣಿ ನಂದಗೋಪಾಲ: "ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್" ಮೈಸೂರು ವಿ.ವಿ– ೧೯೮೭

೦೯. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೭



ಜನಪದ ಚಿತ್ರಕಲೆ"[೧೦] ಎಂಬ ಪಿಹೆಚ್.ಡಿ. ಪ್ರಬಂಧ ಹೊರಬಂದಿದ್ದು ಪೂರ್ಣಪ್ರಮಾಣದಲ್ಲಿ ಚಿತ್ರಕಲೆಯನ್ನೇ ಕುರಿತು ಸಂಶೋಧನೆ ನಡೆಸಿದ ಕರ್ನಾಟಕದ ಮೊಟ್ಟ ಮೊದಲ ಪಿಹೆಚ್.ಡಿ ಮಹಾಪ್ರಬಂಧವಾಗಿದೆ. ಮುಂದೆ ನಾಲ್ಕು ವರ್ಷಗಳ ನಂತರ ೧೯೯೫ ರಲ್ಲಿ **"ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು"**[೧೧] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅ.ಲ. ನರಸಿಂಹನ್ ಅವರಿಂದ ಸಲ್ಲಿಸಲ್ಪಟ್ಟಿತು. ೧೯೯೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪುಷ್ಪಾ ದ್ರಾವಿಡ ಅವರು **"ಅನಿವಾಸಿ ಭಾರತೀಯ ಕಲಾವಿದ ದಿ ರೋರಿಕ್ ಜೀವನ ಮತ್ತು ಕಲಾಕೃತಿಗಳು"**[೧೨] ಎಂಬ ವಿಷಯದ ಮೇಲೆ, ೧೯೯೮ರಲ್ಲಿ ಸಂಪದಾ ಭಟ್ ಅವರು **"ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು"**[೧೩] ಎಂಬ ವಿಷಯದ ಕುರಿತು, ೨೦೦೨ ರಲ್ಲಿ ಯಾದಪ್ಪ ಪರದೇಶಿ ಅವರು **"ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ"**[೧೪], ಶಿವಾನಂದ ಬಂಟನೂರ **"ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ",**[೧೫] ಗಿರೀಶ ಕುಮಾರ ಅವರ **"ಬುಡಕಟ್ಟು ಚಿತ್ರಕಲೆ",**[೧೬] ಲಕ್ಷ್ಮೀದೇವಿ ಗವಾಯಿಯವರ **"ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ"**[೧೭], ಶರಣಪ್ಪ ಕೋಲ್ಕಾರ ಅವರ **"ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ",**[೧೮] ಸೌಮ್ಯ ಅವರ **"ಯಂತ್ರಾ ದಿ ವಿಜ್ಯುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್"**[೧೯], ಪ್ರಮೀಳಾ ಲೋಚನ ಅವರ **"ಮೈಂಡ್, ಮ್ಯೂಸಿಕ್ ಅಂಡ್ ಕಲರ್ ಎಕ್ಸಪೋಸೆಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್"**[೨೦] ೨೦೦೩ರಲ್ಲಿ ವೀಣಾ ಶೇಖರ್ ಮಂಡಿಸಿದ **"ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ"**[೨೧] (೧೭೮೦ – ೧೮೨೦), ಸಿದ್ಧಲಿಂಗಸ್ವಾಮಿ

---

೧೦. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೧.

೧೧. ಡಾ. ಅ.ಲ. ನರಸಿಂಹನ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೮

೧೨. ಡಾ. ಪುಷ್ಪಾ ದ್ರಾವಿಡ್ : ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೭

೧೩. ಡಾ. ಸಂಪದಾಭಟ್ : ಹಿಂದುಸ್ಥಾನ ಸಂಗೀತ ಮತ್ತು ರಾಗಮಾಲ ಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ೧೯೯೮

೧೪. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೧.

೧೫. ಡಾ. ಶಿವಾನಂದ ಬಂಟನೂರು : ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ: ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೬. ಡಾ. ಗಿರೀಶ ಕುಮಾರ : ಬುಡಕಟ್ಟು ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೭. ಡಾ. ಲಕ್ಷ್ಮೀದೇವಿ ಗವಾಯಿ : ಪಿಎಚ್.ಡಿ. ಮಹಾಪ್ರಬಂಧ "ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಕಲಾಕೃತಿಗಳು – ಒಂದು ಅಧ್ಯಯನ ೨೦೦೨.

೧೮. ಡಾ. ಶರಣಪ್ಪ ಕೋಲ್ಕರ್ : ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೨.

೧೯. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್ ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨

೨೦. ಡಾ. ಪ್ರಮೀಳಾ ಲೋಚನ್ : ಮೈಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨.

೨೧. ಡಾ. ವೀಣಾಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೩.



ಹಿರೇಮಠ **"ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ"**[೨೨], ಎಸ್. ಸಿ. ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **"ಎ ಕ್ರಿಟಿಕಲ್ ಅನಾಲಸಿಸ್ ಆಫ್ ಆರ್ಟ್ ಎಜ್ಯಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಅಂಡ್ ಪೇಂಟಿಂಗ್"**[೨೩] ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧ, ೨೦೦೪ ರಲ್ಲಿ ವಿ.ಎಮ್. ಬಾಗಾಯತ್ ಅವರ **ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ"** (೧೪೦೦ – ೧೮೦೦),[೨೪] ಶಿಕುಮಾರ ಜಿ.ಓ. ಅವರ **"ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು",**[೨೫] ಪಿ. ಗೌರೀಶ, ಅವರ **"ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ",**[೨೬] ಶಶಿಕಲಾ ಹೂಗಾರ ಅವರ **"ಕರ್ನಾಟಕ ತೊಗಲು ಗೊಂಬೆ"**[೨೭] ೨೦೦೫ರಲ್ಲಿ ಶಿವಪ್ರಕಾಶ ತುಕ್ಕಣ್ಣವರ ಅವರ **"ಕರ್ನಾಟಕ ರಥ ಶಿಲ್ಪಕಲೆ"**[೨೮], ಎಸ್. ವಿ. ವೆಂಕಟೇಶಯ್ಯ ಅವರ **"ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ"**[೨೯], ಎಚ್. ಎನ್. ಚಿತ್ರಗಾರ ಅವರ **"ಕರ್ನಾಟಕ ಹಸ್ತಪ್ರತಿ ಚಿತ್ರಕಲೆ"**[೩೦], ೨೦೦೬ರಲ್ಲಿ ವಿಶ್ವೇಶ್ವರಿ ತಿವಾರಿ ಅವರ **"ಹೈದ್ರಾಬಾದ್–ಕರ್ನಾಟಕದ ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು",**[೩೧] ೨೦೦೭ರಲ್ಲಿ ಮಲ್ಲಿಕಾರ್ಜುನ ಬಾಗೋಡಿ ಇವರ **"ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ"**[೩೨] ಮತ್ತು ಗೀತಾಂಜಲಿ ಬಿ.ಆರ್. ಅವರ **"ಐತಿಹಾಸಿಕ ದೀಪಸ್ತಂಭಗಳು",**[೩೩] ಲಕ್ಷ್ಮಣಸಿಂಗ್ ಆರ್. ರಾಠೋಡ್ ಅವರ **"ಅನ್ವಯಿಕ ಕಲೆ, ಹಿಂದಿನಿಂದ ಇಂದಿನವರೆಗೆ",**[೩೪] ೨೦೦೮ ರಲ್ಲಿ ಮೋಹನ್ ಪಂಚಾಳ ಅವರ

---

೨೨. ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ : ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೩.

೨೩. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ ೨೦೦೨.

೨೪. ಡಾ. ಎಂ.ವ್ಹಿ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.– ೨೦೦೪.

೨೫. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾನಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. – ೨೦೦೪.

೨೬. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. ೨೦೦೪.

೨೭. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ., ಹಂಪಿ – ೨೦೦೪

೨೮. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೪.

೨೯. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೫.

೩೦. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ. ೨೦೦೫.

೩೧. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. – ೨೦೦೬

೩೨. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೦೭.

೩೩. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೭.

೩೪. ಡಾ. ಲಕ್ಷ್ಮಣಸಿಂಗ್ ಆರ್. ರಾಠೋಡ : ಅನ್ವಯಿಕ ಕಲೆ ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. – ೨೦೦೭.

"ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ",[೩೫] ವಿಶ್ವನಾಥ ಎ.ಎಸ್. ಅವರ **"ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು"**[೩೬], ಪಿ.ಟಿ. ಲಕ್ಕಣ್ಣನವರ ಅವರ **"ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ",**[೩೭] ರವಿಂದ್ರ ಕಮ್ಮಾರ ಅವರ **"ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು"**[೩೮], ೨೦೦೯ರಲ್ಲಿ ರೆಹಮಾನ ಪಟೇಲ ಅವರ **"ಕರ್ನಾಟಕ ಬಿದ್ರಿ ಕಲೆ" ಒಂದು ಅಧ್ಯಯನ**[೩೯], ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲರವರ **"ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು"**[೪೦], ೨೦೧೧ರಲ್ಲಿ ನಿಂಗಪ್ಪ ಎಂ. ಅಂಗಡಿಯವರ **"ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ",**[೪೧] ಕಿಶೋರ ಎನ್. ದಾಟನಾಳ ಅವರ **"ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ"**[೪೨], ಕಾಶಿನಾಥ ಡಿ. ವಡ್ಡರ್ ಅವರ **"ಶಾಂತಿನೀಕೇತನದ ಭಿತ್ತಿಚಿತ್ರಗಳು',**[೪೩] ಸತೀಷಕುಮಾರ ವಲ್ಲ್ಯೇಪೂರೆರವರ **'ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು"**[೪೪], ಶಂಕರ ಕುಂದಗೋಳ ಅವರ **"ಕರ್ನಾಟಕದ ಗಂಜೀಫಾ ಚಿತ್ರಕಲೆ"**[೪೫], ೨೦೧೨ರಲ್ಲಿ ಭಾರತಿ ಮರವಂತಿ ಅವರ **"ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ"**[೪೬], ಕಾಮಾಕ್ಷಿ ಸಿ. ಸೊಪ್ಪಣ ಅವರ **"ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ"**[೪೭] ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನ ಮಾಡುತ್ತಿದ್ದಾರೆ.

೨. ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲ ಬಾರಿಗೆ ದೃಶ್ಯಕಲೆಗಳಿಗೆ

---

೩೫. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೮.

೩೬. ಡಾ. ವಿಶ್ವನಾಥ ಎ.ಎಸ್. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೮.

೩೭. ಡಾ.ಪಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೮.

೩೮. ಡಾ. ರವಿಂದ್ರ ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.೨೦೦೮.

೩೯. ಡಾ. ರೆಹಮಾನ ಪಟೇಲ : ಕನಾಟಕದ ಬಿದ್ರಿ ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೯

೪೦. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೧. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೨. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ – ಒಂದು ಅಧ್ಯಯನ. ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦.

೪೩. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನೀಕೇತರದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ : ಗು.ವಿ.ಗು– ೨೦೧೧

೪೪. ಡಾ. ಸತೀಶಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು, ೨೦೧೧.

೪೫. ಡಾ. ಶಂಕರ ಕುಂದಗೋಳ : "ಕರ್ನಾಟಕದ ಗಂಜೀಫಾ ಚಿತ್ರಕಲೆ" ಕನ್ನಡ ವಿ.ವಿ. ಹಂಪಿ. ೨೦೧೨

೪೬. ಡಾ. ಭಾರತಿ ಮರವಂತಿ : "ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ" ಮೈಸೂರು ವಿ.ವಿ. ೨೦೧೨

೪೭. ಡಾ. ಕಾಮಾಕ್ಷಿ ಸಿ. ಸೊಪ್ಪಣ : "ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ" ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್ ಪ್ರಬಂಧಗಳು ಹೀಗಿವೆ.

೨೦೦೧ರಲ್ಲಿ ದೇವದಾಸ ಕಳಸದ ಇವರ **"ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ",**[೪೮] ೨೦೦೫ರಲ್ಲಿ ಬಂದ ಆನಂದ ಪೂಜಾರರ **"ಕರಾವಳಿಯ ಕಾವಿ ಚಿತ್ರಕಲೆ".**[೪೯] ಡಿ.ಎ. ಉಪಾಧ್ಯ ಅವರ **"ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ",**[೫೦] ೨೦೧೦ರಲ್ಲಿ ಎಂ.ಎಸ್. ಮೂರ್ತಿ ಅವರ **"ಮಕ್ಕಳ ಮನಸ್ಸಿನ ಚಿತ್ರಗಳು"**[೫೧] ಮುಖ್ಯವಾಗಿವೆ. ಈ ಡಿ.ಲಿಟ್ ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಕನ್ನಡ ವಿಶ್ವವಿದ್ಯಾಲಯವು ಪರಿಶೀಲಿಸಿ ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್ ಸಂಶೋಧನ ಅಧ್ಯಯನಕ್ಕೆ ಅವಕಾಶವಿದೆ.

೩. ಎಂ.ಫಿಲ್. ಅಧ್ಯಯನಗಳು

ಕನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್ ಸಂಶೋಧನಾ ಅಧ್ಯಯನಗಳು ಹೀಗಿವೆ. ೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **"ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ",**[೫೨] ೨೦೦೩ ರಲ್ಲಿ ಎ.ಎಸ್. ವಿಶ್ವನಾಥ ಅವರ **"ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು",**[೫೩] ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ **"ಎಂ.ವಿ. ಮಿಣಜಗಿ ಜೀವನ ಮತ್ತು ಕಲಾಬದುಕು",**[೫೪] ಶಂಕರ ಕುಂದಗೋಳರ **"ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು",**[೫೫] ೨೦೦೬ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ

---

೪೮. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೪೯. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫.

೫೦. ಡಾ. ಡಿ.ವಿ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೫.

೫೧. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೫೨. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೨.

೫೩. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೩

೫೪. ಸಿ.ಡಿ. ಜಟ್ಟೆಣ್ಣವರ: ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ–೨೦೦೫.


೫೫. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೬

"ವಿಜಯನಗರದ ಭಿತ್ತಿ ಚಿತ್ರಕಲೆ",[೫೬] ರವಿ ನಾಯಕರ **"ಕಿನ್ನಾಳ ಕಲೆ",**[೫೭] ರಾಜಕುಮಾರ ಎಸ್. ಕಾಳೆ ಅವರ **"ಔಂದ ಗ್ಯಾಲರಿ",**[೫೮] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **"ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು",**[೫೯] ಬಿ.ಎಂ. ಪಾಟೀಲರ **"ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು",**[೬೦] ಉಮೇಶ ಎ.ಎಸ್. **"ಕರ್ನಾಟಕ ಜೈನ ಚಿತ್ರಕಲೆ",**[೬೧] ಶಶಿಕಾಂತ ಬಸರಿಕಟ್ಟಿಯವರ **"ಕಲಘಟಗಿಯ ಚಿತ್ರಕಲೆ",**[೬೨] ಶೈಲಾ ಬರಡೋಲರ **"ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು"**[೬೩] ಎಂಬ ಪ್ರಬಂಧಗಳು ಹೊರಬಂದಿವೆ.

೨೦೦೮ರಲ್ಲಿ ಕೃಷ್ಣವೇಣಿ **"ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ"**[೬೪] ಯೋಗೀಶ ಹೆಚ್. **"ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ",**[೬೫] ಮಹಾಕೂಟೇಶ್ವರಗೌಡ ಪಾಟೀಲ **"ಬೆಳಗಾವಿ ಜಿಲ್ಲೆಯ ಚಿತ್ರಕಲೆ",**[೬೬] ಸುರೇಶ ಬಡಿಗೇರ **"ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ",**[೬೭] ಸಂತೋಷಕುಮಾರ ಕುಲಕರ್ಣಿ ಅವರ **"ದಾವಣಗೆರೆ ಜಿಲ್ಲೆಯ ಚಿತ್ರಕಲೆ",**[೬೮] ಜಯರಾಜ ಚಿಕ್ಕಪಾಟೀಲರ **"ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು",**[೬೯] ಮಹೇಶ ಉಮತಾರ ಅವರ **"ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ"**[೭೦] ಗಿರಿಜಾ ಬಿರಾದಾರರ **"ವಿಜಾಪೂರ ಜಿಲ್ಲೆಯ ಚಿತ್ರಕಲೆ",**[೭೧] ಬಸಯ್ಯ ಗವಿಮಠ ಅವರ **"ಬಾಗಲಕೋಟ ಜಿಲ್ಲೆಯ ಚಿತ್ರಕಲೆ",**[೭೨] ಕೃಷ್ಣೆಗೌಡ ಹೆಚ್.ಎನ್. ಅವರ **"ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ",**[೭೩] ಮಹಾಂತೇಶ ಪಲದಿನ್ನಿ ಅವರ **"ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು"**[೭೪] ಮತ್ತು ೨೦೦೯ರಲ್ಲಿ ಕಾಂತರಾಜ

---

೫೬. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೬.
೫೭. ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೫೮. ರಾಜಕುಮಾರ ಎಸ್. ಕಾಳೆ : ಔಂದ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭.
೫೯. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭
೬೦. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೬೧. ಉಮೇಶ ಎ.ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೬೨. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭.
೬೩. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭
೬೪. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೬೫. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೬೬. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೬೭. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೬೮. ಸಂತೋಷಕುಮಾರ ಕುಲಕರ್ಣಿ : ದಾವಣಗೇರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೬೯. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೭೦. ಮಹೇಶ ಉಮತಾರ : ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೭೧. ಗಿರೀಜಾ ಬಿರಾದಾರ : ವಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೭೨. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮
೭೩. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮
೭೪. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮



ಮಹಾಂತೇಶ ಪಲದಿನ್ನಿ ಅವರ **"ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು"**[೭೪] ಮತ್ತು ೨೦೦೯ರಲ್ಲಿ ಕಾಂತರಾಜ ಅವರ **"ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ",**[೭೫] ರಂಗಸ್ವಾಮಿ ಅವರ **"ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ"**[೭೬] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೭೭] ೨೦೧೦ರಲ್ಲಿ ಭಾನುಮತಿ ಕೆ.ಎಲ್. ಅವರ **"ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು",**[೭೮] ದಿನೇಶ ಬಿ. ಅವರ **"ಚನ್ನಪಟ್ಟಣದ ಚಿತ್ತಾರ ಗೊಂಬೆಗಳು",**[೭೯] ವಾದಿರಾಜ ಎ. ಅವರ **"ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು",**[೮೦] ಚಿಂತಾಮಣಿ ಅವರ **"ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ"**[೮೧] ಇವುಗಳೆಲ್ಲಾ ಎಂ.ಫಿಲ್ ಪ್ರಬಂಧಗಳಾಗಿವೆ.

ಇಲ್ಲಿಯವರೆಗೆ ಕರ್ನಾಟಕದಲ್ಲಿ ಒಟ್ಟು ಮೂವತ್ತೊಂದು ಎಂ.ಫಿಲ್. ಪದವಿಯ ಸಂಶೋಧನಾ ಪ್ರಬಂಧಗಳು ಹೊರಬಂದಿದ್ದು, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎರಡು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಇಪ್ಪತ್ತೊಂಬತ್ತು ಎಂ.ಫಿಲ್. ಪ್ರಬಂಧಗಳು ಹೊರಬಂದಿವೆ. ಇದಲ್ಲದೆ ಇನ್ನೂ ಅನೇಕ ಪಿಹೆಚ್.ಡಿ., ಎಂ.ಫಿಲ್ ಮತ್ತು ಡಿ.ಲಿಟ್ ಪ್ರಬಂಧಗಳು ರಚನೆಯ ಹಂತದಲ್ಲಿವೆ. ಇವುಗಳಲ್ಲದೆ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ಹಂತದಲ್ಲಿಯೂ ಕಿರುಶೋಧ ಪ್ರಬಂಧಗಳು ರಚನೆಯಾಗುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಇತ್ತೀಚಿಗೆ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಧಾರವಾಡ, ಶಿವಮೊಗ್ಗ, ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಎ.ಟಿ.ಸಿ. (ಆರ್ಟ ಟೀಚರ್ ಕೋರ್ಸ್) ಐದು ವರ್ಷದ ವಿಶೇಷ ಪರಿಣಿತಿ, ಚಿತ್ರಶಿಲ್ಪ, ಗ್ರಾಫಿಕ್, ವಾಣಿಜ್ಯ ಕಲೆ, ಡಿಪ್ಲೋಮ ಅಂತಿಮ ವರ್ಷದ ತರಗತಿಗಳಲ್ಲಿ ಈ ಕೋರ್ಸ್‌ನ ಭಾಗವಾಗಿ ಕಿರು ಪ್ರಬಂಧಗಳನ್ನು ರಚಿಸಿದ್ದು, ಇವುಗಳ ಸಂಖ್ಯೆ ಮೂರು ಸಾವಿರಕ್ಕೂ ಅಧಿಕವಾಗಿವೆ. ಬ್ಯಾಚುಲರ್ ಆಫ್ ಫೈನ್ ಆರ್ಟ್ಸ. (ಬಿ.ಎಫ್.ಎ) ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ (ಬಿ.ವಿ.ಎ.) ಪದವಿ ಫೈನ್ ಆರ್ಟ್ಸ್ (ಎಮ್.ಎಫ್.ಎ) ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಈ ಕಿರು

೭೫. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯

೭೬. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೯

೭೭. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯

೭೮. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೭೯. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೮೦. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೮೧. ರೇವಣಪ್ಪ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತರಾದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦



ಈ ಕಿರು ಪ್ರಬಂಧಗಳು ವಿದ್ಯಾರ್ಥಿಗಳು ಆಯಾ ಕೋರ್ಸಿನ ಅಧ್ಯಯನದ ಸಂದರ್ಭದಲ್ಲಿ ನಡೆಸಿದ ಸಂಶೋಧನಾ ಅಧ್ಯಯನಗಳಾಗಿದ್ದು, ಇವು ಮುಂದೆ ಸಂಶೋಧನ ಅಧ್ಯಯನಕ್ಕೆ ಅಭ್ಯರ್ಥಿಗಳು ತೊಡಗಿಸಿಕೊಳ್ಳಲು ಈ ಹಂತದ ಅಧ್ಯಯನಗಳು ತುಂಬಾ ಸಹಾಯಕಾರಿಯಾಗಿವೆ. ಮತ್ತು ಅನೇಕ ವೈವಿಧ್ಯಮಯವಾದ ವಿಷಯದ ಈ ಕಿರುಪ್ರಬಂಧಗಳು ಸಂಶೋಧನಾ ಅಧ್ಯಯನಕ್ಕೆ ಆಕರ ಸಾಮಾಗ್ರಿಯಾಗಿವೆ. ಹೀಗೆ ಕರ್ನಾಟಕದಲ್ಲಿ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಸಂಶೋಧನ ಅಧ್ಯಯನವು ನಡೆದುಬಂದ ಹಿನ್ನೆಲೆಯ ಸ್ಥೂಲ ನೋಟವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಒಟ್ಟಾರೆ ಕರ್ನಾಟಕ ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನವು ಇನ್ನುಳಿದ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯನ್ನು ಗಮನಿಸಿದರೆ ಈ ಕ್ಷೇತ್ರದಲ್ಲಿ ನಡೆದ ಸಂಶೋಧನ ಅಧ್ಯಯನ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. "ಇಲ್ಲಿ ನಡೆದ ಸಂಶೋಧನಾ ಅಧ್ಯಯನಗಳು ಪ್ರಾಥಮಿಕ ಆಕರಗಳ ಸಂಗ್ರಹ ಸಮೀಕ್ಷೆ ರೂಪದ ಸಂಶೋಧನಾ ಅಧ್ಯಯನಗಳೇ ಹೆಚ್ಚಾಗಿವೆ. ಅಲ್ಲಲ್ಲಿ ವಿಶ್ಲೇಷಣಾತ್ಮಕ ಅಧ್ಯಯನಗಳು ಮತ್ತು ಅಧ್ಯಯನದ ಹಿಂದಿನ ತಾತ್ವಿಕ ಸಿದ್ಧಾಂತಗಳ ಪರಿಕಲ್ಪನೆಯನ್ನು ಕಟ್ಟಿಕೊಡುವ ಪ್ರಯತ್ನದ ಸಂಶೋಧನ ಅಧ್ಯಯನಗಳು ಸ್ವಲ್ಪ ಪ್ರಮಾಣದಲ್ಲಿ ನಡೆದಿವೆ ಎಂದು ಡಾ. ಎಸ್.ಸಿ. ಪಾಟೀಲ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ವಾಸ್ತವದ ಚಿತ್ರಣವಾಗಿದೆ."

ಇದುವರೆಗೆ ರಾಜಾ ರವಿವರ್ಮನ ಕುರಿತು ಬಂದ ಸಾಹಿತ್ಯ ಸಮೀಕ್ಷೆ

೧೯೬೪ರಲ್ಲಿ ಅ.ನ.ಕೃಷ್ಣರಾಯರು "ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ", ೧೯೮೫ರಲ್ಲಿ ಅಶೋಕ ಟಿ. ಅಕ್ಕಿಯವರು ಕಲಾಚರಿತ್ರೆ, ಬಿ.ಪಿ. ಬಾಯಿರಿ ಯವರು "ಕಲೆಗಾರರ ಕಥೆಗಳು", ೧೯೯೭ರಲ್ಲಿ ಕೆ.ವಿ. ಸುಬ್ರಹ್ಮಣ್ಯಂರವರ ಕಲಾ ಸಂವೇದನೆಯ ಒಳನೋಟಗಳು ಈ ಮೇಲಿನ ಎಲ್ಲಾ ಬರಹಗಾರರು ರವಿವರ್ಮನ ಬದುಕಿನ ಬಗೆಗೆ ಹೆಚ್ಚಾಗಿ ಪರಿಚಯ ಮಾಡಿದ್ದಾರೆ. ಕೆಲವು ಕಲಾಕೃತಿಗಳ ಬಗೆಗೆ ಸ್ಥೂಲವಾಗಿ ಚರ್ಚಿಸಿದ್ದಾರೆ.

೨೦೦೧ರಲ್ಲಿ ಭಾರತೀಯ ಚಿತ್ರಕಲೆ ಎಂಬ ಗ್ರಂಥದಲ್ಲಿಯೂ ಸಹ ಎನ್. ಮರಿಶಾಮಾಚಾರ್‌ರವರು ರವಿವರ್ಮನ ಕಲಾಕೃತಿಗಳು ಹಾಗೂ ಬಣ್ಣಗಾರಿಕೆ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ೨೦೦೩ರಲ್ಲಿ ದೃಶ್ಯಕಲಾವಿದರು ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಪಾಶ್ಚಾತ್ಯ ಹಾಗೂ ಭಾರತೀಯ ಹೆಸರಾಂತ ಕಲಾವಿದರನ್ನು ಪರಿಚಯಿಸುತ್ತಾ ರವಿವರ್ಮನನ್ನು ಪರಿಚಯಿಸಿದ್ದಾರೆ. ಹಾಗೆಯೇ ೨೦೦೭ರಲ್ಲಿ ದೃಶ್ಯಕಲಾ ಪ್ರಪಂಚ, ೨೦೦೯ರಲ್ಲಿ ಕಲಾದಿಗ್ಗಜರು, ೨೦೧೦ರಲ್ಲಿ ರಾಜ ರವಿವರ್ಮನ ಗ್ರಂಥಗಳನ್ನು ಇವರೇ ಬರೆದಿದ್ದು, ರವಿವರ್ಮನ ಚರಿತ್ರೆ ಪದೇ ಪದೇ ಪುನರಾವರ್ತಿಸಲಾಗಿದೆ.

ಹಾಗೆಯೇ ಕೆಲವೇ ಕೆಲವು ಇಂಗ್ಲೀಷ್‌ನಿಂದ ಪುಸ್ತಕಗಳು ಬಂದಿದ್ದು, ಅದರಲ್ಲಿ ರಾಜಾ ರವಿವರ್ಮನ ಇತಿಹಾಸ ಹಾಗೂ ಒಟ್ಟು ಕಲಾಕೃತಿಗಳ ಸಂಗ್ರಹದ ಜೊತೆ ವಿವರಿಸಲಾಗಿದೆ. ಅದರಲ್ಲಿ ೨೦೦೩ರಲ್ಲಿ

Raja Ravi Varma the painter prince (1848-1906) ಬಂದಿದ್ದು, ೨೦೦೫ರಲ್ಲಿ Divine Lithography, ೨೦೦೮ರಲ್ಲಿ Bharat Mata (OXFORD) ಎಂಬವು ಪ್ರಚಲಿತದಲ್ಲಿದ್ದು, ಹೀಗೆ ಇಂಗ್ಲೀಷ್ ಗ್ರಂಥಗಳು ಬಂದಿರುವುದು ವಿಶೇಷವಾಗಿ ಸ್ತ್ರೀ ಚಿತ್ರಗಳ ಕುರಿತು ಇನ್ನೂ ಬಂದಿರುವುದಿಲ್ಲ.

ಭಾರತದಲ್ಲಿನ ಯಶಸ್ವಿ ಕಲಾವಿದರಲ್ಲಿ ಇವರು ಒಬ್ಬರೂ. ರವಿವರ್ಮನ ಕುರಿತು ಕರ್ನಾಟಕದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಲ್ಪ ಸ್ವಲಪ್ ಮಾಹಿತಿಗಳು ಸಿಗುವಷ್ಟರ ಮಟ್ಟಿಗೆ ಕೆಲಸವಾಗಿದ್ದು, ಇದರ ಜೊತೆಗೆ ಕರ್ನಾಟಕದ ಕಲಾಸಾಹಿತಿಗಳಾದ ಎಲ್. ಶಿವಲಿಂಗಪ್ಪ, ಡಾ. ಡಿ. ಎ. ಉಪಾಧ್ಯಾಯ, ಚಿ. ಸು. ಕೃಷ್ಣಶೆಟ್ಟಿ, ಕೆ.ವಿ. ಸುಬ್ರಹ್ಮಣ್ಯಂ, ಎನ್ ಮರಿಶಾಮಾಚಾರ್, ಅ.ನ. ಕೃಷ್ಣರಾಯ ಇನ್ನೂ ಅನೇಕ ಸಾಹಿತಿಗಳು ಈ ಕಲಾ ದಿಗ್ಗಜನ ಕುರಿತು ವಿಮರ್ಶಿಸುವುದರ ಜೊತೆಗೆ ಚರ್ಚಿಸುವುದು ಲೇಖನಗಳ ಮೂಲಕ ಕಾಣಬಹುದು. ವಿಶೇಷವಾಗಿ ರವಿವರ್ಮನ ಚಿತ್ರಕಲಾ ಕೃತಿಗಳಲ್ಲಿ ಸ್ತ್ರೀ ಕಲಾಕೃತಿಗಳ ಕುರಿತು ಪುಸ್ತಕಗಳು ಹಾಗೂ ಸಂಶೋಧನೆಗಳು ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಈ ಅಧ್ಯಯನವು ಒಂದು ಚಿಕ್ಕ ಪ್ರಯತ್ನವಾಗಿದೆ.

ಅಧ್ಯಯನದ ವೈಧಾನಿಕತೆ

ಈ ಸಂಪ್ರಬಂಧದ ರಚನೆಗೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ   ೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಒಬ್ಬ ಹೆಸರಾಂತ ಕಲಾವಿದನ ಸಾಂಸ್ಕೃತಿಕ ಜೀವನ ಹಾಗೂ ಕಲಾಕೃತಿಗಳ ಕುರಿತು ಸಂಶೋಧನೆಗೆ ಹೊರಟಾಗ ಕ್ಷೇತ್ರಕಾರ್ಯ ಅನಿವಾರ್ಯ ಹಾಗೂ ಪ್ರಮುಖವಾದ ಮೂಲ ಆಕರ ಸಾಮಗ್ರಿಯಿಂದಲೆ ಪ್ರಾರಂಭ ಮಾಡಬೇಕಾಗುತ್ತದೆ. ಹಾಗೆಯೇ ಹಿರಿಯ ಕಲಾವಿದರನ್ನು ಬೇಟಿಮಾಡಿದ್ದು, ಸಂದರ್ಶನ, ಛಾಯಾಚಿತ್ರಣ (ರವಿವರ್ಮ ಕುರಿತು ಅರಿತ ಕಲಾವಿದ, ಕಲಾ ಸಾಹಿತಿಗಳ ಬೇಟಿ) ಹಾಗೂ ಅನೇಕ ಗ್ಯಾಲರಿಗಳ ಬೇಟಿಯ ಸಂದರ್ಭ ಮೂಲ ಆಕರ ಸಾಮಗ್ರಿಯ ಮುಖ್ಯ ಘಟ್ಟವಾಗಿದೆ.

ಸಂದರ್ಶನ

ಈ ಭಾಗವು ಅತಿಮುಖ್ಯವಾದದ್ದು, ಸಂಶೋಧನ ಪ್ರಾರಂಭದಲ್ಲಿ ಕಲಾವಿದರನ್ನು ಬೇಟಿ ಮಾಡುವುದು, ಅವರ ಜೀವನ ಮತ್ತು ಕಲಾಕೃತಿಗಳ ಬಗ್ಗೆ ತಿಳಿಯುವುದಾಗಿದ್ದು, ಬಾಲ್ಯ ಶಿಕ್ಷಣ, ಪ್ರಾಥಮಿಕ ಹಾಗೂ ಮಾದ್ಯಮಿಕ ಹಂತದಲ್ಲಿ ಕಲೆಯ ಕಡೆಗೆ ವಾಲಿದ ಅವರ ಮನಸ್ಸು, ಪ್ರೇರಣೆ ನೀಡಿದ ಕಲಾವಿದರು, ಪಾಶ್ಚಾತ್ಯರ ಕಲಾಕೃತಿಗಳ ಮೇಲಾದ ಪ್ರಭಾವ, ಕೌಟುಂಬಿಕ ಜೀವನದ ಹಿನ್ನಲೆ ಹಾಗೂ ಮುನ್ನಲೆಗಳನ್ನು ಚರ್ಚಿಸಿದ್ದು, ಚಿತ್ರಕಲಾ ಕೃತಿಗಳನ್ನ ಅವಲಂಬಿಸಿದ ಪರಿ, ಕಲಾವಿದರು ರಚಿಸಲಾದ ಸಾವಿರಾರು ಕಲಾಕೃತಿಗಳಲ್ಲಿ

ಮುಖ್ಯವಾದವುಗಳನ್ನು ಕುರಿತು ಹಿರಿಯ ಕಲಾವಿದರು, ಕಲಾಸಾಹಿತಿಗಳಲ್ಲಿ ಸಂದರ್ಶನ ಮಾಡಿ ಕಲಾಕೃತಿಗಳಲ್ಲಿ ಜೀವಂತಿಕೆಯಿಂದಿದ್ದು, ಕಳೆದುಹೋಗಿರುವ ರವಿವರ್ಮನನ್ನ ಜ್ಞಾಪಿಸಿಕೊಂಡಿರುವುದೇ ಸಂದರ್ಶನದ ರೂಪವನ್ನು ಅಚ್ಚುಕಟ್ಟಾಗಿ ಬಳಸಲಾಗಿದೆ.

ಛಾಯಚಿತ್ರಣ

ಕಲಾವಿದರ ಮನೆಗಳಲ್ಲಿ ಹುಡುಕಿದರೂ ಸಿಗದ ಕಲಾಕೃತಿಗಳು ಮನರಂಜನೆಯ ಅದ್ಭುತ ಅಲಂಕಾರಗಳ ಇತಿಹಾಸವನ್ನು ಹೊಂದಿರುವಂತಹ ಸ್ಥಳ ಹಾಗೂ ಗ್ಯಾಲರಿಗಳಲ್ಲಿ ಸಂಗ್ರಹಗೊಂಡಿದ್ದು, ಅಂತಹ ಗ್ಯಾಲರಿಗಳಿಗೆ ಬೇಟಿ ಮಾಡಿ ಅಮೂಲ್ಯ ಕಲಾಕೃತಿಗಳ ಛಾಯಾಚಿತ್ರ ಮಾಡಲಾಯಿತು. ಬಾಂಬೆ, ಚೆನ್ನೈ, ತಿರುವನಂತಪುರ ಮತ್ತು ಮೈಸೂರಿನ ಜಗನ್ಮೋಹನ ಆರ್ಟ್ ಗ್ಯಾಲರಿಯಲ್ಲಿ ರವಿವರ್ಮನ ಕಲಾಕೃತಿಗಳು ಪ್ರಸ್ತುತವಿದ್ದು, ನೋಡಗರಿಗೆ ಸ್ವಾಗತಿಸಿವೆ.

ಹಾಗೆಯೇ ಸಂಶೋಧನೆ ಕೈಗೊಂಡ ಸಂದರ್ಭದಲ್ಲಿ ಕೆಲವರು ಸ್ಪಂದಿಸಿ ಇತಿಹಾಸ ಸಂರಕ್ಷಣೆಗೆ ಪ್ರೋತ್ಸಾಹಿಸುವರು, ಇನ್ನೂ ಕೆಲವರಿಗೆ ಇದರ ಅರಿವೆ ಇರುವುದಿಲ್ಲ. ಅಂತಹವರು ತಮ್ಮ ನಿಲುವನ್ನು ಸಡಿಲಿಸದೆ ಕಲಾಕೃತಿಗಳನ್ನು ಗೌಪ್ಯವಾಗಿಡುವುಂತಹದ್ದು, ಒಟ್ಟಾರೆಯಾಗಿ ಈ ಅಧ್ಯಯನಕ್ಕೆ ಬೇಕಾಗಿರುವಂತಹ ಸ್ತ್ರೀ ಕಲಾಕೃತಿಗಳನ್ನು ಕೆಲವು ಪುಸ್ತಕಗಳಲ್ಲಿಯು ಸಂಗ್ರಹಿಸಲಾಗಿದ್ದು, ಅಂತಹ ಕೆಲ ಚಿತ್ರಕೃತಿಗಳನ್ನು ಛಾಯಾಚಿತ್ರ ಮಾಡಲಾಗಿದ್ದು ಅವುಗಳನ್ನು ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

ಸಂಶೋಧನೆಯ ಪ್ರಬಂಧಗಳು, ಮಹಾಪ್ರಬಂಧಗಳು, ಪ್ರಕಟಿತ, ಅಪ್ರಕಟಿತ ಸಾಹಿತ್ಯ ಕೃತಿಗಳು, ವ್ಯಕ್ತಿಯ ಸಂಬಂಧಿಸಿದ ಕೃತಿಗಳು ನಿಘಂಟು, ವಿಶ್ವಕೋಶ, ಗೆಜೆಟೀಯರ್‌ಗಳು, ಅನುವಾದ ಗ್ರಂಥಗಳು, ಸಂಪಾದನ ಗ್ರಂಥಗಳು, ಸ್ಥಳೀಯ ಪತ್ರಿಕಾ ಲೇಖನಗಳಿಂದ ಬಂದಂತಹ ಮಾಹಿತಿ, ಮಾಧ್ಯಮ, ಗ್ರಂಥಾಲಯಗಳಿಗೆ ಬೇಟಿ ನೀಡಿ ಗ್ಯಾಲರಿಯಲ್ಲಿ ಸಿಗುವಂತಹ ಮಾಹಿತಿಗಳನ್ನು ಸಂಗ್ರಹಿಸುವುದೇ ಈ ಆಕರದ ಪ್ರಮುಖ ಉದ್ದೇಶವಾಗಿದೆ.


ತಿರುವನಂತಪುರದಲ್ಲಿ 'ಚಿತ್ರಾ ಆರ್ಟ್ ಗ್ಯಾಲರಿ' ಎಂದು ಹೆಸರಾಗಿರುವ ಪ್ರದರ್ಶನ ಶಾಲೆಯಲ್ಲಿ ರವಿವರ್ಮರು ರಚಿಸಿದ ೧೪ ದೊಡ್ಡ ಗಾತ್ರದ ತೈಲಚಿತ್ರಗಳೂ ೧೦ ಕಿರಿಯ ಗಾತ್ರದ ತೈಲಚಿತ್ರಗಳೂ ಪ್ರದರ್ಶಿತವಾಗಿವೆ. ಇವುಗಳಲ್ಲಿ ಎರಡು ಅಪೂರ್ಣ ಚಿತ್ರಗಳು ಕಲಾವಿದನ ಕೊನೆಯ ದಿನಗಳ ನೆನಪು ಕೊಡುತ್ತವೆ. ಬರೋಡಾದ ಲಕ್ಷ್ಮಿವಿಲಾಸ ಅರಮನೆ ಹಾಗೂ ಮೈಸೂರು ಮಹಾರಾಜರ ಚಿತ್ರಕಲಾ ಸಂಗ್ರಹ, ಉದಯಪುರುದ ಅರಮನೆ, ಹೈದರಾಬಾದಿನ ಸಾಲಾರ್‌ಜಂಗ್ ವಸ್ತುಸಂಗ್ರಹಾಲಯ, ನವದೆಹಲಿ ರಾಷ್ಟ್ರೀಯ 'ಆರ್ಟ್‌ಗ್ಯಾಲರಿ' ಇವುಗಳಲ್ಲಿ ರವಿವರ್ಮರು ರಚಿಸಿದ ತೈಲಚಿತ್ರಗಳನ್ನು ಪ್ರದರ್ಶಿಸಲಾಗಿದೆ.

ರವಿವರ್ಮರ ಹುಟ್ಟೂರಾದ ಕಿಳಿಮಾನೂರಿನ ಅರಮನೆಯಲ್ಲಿ ಕಲಾವಿದ ಉಪಯೋಗಿಸುತ್ತಿದ್ದ ಕುಂಚಗಳು, ಓದುತ್ತಿದ್ದ ಪುಸ್ತಕಗಳು, ಸಂಗ್ರಹಿಸಿದ ಕಲಾಕೃತಿಗಳೆಲ್ಲ ಅಸ್ತವ್ಯಸ್ತವಾಗಿದ್ದರೂ ಸುರಕ್ಷಿತವಾಗಿವೆ. ಅನೇಕ ಚಿತ್ರಕಲಾಕೃತಿಗಳು ಹುಳುತಿಂದು ಬಿದ್ದಿವೆ ಎನ್ನುವುದು ಖೇದಕರ. 'ಭಾರತ ಸರ್ಕಾರವು ಸ್ಮರಣಾರ್ಥ ಅಂಚೆ ಚೀಟಿ'ಯನ್ನು ಹೊರಡಿಸಿ ರವಿವರ್ಮರನ್ನು ಗೌರವಿಸಿದೆ.'

❖❖❖❖

ಅಧ್ಯಾಯ : ಎರಡು

ಕಲಾವಿದ ರವಿವರ್ಮನ ಜೀವನ ಮತ್ತು ವೃತ್ತಿ ಬದುಕು



ಅಧ್ಯಾಯ : ಎರಡು

ಕಲಾವಿದ ರವಿವರ್ಮನ ಜೀವನ ಮತ್ತು ವೃತ್ತಿ ಬದುಕು

ರವಿವರ್ಮ ಪ್ರಸಿದ್ಧ ಭಾರತೀಯ ಚಿತ್ರಕಾರರು ಭಾರತೀಯರ ದೇವತೆಗಳ ಕಾವ್ಯಗಳ ನಾಯಕ ನಾಯಕಿಯರ ವೀರರ ಮತ್ತು ದೇಶಭಕ್ತರ ಚಿತ್ರಗಳನ್ನು ರಾಜಮಹಾರಾಜರಿಂದ ಬಡವರವರೆಗೆ ಎಲ್ಲರಿಗೆ ಲಭ್ಯಮಾಡಿಕೊಟ್ಟರು ಜಗತ್ತಿನಲ್ಲೆಲ್ಲ ಮನ್ನಣೆ ಪಡೆದ ಪ್ರತಿಭಾವಂತರು ಸರಳ ಸ್ವಭಾವದ ಪರಿಶುದ್ಧ ಜೀವನದ ಹಿರಿಯ ವ್ಯಕ್ತಿ. ಕಿಳಿಮಾನೂರು ಒಂದು ಗ್ರಾಮ ದಕ್ಷಿಣ ಭಾರತದಲ್ಲಿನ ತಿರುವನಂತಪುರದಿಂದ ಇಪ್ಪತ್ತನಾಲ್ಕು ಮೈಲಿ ಉತ್ತರದಲ್ಲಿದೆ. ಹಚ್ಚ ಹಸುರಿನ ಗದ್ದೆಗಳಿಂದ ತಲೆದೂಗುವ ತೆಂಗಿನ ಮರಗಳಿಂದ. ಅರಳಿದ ತಾವರೆಯ ಕೊಳಗಳಿಂದ ತುಂಬಿದ ಸುಂದರ ಪ್ರದೇಶ ತಿರುವಾಂಕೂರು ರಾಜರಿಂದ ಉಂಬಳಿ ಪಡೆದು ಸ್ವತಂತ್ರರಾದ ರಾಜಮನೆತನ ಒಂದರ ರಾಜಧಾನಿಯೂ ಆಗಿತ್ತು.

ಕಿಳಿಮಾನೂರು ರಾಜವಂಶದಲ್ಲಿ ೧೮೪೮ ಏಪ್ರಿಲ್ ೨೯ ರಂದು ರವಿವರ್ಮನ ಜನನ. ತಂದೆ ಕಂಡನೂರು ದೇಶತ್ತ್ ಏಳುಕಾವಿಲ್ ನೀಲಕಂಠನ್ ಭಟ್ಟತ್ತಿರಿ. ತಾಯಿ ಉಮಾ ಅಂಬಾಬಾಯಿ. ಅಂಬಾಬಾಯಿ ಸುಸಂಸ್ಕೃತಳು. ಸ್ವತಃ ಕವಯಿತ್ರಿ ಕೂಡ ಆಗಿದ್ದಳು. ನೀಲಕಂಠನ್ ಸಂಸ್ಕೃತ ಸಾಹಿತ್ಯದಲ್ಲಿ ಚೆನ್ನಾಗಿ ಅಭ್ಯಾಸಮಾಡಿದ್ದ. ಕುಶಾಗ್ರ ಬುದ್ಧಿಯ ಬಾಲಕ ರವಿಗೆ ತಂದೆಯಿಂದ ಸಾಹಿತ್ಯ-ವ್ಯಾಕರಣಗಳಲ್ಲಿ ಶಿಕ್ಷಣ. ತಾಯಿಯಿಂದ ಸಂಗೀತ ಶಿಕ್ಷಣ. ಮಾವ ರಾಜರವಿವರ್ಮನಿಂದ ಚಿತ್ರರಚನೆಯಲ್ಲಿ ಮಾರ್ಗದರ್ಶನ ರಾಮಾಯಣ-ಮಹಾಭಾರತ ಇತ್ಯಾದಿ ಪುರಾಣಗಳ ಕಥೆ ಎಷ್ಟು ಕೇಳಿದರೂ ಆತನಿಗೆ ಸಾಕೆನಿಸುತ್ತಿರಲಿಲ್ಲ. ಎಡರ ಹರೆಯದಲ್ಲೆ 'ಅಮರಕೋಶ' ಹಾಗೂ 'ಸಿದ್ದರೂಪ'ಗಳನ್ನು ರವಿ ಕಲಿತುಬಿಟ್ಟ. 'ರಘುವಂಶ',

'ಶಾಕುಂತಳ' ಇತ್ಯಾದಿ ಕಾಳಿದಾಸ ಕೃತಿಗಳ ಅಧ್ಯಯನವೂ ಸಾಗಿತು. ರಾಮ-ಲಕ್ಷ್ಮಣರ ಸೋದರ ವಾತ್ಸಲ್ಯ ಪರಶುರಾಮನ ಗಾಂಭೀರ್ಯ, ಸುಗ್ರೀವನ ಆಜ್ಞಾಪಾಲನೆ, ಹನುಮಂತನ ಧೈರ್ಯ ಪರಾಕ್ರಮ, ಪಾಂಡವರ ಧರ್ಮನಿಷವಿ ಕರ್ಣನ ದಾನಶೂರತೆ ಇವೆಲ್ಲವೂ ಬಾಲಕ ರವಿಯ ಮನಸ್ಸಿನಲ್ಲಿ ಗಟ್ಟಿಯಾಗಿ ಅಚ್ಚೊತ್ತಿ ಹೃದಯದಲ್ಲೂ ಅಂಕುರಿಸಿದವು.

ಕಥಕಳಿ ಕಾರ್ಯಕ್ರಮವಿದ್ದಲ್ಲೆಲ್ಲ ರವಿಯು ತಪ್ಪದೇ ಧಾವಿಸುತ್ತಿದ್ದ ಪ್ರದರ್ಶನದಲ್ಲಿ ದೇವರುಗಳು, ದೇವತೆಯರು ಹಾಗೂ ಪೌರಾಣಿಕ ವ್ಯಕ್ತಿಗಳು ಎಂತಹ ಉಡುಪನ್ನು ಧರಿಸುತ್ತಾರೆ. ಎಂತಹ ಒಡವೆಗಳನ್ನು ತೊಡುತ್ತಾರೆ. ಹೇಗೆ ನಿಲ್ಲುತ್ತಾರೆ. ಹೇಗೆ ಭಾವಗಳನ್ನು ತೋರಿಸುತ್ತಾರೆ ಎಲ್ಲವನ್ನೂ ನೋಡಬೇಕೆಂದು ಅವನಿಗೆ ಕುತೂಹಲ. ಮುಂದಿನ ಪಂಕ್ತಿಯಲ್ಲೆ ಕುಳಿತುಬಿಡುತ್ತಿದ್ದ ರವಿವರ್ಮನು ರಚಿಸಿದ ಪೌರಾಣಿಕ ಚಿತ್ರಗಳು ಮೊದಲಿಗೆ ರೂಪುಗೊಂಡಿದ್ದು ಈ ಜಾನಪದ ನೃತ್ಯ ರಂಗಮಂಟಪಗಳಲ್ಲೆ. ಪ್ರದರ್ಶನ ನೋಡಿ ಮನೆಗೆ ಹಿಂದಿರುಗಿ ಬಂದವನೆ ರವಿ ಮಸಿಯ ಚೂರನ್ನು ಕೈಗೆತ್ತಿಕೊಂಡು ತನ್ನ ಕಲ್ಪನೆಗೆ ಮೂರ್ತರೂಪ ನೀಡುತ್ತಿದ್ದ ದಾರಿಯಲ್ಲಿ ಸಾಗುವ ಮಂದಿಯನ್ನು ಕರೆದು ಅವರ ಅಣಕು ರೂಪವನ್ನು ಗೋಡೆಯಲ್ಲಿ ಚಿತ್ರಿಸುತ್ತಿದ್ದ ಹೀಗೆ ಅರಮನೆಯ ಗೋಡೆಯಲ್ಲೆಲ್ಲ ಚಿತ್ರಗಳ ಗೀಚು ತುಂಬಿ ಆಳು ಕಾಳುಗಳಿಗೆ ಗೋಡೆಯನ್ನು ಉಜ್ಜಿ ಸ್ವಚ್ಛ ಮಾಡುವುದೇ ಕೆಲಸ ಅದೆಷ್ಟೋ ಬಾರಿ ಬಾಲಕನನ್ನು ದಂಡಿಸಿದರೂ ಮತ್ತೆ ಮತ್ತೆ ಗೋಡೆಯಲ್ಲಿ ಮಸಿಯಿಂದ ಆತ ಚಿತ್ರ ಮೂಡಿಸುತ್ತಿದ್ದ ಎಷ್ಟುಬಾರಿ ಪೆಟ್ಟು ಬಿದ್ದರೂ ಸರಿ. ನಾನು ಚಿತ್ರ ಬರೆಯುತ್ತೇನೆ ಎಂದು ರವಿಯ ಹಠ.

ರವಿವರ್ಮನ ಪ್ರತಿಭೆಯನ್ನು ಗುರುತಿಸಿದ್ದ ಸೋದರ ಮಾವ ರಾಜರಾಜವರ್ಮ ಸ್ವತಃ ಪ್ರತಿಭಾವಂತ ಕಲಾವಿದ ತಿರುವನಂತಪುರದಲ್ಲಿ ಬಾಲಕ ರವಿವರ್ಮನ ಚಿತ್ರ ಕಲಾಪ್ರತಿಭೆ ಅರಳಲು ಸಾಕಷ್ಟು ಅವಕಾಶವಾಯಿತು. ತಿರುವನಂತಪುರ ಅರಮನೆಯಲ್ಲಿ ಆಧುನಿಕ ಶೈಲಿಯ ತೈಲಚಿತ್ರಗಳಿಗಿಂತಲೂ ಹೆಚ್ಚಾಗಿ ಹಳೆಯ ಶೈಲಿಯ ಚಿತ್ರಗಳು ಇದ್ದವು. ಖ್ಯಾತಿ ತಿರುನಾಳ್ ಮಹಾರಾಜರ ಕಾಲದಲ್ಲಿ ತಂಜಾಪೂರು ಶೈಲಿಯಲ್ಲಿ ನಿರ್ಮಿಸಿದ ಚಿತ್ರಗಳೊಂದಿಗೆ ಐರೋಪ್ಯ ಕಲಾವಿದರು ರಚಿಸಿದ ಕೆಲವು ಚಿತ್ರಗಳಲ್ಲಿ ಪದ್ಮನಾಭಸ್ವಾಮಿ ಕ್ಷೇತ್ರದ ಸುಂದರ ಭಿತ್ತಿಚಿತ್ರಗಳು ಇವೆಲ್ಲ ಬಾಲಕ ರವಿವರ್ಮನ ಕಣ್ಣಿಗೆ ಹಬ್ಬವಾದವು.

ಆಯಿಲ್ಯಂಚಿರುನಾಳ್ ಮಹಾರಾಜರಿಗೆ ರಾಜರಾಜವರ್ಮನು ಬಾಲಕ ರವಿವರ್ಮನ ಪರಿಚಯ ಮಾಡಿಕೊಟ್ಟರು. ಆ ಬಳಿಕ ರವಿವರ್ಮನಲ್ಲಿ ಸುಪ್ತವಾಗಿದ್ದ ಕಲಾಶಕ್ತಿಯನ್ನು ಪ್ರಕಾಶಕ್ಕೆ ತರಲು ಬಹಳ ಶ್ರಮವಹಿಸಿದರು. ಪಾಶ್ಚಾತ್ಯ ಶೈಲಿಯ ಚಿತ್ರಗಳನ್ನೊಳಗೊಂಡ ಪುಸ್ತಕಗಳನ್ನು ರವಿವರ್ಮನಿಗೆ ಒದಗಿಸಿಕೊಟ್ಟರು. ಕ್ರಮೇಣ ರವಿಗೆ ಆ ಚಿತ್ರಗಳ ಪ್ರಕೃತಿಯನ್ನು ರಚಿಸುವುದರಲ್ಲಿ ಶ್ರದ್ಧೆ ಬೆಳೆಯಿತು. ಆ ಕಾಲದಲ್ಲಿ ಅಳಗಿರಿ ನಾಯ್ಡು ಎಂಬ ಕಲಾವಿದನು ತಿರುವನಂತಪುರ ಆಸ್ಥಾನದಲ್ಲಿದ್ದು ತಂಜಾವೂರು ಶೈಲಿಯ ಜಲವರ್ಣ ಚಿತ್ರಗಳನ್ನು ರಚಿಸುತ್ತಿದ್ದನು. ಬಾಲಕ ರವಿಯು ಆತನ ಕೈಚಳಕವನ್ನು ಸಮೀಪದಿಂದಲೇ ನೋಡಿ



ತಾನೂ ಕಲಿತುಕೊಂಡ ಸಂದರ್ಭವು ಇತ್ತು.

ಕಿಳಿಮಾನೂರು ಅರಮನೆಯಲ್ಲಿ ಚಿತ್ರರಚನೆಗೆಂದೇ ಪ್ರತ್ಯೇಕ ಕೋಣೆಯನ್ನು ಮೀಸಲಿರಿಸಿದ್ದರು. ಮಾವ ರಾಜವರ್ಮನೊಂದಿಗೆ ರವಿವರ್ಮನು ತನ್ನ ಕುಂಚವನ್ನು ಚಲಾಯಿಸುತ್ತಿದ್ದ ದಿನಗಳವು. ಮಹಾವಿಷ್ಣುವಿನ ಚಿತ್ರವನ್ನು ಚಿತ್ರಿಸಿದ ಬಳಿಕ ಅದಕ್ಕೆ ಜಲವರ್ಣದ ಲೇಪ ಆಗುತ್ತಿತ್ತು. ರವಿವರ್ಮನು ಕೈಕಟ್ಟಿಕುಳಿತು ಮಾವನ ಕುಂಚದ ಚಲನೆಯನ್ನೇ ನೋಡುತ್ತಿದ್ದ ಸಂದರ್ಭದಲ್ಲಿ ಚಿತ್ರ ರಚಿಸುತ್ತಿದ್ದ ರಾಜರವಿವರ್ಮನು ಕೋಣೆಯಿಂದ ಸ್ವಲ್ಪ ಹೊತ್ತು ಹೊರಕ್ಕೆ ಹೋದ ನಂತರ ರವಿಯ ಕೈ ಚುರುಕಾಯಿತು. ಅತ್ತಿತ್ತ ನೋಡಿ. ಯಾರು ಇಲ್ಲವೆಂದು ಖಚಿತವಾಗುತ್ತಲೆ, ಕುಂಚವನ್ನು ಕೈಗೆತ್ತಿಕೊಂಡ. ಬಳಿಕ ಜಲವರ್ಣವನ್ನು ಲೇಪಿಸತೊಡಗಿದ ಅದೂ ಸಾಲದೆಂಬಂತೆ ಮಹಾವಿಷ್ಣುವಿನ ವಾಹನವಾದ ಗರುಡನನ್ನೂ ಚಿತ್ರಿಸಿದ ಅಷ್ಟರಲ್ಲೆ ರಾಜರವಿವರ್ಮನು ಹಿಂದಿರುಗಿ ಬಂದ ಸದ್ದಿಲ್ಲದೇ, ಅಳಿಯನ ಕೈಚಳಕವನ್ನು ಕಂಡು ಮನಸ್ಸಿನಲ್ಲೆ 'ಶಹಭಾಷ್' ಎಂದುಕೊಂಡ ಚಿತ್ರ ಪೂರ್ತಿಗೊಂಡ ಬಳಿಕ ರವಿಯು ಹಿಂದಿರುಗಿ ನೋಡಿದಾಗ ಮಾವ ಪ್ರತ್ಯಕ್ಷವಾಗಿದ್ದಾನೆ! ರಾಜರವಿವರ್ಮನು ಹುಡುಗನನ್ನು ಬಿಗಿದಪ್ಪಿ ಮುದ್ದಿಸಿ, ಬೆನ್ನು ಚಪ್ಪರಿಸಿದ, ರವಿಯ ಭವಿಷ್ಯ ಉಜ್ವಲವೆಂದು ಆತ ಅವನ ತಂದೆ ತಾಯಿಯರಲ್ಲಿ ತಿಳಿಸಿದ ಪ್ರಸಂಗವು ನಡೆಯಿತು.

ತಿರುವನಂತಪುರದ ಅರಮನೆಯಲ್ಲಿ ಚಿತ್ರಕಲಾವಿದರಾಗಿದ್ದ ರಾಮಸ್ವಾಮಿ ನಾಕರ್ ಹಾಗೂ ಆರ್‌ಮುಗಂ ಪಿಳಯವರ ಶಿಷ್ಯನಾಗಿರಲು ಮಹಾರಾಜರು ರವಿವರ್ಮನಿಗೆ ಅನುಮತಿ ನೀಡಿದರು. ತೈಲವರ್ಣಗಳ ಬಳಕೆಯಲ್ಲಿ ಕ್ರಮೇಣ ರವಿವರ್ಮನು ತರಬೇತಿಗೊಂಡನು. ೧೮೬೬ರಲ್ಲಿ ಮಾವೇಲಿಕ್ಕರ ರಾಜ ಕುಟುಂಬಕ್ಕೆ ಸೇರಿದ ಪುರೂರುಟ್ಟಾತಿನಾಳ್ ರಾಣಿಯೊಂದಿಗೆ ರವಿಯ ವಿವಾಹವಾಯಿತು.

೧೮೬೮ರಲ್ಲಿ ಥಿಯೋಡೊರ್ ಜೆನ್‌ಸನ್ ಎಂಬ ಪಾಶ್ಚಾತ್ಯ ಕಲಾವಿದನು ತಿರುವಂತಪುರ ಆಸ್ಥಾನಕ್ಕೆ ಬಂದ. ಭಾರತದಲ್ಲಿ ಆಂಗ್ಲರ ಆಗಮನದೊಂದಿಗೆ ಐರೋಪ್ಯ ಚಿತ್ರಕಲೆಗೂ ರಾಜ ಮಹಾರಾಜರುಗಳಿಂದ ಬೇಡಿಕೆ, ಹಾಗೂ ಮನ್ನಣೆ ದೊರಕಿತು. ರಜಪೂತರ ಶೈಲಿ ಹಾಗೂ ಮೊಗಲ ಶೈಲಿಯ ಚಿತ್ರಕಲಾ ಶೈಲಿಯು ಔರಂಗಜೇಬನ ಕಾಲದಿಂದ ಮೂಲೆಗುಂಪಾಗಿತ್ತು. ಈ ಸಂದರ್ಭವನ್ನು ಬಳಸಿಕೊಂಡ ಅನೇಕ ಐರೋಪ್ಯ ಕಲಾವಿದರು ರಾಜ ಮಹಾರಾಜರ ತೈಲಚಿತ್ರಗಳನ್ನು ಪಾಶ್ಚಾತ್ಯ ಶೈಲಿಯಲ್ಲಿ ರಚಿಸಿ ಸಾಕಷ್ಟು ಹಣ ಸಂಪಾದಿಸುತ್ತಿದ್ದರು. ಜೆನ್‌ಸನ್‌ನ ಉದ್ದೇಶ ಕೂಡ ಇದೆ ಆಗಿತ್ತು. ಈ ಕಾರಣದಿಂದಾಗಿಯೇ ಭಾರತೀಯ ಕಲಾಸಕ್ತರಿಗೆ ಪಾಶ್ಚಾತ್ಯ ಶೈಲಿಯ ತೈಲವರ್ಣದ ಬಳಕೆ ಕಲಿಸಿಕೊಡಲು ಅವರು ಹಿಂಜರಿಯುತ್ತಿದ್ದರು. ಜನ್‌ಸನ್ ಅವರ ಶಿಷ್ಯತ್ವ ಸ್ವೀಕರಿಸಲು ರವಿವರ್ಮ ಉತ್ಸುಕನಾಗಿದ್ದರೂ ಜೆನ್‌ಸನ್ ಒಪ್ಪಲಿಲ್ಲ. ಆದರೆ ರವಿವರ್ಮನ ಉತ್ಸಾಹ ಕುಂದಲಿಲ್ಲ. ಆಸಕ್ತಿ ಹಾಗೂ ದುಡಿಮೆಯಿಂದ ತಾನು ಸ್ವತಃ ಚಿತ್ರಕಲೆಯನ್ನು ಒಳಿಸಿಕೊಳ್ಳಬಲ್ಲೆ ಎಂದು ರವಿವರ್ಮನ ಪ್ರಾಮಾಣಿಕ ಮನಸ್ಸು ಪ್ರತಿಧ್ವನಿಸಿತು.

ಕೊನೆಗೂ ಜೆನ್‌ಸನ್ ತನ್ನ ಚಿತ್ರರಚನೆಯನ್ನು ಸಮೀಪದಿಂದ ಕಾಣಲು ರವಿವರ್ಮನಿಗೆ ಅನುಮತಿ



ನೀಡಿದ. ಸೂಕ್ಷ್ಮ ಗ್ರಹಣಶಕ್ತಿಯುಳ್ಳ ರವಿವರ್ಮನಿಗೆ ಅಷ್ಟೇ ಸಾಕಾಗಿತ್ತು. ಸ್ವಲ್ಪ ಕಾಲದೊಳಗಾಗಿ ರವಿವರ್ಮನು ತೈಲಚಿತ್ರ ರಚನೆಯ ತಂತ್ರಗಳನ್ನು ತಾನಾಗಿಯೇ ನೋಡಿ ಕಲಿತುಕೊಂಡ ಆಗಿನ ಮದರಾಸಿನ ಗವರ್ನರರ ಪೂರ್ಣ ಆಕಾರದ ಚಿತ್ರವೊಂದನ್ನು ತೈಲವರ್ಣದಲ್ಲಿ ತೃಪ್ತಿಕರವಾಗಿ ರವಿವರ್ಮ ಮಾಡಿ ಮುಗಿಸಿದ. ಈ ಚಿತ್ರವನ್ನು ಸ್ವೀಕರಿಸಿದ ಗವರ್ನರ್ ರವಿವರ್ಮನ ಕಲಾನೈಪುಣ್ಯವನ್ನು ಆಶ್ಚರ್ಯದಿಂದ ಹೊಗಳಿದರು. “ಒಮ್ಮೆ ನನ್ನ ಚಿತ್ರಕ್ಕಾಗಿ ಪ್ರಸಿದ್ಧ ಐರೋಪ್ಯ ಕಲಾವಿದನ ಮುಂದೆ ಹದಿನೆಂಟು ಬಾರಿ ರೂಪದರ್ಶಿಯಾಗಿ ಕುಳಿತಿದ್ದೆ. ಅಷ್ಟೊಂದು ಸಮಯಾವಕಾಶ ಒದಗಿಸದಿದ್ದರೂ ಭಾರತೀಯ ಕಲಾವಿದನಾದ ರವಿವರ್ಮ ಆತನಿಗಿಂತಲೂ ಚೆನ್ನಾಗಿ ಪಾಶ್ಚಾತ್ಯ ಶೈಲಿಯಲ್ಲಿ ನನ್ನ ಚಿತ್ರ ಮಾಡಿ ಮುಗಿಸಿದ್ದು ಆಶ್ಚರ್ಯವೇ ಸರಿ” ಎಂದರು. ತಿರುವಾಂಕೂರು ಮಹಾರಾಜರು ರವಿವರ್ಮನ ಪ್ರತಿಭೆಗೆ ಮೆಚ್ಚಿ ಆತನಿಗೆ ‘ವೀರ ಶೃಂಖಲೆ’ಯನ್ನು ನೀಡಿ ಗೌರವಿಸಿದರು. ತಿಂಗಳಿಗೆ ಐವತ್ತು ರೂಪಾಯಿ ಸಂಬಳದ ಮೇಲೆ ಆಸ್ಥಾನ ಕಲಾವಿದನಾಗಿಯೂ ನೇಮಿಸಿದರು.

ಮೂಕಾಂಬಿಕೆಯ ವರದಹಸ್ತ

ಯುವಕ ರವಿವರ್ಮನು ಆಚಾರನಿಷ್ಠನಾಗಿದ್ದ. ಪ್ರಾತಃಕಾಲ ನಾಲ್ಕು ಗಂಟೆಗೆ ಎದ್ದು, ಶುಚಿರ್ಭೂತನಾಗಿ ಸ್ವಯಂವರ ಮಂತ್ರ ಹಾಗೂ ಸೌಂದರ್ಯಲಹರಿ ಸ್ತೋತ್ರಗಳನ್ನು ಪಠಿಸುವುದು ಆತನ ರೂಢಿಯಾಗಿತ್ತು. ಪ್ರಾರ್ಥನೆಯ ಬಳಿಕ ಬೆಳಗು ಹರಿಯುವ ತನಕ ಪೌರಾಣಿಕ ಸಂಸ್ಕೃತ ಸಾಹಿತ್ಯ ಸಂಬಧ ಗ್ರಂಥಗಳನ್ನು ಆತ ಓದುತ್ತಿದ್ದನು. ಬೆಳಗ್ಗಿನ ಉಪಹಾರ ಮುಗಿಸುವ ತನಕ ಚಿತ್ರರಚನೆ.

೧೮೭೦ರಲ್ಲಿ ದಕ್ಷಿಣ ಕನ್ನಡದ ಪ್ರಸಿದ್ಧ ತೀರ್ಥಕ್ಷೇತ್ರವಾದ ಕೊಲ್ಲೂರು ಮೂಕಾಂಬಿಕಾ ಸನ್ನಿಧಿಗೆ ರವಿವರ್ಮನು ಯಾತ್ರೆ ಹೊರಟನು. ಇಲ್ಲಿ ನಲವತ್ತೊಂದು ದಿನಗಳ ಪರ್ಯಂತ, ಏಕಾಗ್ರತೆಯಿಂದ ಸರಸ್ವತಿ ಭಜನೆಯಲ್ಲಿ ಆತ ಪಾಲ್ಗೊಂಡ. ದೇಹದಂತೆ ಮನಸ್ಸನ್ನು ಕೂಡಾ ಶುದ್ಧವಾಗಿರಿಸಲು ನಿಷ್ಠೆಯಿಂದ ಪ್ರಯತ್ನಿಸಿದ. ಇಲ್ಲಿ ಅವನಿಗೆ ಮೂಕಾಂಬಿಕೆಯ ಅನುಗ್ರಹವಾಯಿತು ಎಂದು ಹೇಳುತ್ತಾರೆ. ಭಜನೆಯಮಂಗಳದ ಮೂರು ದಿನಗಳಿಗೆ ಮೊದಲು, ದೇವಸ್ಥಾನದ ಚಾವಡಿಯಲ್ಲಿ ನಿದ್ರಿಸುತ್ತಿದ್ದ ರವಿವರ್ಮನಿಗೆ ಅಪೂರ್ವ ಕನಸೊಂದು ಕಂಡಿತು. ದಿವ್ಯವಾದ ರೂಪವುಳ್ಳ, ಸುಂದರ ಯುವತಿಯು ಸರ್ವಾಲಂಕಾರಭೂಷಿತೆಯಾಗಿ ಆತನ ಹಾಸಿಗೆಯ ಬಳಿ ಕುಳಿತು ಆತನನ್ನು ಸ್ಪರ್ಶಿಸಿದಳು. ಎಚ್ಚರವಾದಾಗ, ತನ್ನ ವ್ರತಕ್ಕೆ ಭಂಗ ಬಂದಿತೋ ಎಂದು ರವಿವರ್ಮನಿಗೆ ಆತಂಕ. ದೇವಸ್ಥಾನದ ಅರ್ಚಕನನ್ನು ಕಂಡು ಕನಸನ್ನೂ ತನ್ನ ಆತಂಕವನ್ನೂ ವಿವರಿಸಿದ. ಆಗ ಅರ್ಚಕನು ರವಿವರ್ಮನನ್ನು ಸಂತೈಸುತ್ತಾ, “ನೀನು ನಿಜವಾಗಿಯೂ ಭಾಗ್ಯಶಾಲಿ ಸಾಕ್ಷಾತ್ ಮೂಕಾಂಬಿಕಾದೇವಿಯೇ ನಿನಗೆ ಕನಸಿನಲ್ಲಿ ಬಂದು ಹರಸಿದ್ದಾಳೆ” ಎಂದು ಹೇಳಿದ ಸಂದರ್ಭದಲ್ಲಿ ರವಿವರ್ಮನಿಗೆ ಅರ್ಚಕನ ಮಾತಿನಿಂದ ಸಮಾಧಾನವಾಯಿತು. ಅನಂತರ ಅವನ ಚಿತ್ರಗಳಿಗೆಲ್ಲ ಕನಸಿನಲ್ಲಿ ಕಂಡ ಆ ದೇವಸುಂದರಿಯೇ ರೂಪದರ್ಶಿಯಾದಳು.



ದೇಶ ವಿದೇಶಗಳಲ್ಲಿ ಖ್ಯಾತಿ

ಮದರಾಸಿನ ಚಿತ್ರಕಲಾ ಮಂದಿರದ ಅಧಿಕಾರಿ ಚಶಾಮ್ ಅವರು ತಿರುನಂತಪುರಕ್ಕೆ ಬಂದಾಗ ತರುಣ ರವಿವರ್ಮನ ಚಿತ್ರಗಳನ್ನು ನೋಡಿ ತುಂಬ ಸಂತೋಷಪಟ್ಟರು. ಮದರಾಸಿನಲ್ಲಿ ನಡೆಯಲಿದ್ದ ಚಿತ್ರಕಲಾ ಪ್ರದರ್ಶನಕ್ಕೆ ಚಿತ್ರಗಳನ್ನು ಕಳುಹಿಸಲು ಸೂಚಿಸಿದರು. ೧೮೭೬ರಲ್ಲಿ ನಡೆದ ಆ ಚಿತ್ರಕಲಾ ಪ್ರದರ್ಶನಕ್ಕೆ ಮಲೆಯಾಳಿ ವನಿತೆ ಎಂಬ ತೈಲ ವರ್ಣಚಿತ್ರವನ್ನು ಅದೆ ಪ್ರಥಮವಾಗಿ ರವಿವರ್ಮನು ಕಳುಹಿಸಿದನು. ಈ ಪ್ರದರ್ಶನಕ್ಕೆ ಭಾರತೀಯ ಕಲಾವಿದರೇ ಅಲ್ಲದೇ ಪಾಶ್ಚಾತ್ಯ ಕಲಾವಿದರೂ ಚಿತ್ರಗಳನ್ನು ಕಳುಹಿಸಿದರು. ಆದರೆ ಗವರ್ನರ್ ಸ್ವರ್ಣ ಪದಕ ಪಡೆಯುವ ಭಾಗ್ಯ ರವಿವರ್ಮನ ಪಾಲಿಗೆ ಬಂತು. ಮಾತ್ರವಲ್ಲ. ರವಿವರ್ಮನು ಚಿತ್ರಿಸಿದ ಬಕ್ಕಿಂಗ್‌ಹಮ್‌ನ ಡ್ಯೂಕರ ಒಂದು ತೈಲಚಿತ್ರವನ್ನು ಮದರಾಸು ಸರ್ಕಾರಿ ಭವನದಲ್ಲಿ ಇರಿಸಲಾಯಿತು. ಅದೇ ವರ್ಷ ಯೂರೋಪಿನ ವಿಯೆನ್ನಾದಲ್ಲಿ ನಡೆದ ವಿಶ್ವ ಕಲಾ ಪ್ರದರ್ಶನದಲ್ಲೂ ರವಿವರ್ಮನ 'ಮಲೆಯಾಳಿ ವನಿತೆ'ಗೆ ಪ್ರಶಸ್ತಿ ಬಂದಿತು. ರವಿವರ್ಮನ ಹೆಸರು ಭಾರತದ ಗಡಿಯನ್ನು ಮೀರಿ ಪ್ರಸಿದ್ಧವಾಯಿತು.

ಮುಂದಿನ ವರ್ಷ ಮದರಾಸಿನಲ್ಲಿ 'ಲಲಿತ ಕಲಾಪ್ರದರ್ಶನ'ದಲ್ಲಿ ರವಿವರ್ಮನ ಕೃತಿ 'ವೀಣೆ ನುಡಿಸುವ ತಮಿಳು ವನಿತೆ'ಯೂ ೧೮೭೬ರಲ್ಲಿ ನಡೆದ ಇನ್ನೊಂದು ಕಲಾಪ್ರದರ್ಶನದಲ್ಲಿ ರವಿವರ್ಮನ ಪ್ರಪ್ರಥಮ ಪೌರಾಣಿಕ ಚಿತ್ರ ದುಷ್ಯಂತನಿಗೆ "ಶಕುಂತಳೆಯ ಪ್ರೇಮಪತ್ರ"ವೂ ಪ್ರಶಸ್ತಿಗಳನ್ನು ಪಡೆದವು. ಆಂಗ್ಲ ಸಂಸ್ಕೃತ ವಿದ್ವಾಂಸನೊಬ್ಬನು ಇಂಗ್ಲಿಷಿಗೆ ಅನುವಾದಿಸಿದ ಶಾಕುಂತಳ ಮಹಾಕಾವ್ಯವು ಪುಸ್ತಕ ರೂಪದಲ್ಲಿ ಪ್ರಕಟವಾದಾಗ, ರವಿವರ್ಮನು ರಚಿಸಿದ ಈ ಚಿತ್ರವು ಮುಖಪುಟದಲ್ಲಿ ಶೋಭಿಸಿತು. ಮೊತ್ತ ಮೊದಲಬಾರಿಗೆ ರವಿವರ್ಮನ ತೈಲಚಿತ್ರವು ಅಚ್ಚಾಗಿ ಆತನ ಕೀರ್ತಿ ನಾಲ್ದೆಸೆಗೂ ಹರಡಿತು. ಆದರೆ ರವಿವರ್ಮನಿಗೆ ಬೇಸರವಾಗುವಂತಹ ಅನುಭವ ಕಾದಿತ್ತು.

೧೮೮೦ರಲ್ಲಿ ತಿರುವಾಂಕೂರಿನ ಮಹಾರಾಜರಾಗಿದ್ದ ಆಯಿಲ್ಯಂ ತಿರುನಾಳ್ ನಿಧನರಾದರು. ಇದು ರವಿವರ್ಮನ ಪಾಲಿಗೆ ಅಪಾರ ನಷ್ಟವೇ ಆಗಿತ್ತು. ತನ್ನ ಹಿತಚಿಂತಕನೊಬ್ಬನನ್ನು ಕಳಕೊಂಡ ಅನುಭವ ರವಿವರ್ಮನಿಗೆ, ಆ ಬಳಿಕ ವಿಶಾಖಂ ತಿರುನಾಳ್ ತಿರುವಾಂಕೂರಿನ ಸಿಂಹಾಸನವನ್ನೇರಿದರು. ಆ ಸಂದರ್ಭದಲ್ಲಿ ಮದರಾಸಿನ ಗವರ್ನರ್ ತಿರುವನಂತಪುರಕ್ಕೆ ಬಂದಿದ್ದರು. ರಾಜನ ಆಸ್ಥಾನಕ್ಕೆ ಬರುತ್ತಲೆ ರವಿವರ್ಮನ ಕಲಾಶಾಲೆಯನ್ನು ಕಾಣಲು ಮುಂದಾದರು. ತನ್ನನ್ನು ಕಡೆಗಣಿಸಿ, ರವಿವರ್ಮನನ್ನು ಕಾಣಲು ತವಕ ಪಡುವ ಗವರ್ನರರ ರೀತಿ ಮಹಾರಾಜರ ಮನಸ್ಸಿಗೆ ನೋವನ್ನುಂಟು ಮಾಡಿತು. ಅಂದಿನಿಂದ ರವಿವರ್ಮನೆಂದರೆ ವಿಶಾಖಂ ತಿರುನಾಳರಿಗೆ ತಾತ್ಸಾರ-ಅಸೂಯೆ ಉಂಟಾಯಿತು. ರಾಜಧಾನಿಯನ್ನು ತ್ಯಜಿಸಿ ಹೋಗಬೇಕೆಂದು ಅವರು ರವಿವರ್ಮನಿಗೆ ಆಜ್ಞಾಪಿಸಿದರು. ರವಿವರ್ಮನು ಮಾವೇಲಿಕ್ಕರಕ್ಕೆ ಹಿಂದಿರುಗಿದ.



ಬೆಳೆದ ಕೀರ್ತಿ

ಮಾವೇಲಿಕ್ಕರದಲ್ಲಿದ್ದು ಪೌರಾಣಿಕ ಗ್ರಂಥಗಳ ಆಳವಾದ ಅಧ್ಯಯನದೊಂದಿಗೆ ತನ್ನ ಕುಂಚ ಪ್ರಯೋಗವನ್ನು ಮುಂದುವರೆಸಿದನು. ರಾಮಾಯಣದಲ್ಲಿ ಚಿತ್ರಿಸಿದ ಸನ್ನಿವೇಶಗಳು, ಮಹಾಭಾರತದ ವೀರರು. ಶಾಕುಂತಳ ರಘುವಂಶಗಳ ಅವಿಸ್ಮರಣೀಯ ವೃತ್ತಾಂತಗಳು ಇವೆಲ್ಲ ರವಿವರ್ಮನ ಸ್ಮೃತಿಪಟಲದಿಂದ ಚಿತ್ರಗಳಾಗಿ ಮೂಡಿಬರತೊಡಗಿದವು. ಪೌರಾಣಿಕ ವ್ಯಕ್ತಿಗಳನ್ನು ಸಮರ್ಥವಾಗಿ ಮೊತ್ತ ಮೊದಲಿಗೆ ಚಿತ್ರದಲ್ಲಿ ಮೂಡಿಸಿದ ಶ್ರೇಯಸ್ಸು ರವಿವರ್ಮನಿಗೆ ಸಲ್ಲುತ್ತದೆ.

ರವಿವರ್ಮನ ಸೀತಾ ಪರಿತ್ಯಾಗ ಚಿತ್ರಬರೋಡದ ಅರಮನೆಯಲ್ಲಿ ಪ್ರದರ್ಶಿತವಾಯಿತು. ಹಲವಾರು ಪ್ರದರ್ಶನಗಳಲ್ಲಿ ರವಿವರ್ಮನ ಕೃತಿಗಳಿಗೆ ಬಹುಮಾನಗಳು ಬಂದವು. ಪಾಶ್ಚಾತ್ಯರು ಅವನ ಕೃತಿಗಳನ್ನು ಕೊಳ್ಳಲು ಪ್ರಾರಂಭಿಸಿದರು. ರವಿವರ್ಮನ ಹೆಸರು ಭಾರತದಲ್ಲೆಲ್ಲ ಮನೆ ಮಾತಾಗಿತ್ತು. ರಾಜ ಮಹಾರಾಜರುಗಳು ತಮ್ಮ ಆಸ್ಥಾನಕ್ಕೆ ಆತನನ್ನು ಆಮಂತ್ರಿಸಿ ಆತನ ಕುಂಚದಿಂದ ಚಿತ್ರಮೂಡಿಸಲು ಪೈಪೋಟಿ ನಡೆಸುತ್ತಿದ್ದರು. ಪುದುಕೋಟೆ, ಮೈಸೂರು, ಬರೋಡಾ, ಆಳ್‌ವಾರ್, ಗ್ವಾಲಿಯರ್ ಜಯಪುರ, ಇದೂರು, ಉದಯಪುರ ಮೊದಲಾದೆಡೆಗಲಿಂದ ರವಿವರ್ಮನಿಗೆ ಆಹ್ವಾನ ಬರತೊಡಗಿತು.

ಬರೋಡಾಕ್ಕೆ ೧೮೮೧ರಲ್ಲಿ ಹೋದಾಗ ದಮಯಂತಿ, ಸೈರಂಧ್ರಿ, ಸರಸ್ವತಿ, ಲಕ್ಷ್ಮಿ ಇತ್ಯಾದಿಯಾಗಿ ಪೌರಾಣಿಕ ಚಿತ್ರಗಳೂ ಆತನ ಕುಂಚದಿಂದ ಮೂಡಿಬಂದವು. ಬರೋಡಾದಲ್ಲಿದ್ದಾಗಲೆ ಮೊಗಲ ಹಾಗೂ ರಜಪೂತ ಶೈಲಿಯ ಚಿತ್ರಗಳ ಅಧ್ಯಯನ ನಡೆಸುವ ಅವಕಾಶವೂ ರವಿವರ್ಮನಿಗೆ ಒದಗಿಬಂತು. ವಿಶಾಖಂ ತಿರುನಾಳ್ ಮಹಾರಾಜರು ತಿರುವಾಂಕೂರಿನಿಂದ ಬರುತ್ತಿದ್ದ ೫೦ ರೂಪಾಯಿ ಮಾಸಿಕ ವೇತನವನ್ನೂ ನಿಲ್ಲಿಸಿಬಿಟ್ಟಿದ್ದರು. ಬರೋಡಾದಿಂದ ಕಿಳಿಮಾನೂರಿಗೆ ರವಿವರ್ಮನು ಹಿಂದಿರುಗಿ ಬಂದನು. 'ಮುಂದೆ ನೀನು ಹೆಸರಾಂತ ಕಲಾವಿದನಾಗುವಿ' ಎಂದು ತನ್ನನ್ನು ಹಿಂದೆ ಆಶೀರ್ವದಿಸಿದ್ದ ಮಾವ ರಾಜರಾಜವರ್ಮನ ಪಾದಗಳಲ್ಲಿ ಐದು ಸಾವಿರ ರೂಪಾಯಿಗಳ ಕಾಣಿಕೆ ಇರಿಸಿ ನಮಸ್ಕರಿಸಿದನು.

ಉತ್ತರ ಭಾರತ ಸಂಚಾರದ ವೇಳೆ ರವಿವರ್ಮನು ವಿವಿಧ ಭಾಗದ ಜನರ ವೇಷ-ಭೂಷಣ, ಕ್ರಮ-ಸ್ವಭಾವ, ಆಚಾರ-ಮರ್ಯಾದೆಗಳನ್ನು ಕೂಲಂಕುಷವಾಗಿ ಗಮನಿಸಿ ಬರೆದಿಡುತ್ತಿದ್ದ. ಮರಾಠಾ ವೀರ ಶೀವಾಜಿಯ ಚಿತ್ರವೊಂದನ್ನು ಚಿತ್ರಿಸಲು ಆತ ಬಹಳ ವಿವರಣೆಗಳನ್ನು ಸಂಗ್ರಹಿಸಿದ. ಬಾಲಗಂಗಾಧರ ತಿಲಕರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ಶಿವಾಜಿಯ ದೇಶಪ್ರೇಮ-ಪರಾಕ್ರಮಗಳನ್ನು ಹೇಳಿ ಮರಾಠಾ ಜನತೆಯನ್ನು ಬಡಿದೆಬ್ಬಿಸುತ್ತಿದ್ದ ಕಾಲದಲ್ಲೆ ರವಿವರ್ಮ ವಿರಚಿತ ಶಿವಾಜಿಯ ಅನುಪಮ ಚಿತ್ರವೂ ಹೊರಬಂದಿತು.

ತನ್ನ ಮೂವರು ನಂಬಿಕೆಯ ಅನುಚರರೊಂದಿಗೆ ಅಶ್ವಾರೋಹಿಯಾಗಿ ಕೈಯಲ್ಲಿ 'ಭವಾನಿ'ಯನ್ನು ಝಳಪಿಸುತ್ತಾ ಶಿವನದುರ್ಗದಿಂದ ಅರಿಭಯಂಕರನಾಗಿ ಬರುವ ವೀರ ಶಿವಾಜಿಯ ಚಿತ್ರವು ಇಂದು



ಭಾರತಾದ್ಯಂತ ಮನೆಮನೆಗಳಲ್ಲಿ ಮೆರಿಯುತ್ತಿದೆ. ಬರೋಡಾದಿಂದ ಹಿಂದಿರುಗಿದ ಬಳಿಕ ಮೂರು ವರ್ಷ ಪರ್ಯಂತ ರವಿವರ್ಮ ಕಿಳಿಮಾನೂರು, ಮಾವಲಿಕ್ಕರಗಳಲ್ಲಿದ್ದು ಸಂಸ್ಕೃತ ಮಹಾಕಾವ್ಯ ರಾಮಾಯಣದಲ್ಲಿ ಕಾಲ ಕಳೆದ ಪೌರಾಣಿಕ ಚಿತ್ರಗಳಿಗೆ ಸಾಕಷ್ಟು ಸಾಮಾಗ್ರಿ ಇದರಿಂದ ಲಭ್ಯವಾಯಿತು.

ಮೈಸೂರು ಸಂಸ್ಥಾನದಲ್ಲಿ


ಬರೋಡಾ ಅರಮನೆಯಲ್ಲಿದ್ದು ಸುಂದರ ಚಿತ್ರಗಳನ್ನು ರಚಿಸಿದ ರವಿವರ್ಮನ ವಿಷಯ ಮೈಸೂರು ಮಹಾರಾಜರಿಗೂ ಸುದ್ದಿ ತಲುಪಿತು. ೧೮೮೫ರಲ್ಲಿ ಮಹಾರಾಜರಾಗಿದ್ದ ಚಾಮರಾಜೇಂದ್ರ ಒಡೆಯರ್ ರವಿವರ್ಮನನ್ನು ತಮ್ಮ ಆಸ್ಥಾನಕ್ಕೆ ಆಮಂತ್ರಿಸಿದರು. ರವಿವರ್ಮನು ತನ್ನ ಸಹೋದರನೊಂದಿಗೆ ಮೈಸೂರು ಅರಮನೆಗೆ ತೆರಳಿದನು. ಅಲ್ಲಿ ಕಲಾವಿದನನ್ನು ಸಕಲ ರಾಜ ಮರ್ಯಾದೆಯೊಂದಿಗೆ ಸ್ವಾಗತಿಸಿ, ವೈಭವದ ಆತಿಥ್ಯ ನೀಡಲಾಯಿತು.

ಮಹಾರಾಜನ ಹಾಗೂ ರಾಜ ಪರಿವಾರದ ಇತರ ಸದಸ್ಯರ ಪೂರ್ಣ ಆಕಾರದ ತೈಲಚಿತ್ರವನ್ನು ರವಿವರ್ಮನು ಸಹೋದರ ರಾಜರಾಜವರ್ಮನೊಂದಿಗೆ ಸೇರಿ ಮಾಡಿ ಮುಗಿಸಿದನು. ಪ್ರತಿಫಲವಾಗಿ ಮಹಾರಾಜರು ಧನ-ಕನಕಗಳೊಂದಿಗೆ ಒಂದು ಆನೆಯನ್ನು ಉಡುಗೊರೆಯಾಗಿ ನೀಡಿದರು. ೧೮೮೭ರಲ್ಲಿ ರವಿವರ್ಮನ ತಾಯಿ ನಿಧನರಾದರು. ಆ ವರ್ಷ ಆತ ಎಲ್ಲಿಯೂ ಪ್ರವಾಸ ಮಾಡಲಿಲ್ಲ. ಸಂಸ್ಕೃತ ಗ್ರಥಗಳನ್ನು ಓದುತ್ತಾ ಅವುಗಳಲ್ಲಿ ಚಿತ್ರಿತರಾದ ನಾಇಕೆಯರನ್ನು ರವಿವರ್ಮ ಕುಂಚದಿಂದ ಚಿತ್ರಿಸತೊಡಗಿದ. ಹೀಗೆ ಮಹಾಶ್ವೇತೆ, ಕಾದಂಬರಿ ಮೊದಲಾದವರು ಕಣ್ಸೆಳೆಯುವ ರೂಪ ತಳೆದರು.

ಭಾರತ ದರ್ಶನ

ತನ್ನ ಚಿತ್ರಗಳನ್ನು ರಾಜ ಮಹಾರಾಜರುಗಳು ಮಾತ್ರವೇ ನೋಡಿ ಸಂತೋಷಿಸಿದರೆ ಸಾಲದು, ಜನಸಾಮಾನ್ಯರ ಕೈಗೂ ಪೌರಾಣಿಕ ಚಿತ್ರಗಳು ಎಟಕುವಂತಾಗಬೇಕು ಎಂಬುದು ರವಿವರ್ಮನ ಚಿರಕಾಲದ ಬಯಕೆಯಾಗಿತ್ತು. ಇದಕ್ಕೆ ಉಪಾಯವೆಂದರೆ ಚಿತ್ರಗಳಿಗೆ ಅಚ್ಚುಹಾಕುವುದು. ಆದೆರ ಚಿತ್ರಗಳನ್ನು ಮುದ್ರಿಸುವುದು ಸುಲಭವಲ್ಲ. ಬಣ್ಣದ ಚಿತ್ರಗಳ ಮುದ್ರಣವಂತೂ ಇನ್ನೂ ಕಷ್ಟ, ವಿದೇಶಕ್ಕೆ ಕಳಿಸಿ ಚಿತ್ರಗಳನ್ನು ಮುದ್ರಿಸುವುದು ಕಷ್ಟವೂ ಹೌದು; ನಷ್ಟವೂ ಹೌದು. ಆದರೆ ಮುದ್ರಣಾಲಯದ ಸ್ಥಾಪನೆಗೆ ಸಾಕಷ್ಟು ಧನ ಸಂಚಯವಾಗಬೇಕಿತ್ತು. ರಾಜ ಮಹಾರಾಜರ ಬೆಂಬಲವಿದ್ದರೆ ಅದೆಲ್ಲ ಸುಲಭದಲ್ಲೆ ಕೈಗೂಡಬಹುದು. ರವಿವರ್ಮ ಆ ದಿಶೆಯಲ್ಲಿ ಯೋಚನೆಗೆ ತೊಡಗಿದ.

ಬರೋಡಾದ ಗಾಯಕವಾಡ ಮಹಾರಾಜರು ನೀಲಗಿರಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, ರವಿವರ್ಮನನ್ನು ಆಹ್ವಾನಿಸಿದರು. ಅವರು ಹೊಸದಾಗಿ ಲಕ್ಷ್ಮಿನಿವಾಸ ಎಂಬ ಅರಮನೆಯನ್ನು ಕಟ್ಟಿಸಿದ್ದರು. ರಾಮಾಯಣ ಹಾಗೂ ಮಹಾ ಭಾರತಗಳನ್ನು ಆಧಾರವಾಗಿರಿಸಿ ಹದಿನಾಲ್ಕು ಸುಂದರ ತೈಲಚಿತ್ರಗಳನ್ನು,



ಅರಮನೆಯನ್ನು ಅಲಂಕರಿಸಲು, ರಚಿಸಿ ಕೊಡಬೇಕೆಂದು ಮಹಾರಾಜರು ಕಲಾವಿದನನ್ನು ಕೇಳಿಕೊಂಡರು. ರವಿವರ್ಮನು ಈ ಸಾಹಸದ ಕೆಲಸಕ್ಕೆ ಒಪ್ಪಿದನು.

ಈ ಬೃಹತ್ ಯೋಜನೆಯನ್ನು ಕೈಗುಡಿಸುವ ಮೊದಲು ಭಾರತಾದ್ಯಂತ ಸಂಚರಿಸಿ ಪುರಾತನ ಭಾರತದ ದೇಹಾಲಂಕಾರ ವೇಷವಿಧಾನ ಇತ್ಯಾದಿಗಳನ್ನು ಅರಿತುಕೊಳ್ಳಬೇಕು ಎನ್ನಿಸಿತು. ರವಿವರ್ಮನಿಗೆ, ಹೀಗೆ ಆತ ಭಾರತದ ಪುರಾಣ ಪ್ರಸಿದ್ಧ ನಗರಗಳನ್ನು ಸುತ್ತಾಡಲು ಸಹೋದರನೊಂದಿಗೆ ಹೊರಟ. ಇಡೀ ಭಾರತದಲ್ಲಿ ಪ್ರಸಿದ್ಧ ಪುಣ್ಯತೀರ್ಥಗಳನ್ನೂ ಚಾರಿತ್ರಿಕ ಕೇಂದ್ರಗಳನ್ನೂ ಅವರು ಸಂದರ್ಶಿಸಿದರು. ಇದರಿಂದ ಕಲಾವಿದನಿಗೆ ತನ್ನ ಚಿತ್ರಗಳಿಗೆ ಬೇಕಾದ ಸಾಮಗ್ರಿ ಲಭಿಸದಿದ್ದರೂ ಭಾರತದ ಜನಜೀವನದ ವಿವಿಧ ಮಾದರಿಯನ್ನು ಸಮೀಪದಿಂದ ಅರಿಯಲು ಸಾಧ್ಯವಾಯಿತು. ಆತ ಮುಂದೆ ಪುರಾಣಗಳಿಗೆ ಸಂಬಂಧವಿಲ್ಲದ ಅನೇಕ ಚಿತ್ರಗಳನ್ನು ಬರೆ ಅವುಗಳಿಗೆ ಈ ಪ್ರವಾಸದಿಂದ ಬಹಳ ಪ್ರಯೋಜನವಾಯಿತು. ಭಾರತದ ವಿವಿಧ ಭಾಗಗಳವರ ವೇಷಭೂಷಣಗಳನ್ನು ಅವನು ಬಹು ಸೂಕ್ಷ್ಮವಾಗಿ ಗಮನಿಸಿದ.

ಭಾರತದ ಪರ್ಯಟನೆಯ ಬಳಿಕ ಕಿಳಿಮಾನೂರಿಗೆ ಹಿಂದಿರುಗಿದಾಗ ಹದಿನಾಲ್ಕು ಚಿತ್ರಗಳ ರೂಪು ರೇಷೆ ಹೆಚ್ಚು ಕಡಿಮೆ ಸಿದ್ಧವಾಗಿತ್ತು. ಒಂದೊಂದು ಚಿತ್ರದ ಉದ್ದ ಐದು ಅಡಿ ಮೂರು ಅಂಗುಲ. ಅಗಲ ಮಾರು ಅಡಿ ಎಂಟು ಅಂಗಲ ಅವು

೧. ನಳ ದಮಯಂತಿ.	೨. ಶಂತನು ಮತ್ತು ಮತ್ಸ್ಯ ಗಂಧಿ.	೩. ರಾಧಾ-ಮಾಧವ.
೪. ಶ್ರೀಕೃಷ್ಣ ದೇವಕಿ.	೫. ಅರ್ಜುನ ಸುಭದ್ರೆ.	೬. ದ್ರೌಪದಿ ವಸ್ತ್ರಾಪಹರಣ.
೭. ವಿಶ್ವಾಮಿತ್ರಮೇನಕೆ,	೮. ಹರಿಶ್ಚಂದ್ರ ತಾರಾಮತಿ.	೯. ಸೀತಾ ಸ್ವಯಂವರ.
೧೦. ಭರತ ಮತ್ತು ಸಿಂಹದ ಮರಿ.		೧೧. ಶ್ರೀಕೃಷ್ಣ ಜನನ.
೧೨. ಕೀಚಕ ಸೈರಂಧ್ರಿ	೧೩. ಕಂಸಮಾಯೆ.	೧೪. ಶಂತನು ಮತ್ತು ಗಂಗೆ.

೧೮೯೧ರಲ್ಲಿ ರವಿವರ್ಮನು ಈ ಹದಿನಾಲ್ಕು ಚಿತ್ರಗಳೊಂದಿಗೆ ಬರೋಡಾಕ್ಕೆ ಹೊರಟ. ಮುಂಬಯಿ ತಲುಪಿದಾಗ ಪತ್ನಿಯ ಅನಿರೀಕ್ಷಿತ ಮರಣದ ವಾರ್ತೆ ತಿಳಿದು ಆತ ಮತ್ತೆ ಹಿಂದಿರುಗೆ ಕಿಳಿಮಾನೂರಿಗೆ ಬಂದ. ಒಂದು ತಿಂಗಳ ಪರ್ಯಂತ ದುಃಖದಲ್ಲೆ ಕಳೆದು, ಮತ್ತೆ ಬರೋಡಾಕ್ಕೆ ಹೋದ. ಕೊನೆಗೂ ಆ ಹದಿನಾಲ್ಕು ಚಿತ್ರಗಳು ಲಕ್ಷ್ಮೀನಿವಾಸ ಅರಮನೆಯ ಗೋಡೆಯನ್ನು ಅಲಂಕರಿಸಿದವು. ಸಾಮಾನ್ಯ ಜನರು. ಚಿತ್ರಕಲಾ ನಿಪುಣರೂ ಅವನ್ನು ಕಂಡು ತುಂಬ ಸಂತೋಷಪಟ್ಟರು. ಮಹಾರಾಜರು ಐವತ್ತು ಸಹಸ್ರ ರೂಪಾಯಿಗಳ ಸಂಭಾವನೆ ನೀಡಿ ರವಿವರ್ಮನನ್ನು ಗೌರವಿಸಿದರು.

ಮುದ್ರಣಾಲಯ

ಮುದ್ರಣಾಲಯದ ಸ್ಥಾಪನೆಗೆ ಹೂಡಲು ಬೇಕಾದ ಬಂಡವಾಳಕ್ಕೆ ಈ ಹಣವನ್ನು ವಿನಿಯೋಗಿಸಲು ರವಿವರ್ಮ ನಿಶ್ಚಯಿಸಿದ ಆದರೆ ಯಂತ್ರ ಸಾಮಗ್ರಿಗಳನ್ನು ವಿದೇಶದಿಂದ ತರಿಸಿಕೊಳ್ಳಲು ಹಣದ ಕೊರತೆ



ಇದರಿಂದ ನೀಗಲಾರದೆಂದು ಆತ ಮನಗಂಡನು ಸ್ನೇಹಿತರ ನೆರವಿನಿಂದ ಮುಂಬಯಿಯ ಉದ್ಯಮಿಯೊಬ್ಬನನ್ನು ಪಾಲುಗಾರನನ್ನಾಗಿ ಮಾಡಿಕೊಂಡನು.

೧೮೯೩ರಲ್ಲಿ ಅಮೆರಿಕಾದ ಷಿಕಾಗೊದಲ್ಲಿ ಏರ್ಪಡಿಸಿದ ಅಂತರಾಷ್ಟ್ರೀಯ ಚಿತ್ರಪ್ರದರ್ಶನಕ್ಕಾಗಿ ರವಿವರ್ಮನು ಹತ್ತು ಚಿತ್ರಗಳನ್ನು ಕಳುಹಿಸಿಕೊಟ್ಟನು. ಇದರ ವೆಚ್ಚವನ್ನು ಬರೋಡಾದ ಮಹಾರಾಜರೇ ವಹಿಸಿದರು. ಈ ಪ್ರದರ್ಶನದಲ್ಲಿ ರವಿವರ್ಮನ ಕೃತಿಗಳಿಗೆ ಎರಡು ಬಹುಮಾನಗಳೂ ಪ್ರಶಸ್ತಿ ಪತ್ರಗಳೂ ದೊರೆತವು. ಅದೇ ವರ್ಷ ಷಿಕಾಗೊದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಹಿಂದು ಧರ್ಮದ ಗೌರವವನ್ನು ಎತ್ತಿಹಿಡಿದು ವಿಶ್ವಮಾನ್ಯರಾದರು. ಭಾರತೀಯ ಧರ್ಮ ಹಾಗೂ ಚಿತ್ರಕಲೆ ಏಕಕಾಲದಲ್ಲಿ ವಿಶ್ವಮಾನ್ಯತೆ ಪಡೆದವು.

ಸ್ವಾಮಿ ವಿವೇಕಾನಂದರು ರವಿವರ್ಮನ ಪ್ರದರ್ಶನ ಕೃತಿಗಳನ್ನು ಷಿಕಾಗೋದಲ್ಲಿ ಅದೇ ಮೊದಲ ಬಾರಿಗೆ ಕಂಡರು. ಅವರು ಭಾರತಕ್ಕೆ ಹಿಂದಿರುಗಿ ಬಂದು ರವಿವರ್ಮನನ್ನು ಅಭಿನಂದಿಸಿದರು. ಮುಂಬಯಿಯಲ್ಲಿ ರವಿವರ್ಮನ ಮನೆಯಲ್ಲಿ ಸ್ವಾಮೀಜಿಯವರು ಒಂದು ದಿನ ಅತಿಥಿಯಾಗಿಯೂ ಇದ್ದರು. ಸ್ವಾಮೀಜಿಯವರು ಒಮ್ಮೆ ಹೇಳಿದರು. ಬರೋಡಾದಲ್ಲಿ ನೋಡಲು ಯೋಗ್ಯವಾಗಿರುವುದು. ಪುಸ್ತಕಾಲಯ ಹಾಗೂ ರವಿವರ್ಮನ ಚಿತ್ರಗಳು ಮಾತ್ರ.

೧೮೯೪ರಲ್ಲಿ ರವಿವರ್ಮ ಚಿತ್ರ ಮುದ್ರಣಾಲಯದ ಕಾರ್ಯಾರಂಭವಾಯಿತು. ರವಿವರ್ಮ ಈ ಮುದ್ರಣಾಲಯವನ್ನು ಆರಂಭಿಸಲು ಇನ್ನೊಂದು ಕಾರಣವೂ ಇತ್ತು. ಆಗ ಅಗ್ಗದ ಮೂರನೆ ದರ್ಜೆಯ ಚಿತ್ರಗಳು ಅಚ್ಚಾಗಿ ಮಾರಾಟವಾಗುತ್ತಿದ್ದವು. ಯಾವುದೇ ಕಲಾತ್ಮಕತೆ ಇಲ್ಲದ ಈ ಚಿತ್ರಗಳಿಂದಾಗಿ ನೈಜಕಲೆ ಮೂಲೆಗುಂಪಾಗುವ ಭಯವಿದೆ ಎಂದು ತಿಳಿದ ರವಿವರ್ಮ ಭಾರತೀಯ ಚಿತ್ರಕಲೆಯ ನೈಜ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದು ಅಗತ್ಯ ಎಂದು ಯೋಚಿಸಿದರು. ರವಿವರ್ಮ ಮುದ್ರಣಾಲಯದಿಂದ ಶಾಕುಂತಳ ಜನನದಿಂದ ಆರಂಭಿಸಿ ಸರಸ್ವತಿ, ಮಹಾಲಕ್ಷ್ಮಿ, ಇತ್ಯಾದಿ ದೇವ-ದೇವತೆಯರ ಚಿತ್ರಗಳು ಅಚ್ಚಾಗಿ ಬಂದವು. ರಾಜ- ಮಹಾರಾಜರುಗಳ ಅರಮನೆಯ ಭಿತ್ತಿಯಲ್ಲಿ ಮಾತ್ರ ಕಂಗೊಳಿಸುತ್ತಿದ್ದ ಚಿತ್ರಗಳು ಜನಸಾಮಾನ್ಯರ ಕೈಗೂ ಎಟಕುವಂತಾಯಿತು. ಚಿತ್ರಗಳು ಒಂದೊಂದಾಗಿಯೇ ಸಹಸ್ರಗಟ್ಟಲೆ ಪ್ರತಿಗಳು ಅಚ್ಚಾಗಿ ಬರುತ್ತಿದಂತೆ ಭಾರತದ ಎಲ್ಲ ಭಾಗಗಳಿಂದ ಬೇಡಿಕೆ ಬರತೊಡಗಿತು. ರವಿವರ್ಮನ ದೇವ-ದೇವತೆಯರು ಪೂಜಾಗೃಹವನ್ನು ಸೇರಿದರು. ರವಿವರ್ಮನ ಹೆಸರು ಭಾರತದ ಮೂಲೆಮೂಲೆಯಲ್ಲಿ ಮನೆಮಾತಾಯಿತು. ಅವರು ಪ್ರವಾಸ ಹೋದಾಗ ರಾಜ-ಮಹಾರಾಜರಿಂದ ಮತ್ತು ಜನಸಾಮಾನ್ಯರಿಂದ ಗೌರವ ದೊರೆಯಿತು.

ರವಿವರ್ಮರ ಕುಂಚದಿಂದ ಮುಖ್ಯವಾಗಿ ಪೌರಾಣಿಕ ವ್ಯಕ್ತಿಗಳೇ ರೂಪು ತಳೆದರೂ ಊರ್ವಶಿ, ರಂಭೆ, ತಿಲೋತ್ತಮೆ. ಉಪೆ ಎಂಬೀ ನಾಯಕಿಯರನ್ನೂ ಆತ ಚಿತ್ರಿಸಿದರು. ಬಳಿಕ ಸೂದ್ರಕ. ಕಾಳಿದಾಸ ಭವಭೂತಿಯರ ಕಲ್ಪಿತ ನಾಯಿಕೆಯರು. ಮರಾಠಾ-ಗುಜರಾತಿ-ಮಲಬಾರಿ ಸುಂದರಿಯರು.


ರಾಷ್ಟ್ರನಾಯಕರುಗಳಾದ ತಿಲಕ್-ರಾನಡೆ ಮೊದಲಾದವರು ರವಿವರ್ಮರ ಕುಂಚದಿಂದ ಮೈತಳೆದರು. ರಜಪೂತ ವನಿತೆಯು ಸತಿ ಪ್ರವೇಶ. ಹಿಮಾಲಯದ ಪ್ರಕೃತಿ ಸಿರಿ ಹೀಗೆ ಅನೇಕ ಅಪೂರ್ವ-ಸುಂದರ ದೃಶ್ಯಗಳೂ ಅಚ್ಚಾದವು.

ಭಾರತಕ್ಕೆ ಸಂದರ್ಶನವೀಯಲು ಬರುತ್ತಿದ್ದ ಯಾವನೇ ಪಾಶ್ಚಾತ್ಯ ಕಲಾವಿದನಾದರೂ ರವಿವರ್ಮರನ್ನು ಭೇಟಿಯಾಗದೇ ಹಿಂದಿರುಗುತ್ತಿರಲಿಲ್ಲ. ಹೀಗೆ ರವಿವರ್ಮ ಅವರೊಂದಿಗೆ ಚಿತ್ರಕಲೆಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಕುರಿತು ಚರ್ಚಿಸಿ. ತಾವೂ ಸಾಕಷ್ಟು ಆಧುನಿಕ ಚಿತ್ರಕಲಾಜ್ಞಾನವನ್ನು ಪಡೆಯುತ್ತಿದ್ದರು. ಮುಂಬಯಿಯಲ್ಲಿದ್ದು ರವಿವರ್ಮ ಅನೇಕ ಚಿತ್ರಕಲಾಸಕ್ತರಿಗೂ ಮಾರ್ಗದರ್ಶನ ಮಾಡಿದರು. ಹಿರಿಯ-ಕಿರಿಯ ಭೇಧವಿಲ್ಲದೇ ಯಾವನಿಗಾದರೂ ಆತ ಜ್ಞಾನದಾನ ಮಾಡುತ್ತಿದ್ದರು.

೧೮೯೭ರಲ್ಲಿ ಪುಣೆಯಲ್ಲಿ ಪ್ಲೇಗು ಬಾಧೆ ತೊಡಗಿ ಅದು ಮುಂಬಯಿಗೂ ಹಬ್ಬಿತು. ಪಾಲುದಾರನೂ ಹಣ ಹಿಂದಕ್ಕೆ ಕೇಳುತ್ತಿದ್ದ. ಇಂತಹ ಹಲವು ಕಾರಣಗಳಿಂದ ಮುದ್ರಣಾಲಯವನ್ನು ಕಾರ್ಲಿ ಎಂಬ ಸ್ಥಳಕ್ಕೆ ಬದಲಾಯಿಸಿದ್ದಾಯಿತು. ರವಿವರ್ಮರು ತುಂಬ ಉದಾರಿಗಳು. ಯಾಚಕರಿಗೆ, ಕಷ್ಟದಲ್ಲಿರುವ ಮಂದಿಗೆ ಉದಾರವಾಗಿ ದಾನ ನೀಡುತ್ತಿದ್ದರು. ತಮ್ಮ ಬಳಿ ಹಣವಿಲ್ಲದಿದ್ದರೆ ಇತರರಿಂದ ಸಾಲ ಪಡೆದಾದರೂ ಅರ್ಹ ಯಾಚಕರಿಗೆ ನೀಡುತ್ತಿದ್ದರು.

೧೯೦೦ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿ ರವಿವರ್ಮರ ಚಿತ್ರಗಳಿಗೆ ಪ್ರಶಸ್ತಿ ಬಂದು ರವಿವರ್ಮರ ಕಲಾನೈಪುಣ್ಯಕ್ಕೆ ಅಲ್ಲಿನ ಪತ್ರಿಕೆಗಳ ಮತ್ತು ಚಿತ್ರಕಲಾ ವಿಮರ್ಶಕರ ಪ್ರಶಂಸೆ ದೊರೆಯಿತು. ಈ ಕಲಾವಿದರಿಂದ ತಮ್ಮ ಚಿತ್ರ ಬರೆಸಿಕೊಳ್ಳಬೇಕೆಂದು ಭಾರತದ ರಾಜರುಗಳಿಗೆ ಮಾತ್ರವಲ್ಲ. ಇಂಗ್ಲೆಂಡಿನಿಂದ ಬಂದ ಗವರ್ನರುಗಳಿಗೆ ಮತ್ತು ವೈಸರಾಯರುಗಳಿಗೆ ಹಂಬಲ, ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್‌ನ ಚಿತ್ರವನ್ನು ಅವರು ಬರೆದುಕೊಟ್ಟರು.

ಒಂದೊಮ್ಮೆ ರವಿವರ್ಮರ ಪ್ರತಿಭೆಗೆ ಅಸೂಯೆಪಟ್ಟು ಆತನನ್ನು ರಾಜಧಾನಿಯಿಂದ ಗಡೀಪಾರು ಮಾಡಿದ್ದರೂ ಆತನ ಪ್ರತಿಭೆ ವಿಶ್ವಮಾನ್ಯತೆ ಪಡೆದಾಗ ಮೊಲಂ ತಿರುನಾಳ್ ಮಹಾರಾಜರು ಆತನನ್ನು ಮತ್ತೆ ಬರಮಾಡಿಕೊಂಡರು. ವರ್ಷಂಪ್ರತಿ ಎರಡು ತೈಲಚಿತ್ರಗಳನ್ನು ಚಿತ್ರಿಸಲು ರವಿವರ್ಮರು ಒಪ್ಪಿದರು. ಅವರು ತಿರುನಂತಪುರದಲ್ಲಿ ಒಂದು ಚಿತ್ರಕಲಾ ಶಾಲೆಯನ್ನು ತೆರೆಯುವ ಹಂಚಿಕೆಯಲ್ಲಿದ್ದರು. ಆತ ತಮ್ಮ ಈ ಬಯಕೆಯನ್ನು ಮಹಾರಾಜರಲ್ಲಿ ನಿವೇದಿಸಿಕೊಂಡಾಗ ಬರಿಯ ಜಾರಿಕೆಯ ಆಶ್ವಾಸನೆಯಷ್ಟೇ ದೊರಕಿತು. ತಿರುವಾಂಕೂರು ಆಸ್ಥಾನ ಕಲಾವಿದರಾಗಿ ರವಿವರ್ಮರು ವಿರಾಟನ ಆಸ್ಥಾನ. ಶಕುಂತಳೆ, ಹಂಸ ದಪಯಂತಿ, ರುಕ್ಮಾಂಗದ-ಮೋಹಿನಿ ಮೊದಲಾದ ಹಲವು ಪ್ರಸಿದ್ಧ ತೈಲಚಿತ್ರಗಳನ್ನು ರಚಿಸಿಕೊಟ್ಟರು. ಇವಕ್ಕೆಲ್ಲ ತಲಾ ೩,೦೦೦ ರೂಪಾಯಿಗಳಂತೆ ಪುರಸ್ಕಾರವೂ ಸಿಕ್ಕಿತು. ಇಷ್ಟೆಲ್ಲ ಆಗಿಯೂ ಮಹಾರಾಜರು ಚಿತ್ರಕಲಾಲಯ ಪ್ರಾರಂಭಿಸುವ ವಿಷಯದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳಲಿಲ್ಲ. ಇದರಿಂದ ರೋಸಿ



ಹೋದ ರವಿವರ್ಮ ಇನ್ನು ಮುಂದೆ ತಾನು ತಿರುವಾಂಕೂರು ಮಹಾರಾಜರಿಗಾಗಿ ಚಿತ್ರ ರಚಿಸಲಾರೆನೆಂದು ಖಡಾಕಂಡಿತವಾಗಿ ಹೇಳಿಬಿಟ್ಟರು.

ಐವತ್ತರ ಹರೆಯ ದಾಟಿದ ರವಿವರ್ಮರಿಗೆ ಹಠಾತ್ ಆಗಿ ಪ್ರಮೇಹ ರೋಗದ ಬಾಧೆ ಕಾಣಿಸಿಕೊಂಡಿತು. ಮುಂಬಯಿ ಹಾಗೂ ಲೋನಾವಳದಲ್ಲಿದ್ದು ಪಟ್ಟ ಪರಿಶ್ರಮ ಅವರ ಆರೋಗ್ಯಕ್ಕೆ ಮಾರಕವಾಗಿತ್ತು. ಅಲ್ಲಿದ್ದುಕೊಂಡು ಚಿಕಿತ್ಸೆ ಪಡೆಯುವುದು ಅವರಿಗೆ ಸರಿಯನಿಸಲಿಲ್ಲ. ಮುದ್ರಣಾಲಯವನ್ನು ಮಾರುವುದು ಮತ್ತು ಊರಿಗೆ ಹಿಂದಿರುಗುವುದೇ ಇದಕ್ಕೆ ಪರಿಹಾರ ಅಷ್ಟರಲ್ಲೆ ಸುಮಾರು ೮೭ ತೈಲಚಿತ್ರಗಳು ಮುದ್ರಣಾಲಯದಿಂದ ಸಹಸ್ರ ಸಂಖ್ಯೆಯಲ್ಲಿ ಅಚ್ಚಾಗಿ ಭಾರತದಲ್ಲೆಲ್ಲ. ಪ್ರಸಾರಗೊಂಡಿದ್ದವು. ಆದರೂ ರವಿವರ್ಮ ಆರ್ಥಿಕ ಮುಗ್ಗಟ್ಟಿನಿಂದ ಮುಕ್ತಗೊಳ್ಳಲಿಲ್ಲ. ಮುದ್ರಣಾಲಯವನ್ನು ತಮ್ಮ ಕೃತಿಗಳ ಹಕ್ಕು ಸ್ವಾಮ್ಯದೊಂದಿಗೆ ಮಾರಲು ಆತ ನಿಶ್ಚಯಿಸಿದರು. ಒಬ್ಬ ಜರ್ಮನ್ ಸಂಸ್ಕೃತ ವಿದ್ವಾಂಸ ಮುದ್ರಣಾಲಯವನ್ನು ೨೫,೦೦೦ ರೂಪಾಯಿಗಳಿಗೆ ಕೊಳ್ಳಲು ಮುಂದೆ ಬಂದರು. ಮುದ್ರಣಾಲಯವನ್ನು ಮಾರಿ ತಮ್ಮ ಋಣವನ್ನು ತೀರಿಸಿ. ರವಿವರ್ಮ ಕಿಳಿಮಾನೂರಿಗೆ ಹಿಂದಿರುಗಿದರು.

ಮುಂಬಯಿಯ ಜಂಜಾಟದಿಂದ ಕಿಳಿಮಾನೂರನ್ನು ಸೇರಿದ ರವಿವರ್ಮರು ಆರೋಗ್ಯ ಸುಧಾರಿಸಿಕೊಳ್ಳಲು ಆಯುರ್ವೇದ ಚಿಕಿತ್ಸೆ ಪಡೆಯತೊಡಗಿದರು. ದೂರದೂರಕ್ಕೆ ಸಂಚಾರ ಹೋಗಬಾರದೆಂದೂ ವೈದ್ಯರು ನಿರ್ದೇಶಿಸಿದರು. ಹೈದರಾಬಾದ್ ಸಂಸ್ಥಾನದ ರಾಜಾ ದೀನ ದಯಾಲರ ಒತ್ತಾಯದ ಆಮಂತ್ರಣವನ್ನು ಅವರು ಕೊನೆಗೂ ಸ್ವೀಕರಿಸಿ ಅಲ್ಲಿಗೆ ಹೋದರು. ಎರಡು ತಿಂಗಳ ಪರ್ಯಂತ ಅಲ್ಲಿದ್ದು ಅನೇಕ ತೈಲಚಿತ್ರಗಳನ್ನು ಪೂರೈಸಿಕೊಟ್ಟರು.

ರೋಗ ಉಲ್ಬಣಗೊಂಡು ಕಿಳಿಮಾನೂರಿಗೆ ರವಿವರ್ಮ ಹಿಂದಿರುಗಿದಾಗ ಭಾರತದ ಮೂಲೆ ಮೂಲೆಯಿಂದ ಅವರ ಚಿತ್ರಗಳಿಗಾಗಿ ಬೇಡಿಕೆ. ಸಂದರ್ಶನಕ್ಕಾಗಿ ಆಮಂತ್ರಣ ಬಂದಿರುವುದು ತಿಳಿಯಿತು. ಆದರೆ ದಿನೇ ದಿನೇ ಕೆಡುತ್ತಿದ್ದ ದೇಹಾರೋಗ್ಯವು ಅವರ ಉತ್ಸಾಹಕ್ಕೆ ತಣ್ಣೀರೆರಚುತ್ತಿತ್ತು. ೧೯೦೪ರಲ್ಲಿ ಬ್ರಿಟಿಷ್ ಸರ್ಕಾರ 'ಕೈಸರ್-ಎ-ಹಿಂದ್' ಎಂಬ ಪ್ರಶಸ್ತಿಯನ್ನು ಕೊಟ್ಟಿತು. ಒಬ್ಬ ಕಲಾವಿದನಿಗೆ ಈ ಪ್ರಶಸ್ತಿ ಲಭಿಸಿದ್ದು ಮೊದಲ ಬಾರಿ.

ಅದೇ ವರ್ಷ. ಜುಲೈ ತಿಂಗಳಲ್ಲಿ ಮೈಸೂರಿನಿಂದ ಅವರಿಗೆ ಆಮಂತ್ರಣ ಬಂತು. ಆಗ ಮೈಸೂರು ಸಿಂಹಾಸನವನ್ನು ಯುವಕ ಮಹಾರಾಜ ಕೃಷಣರಾಜ ಒಡೆಯರ್ ಆರೋಹಣ ಮಾಡಿದ್ದರು. ಹೊಸದಾಗಿ ನಿರ್ಮಿಸಲಾಗುತ್ತಿದ್ದ ಜಗನ್ಮೋಹನ ಅರಮನೆಯನ್ನು ಅಲಂಕರಿಸಲು ರವಿವರ್ಮರ ಕೃತಿಗಳೇ ಯೋಗ್ಯವೆಂದು ಮಹಾರಾಜರು ಬಗೆದಿದ್ದರು. ಮಾತ್ರವಲ್ಲ ಹೊಸ ಅರಮನೆಗೆ ಕಲಾನಿರ್ದೇಶಕರಾಗಿಯೂ ರವಿವರ್ಮರ ಸಹಕಾರವನ್ನು ಕೋರಲಾಯಿತು. ರವಿವರ್ಮ ಮೈಸೂರಿನಲ್ಲಿದ್ದು ಒಂಬತ್ತು ತೈಲಚಿತ್ರಗಳನ್ನು ರಚಿಸಿದರು. ಅರಮನೆಯ ಅಲಂಕಾರ ಗೃಹಗಳಿಗೆ ವರ್ಣ ಸಂಯೋಜನೆಯೂ ಅವರ ನಿರ್ದೇಶನದಂತೆ ನಡೆಯಿತು.



ಮಹಾರಾಜರ ಪೂರ್ಣ ಆಕಾರ ತೈಲಚಿತ್ರವೊಂದನ್ನು ರವಿವರ್ಮ ರಚಿಸಿದ್ದರು. ಮೈಸೂರು ಮಹಾರಾಜರ ಆಸ್ಥಾನದಲ್ಲಿದ್ದ ಬಿಡಾರಂ ಕೃಷ್ಣಪ್ಪ, ವಾಸುದೇವಾಚಾರ್ಯ. ವೀಣೆ ಸುಬ್ಬಣ್ಣ ಮೊದಲಾದವರ ಸಂಗೀತವನ್ನು ಸವಿಯುವ ಅವಕಾಶವೂ ರವಿವರ್ಮರಿಗೆ ದೊರಕಿತು. ಶಾಸ್ತ್ರೀಯ ಸಂಗೀತದಲ್ಲಿ ಬಹಳ ಅಭಿರುಚಿ ಇದ್ದ ರವಿವರ್ಮರು ಬಿಡಾರಂ ಕೃಷ್ಣಪ್ಪನವರಿಂದ ಕೀರ್ತನೆಗಳನ್ನು ಅಭ್ಯಾಸಮಾಡಿದರು. ಚಾಮುಂಡಿ ಬೆಟ್ಟದಲ್ಲಿ ವಾಯುವಿಹಾರ ಮಾಡುತ್ತಿದ್ದಾಗ ತಾವು ಗಮನಿಸಿದ, ನೀರು ಸೇದುವ ಹೆಣ್ಣೊಬ್ಬಳ ಚಿತ್ರವನ್ನೂ ಆತ ಕುಂಚದಿಂದ ಸೆರೆಹಿಡಿದರು.

ಅದೇ 'ಕೊಳದ ಬಳಿಯಲ್ಲಿ' ಎಂಬ ಸುಂದರ ತೈಲಚಿತ್ರ, ರವಿವರ್ಮರ ಬಲಗೈ ಬಂಟನಾಗಿ, ಆತ ತೆರಳಿದೆಡೆಯೆಲ್ಲ ಅನುಸರಿಸುತ್ತಿದ್ದ ಸಹೋದರ ರಾಜರಾಜವರ್ಮ ತೀರಿಕೊಂಡ ರವಿವರ್ಮರಿಗೆ ಇದೊಂದು ಆಘಾತ. ರವಿವರ್ಮರ ಸಾಧನೆಯಲ್ಲಿ ರಾಜವರ್ಮನ ಅಪಾರ ಪರಿಶ್ರಮವೂ ಒಳಗೊಂಡಿತು. ಚಿತ್ರರಚನೆಗೆ ಮೊದಲು ಇಬ್ಬರೂ ಕೂಡಿ ಚರ್ಚಿಸಿ. ವರ್ಣ ಸಂಯೋಜನೆಯನ್ನು ನಿರೂಪಿಸುತ್ತಿದ್ದರು. ದೃಶ್ಯಗಳ ಆಯ್ಕೆಯನ್ನು ಇಬ್ಬರೂ ಸೇರಿಯೇ ನಿರ್ಧರಿಸುತ್ತಿದ್ದರು.

೧೯೦೫ರಲ್ಲಿ ರವಿವರ್ಮರ ೫೭ನೇ ಜನ್ಮದಿನವನ್ನು ಬಹಳಷ್ಟು ವಿಜೃಂಭಣೆಯಿಂದ ಹುಟ್ಟೂರಿನಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಇನ್ನೇನು, ಮೂರು ವರ್ಷ ಸಂದರೆ ಷಷ್ಠಿಪೂರ್ತಿ, ಆ ಬಳಿಕ ವಾನಪ್ರಸ್ಥಾಶ್ರಮ ಸ್ವೀಕರಿಸಲು ರವಿವರ್ಮ ನಿರ್ಧಾರ ಕೈಗೊಂಡಿದ್ದ. ತಮ್ಮ ಯಶಸ್ಸನ್ನು ಕುರಿತು ಯಾರಾದರೂ ಪ್ರಶಂಸೆ ಮಾಡಿದರೆ ಆತ ಹೇಳುತ್ತಿದ್ದರು: "ನನ್ನ ಸಾಧನೆ ಏತರದು? ನನಗಾಗಲೇ ಐವತ್ತಕೂ ಮೀರಿದೆ. ಕೇರಳದ ಮಣ್ಣಿನಲ್ಲಿ ಜನಿಸಿ, ಜಗದ್ವಂದ್ಯರಾದ ಶಂಕರಾಚಾರ್ಯರ ಜೀವನವನ್ನು ಗಮನಿಸಿ. ಬರಿಯ ಮೂವತ್ತೆರಡರ ಹರೆಯದಲ್ಲೇ ಸ್ವರ್ಗವಾಸಿಯಾದರು ಅವರು. ಆದರೆ ಅಷ್ಟರಲ್ಲೆ ಕನ್ಯಾಕುಮಾರಿಯಿಂದ ಹಿಮಾಲಯದ ತನಕ. ಬರಿಯ ಕಾಲ್ನಡಿಗೆಯಲ್ಲೆ ಸಂಚರಿಸಿ ಎಷ್ಟು ಸಾಧಿಸಿದರು!"

ಕೊನೆಯುಸಿರುವವರೆಗೂ ಚಿತ್ರಕಲೆ

ಸಹೋದರನ ಮರಣ. ಅನಾರೋಗ್ಯ ಇತ್ಯಾದಿಗಲಿಂದಾಗಿ ರವಿವರ್ಮ ಮಾನಸಿಕವಾಗಿ, ದೈಹಿಕವಾಗಿ ಬಹಳಷ್ಟು ಬಳಲತೊಡಗಿದ್ದರು. ಕುಂಚವೇನೋ ಚಲಿಸುತ್ತಲೇ ಇತ್ತು. ಆದರೆ ಹಿಂದಿನಷ್ಟು ಸುಲಭವಾಗಿ ಬೆರಳುಗಳು ಕೆಲಸ ಮಾಡುತ್ತಿರಲಿಲ್ಲ. ಇಷ್ಟಾದರೂ ರವಿವರ್ಮರ ಕಲ್ಪನೆಗೆ ಮುಪ್ಪು ಬಂದಿರಲಿಲ್ಲ. ಮೈಸೂರು ಮಹಾರಾಜರ ಬೇಡಿಕೆಯಂತೆ ಕೆಲವು ಪೌರಾಣಿಕ ಚಿತ್ರಗಳನ್ನೂ ಆತ ರಚಿಸಿದರು. ಪಾಂಡವರ ದೂತನಾಗಿ ಕೌರವರ ಆಸ್ಥಾನ ಪ್ರವೇಶಿಸುವ ಶ್ರೀಕೃಷ್ಣ, ಸೇತು ಬಂಧನಕ್ಕಾಗಿ ಸಾಗರದ ಮುಂದೆ ಬಿಲ್ಲು ಹೂಡುವ ಶ್ರೀರಾಮಚಂದ್ರ ಅವುಗಳಲ್ಲೆಲ್ಲ ಶ್ರೇಷ್ಠ ಚಿತ್ರಗಳು.

ಇಂಗ್ಲೆಂಡಿನ ರಾಜಕುಮಾರನು ಮೈಸೂರಿಗೆ ಬೇಟೆಯಾಡಲು ತೆರಲಿದಾಗ ರವಿವರ್ಮನನ್ನೂ ಅಲ್ಲಿಗೆ ಆಹ್ವಾನಿಸಲಾಯಿತು. ಮೈಸೂರು ಮಹಾರಾಜರು ಆ ಸಂದರ್ಭದಲ್ಲಿ ಖೆಡ್ಡಾ ಕಾಡಾನೆಗಳನ್ನು



ಪಳಗಿದ ಆನೆಗಳಿಂದ ಸೆರೆಹಿಡಿಯುವುದು ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ರವಿವರ್ಮರೂ ಅವರೊಂದಿಗೆ ಅರಣ್ಯಕ್ಕೆ ಸಾಗಿದರು ಕುಂಚದೊಂದಿಗೆ ಕಾರ್ಯಾಚರಣೆಯನ್ನೂ ಅರಣ್ಯದಲ್ಲಿ ಪ್ರಾಣಿಗಳನ್ನು ಬೇಟಿಯಾಡು ದೃಶ್ಯಾವಳಿಯಗಳನ್ನೂ ರವಿವರ್ಮ ರಂಗದಲ್ಲಿದ್ದೆ ಚಿತ್ರಿಸಿಕೊಂಡರು. ಮಿಂಚಿನಂತೆ ಕುಂಚ ಚಲಾಯಿಸುವ ರವಿರ್ಮರ ಪ್ರತಿಭೆಗೆ ಯುವರಾಜ ಜಾರ್ಜ್‌ನೂ ಅವನೊಂದಿಗೆ ಆಗಮಿಸಿದ ಐರೋಪ್ಯ ಕಲಾವಿದರೂ ಸಹ ಇದ್ದು ಆಶ್ಚರ್ಯಚಕಿತರಾದರು.

ಮೈಸೂರು ಮಹಾರಾಜರಿಂದ ಸಾಕಷ್ಟು ಪುರಸ್ಕಾರ ಪ್ರಶಸ್ತಿ ಪಡೆದು, ರವಿವರ್ಮ ೧೯೦೬ರ ಫೆಬ್ರವರಿಯಲ್ಲಿ ಹುಟ್ಟೂರಿಗೆ ಹಿಂದಿರುಗಿದರು. ಕಠಿಣ ಪರಿಶ್ರಮ. ಪ್ರವಾಸಗಳು ಆತನ ಕುಸಿಯುತ್ತಿದ್ದ ಆರೋಗ್ಯವನ್ನು ಇನ್ನೂ ಹದಗೆಡಿಸಿದವು. ತಿರುವಾಂಕೂರಿನ ಮಹಾರಾಜರೇ ವಿಶೇಷ ತಜ್ಞರಿಂದ ಆತನ ಚಿಕಿತ್ಸೆಯ ವ್ಯವಸ್ತೆ ಮಾಡಿದರು. ಭಾರತಾದ್ಯಂತದಿಂದ ತಜ್ಞರು, ಔಷಧಗಳು ಕಿಳಿಮಾನೂರಿನ ಕಲಾವಿದನ ರಕ್ಷಣಗೆ ಬಂದರೂ ಫಲವಾಗದೆ ೧೯೦೬ರ ಅಕ್ಟೋಬರ್ ೨ ರಂದು ರವಿವರ್ಮರು ನಿಧನರಾದರು. ಇಡೀ ಭಾರತ ಮಾತ್ರವಲ್ಲ, ದೇಶವಿದೇಶಗಳ ಚಿತ್ರಪ್ರೇಮಿಗಳು ದುಃಖಿಸಿದರು.

ಜಲವರ್ಣದಿಂದ ಪ್ರಾರಂಭಿಸಿ ತೈಲವರ್ಣವನ್ನು ಸ್ವಯಂ ಕಲಿಕೆಯಿದ ಕೈಗುಡಿಸಿಕೊಂಡ ರವಿವರ್ಮ ತಂಜಾವೂರು ಶೈಲಿಯಿಂದ ತೊಡಗಿ ಅತ್ಯಾಧುನಿಕ ಪಾಶ್ಚಾತ್ಯ ಶೈಲಿಯನ್ನೂ ಒಲಿಸಿಕೊಂಡ ಪ್ರತಿಭಾ ಸಂಪನ್ನರು ಪ್ರಕೃತಿ ಹಾಗೂ ಮಾನವನಲ್ಲಿ ಆಸಕ್ತರಾಗಿದ್ದರೂ ಪೌರಾಣಿಕ ವ್ಯಕ್ತಿದೃಶ್ಯಗಳನ್ನೂ ಕುಂಚದಲ್ಲಿ ಸೆರೆ ಹಿಡಿದದ್ದು, ಅವರ ವಿಶೇಷತೆ. ಅವರು ರಚಿಸಿದ ಚಿತ್ರಗಳ ಸಂಖ್ಯೆ ಎಷ್ಟೆಂದು ಸ್ವತಃ ಅವರೇ ಅರಿಯರು ಅದೆಷ್ಟೊ ಚಿತ್ರಗಳನ್ನು ರಚಿಸಿ ಇಷ್ಟ-ಮಿತ್ರರಿಗೆ ಉಚಿತವಾಗಿ ಕೊಡುತ್ತಿದ್ದರು. ತಮ್ಮ ಕೃತಿಗಳನ್ನೆಂದೂ ಆತ ತಮ್ಮ ಮನೆಯಲ್ಲಿ ಪ್ರದರ್ಶನಕ್ಕಾಗಿ-ಅಲಂಕಾರ ವಸ್ತುವಾಗಿ-ಇರಿಸುತ್ತಿರಲಿಲ್ಲ. ಬದಲಾಗಿ ಸಮಕಾಲೀನ ಕಲಾವಿದರ ಅನೇಕ ಕೃತಿಗಳನ್ನು ಆತ ಬೆಲೆಕೊಟ್ಟು ಪಡೆದು ಇಟ್ಟುಕೊಳ್ಳುತ್ತಿದ್ದರು. ಚಿತ್ರಕಲೆಯಲ್ಲಿ ಮಗ್ನರಾಗುವುದರಲ್ಲೆ ಆತ ಆನಂದ ಕಾಣುತ್ತಿದ್ದರು.

ರವಿವರ್ಮರ ಜೀವನ ಬಹು ನಿರ್ಮಲವಾದದ್ದು. ರಾಜಮನೆತನದಲ್ಲಿ ಜನಿಸಿದರೂ ಸರಳ, ನಿರಾಡಂಬರ ವ್ಯಕ್ತಿಯಾಗಿದ್ದ ರವಿವರ್ಮರಿಗೆ ತಮ್ಮ ರಾಷ್ಟ್ರದ ಸಂಸ್ಕೃತಿ ಪರಂಪರೆಯಲ್ಲಿ ಅಪಾರ ಅಭಿಮಾನ. ಆತ ಪೌರಾಣಿಕ ವ್ಯಕ್ತಿಗಳ ಸದ್ಗುಣಗಳನ್ನು ಸ್ವಾಭಾವಿಕವಾಗಿಯೇ ಮೈಗೂಡಿಸಿಕೊಂಡಿದ್ದರು ಹೆಸರಿಗಾಗಿ ಹಣದ ಆಸೆಗಾಗಿ ಎಂದೂ ಆತ ತಮ್ಮ ನಂಬಿಕೆಗಳಿಗೆ ತಿಲಾಂಜಲಿಯನ್ನು ನೀಡಿದವರಲ್ಲ. ಲಚ್ಚ ಭಾರತೀಯ ವೇಷ ಭೂಷಣವನ್ನೆ ಧರಿಸುತ್ತಿದ್ದರು. ಉತ್ತರದ ಅನೇಕ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡಲೂ ಆತ ಕಲಿತಿದ್ದರು.

ರವಿವರ್ಮರ ಚಿತ್ರಗಳು ಪಂಡಿತರಿಗೂ ಪಾಮರರಿಗೂ ಸಂತೋಷವನ್ನು ಕೊಡಬಲ್ಲವು. ಒಮ್ಮೆ ರವಿವರ್ಮ ತಮ್ಮ 'ಕಲಾ ಶಾಲೆ'ಯಲ್ಲಿ ಪೌರಾಣಿಕ ಚಿತ್ರವೊಂದನ್ನು ಚಿತ್ರಿಸುತ್ತಿದ್ದರು. ಆ ಕೋಣೆಯಲ್ಲಿ

ಒಬ್ಬ ನಂಬೂದಿರಿ ಪಂಡಿತ ಹಾಗೂ ಮನೆ ಕೆಲಸದ ಆಳು ಇದನ್ನು ವೀಕ್ಷಿಸುತ್ತಾ ಇದ್ದರು. ಚಿತ್ರವೂ ಪೂರ್ಣಗೊಳ್ಳುತ್ತಲೇ ರವಿವರ್ಮರು ಕೆಲಸದಾಳನ್ನು "ಹೇಗಿದೆ ಚಿತ್ರ?" ಎಂದು ಪ್ರಶ್ನಿಸಿದರು. ಅಲ್ಲೆ ಇದ್ದ ನಂಬೂದಿರಿ ಪಂಡಿತನಿಗೆ, ರವಿವರ್ಮರು ತಮ್ಮನ್ನು ಅವಗಣಿಸಿ ಆ ಅಕ್ಷರ ಜ್ಞಾನವಿಲ್ಲದ ಆಳಿನೊಡನೆ ಚಿತ್ರದ ಸೌಂದರ್ಯದ ಕುರಿತಾಗಿ ಅಭಿಪ್ರಾಯ ಕೇಳಿದ್ದೇಕೆ ಎಂದು ಹೊಳೆಯಲಿಲ್ಲ. ಆತ ರವಿವರ್ಮರನ್ನು ಈ ಕುರಿತು ಕೇಳಿದಾಗ ರವಿವರ್ಮ ನುಡಿದರು. ಇಂತಹ ಪ್ರಶ್ನೆಗಳಿಗೆಲ್ಲ ಉತ್ತರ ಹೇಳಲು ಪಂಡಿತರಿಗಿಂತಲೂ ಪಾಮರರೇ ಯೋಗ್ಯರು. ಈ ಮಂದಿಯ ದೃಷ್ಟಿಗೆ ಹುಳುಕು ಚೆನ್ನಾಗಿ ಗೋಚರಿಸುತ್ತದೆ. ಅವರ ದೃಷ್ಟಿಗೆ ಚೆನ್ನಾಯಿತೆಂದರೆ ಮತ್ತೆ ಪಂಡಿತರಿಗೂ ಅದು ಒಪ್ಪಿಗೆಯಾಗುತ್ತದೆ. ಅವರು ನೀಡುವ 'ಪ್ರಶಸ್ತಿ ಪತ್ರ'ಕ್ಕೆ ಇರುವ ಬೆಲೆ ಇನ್ನು ಯಾರೇ ನೀಡುವ 'ಪ್ರಶಸ್ತಿ ಪತ್ರ'ಕ್ಕೆ ಇಲ್ಲ." ನಂಬೂದಿರಿ ಪಂಡಿತ ಮೌನವಾಗಿ, ತಲೆ ತಗ್ಗಿಸಿ ಕೋಣೆಯಿಂದ ಹೊರಬಿದ್ದರು.


ಭಾರತೀಯ ಚಿತ್ರಕಲಾ ಪ್ರೇಮಿಗಳಿಗೆ ಪುರಾಣ ಪ್ರಸಿದ್ಧ ಘಟನಾವಳಿಗಳ ಪುನರ್‌ದರ್ಶನ ಮಾಡಿಕೊಟ್ಟ ಶ್ರೇಯಸ್ಸು ರವಿವರ್ಮರಿಗೆ ಸಲ್ಲುತ್ತದೆ. ಪೌರಾಣಿಕ ಕಥಾ ಪಾತ್ರಗಳಿಗೆ ಸಾಕಾರ ರೂಪ ನೀಡಿದ್ದೂ ಆತನೆ. ಇಡೀ ಭಾರತದಲ್ಲಿ ಸಂಚಾರ ಮಾಡಿ ಹೊರ ವೇಷ, ಭಾಷೆಗಳಲ್ಲಿ ಬೇರೆಯಾಗಿ ಕಂಡರೂ ಭಾರತೀಯರೆಲ್ಲರ ಸಂಸ್ಕೃತಿ ಒಂದೇ ಎಂದು ಕಂಡು ಚಿತ್ರಿಸಿದ ಪ್ರಥಮ ಭಾರತೀಯ ಕಲಾವಿದ ರವಿವರ್ಮ. ಪರಂಪರಾಗತ ಭಾರತೀಯ ಚಿತ್ರಕಲಾ ಸೈಲಿಯಿಂದ ವ್ಯವಸ್ಥಿತವಾಗಿದ್ದರೂ ಪಾಶ್ಚಾತ್ಯ ಆಧುನಿಕ ಶೈಲಿಯಿಂದ ಪ್ರಭಾವಿತವಾಗಿದ್ದರೂ ರವಿವರ್ಮರ ಚಿತ್ರಗಳಲ್ಲಿ 'ತನ್ನತನ'ದ ಅಚ್ಚೊತ್ತು ಇದ್ದೇ ಇತ್ತು.

❖❖❖❖



ಅಧ್ಯಾಯ : ಮೂರು

ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಭಾವಚಿತ್ರಗಳು



ಅಧ್ಯಾಯ : ಮೂರು

ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಭಾವಚಿತ್ರಗಳು

ಭಾರತೀಯ ಕಲಾವಿದರಲ್ಲಿ ರವಿವರ್ಮ ಆಧುನಿಕತೆ ಮಾರ್ಗಹಾಕಿಕೊಟ್ಟ ಆದ್ಯಪ್ರವರ್ತಕ, ಅದೇ ಸಮಯದಲ್ಲಿ ಅವನೊಬ್ಬ ಆ ಕಾಲದ ನಿಸ್ಸಂಶಯವಾದ ಕಾಲ ವಿರೋಧಿ, ಈ ವೈರುದ್ಯವನ್ನು ಸಮಚಿತ್ತದಿಂದ ನಡೆಸುತ್ತಾ, ಅವನು ಭಾರತದ ಹತ್ತೊಂಬತ್ತನೆಯ ಶತಮಾನದ ಸಾಂಸ್ಕೃತಿಕ ಪುನರುಜ್ಜೀವನದಲ್ಲಿ ಉಚ್ಚ್ರಾಯ ಭೂತ ಕಾಲದ ಪರಿಕಲ್ಪನೆಯನ್ನು ಪಾಶ್ಚಾತ್ಯ ತಂತ್ರದ ಮೂಲಕ ಸಿದ್ದಿಸುವ ಮತ್ತು ನಂತರ ರಾಷ್ಟ್ರೀಯ ಯೋಜನೆಯೊಳಗೆ ಅದನ್ನು ಪ್ರಸ್ತಾಪಿಸುವಂತಹ ತಮ್ಮ ಕೆಲಸಗಳನ್ನು ಅದೇ ರೀತಿ ಪರಿಭಾವಿಸುವಂತಹ ಇತರ ಅಸಂಗತ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲುತ್ತಾರೆ ರಾಜರವಿವರ್ಮ.

ಪ್ರಾತ್ಯಕ್ಷಿಕೆಗಳಿಂದ ರಚಿಸಿದ ಚಿತ್ರಗಳು, ಲಾವ ಹಾಗೂ ವ್ಯಕ್ತಿಚಿತ್ರಗಳನ್ನು ಹಿಂದಿನ ಕಾಲದಿಂದಲೂ ಕಾಣಬಹುದು. ಅದು ರಾಜ ಮಹಾರಾಜ ಕಾಲ. ಅಲ್ಲಿ ಕಲಾವಿದರಿಗೆ ವಿಭಿನ್ನವಾದ ಆಶ್ರಯ ಮತ್ತು ಪ್ರೋತ್ಸಾಹ, ರಾಜ ಮಹಾರಾಜರು ಹೆಚ್ಚು ಭಾವಚಿತ್ರ ಹಾಗೂ ವ್ಯಕ್ತಿಚಿತ್ರಗಳನ್ನು ಚಿತ್ರಿಸಿಕೊಂಡಿದ್ದಾರೆ. ಕಾರಣ ಹಿಂದಿನ ದಿನಮಾನಗಳಲ್ಲಿ ಛಾಯಚಿತ್ರವೆಂಬುದಿರಲಿಲ್ಲ. ಹಾಗಾಗಿ ಕಲಾವಿದರಿಗೆ ಬೇಡಿಕೆಯ ಬಿಸಿಯೇರಿತ್ತು "Portraiture and brilliant Court Ceremonials were the Subjects of most of the mogal miniature paintings"[೧೧] ಚಿತ್ರಕಲೆಯಲ್ಲಿ ಕುಂಚದಿಂದ ಎಳೆಯುವಂಥ ಒಂದೊಂದು ರೇಖೆಗೂ ಅತ್ಯಮೋಘವಾದ ಅರ್ಥವಿದೆ. ಪ್ರತಿಭೆಯ ಪ್ರಕ್ರಿಯಗೆ ಒಳಗಾಗಿ ಒಂದು ಆಕಾರವನ್ನು

೧೧. E. B. Havel : Indian sculpture and paintings, P.No. 164



ಪಡೆಯಬೇಕಾಗುತ್ತದೆ. ಇದಕ್ಕಾಗಿ ಹಲವು ದಿನ, ತಿಂಗಳು, ಏಕೆ, ವರ್ಷಗಳ ಸಾಧನೆಯಾಗಬೇಕು. ಜ್ಞಾನಸಿದ್ದಿಯ ಜೋತೆಗೆ ಸಮಾಧಿಸಿದ್ದಿ ಸಾಧಿಸಬೇಕು. ಗೌರವ ತಪಸ್ವಿಯಾಗಿರಬೇಕು. ಧ್ಯಾನ ಮಂತ್ರಿಗಳ ಮೂಲಕ ಈ ಮೂಲಕ ಸಮಾಧಿಸಿದ್ಧಿಯಲ್ಲಿ ಸಂಪೂರ್ಣನಾಗಿ ತನ್ನನ್ನು ತಾನು ಸಮರ್ಪಿಸಿಕೊಂಡು ಕಲಾಕಾರ್ಯ ಮಾಡಬೇಕು.[೨] ರವಿವರ್ಮರ ವ್ಯಕ್ತಿ ಚಿತ್ರಗಳನ್ನು ನೋಡಿದಾಗ ಇವುಗಳಲ್ಲಿ ಎರಡು ವಿಧಗಳಾಗಿ ಕಾಣಬಹುದು. ಮೊದಲನೆಯದು ಪೂರ್ಣ ಪ್ರಮಾಣದ ಜೀವಮಾಧರಿಯ ಚಿತ್ರಗಳು, ಎರಡನೇಯದು ಭಾವಚಿತ್ರಗಳು ಕಲಾಕೃತಿಗಳಾಗಿವೆ.

ಭಾರತದ ಕೆಲವೇ ಹಿರಿಯ ಕಲಾವಿದರಲ್ಲಿ ರವಿವರ್ಮನು ಕೂಡ ಒಬ್ಬ. ಹಾಗೆಯೇ ಹುಟ್ಟುತ್ತಲೇ ಬಣ್ಣಗಳ ಒಡನಾಟವಿಟ್ಟುಕೊಂಡಂತೆ ರಚಿಸುವ ಕಲಾವಿದ, ಕಲಾವಿದನಾಗುವವನು ಕಲೆಯ ಎಲ್ಲಾ ವಿಷಯಗಳೊಂದಿಗೆ, ಮಾನವ ದೇಹದ ಅಂಗರಚನಶಾಸ್ತ್ರದ ಸೂಕ್ಷ್ಮತಿಳುವಳಿಕೆಯನ್ನು ಹೊಂದಿರಬೇಕು. ಈ ಅಂಶವನ್ನು "ಅಯಿಲ್ಯಂ ತಿರುನಾಳ" ರವಿವರ್ಮನಿಗೆ ಭೋದಿಸಿದ ಹಾಗೂ ಯುರೋಪಿಯನ್ ಕಲೆಯ ಪುಸ್ತಕಗಳಿಂದ ತಿಳಿದುಕೊಂಡ. ಮದ್ರಾಸಿನ ರಾಜ್ಯಪಾಲ ಹಾಗೂ ಬಕ್ಕಿಂಗ್ ಹ್ಯಾಮ್‌ನ ಭಾವಚಿತ್ರವನ್ನು ಎದುರಿಗೆ ಕುಳ್ಳಿರಿಸಿಕೊಂಡೆ ನೇರವಾಗಿ ಚಿತ್ರರಚನೆ ಮಾಡಿದ್ದಾನೆ. ಈ ಕಲಾಕೃತಿಗಳು ಅನಾವರಣಗೊಂಡ ಸಂದರ್ಭದಲ್ಲಿ ಅನೇಕ ಹಿರಿಯ ಯುರೋಪಿಯನ್ ಕಲಾವಿದರಿದ್ದು, ರವಿವರ್ಮನ ಚಿತ್ರದ ಶ್ರೇಷ್ಠತೆ, ವೈಶಿಷ್ಟತೆಗೆ ಹಾಗೂ ಸೌಂದರ್ಯಕ್ಕೆ ದಂಗಾಗುವರು. ಅಷ್ಟರ ಮಟ್ಟಿಗೆ ವ್ಯಕ್ತಿ ಹಾಗೂ ಭಾವಚಿತ್ರವನ್ನು ರಚಿಸುವಂತಹ ಶಕ್ತಿಯನ್ನು ಹೊಂದಿದ್ದರು. ಮದ್ರಾಸಿನ ರಾಜ್ಯಪಾಲರು ಹೇಳುವಂತೆ ನಾನು ಒಬ್ಬ ಪಾಶ್ಚತ್ಯ ಕಲಾವಿದನ ಎದುರು ಸುಮಾರು ೧೮ ಬಾರಿ ಭಾವ ಚಿತ್ರರಚನೆಗಾಗಿ ಕುಳಿತಿದ್ದೆ, ಆದರೆ ನನ್ನ ವ್ಯಕ್ತಿತ್ವ ಸೆರೆ ಹಿಡಿಯುವಲ್ಲಿ ವಿಫಲರಾಗಿದ್ದರು. ಆದರೆ ನಮ್ಮ ಭಾರತದ ಯುವ ಕಲಾವಿದರಾದ ರವಿವರ್ಮನು ಕೆಲವೇ ನಿಮಿಷಗಳಲ್ಲಿ ಸ್ಪಷ್ಟತೆಯಿಂದ ರಚನೆ ಮಾಡಿರುವುದನ್ನು ಕಂಡು ನಾ ಬೆರಗಾದೆ ಎಂಬಂಶವನ್ನು ಪ್ರಸ್ತಾಪಿಸುವುದರ ಜೊತೆಗೆ ಪ್ರಶಸ್ತಿ ಮತ್ತು ಬಿರುದನ್ನು ಕೊಟ್ಟಿರುವುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ.

ಇಂತಹ ಮಹಾನ್ ಕಲಾವಿದರ ಸಾಲಿನಲ್ಲಿ ನಿಂತಿರುವಂತಹ ಕಲಾವಿದ ರವಿವರ್ಮ ಹೆಚ್ಚು ಸ್ತ್ರೀ ಚಿತ್ರಗಳನ್ನು ರಚನೆಮಾಡಿದ್ದಾರೆ. ಮುಖ್ಯವಾಗಿ, ದಮಯಂತಿ, ಲಕ್ಷ್ಮಿ, ಸರಸ್ವತಿ, ಸೀತೆ, ಹೂವು ಹಿಡಿದಿರುವ ಮಹಿಳೆ ದೀಪ ಹಿಡಿದಿರುವ ಮಹಿಳೆ, ಮಹಾರಾಷ್ಟ್ರದ ಸುಂದರಿ, ಸಂಗೀತ ವಾದ್ಯ ನುಡಿಸುತ್ತಿರುವ ಮಹಿಳೆಯರು, ಕಾಶ್ಮಿರಿ ಸುಂದರಿ, ರಾಣಿಯರ ಭಾವಚಿತ್ರ, ರಾಜಮನೆತನದ ಸ್ತ್ರೀಚಿತ್ರ, ಮಲಗಿರುವ ಸ್ತ್ರೀ ಚಿತ್ರ, ಹಾಲು ಮಾರುವ ಸ್ತ್ರೀ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಮಹಾರಾಷ್ಟ್ರದ ಸುಂದರಿ

ಕೇರಳದ ಚಿತ್ರ ಆರ್ಟ್ ಗ್ಯಾಲರಿಯಲ್ಲಿರುವ ಈ ಕಲಾಕೃತಿಯು ಮಹಾರಾಷ್ಟ್ರದ ಉಡುಗೆಯಲ್ಲಿರುವ

೦೨. ಡಾ. ಎಸ್. ಸಿ. ಪಾಟೀಲ (ಸಂ) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ – ೬೨

ಈ ಭಾವ ಚಿತ್ರವನ್ನು ಕ್ಯಾನ್‌ವಾಸ್ ಮೇಲೆ ತೈಲ ವರ್ಣದಿಂದ ರಚಿಸಲಾಗಿದ್ದು, ಸ್ತ್ರೀಯ ತಲೆಭಾಗದಿಂದ ಸೊಂಟದವರೆಗೆ ಚಿತ್ರಿಸಲಾಗಿದ್ದು, ತನ್ನ ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಳ್ಳಲಾಗಿದೆ. ಎಡಗೈಯಲ್ಲಿ ಹಸಿರು ಬಣ್ಣದ ಪರದೆಯನ್ನು ಹಿಡಿದುಕೊಂಡಿದ್ದಾಳೆ, ತಲೆಯ ಅರ್ಧಭಾಗದಿಂದ ಕೈಯವರೆಗೂ ತುಂಬು ಮುಸುಕನ್ನು ಹೊಂದಿಕೊಂಡಿರುವಂತೆ ಚಿತ್ರಿಸಲಾಗಿದೆ. ಕಲಾವಿದರು ಬರೀ ಮುಖದ ಭಾಗಕ್ಕೆ ಅಲ್ಲದೆ ಕೈಭಾಗದಿಂದ ಸ್ವಲ್ಪ ಕೆಳಗಿನವರೆಗೂ ಚಿತ್ರಿಕರಿಸಿ ಮರ್ಜ್‌ಗೊಳಿಸಲಾಗಿದೆ. ಅದಕ್ಕೆ ತಕ್ಕಂತೆ ವಸ್ತ್ರವನ್ನು ಕಾಣಬಹುದು.

ಸ್ತ್ರೀಯ ಮುಖದ ಭಾಗದಿಂದ ಕುತ್ತಿಗೆ, ಹಾಗೂ ಕೈಗಳಿಗೆ ಕೆಂಪು, ಹಳದಿ, ಕೇಸರಿ Codmium orange, yellow ಇತ್ಯಾದಿ ವರ್ಣಗಳನ್ನು ಬಳಸಿಕೊಂಡು ಮೆರುಗುಗೊಳಿಸಲಾಗಿದೆ. ಕಣ್ಣಿನ ಭಾಗ ಮುಗಿಸಿ ಉಬ್ಬು ತಗ್ಗುಗಳನ್ನು ತೋರಿಸಿ, ನೆರಳು–ಬೆಳಕನ್ನು ಆಭರಣಗಳಲ್ಲಿ ಉತ್ತಮವಾದ ಹೊಳಪನ್ನು ನೀಡಿದ್ದು, ಅತ್ಯಂತ ಆಕರ್ಷಕವಾಗಿ ಚಿತ್ರಿಸಿದ್ದಾನೆ. ವಿನ್ಯಾಸಗಳಲ್ಲಿ ಹೊಸ ಮೆರುಗನ್ನು, ಕೈ ಕುಸುರಿ ಕೆಲಸವನ್ನು ಕಲಾಕೃತಿ ಮೂಲಕ ಹೊರ ಹಾಕಿದ್ದಾನೆ. ಇನ್ನು ವಸ್ತ್ರದಲ್ಲಿ ಬಳಸಿರುವ ವರ್ಣಗಳನ್ನು ಗಮನಿಸಿದಾಗ ಕೆಂಪು ರೇಷ್ಮೆಸೀರೆಯನ್ನು ನೈಜರೂಪದಲ್ಲಿಯೆ ಚಿತ್ರಿಕರಿಸಲಾಗಿದೆ. Burnt Umber, Burnt sienna, yellow Uchre ಕೆಂಪು, ಕೇಸರಿ, ಇತ್ಯಾದಿ ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಹಾಗೂ ಸೀರೆ ಮುದುಡಿರುವ ಭಾಗವನ್ನು ಅತ್ಯುತಮವಾಗಿ ಚಿತ್ರಿಸಲಾಗಿದೆ. ಹಾಗೂ ಮೇಲು ಮುಸುಕಿನ ಭಾಗದಲ್ಲಿ ರೇಷ್ಮೆ ಪಟ್ಟಿಗಳನ್ನು ತೋರಿಸಲಾಗಿದೆ. ಮತ್ತು ಸೀರೆಯ ಅಂಚನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಸ್ತ್ರೀಯ ಕೈಯಲ್ಲಿನ ಪರದೆ ಹಸಿರುಬಣ್ಣದಿಂದ ಅವಳಿಗೆ ವಿರುದ್ಧವಾದಂತ ವರ್ಣದಿಂದ ಚಿತ್ರಿಕರಿಸಲಾಗಿದೆ. ಇದರಿಂದ ಅದ್ಭುತವಾದಂತಹ ಭಾವಚಿತ್ರ ಇದಾಗಿದೆ. ಭಾವಚಿತ್ರಕ್ಕೆ ಮುಖ್ಯವಾಗಿ ರೇಖೆಗಳನ್ನು ಒಳಗೊಂಡಿರಬೇಕು. ಈ ಭಾವಚಿತ್ರದಲ್ಲಿ ಮುಖಭಾಗದಲ್ಲಿ ಕಣ್ಣು ಹಾಗೂ ಮೂಗು, ತುಟಿಯ ಅಂಚಿನಲ್ಲಿ ಸೂಕ್ಷ್ಮವಾದ ರೇಖೆಗಗಳನ್ನು ಕಾಣಬಹುದು. ಹಾಗೂ ವಸ್ತ್ರದ ಮೇಲೆ ಹಾಗೂ ಸೂಕ್ಷ್ಮ ರೇಖೆಗಳೆರಡನ್ನು ಬಳಸಿ ವರ್ಣಗಳೊಂದಿಗೆ ಮೆದುಗೊಳಿಸಲಾಗಿದ್ದು, ವಿವಿಧ ವರ್ಣಗಳನ್ನು ಬಳಸಿ, ಮರ್ಜ್‌ಮಾಡಲಾಗಿದೆ. ಒಟ್ಟಾರೆಯಾಗಿ ಈ ಭಾವಚಿತ್ರವು ಉತ್ತಮ ಕಲಾಕೃತಿಯು, ಚಿತ್ರಾ ಆರ್ಟ್‌ಗ್ಯಾಲರಿಯಲ್ಲಿ ಸಂಗ್ರಹಗೊಂಡಿದೆ.

ಹಣ್ಣಿನ ತಟ್ಟೆ ಹಿಡಿದಿರುವ ಮಹಾರಾಷ್ಟ್ರದ ಸ್ತ್ರೀ

ತಿರುವನಂತಪುರಂನ ರಂಗ ವಿಲಾಸ ಪ್ಯಾಲೆಸ್‌ನಲ್ಲಿ ಸಂಗ್ರಹಿಸಿದ ಮಹಾರಾಷ್ಟ್ರದ ಸ್ತ್ರೀಯ ಭಾವಚಿತ್ರ ಇದಾಗಿದ್ದು, ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚಿಸಲಾಗಿದೆ ಕಲಾವಿದನನ್ನು ಅತ್ಯಂತ ವೈಭವದಿಂದ ಚಿತ್ರಿಕರಿಸಲಾಗಿದೆ. ಸ್ತ್ರೀಯ ಅರ್ಧಭಾಗದಷ್ಟು ಈ ಕಲಾಕೃತಿಯಲ್ಲಿ ಬಳಸಿಕೊಳ್ಳಲಾಗಿದೆ. ತನ್ನ ಬಲಗೈಯಲ್ಲಿ ಹಣ್ಣಿನ ಹರಿವಾಣದಲ್ಲಿ ಹಿಡಿದುಕೊಂಡಿದ್ದು ಎಡಗೈಯನ್ನು ಮಡಿಚಿಕೊಂಡಿದ್ದಾಳೆ, ಮುಖಭಾಗ ಮಾತ್ರವಲ್ಲದೆ ಸ್ತ್ರೀಯ ಅರ್ಧ ಭಾಗದವರೆಗೂ ಚಿತ್ರಿಸಿರುವುದು ಗಮನಾರ್ಹವಾಗಿದೆ. ಈ ಭಾವಚಿತ್ರದಲ್ಲಿ ಸ್ತ್ರೀಯು



ಆಭರಣಗಳಿಂದ ರಾರಾಜಿಸುತ್ತಿರುವುದನ್ನು ಗಮನಿಸಬಹುದು. ವರ್ಣದ ಬಳಕೆಯು ವೈಭವೀಕರಣದಿಂದ ಕೂಡಿದೆ. ಮುಖದಿಂದ ಕುತ್ತಿಗೆ ಹಾಗೂ ಕೈಗಳಲ್ಲಿ Gombogellne, orange, Cadmium orange, Burnt sienna, ಕೆಂಪು, ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉಬ್ಬು-ತಗ್ಗುಗಳನ್ನು ತೋರಿಸಲಾಗಿದೆ. ಹಾಗೂ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯಾಗಿದ್ದು ಹಣೆ, ಮೂಗು, ಕೆನ್ನೆ, ಗಲ್ಲದ ಭಾಗದಲ್ಲಿ ನೆರಳು ಹಾಗೂ ಬೆಳಕಿನ್ನು ಅತ್ಯುತಮವಾಗಿ ಸೆರೆಹಿಡಿಯಲಾಗಿದೆ. ಈ ಭಾವಚಿತ್ರ ನೈಜರೂಪದಲ್ಲಿರುವುದಕ್ಕಿಂತ ಹೆಚ್ಚು ವೈಭವಿಕರಿಸಲಾಗಿದೆ. ಇದೇ. ಅವಳು ಹಿಡಿದಿರುವ ಹಣ್ಣುಗಳು ದ್ರಾಕ್ಷಿ, ಸೇಬು, ಕಿತ್ತಲೆ ಹಣ್ಣುಗಳು ಸಹ ನೈಜತೆಯಿಂದ ಕೂಡಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯಾಗಿದೆ.

ಉತ್ತಮ ರೇಷ್ಮೆ ಸೀರೆಯನ್ನು ಹೊಂದಿರುವ ಸ್ತ್ರೀಯ ವಸ್ತ್ರದಲ್ಲಿ Burnt sienna, Cadmiun Orenge, Charome Orenge ಹಾಗೂ ಸೀರೆಯ ಅಂಚು, ಮುಸುಕಿಗೆ Raw Sianna, Charome Orenge, Yellow Deep, ಹಸಿರು ಇತ್ಯಾದಿ ವರ್ಣಗಳನ್ನು ಬಳಸಿ ಅತ್ಯಂತ ಹೊಳಪುಗಳ, ವರ್ಣಗಳಿಂದ ಮೆದುಗೊಳಿಸಲಾಗಿದೆ. ಅಲ್ಲಲ್ಲಿ ದೊಡ್ಡ ಹಾಗೂ ಚುಕ್ಕಿಗಳ ವಿನ್ಯಾಸಗಳನ್ನು ಕಾಣಬಹುದು. ಉತ್ತಮವಾದ ನೆರಳ ಬೆಳಕು ಹೊಂದಿದ್ದು, ಅಲ್ಲಿನ ನೆರಿಗೆಗಳನ್ನು ಅದ್ಭುತವಾಗಿ ಸೆರೆಹಿಡಿಯಲಾಗಿದೆ. ಅದಕ್ಕೆ ತಕ್ಕಂತಹ ಕುಬಸ ಸಹ ಕಾಣಬಹುದು.

ಸ್ತ್ರೀಯ ವೈಭವಕ್ಕೆ ತಕ್ಕಂತೆ ಕೆಂಪು ಹಾಗೂ ಬಿಳಿ ಮುತ್ತುಗಳನ್ನು ಬಳಸಿ ಶೃಂಗರಿಸಲಾಗಿದೆ. ಮೂಗಿಗೆ ಮೂಗುತ್ತಿ ಹಾಗೂ ಕಿವಿ ಓಲೆ, ಬಳೆಗಳನ್ನು ವಿಜೃಂಭಿಸುವಂತಹ ಹೊಸ ವಿನ್ಯಾಸಗಳಲ್ಲಿ ಕಾಣಬಹುದು. ಅದರಲ್ಲಿಯು ಕಾಸಿನ ಸರವನ್ನು ಕಾಣಬಹುದು. ಒಂದು ಭಾವ ಚಿತ್ರಕ್ಕೆ ರೇಖೆಗಳ ಪ್ರಧಾನ ಎನ್ನುವ ಹಾಗೆ ಈ ಭಾವಚಿತ್ರದಲ್ಲಿ ಕಡಿಮೆ ಪ್ರಮಾಣದಲ್ಲಿ ರೇಖೆಗಳು ಕಾಣಬಹುದು. ಕಣ್ಣಿನ ಭಾಗ, ಮೂಗು, ತುಟಿ, ಕೈ ಭಾಗದಲ್ಲಿ ವರ್ಣಗಳಿಂದ ಮೆರುಗುಗೊಳಿಸಲಾಗಿದೆ, ವಸ್ತ್ರದಲ್ಲಿ ಗಾಢ ಹಾಗೂ ಸೂಕ್ಷ್ಮರೇಖೆಗಳ ಬಳಕೆಯಾಗಿರುವುದು ಕಂಡುಬರುತ್ತದೆ. ಸ್ತ್ರೀಯ ಹಿಂಭಾಗದಲ್ಲಿ ಸ್ತ್ರೀಗೆ ಹಾಗೂ ಹಣ್ಣುಗಳಿಗೆ ಬಳಸಿದ ವರ್ಣಗಳನ್ನು ಬಳಸಿಕೊಂಡು ನಿಸರ್ಗವನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ಹಾಗೂ ಸ್ತ್ರೀಯ ಎಡಬುಜದಿಂದ ಮೊಣಕೈವರೆಗೂ ಮತ್ತು ಬಲಗೈಯ ಕೆಳಭಾಗದಲ್ಲಿ ಹಾಗೂ ಬಲಭಾಗದ ತಲೆ ಹತ್ತಿರ ಗಾಢ ವರ್ಣದಿಂದ ದಟ್ಟವಾದ ರೇಖೆಯನ್ನು ಹೊಂದಿ ಮರ್ಜ್ಮಾಡಲಾಗಿದೆ. ಒಟ್ಟಾರೆಯಾಗಿ ಸ್ತ್ರೀಯನ್ನ ಪ್ರಧಾನವಾಗಿ ಕಾಣಬಹುದು. ಇದು ಒಂದು ಉತ್ತಮ ಭಾವಚಿತ್ರವಾಗಿದೆ.

ವಾದ್ಯದೊಂದಿಗೆ ಸ್ತ್ರೀ (Lady with Swarbar)

ಈ ಕಲಾಕೃತಿಯನ್ನು ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಸಂಗೀತವಾದ್ಯವನ್ನು ಹಿಡಿದುಕೊಂಡು ಕುಳಿತಿರುವ ಸ್ತ್ರೀಯ ಭಾವಚಿತ್ರ ನೈಜವಾಗಿ ಮೂಡಿಬಂದಿರುವದನ್ನು ಕಾಣಬಹುದು.



ಸೌಮ್ಯಭಾವನೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಉದ್ದನೆಯ ಕೂದಲೂ ಹೊಂದಿದ ಸ್ತ್ರೀ ಮುಖಭಾಗದಿಂದ ಕುತ್ತಿಗೆ ಕೈಗಳಿಗೆ Yellow uchre, ಕೇಸರಿ, ಹಳದಿ, ಕೆಂಪು, ಬಿಳಿ ವರ್ಣಗಳಿಂದ ಮೆರುಗುಗೊಳಿಸಲಾಗಿದೆ. ಉಬ್ಬುತಗ್ಗುಗಳನ್ನು ಸೂಕ್ಷ್ಮವಾಗಿ ಬಳಸಿರುವುದನ್ನು ಕಾಣಬಹುದು. ವಾದ್ಯವನ್ನು ಬಳಸಿರುವ ಕೈಗಳು ನೈಜತೆಗೆ ಹತ್ತಿರವಾಗಿದೆ. ಉತ್ತಮವಾದ ನೆರಳು ಬೆಳಕನ್ನು ಮುಖ ಭಾಗದಲ್ಲಿ ಕಾಣಬಹುದು. ಅರ್ಧಭಾಗ ಬೆಳಕಿನಿಂದ ಹೊಳೆಯುವಂತೆ ಚಿತ್ರಿಸಿದರೆ, ಇನ್ನೂ ಅರ್ಧ ಮುಖ ಭಾಗ ನೆರಳಿನಿಂದ ವಿಭಜಿಸಿರುವುದನ್ನು ಕಾಣಬಹುದು, ಹಣೆ, ಕೆನ್ನೆ, ಮೂಗು, ಗಲ್ಲ, ಕೈಗಳ ಭಾಗದಲ್ಲಿ ಬೆಳಕಿನ ಪ್ರಭಾವವನ್ನು ಕಲಾವಿದನು ಸೆರೆಹಿಡಿದಿರುವ ಪಕ್ವತೆಯನ್ನು ಕಾಣಬಹುದು.

ಸ್ತ್ರೀಯ ಆಭರಣಗಳಲ್ಲಿ ಕೆಂಪು, ಬಿಳಿ, ವರ್ಣಗಳ ಬಳಕೆಯಿಂದ ವಿಜೃಂಭಿಸುವ ವಿನ್ಯಾಸಗಳನ್ನು ಕಾಣಬಹುದು. ವಸ್ತ್ರದಲ್ಲಿ ಸೀರೆ ಮತ್ತು ಕುಪ್ಪಸಕ್ಕೆ ಕಾನ್‌ಟ್ರಾನ್ಸ್ ಕಲರ್‌ಗಳು ಬಳಕೆ ಗಮನಸೆಳೆಯುವಂತಿದೆ. ಕುಪ್ಪಸಕ್ಕೆ ಹಸಿರು ಬಾಟಲ್ ಗ್ರೀನ್ ಕಪ್ಪು ವರ್ಣದಿಂದ ಮೆರುಗೊಳಿಸಲಾಗಿದೆ. ಅಲ್ಲಲ್ಲಿ ಹಳದಿ ವರ್ಣದಿಂದ ರೇಷ್ಮೆಯ ಬಾರ್‌ಡರ್ ಕಾಣಬಹುದು. ಸ್ತ್ರೀಯ ಮುಖಭಾವಗಳಿಗೆ ಬಳಸಿದ ವರ್ಣನೆ ಸೀರೆಯಲ್ಲಿ ಕಾಣಸಿಗುತ್ತದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಹಿನ್ನಲೆಯನ್ನು ಕಂದು, ಕೆಂಪು ಬಣ್ಣದಿಂದ ಮೆದುಗೊಳಿಸಿ ಸ್ತ್ರೀಯ ಭಾವಚಿತ್ರವನ್ನು ಪ್ರಧಾನವನ್ನಾಗಿ ಚಿತ್ರಿಸಿದ ಸಂಗೀತವಾದ್ಯವು ನೈಜವಾಗಿ ಮೂಡಿರುವುದು ಕಾಣಬಹುದು.

ಈ ಕಲಾಕೃತಿಯಲ್ಲಿ ರೇಖೆಗಳ ಬಳಕೆ ಅಷ್ಟಾಗಿ ಕಾಣಸಿಗುವುದಿಲ್ಲ. ವಾದ್ಯದಲ್ಲಿ ಕಾಣಬಹುದು. ಹಿನ್ನೆಲೆಯ ಸ್ತ್ರೀಯ ಎಡಭಾಗದ ಕೈ ಭಾಗವು ಮಿಶ್ರಣ ಮಾಡಲಾಗಿದೆ. ಪಾಶ್ಚಾತ್ಯ ಅಕಾಡೆಮಿಕ್ ಶೈಲಿಯನ್ನು ಉತ್ತಮವಾದ ಬಳಕೆಯಾಗಿದೆ. ಸ್ತ್ರೀಯ ಎದೆ ಭಾಗಕ್ಕೆ ಬಿದ್ದಿರುವ ನೆರವಾದ ಬೆಳಕಿನ ಪರಿಣಾಮವು ಪಾಶ್ಚಾತ್ಯರಿಂದ ಪ್ರಭಾವಿತ ವೆನಿಸಿಕೊಂಡಿರುವುದು ತೋರುತ್ತದೆ. ಕಲಾವಿದನ ಈ ಶೈಲಿ ಇಂದಿನ ಭಾವ ಚಿತ್ರಕಾರರಲ್ಲಿಯು ಕಾಣಬಹುದು.

ರಾಣಿ ಲಕ್ಷ್ಮಿಬಾಯಿ

ಈ ಭಾವಚಿತ್ರವು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಫೋಟೋಗ್ರಾಫಿಗಿಂತಲೂ ಉತ್ತಮವಾದ ಎಫೆಕ್ಟ್ ಈ ಭಾವಚಿತ್ರದಲ್ಲಿ ಕಾಣಬಹುದು. ಕಲಾವಿದ ಮುಖದ ಭಾವನೆ ಹಾಗೂ ನಿಂತಿರುವ ಭಂಗಿ ವಸ್ತುಗಳ ಬಳಕೆಯನ್ನು ನೋಡಿದರೆ ಅಕಾಡೆಮಿಕ್ ಶೈಲಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಸ್ತ್ರೀಯು ತನ್ನ ಬಲಗೈಯಲ್ಲಿ ಶಾಲನ್ನು ಹಿಡಿದುಕೊಂಡಿದ್ದಾಳೆ. ಎಡಗೈಯನ್ನು ಮೇಜಿನ ಮೇಲಿಟ್ಟುಕೊಂಡಿದ್ದಾಳೆ. ಆಭರಣಗಳಿಂದ ರಾರಾಜಿಸುವಂತೆ ಚಿತ್ರಿಸಲಾಗಿದೆ. ಪಕ್ಕದಲ್ಲಿ ಪುಸ್ತಕ ಹಾಗೂ ಹೂದಾನಿಯನ್ನು ಕಾಣಬಹುದು. ಮುಖಭಾವಕ್ಕೆ ಹೆಚ್ಚುಹೊತ್ತು ಕೊಡದೆ ಅವರ ವಸ್ತ್ರಹಿನ್ನೆಲೆಯನ್ನು ಪ್ರಧಾನವಾಗಿ ತೋರಿಸಿ ಚಿತ್ರಿಸಲಾಗಿದೆ. ಉದ್ದನೆಯ ಕೂದಲು ಹೊಂದಿರುವ ಸ್ತ್ರೀಯ ಮುಖ ಭಾಗಕ್ಕೆ

ಹಾಗೂ ಕೈಗಳಿಗೆ ಕೇಸರಿ, ಹಳದಿ, ಕೆಂಪು, ಬಿಳಿ ಕಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಿ, ಉಬ್ಬುತಗ್ಗುಗಳನ್ನು ನೈಜವಾಗಿ ಚಿತ್ರಿಸಿ ನೆರಳು ಬೆಳಕನ್ನು ತೋರಿಸಲಾಗಿದೆ. ಕೈಗಳನ್ನು ಸೌಮ್ಯವಾಗಿ ಚಿತ್ರಿಸಿದ್ದನ್ನು ಕಾಣಬಹುದು. ಯಾಥಾವತ್ತಾಗಿ ವ್ಯಕ್ತಿತ್ವವನ್ನು ಚಿತ್ರಿಸುವಲ್ಲಿ ಕಲಾವಿದನ ಸಾಧನೆಯನ್ನು ಕಾಣಬಹುದು.

ವರ್ಣದಲ್ಲಿ ಹಳದಿ, ಕೇಸರಿ, ಕಂದು ಮಿಶ್ರಣದಿಂದ ಮೆದುಗೊಳಿಸಲಾಗಿದ್ದು, ಉತ್ತಮವಾದ ರೇಷ್ಮೆಯಂತಹ ಹೊಳೆಯುವ ವಸ್ತ್ರವನ್ನು ಚಿತ್ರಿಸಿದಲ್ಲಿ ಮೂಡಿಸಲಾಗಿದೆ. ಪಾರದರ್ಶಕವಾಗಿಯು ವಸ್ತ್ರವನ್ನು ಚಿತ್ರಿಸಿರುವುದು ಕಾಣಬಹುದು. ಶಾಲನ್ನು ಕೆಂಪು, ಕೇಸರಿ, ಕಂದು ವರ್ಣಗಳಿಂದ ಮೆದುಗೊಳಿಸಿದ್ದು, ಅದೇ ವರ್ಣಗಳನ್ನು ಹೂವಿಗೆ ಹಾಗೂ ಪುಸ್ತಕಕ್ಕೆ ಬಳಸಲಾಗಿದೆ. ಮತ್ತು ಮೇಜಿನ ಮೇಲಿನ ವಸ್ತ್ರ, ಹಿನ್ನಲೆಯ ಪರದೆಗೆ ಹಸಿರು, ನೀಲಿ, ಕೇಸರಿ, ಹಳದಿ, ಕಪ್ಪು, ಕಂದು ವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ವರ್ಣ ಸಮತೋಲನೆ ಹಾಗೂ ನೆರಳು ಬೆಳಕನ್ನು ಕಾಣಬಹುದು. ಈ ಭಾವಚಿತ್ರದಲ್ಲಿ ಪಾಶ್ಚಾತ್ಯ ಶೈಲಿಯನ್ನು ಬಳಸಿಕೊಂಡಿದ್ದು, ಉತ್ತಮವಾಗಿ ಮೂಡಿಬಂದಿದೆ.

ಸ್ತ್ರೀಭಾವ ಚಿತ್ರ

ಈ ಕಲಾಕೃತಿಯು ಕೇರಳದ ಭಾವಚಿತ್ರವಾಗಿದ್ದು ಅವರ ಕೇಶ, ವಸ್ತ್ರವಿನ್ಯಾಸಗಳು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ರವಿವರ್ಮನು ಹೆಚ್ಚು ಕಲಾಕೃತಿಗಳನ್ನು ಕೇರಳದ ಶೈಲಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಕೇಶಕ್ಕೆ ಯಾವುದೇ ರೀತಿಯ ನೆಳರು ಬೆಳಕು ತೋರಿಸದೆ, ಗಾಢ ವರ್ಣದಿಂದ ಮೆದುಗೊಳಿಸಲಾಗಿದೆ, ವರ್ಣಗಳು, ಹಸಿರು, ಕೆಂಪು, ಕಂದುಗಳಿಂದ ಮೆದುಗೊಳಿಸಲಾಗಿದೆ. ಮುಖಭಾಗದಿಂದ ಕುತ್ತಿಗೆಯವರೆಗೆ ಕಂದು, ಕೆಂಪು, ಕೇಸರಿ, ಹಳದಿ, ಮಿಶ್ರಣದಿಂದ ಮೆದುಗೊಳಿಸಿ ಉಬ್ಬುತಗ್ಗುಗಳನ್ನು ತೋರಿಸಲಾಗಿದೆ. ನೆರಳು ಬೆಳಕಿನ ಸಂಯೋಜನೆಯಲ್ಲಿಯು ಬೇರೆ ಬೇರೆ ಕಾಣಬಹುದು. ಒಂದು ಕಡೆ ಬೆಳಕಿನ ಪ್ರಭಾವ ಇನ್ನೊಂದು ಕಡೆ ನೆರಳಿನ ಪ್ರಭಾವವನ್ನು ತೋರಿಸಲಾಗಿದೆ. ಕುತ್ತಿಗೆಯ ಭಾಗದಲ್ಲಿ ಸ್ವಲ್ಪ ನೆರಳು ಪ್ರಭಾವ ಹೆಚ್ಚಿದಂತೆ ತೋರುತ್ತದೆ. ಎಲ್ಲಿಯು ಲೆಯರ್ಸ್‌ಗಳನ್ನು ಕಾಣುವುದಿಲ್ಲ ನುಣುಪಾಗಿ ಚಿತ್ರಿಸಿರುವುದನ್ನು ಕಾಣಬಹುದು.

ಅವಳು ಮೂಗುತಿ, ಕಿವಿಯೋಲೆ, ಸರ, ಕೆಂಪು ಬಿಳಿ ವರ್ಣಗಳಿಂದ ಕೂಡಿದ್ದು, ಮುಖದ ವರ್ಣಕ್ಕೆ ಹೊಂದಿಕೊಂಡಿರುವಂತೆ ಹಾಗೂ ವಸ್ತ್ರಕ್ಕೆ ಬಿಳಿ, ಹಳದಿ, ಕೆಂಪು, ಕೇಸರಿ ಇತ್ಯಾದಿ ವರ್ಣಗಳಿಂದ ಮೆದು ಹಾಗೂ ಮೂರು ಆಯಾಮದ ಪರಿಣಾಮ ಕಾಣಬಹುದು. ಹಾಗೂ ವರ್ಣಗಳ ತೇಪೆಗಳನ್ನು ಗಮನಿಸಬಹುದು ಹಿನ್ನೆಲೆಯಲ್ಲಿ ಸ್ತ್ರೀಯ ಮುಖಭಾಗಕ್ಕೆ ಬಳಸಿದ ವರ್ಣಗಳಲ್ಲಿ ನೆರಳಿನ ಪ್ರಭಾವವನ್ನು ಹೆಚ್ಚಿಸಿಕೊಂಡು ವಸ್ತ್ರದೊಂದಿಗೆ ಮಾಜ್‌ಮಾಡಲಾಗಿದೆ. ಒಂದೇ ಬದಿಯಿಂದ ಬೆಳಕಿನ ಪ್ರಭಾವವನ್ನು ಕಾಣಬಹುದು. ಈ ಕಲಾಕೃತಿಯಲ್ಲಿಯೂ ಪಾಶ್ಚಾತ್ಯ ಶೈಲಿಯನ್ನು ಕಾಣಬಹುದು.

ಶ್ರೀಮಂತ ಸ್ತ್ರೀ

ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಿದ್ದು, ಈ ಕಲಾಕೃತಿ ರಂಗ ವಿಲಾಸ್ ಪ್ಯಾಲೆಸ್ (ತಿರುವನಂತಪುರಂ)ನಲ್ಲಿ ಸಂಗ್ರಹಿಸಿಡಲಾಗಿದೆ. ಈ ಭಾವಚಿತ್ರದಲ್ಲಿ ಸ್ತ್ರೀಯ ಕೈಗಳನ್ನು ಕಟ್ಟಿಕೊಂಡು ಸ್ವಲ್ಪ ಓರೆಯಾಗಿ ನಿಂತುಕೊಂಡಿದ್ದಾಳೆ, ತುಂಬು ಮುಸುಗನ್ನು ಹಾಕಿಕೊಂಡಿದ್ದಾಳೆ. ಮುಖ ಭಾಗ ಹಾಗೂ ಕೈಗಳಿಗೆ ಕೇಸರಿ, ಹಳದಿ, ಕೆಂಪು, ಕಂದು, ಬಿಳಿ ವರ್ಣಗಳ ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಸ್ತ್ರೀಯ ಮುಖಭಾಗದಲ್ಲಿ ಉಬ್ಬುತಗ್ಗುಗಳನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ನೆರಳು ಬೆಳಕಿನ ಸಂಯೋಜನೆ ಉತ್ತಮವಾಗಿದ್ದು ಮೂಗಿನ ಭಾಗದಲ್ಲಿ ಬೆಳಕಿನ ಪ್ರಭಾವವನ್ನು ಮೆದುವಾಗಿ ಚಿತ್ರಿಕರಿಸಲಾಗಿದೆ. ಹಾಗೂ ಕೈಗಳನ್ನು ನೈಜವಾಗಿ ಚಿತ್ರಿಕರಿಸಿರುವುದನ್ನು ಕಾಣಬಹುದು.

ವಸ್ತ್ರದಲ್ಲಿ ವಿರುದ್ಧ ವರ್ಣಗಳ ಬಳಕೆಯು ಇಲ್ಲಿಯು ಕಾಣಬಹುದಾಗಿದೆ. ಕೆಂಪು ಕುಬ್ಬಸಕ್ಕೆ ನೀಲಿ, ಹಸಿರು, ಕಂದು ವರ್ಣದಿಂದ ಮೆದುಗೊಳಿಸಿದ ನೀಲಿ ಬಣ್ಣದ ಸೀರೆಯನ್ನು ಕಾಣಬಹುದು ಅದಕ್ಕೆ ರೇಷ್ಮೆಯ ಅಂಚನ್ನು ಉತ್ತಮವಾದ ನೆರಳು ಬೆಳಕಿನಿಂದ ತೋರಿಸಲಾಗಿದೆ. ಬೆಳಕಿನ ಪ್ರಭಾವ ಒಂದೇ ಕಡೆಯಿಂದ ಹರಿದಂತೆ ಚಿತ್ರಿಸಲಾಗಿದೆ. ಹಿಂಭಾಗದಲ್ಲಿ ಬಳಸಿದ ವರ್ಣ ಸೀರೆಯ ಅಂಚನ್ನು ಹೋಲುತ್ತದೆ. ವಸ್ತ್ರ ಹಾಗೂ ಹಿಂಭಾಗವನ್ನು ಮಿಶ್ರಣಮಾಡಲಾಗಿದೆ. ಒಂದು ಕಡೆ ನೆರಳು ಇನ್ನೊಂದು ಕಡೆ ಬೆಳಕು ಪ್ರಭಾವವನ್ನು ಗಮನಿಸಬಹುದು.

ಕಣ್ಣು ಕೈಗಳ ಭಾಗದ ಸೂಕ್ಷ್ಮವಾದ ರೇಖೆಗಳನ್ನು ಕಾಣಬಹುದು. ಪಾಶ್ಚಾತ್ಯ ವರ್ಣಗಳ ಬಳಕೆಯಿಂದ ಸ್ತ್ರೀಯ ಸೌಂದರ್ಯ ಹೆಚ್ಚಿಸಿರುವುದನ್ನು ಕಾಣಬಹುದು. ಅಂದರೆ ಅವರ ಕೈಗಳಲ್ಲಿ ಅನಾಟಮಿಕ ಗಮನಹರಿಸಿದಂತೆ ಕಾಣುವುದಿಲ್ಲ. ಅವನ ಉದ್ದೇಶ ಸೌಂದರ್ಯವನ್ನು ಹೆಚ್ಚಿಸುವುದು ನೋಡುಗನಿಗೆ ಆಕರ್ಷಕವಾಗಿ ಕಾಣುವಂತೆ ಚಿತ್ರಿಸಿದ್ದಾನೆ. ಇಂದಿಗೂ ನಾವು ನಮ್ಮ ಕಲಾಶಾಲೆಗಳಲ್ಲಿ ಈ ವಿಧಾನದಲ್ಲಿಯ ಭಾವಚಿತ್ರಗಳನ್ನು ಚಿತ್ರಿಸುತ್ತಿರುವುದನ್ನು ಕಾಣುತ್ತೇವೆ. ಒಂದೇ ಕಡೆಯಿಂದ ಬೆಳಕಿನ ಪ್ರಭಾವದ ರೀತಿ, ನಾವೆಲ್ಲರು ಚಿತ್ರಿಸುತ್ತ ಬಂದಿದ್ದೇವೆ ರವಿವರ್ಮನ ಈ ಶೈಲಿಯನ್ನು ಪಾಶ್ಚಾತ್ಯರ ಪ್ರಭಾವದಿಂದಲೆ ಪ್ರೇರಿತರಾಗಿ ಚಿತ್ರಿಸಿರುವುದನ್ನು ಕಾಣಬಹುದು. ನಾವು ಇಂದಿಗೂ ಇದನ್ನು ಮುಂದುವರೆಸುತ್ತಿದ್ದೇವೆ.

ಗುಜರಾತಿನ ಸ್ತ್ರೀ

ಈ ಭಾವಚಿತ್ರವನ್ನು ಗಮನಿಸಿದಾಗ ಗುಜರಾತಿನ ಸ್ತ್ರೀಯದು ಎಂದು ತಿಳಿಯಬಹುದು. ಶ್ರೀಮಂತ ಕುಟುಂಬಕ್ಕೆ ಸೇರಿದವಳಾಗಿದ್ದು ಸೌಮ್ಯತೆಯನ್ನು ಕಾಣಬಹುದು. ಕುರ್ಚಿಯ ಮೇಲೆ ಎರಡು ಕೈಗಳನ್ನು ಮುಂದಕ್ಕೆ ಇಟ್ಟುಕೊಂಡು ಕುಳಿತಿದ್ದಾಳೆ. ಈ ಭಾವಚಿತ್ರಕ್ಕೆ ಬಳಸಿದ ವರ್ಣಗಳು ಮುಖಭಾಗದಿಂದ ಕುತ್ತಿಗೆ ಕೈಗಳಿಗೆ, ಕೇಸರಿ, ಹಳದಿ, ಕೆಂಪು ಕಂದು ಬಿಳಿ ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕನ್ನು ತೋರಿಸಿರುವುದನ್ನು ಕಾಣಬಹುದು. ಉಬ್ಬು ತಗ್ಗುಗಳಿಂದ ಚಿತ್ರಿಸಲಾಗಿದೆ.



ಅವಳ ಆಭರಣಗಳಲ್ಲಿ ಪ್ರಧಾನವಾಗಿ ಮೂಗಿನ ನತ್ತಿನಿಂದ ಗುಜರಾತಿನ ಸ್ತ್ರೀಯೆಂದು ಹೇಳಬಹುದು. ಮುತ್ತಿನಹಾರ ಇತ್ಯಾದಿ ಆಭರಣಗಳನ್ನು ನೆರಳಿನ ಪ್ರಭಾವ ಹೆಚ್ಚಿದಂತೆ ಚಿತ್ರಿಸಲಾಗಿದೆ. ವಸ್ತ್ರದಲ್ಲಿ ಹೆಚ್ಚು ಕೈಚಳಕವನ್ನು ಕಾಣಬಹುದು. ಸೀರೆ ಹಾಗೂ ಕುಬ್ಬಸದ ವರ್ಣಗಳು ವಿರುದ್ಧ ವರ್ಣಗಳ ಬಳಕೆಯನ್ನು ಗಮನಿಸಬಹುದು. ಕುಬ್ಬಸವನ್ನು ರೇಷ್ಮೆ ಹಾಗೂ ಹಸಿರು ವರ್ಣಗಳಿಂದ ಚಿತ್ರಿಸಲಾಗಿದ್ದು, ಸೀರೆಯನ್ನು ಕೆಂಪು, ಹಸಿರು, ವರ್ಣಗಳಿಂದ ಚಿತ್ರಿಸಲಾಗಿದ್ದು, ಗಾಢಬಣ್ಣದ ಬಳಕೆ ಕಾಣಬಹುದು. ಆದರೆ ಮೆದು ವರ್ಣಗಳಿಂದ ವಿನ್ಯಾಸಗಳು ಕಾಣಬಹುದು. ಮುಸುಕು ಮತ್ತು ಅಂಚಿನ ಭಾಗಕ್ಕೆ ಹೊಳಪನ್ನು ನೀಡಲಾಗಿದೆ. ಇದರಿಂದ ಹೆಚ್ಚು ಆಕರ್ಷಕವಾಗಿ ಮೂಡಿ ಬಂದಂತಿದೆ.

ರೇಖೆಗಳು ಅಷ್ಟಾಗಿ ಕಾಣುವುದಿಲ್ಲ. ವಸ್ತ್ರದ ಮೇಲೆ ಸ್ವಲ್ಪ ಪ್ರಮಾಣದಲ್ಲಿ ತೋರಿದರು ವರ್ಣಗಳಿಂದ ಮೆದುಗೊಂಡಿದೆ ಈ ಕಲಾಕೃತಿಯಲ್ಲಿ ಪಾಶ್ಚಾತ್ಯದ ಪ್ರಭಾವ ಕಾಣಬಹುದು. ಸ್ತ್ರೀಯ ಕೈಭಾಗ ಹಾಗೂ ಮುಸುಕಿನ ಮೇಲೆ ಒಂದೇ ಕಡೆಯಿಂದ ಬೆಳಕಿನ ಪ್ರಭಾವವನ್ನು ಪಾಶ್ಚತ್ಯಶೈಲಿಯಲ್ಲಿ ಗುರುತಿಸಬಹುದು. ಹಿನ್ನಲೆಯನ್ನು ಮಿಶ್ರಣಮಾಡಿ ಭಾವಚಿತ್ರಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ಕಲಾಕೃತಿ ಭಾವನೆ ಮೂಡಿಸುವದನ್ನು ಸ್ವಲ್ಪ ಮಟ್ಟಿಗೆ ಎಡವಿರುವುದನ್ನ ಕಾಣಬಹುದು. ಆದರೂ ಭಾವಚಿತ್ರಗಳನ್ನು ಫೋಟೋಗ್ರಾಫಿ ರೀತಿಯಲ್ಲಿ ಚಿತ್ರಿಸುವ ಶೈಲಿಯನ್ನು ಭಾರತಕ್ಕೆ ತೋರಿಸುವಲ್ಲಿ ಮೊದಲಿಗರಾಗಿದ್ದಾರೆ.

ಕೇರಳದ ರಾಜಮನೆತನದ ಸ್ತ್ರೀ ಭಾವಚಿತ್ರ

ರಾಜ ರವಿವರ್ಮನವರಿಗೆ ಭಾವಚಿತ್ರ ರಚನೆ ನೆಚ್ಚಿನ ವಿಷಯವಾಗಿದ್ದು, ಸ್ತ್ರೀಯ ಭಾವಚಿತ್ರಗಳನ್ನು ಅವರಿಗಿಂತಲೂ ಸುಂದರ ಹಾಗೂ ನೈಜವಾಗಿ ಚಿತ್ರಿಸುವ ಶೈಲಿಯನ್ನು ತನ್ನದಾಗಿಸಿಕೊಂಡಿರುವುದುನ್ನು ಗಮನಿಸಬಹುದು. ಈ ಭಾವಚಿತ್ರದಲ್ಲಿ ಸ್ತ್ರೀಯು ಉದ್ದನೆಯ ಕೂದಲು ಸೌಮ್ಯವಾದ ಮುಖಭಾವದಿಂದ ನಿಂತುಕೊಂಡಿದ್ದಾಳೆ. ಅವಳ ಬಲಗೈಯನ್ನು ಮೇಜಿನ ಮೇಲೆ ಇಟ್ಟುಕೊಂಡಿದ್ದು ಎಡಗೈಯನ್ನು ಮಡಚಿ ಸೊಂಟವನ್ನು ಬಳಸಿದಂತೆ ಚಿತ್ರಿಸಲಾಗಿದೆ.

ಮುಖದಿಂದ ಕುತ್ತಿಗೆ ಹಾಗೂ ಕೈಗಳಿಗೆ ಹಳದಿ, ಕೆಂಪು, ಬಿಳಿ, ಕೇಸರಿ, ಕಂದು ಇತ್ಯಾದಿ ವರ್ಣಗಳಿಂದ ಮಿಶ್ರಣಗೊಳಿಸಿ ಮೆದುಗೊಳಿಸಲಾಗಿದ್ದು, ಉಬ್ಬು ತಗ್ಗುಗಳನ್ನು ಭಾವಕ್ಕೆ ತಕ್ಕಂತೆ ಚಿತ್ರಿಸಿ ನೆರಳು ಬೆಳಕಿನಿಂದ ಸಂಯೋಜನೆಗೊಳಿಸಲಾಗಿದೆ. ಮುಖಭಾಗದಲ್ಲಿ ಒಂದುಭಾಗ ಬೆಳಕು ಇನ್ನೊಂದು ಭಾಗ ನೆರಳನ್ನು ಕಾಣಬಹುದು. ಕೈಯ ಭಾಗದಲ್ಲಿಯ ನೆರಳಿನ ಪ್ರಭಾವವನ್ನು ಕಾಣಬಹುದು. ಸರಳ ಹಾಗೂ ವಿಜೃಂಭಿಸುವ ವಿನ್ಯಾಸಗಳನ್ನು ಆಭರಣಗಳಲ್ಲಿ ಕಾಣಬಹುದು. ಹಸಿರು, ಕಂದು, ಮುಖಗಳ ಬಳಕೆಯಿಂದ ಮೆರುಗನ್ನು ನೀಡಲಾಗಿದೆ. ಸ್ತ್ರೀಯ ವಸ್ತ್ರದಲ್ಲಿ ರೇಷ್ಮೆಯ ಹೊಳಪು ಕಾಣಬಹುದು. ಬೆಳಕಿನ ಪ್ರಭಾವವನ್ನು ಹೆಚ್ಚಿದಂತೆ ತೋರಿದರು ಅದಕ್ಕೆ ಸರಿಯಾದ ರೇಷ್ಮೆಯ ಪಟ್ಟಿಯನ್ನು ಮಾಡಿ ಇನ್ನಷ್ಟು ಹೊಳಪುಗಳ ವಸ್ತ್ರಗಳ ರಚನೆಯುನ್ನು ಕಾಣಬಹುದು. ನೆರುಗೆಗಳು ಉತ್ತಮವಾಗಿಮೂಡಿದ್ದು. ಹಿನ್ನಲೆಯೊಂದಿಗೆ



ಮಿಶ್ರಣಮಾಡಲಾಗಿದೆ. ಮೇಜಿನ ಮೇಲೆ ವಸ್ತ್ರ ಹಾಗೂ ಹೂವನ್ನು ಉತ್ತಮವಾದ ಸಮತೋಲನ ಆಗುವಂತೆ ಬಳಸಿರಬಹುದು.

ಭಾವಚಿತ್ರದಲ್ಲಿಯ ರೇಖೆಗಳಿಂದಲೆ ವ್ಯಕ್ತಿಯ ಭಾವನೆಗಳನ್ನು ಸೆರೆಹಿಡಿಯಬಹುದಾದ ನೈಪುಣ್ಯತೆ ಕಾಣಬಹುದು. ಆದರೆ ರವಿವರ್ಮನ ಕಲಾಕೃತಿಯಲ್ಲಿ ವರ್ಣಗಳ ಬಳಕೆಯಿಂದಲೆ ಅವರ ಭಾವ ರೂಪವನ್ನು ಸೆರೆಹಿಡಿದಿರುವುದನ್ನು ಕಾಣಬಹುದು. ಪಾಶ್ಚಾತ್ಯರ ವರ್ಣಗಳ ಬಳಕೆಯಿಂದ ಭಾರತೀಯ ಭಾವಚಿತ್ರಗಳನ್ನು ಹೆಚ್ಚು ಆಕರ್ಷಕವಾಗುವಂತೆ ಚಿತ್ರಿಸಿದ ಸಾಧನೆ ಇವರದು.

ಮಹಾರಾಣಿ ಸೇತುಲಕ್ಷ್ಮಿಬಾಯಿ

ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಿದ್ದು, ಪ್ರಸ್ತುತ ರಂಗ ವಿಲಾಸ್ ಪ್ಯಾಲಸ್ (ತಿರುವನಂತಪುರಂ)ನಲ್ಲಿ ಸಂಗ್ರಹಿಸಿಡಲಾಗಿದೆ. ಭಾವಚಿತ್ರ ರಚಿಸುವಲ್ಲಿ ರವಿವರ್ಮ ಆಸಕ್ತಿ ಹೆಚ್ಚಿತೆಂಬುದನ್ನು ತಿಳಿಯಬಹುದಾಗಿದೆ. ಅವರ ಮೆಚ್ಚಿನ ಕೃತಿಗಳಲ್ಲಿ ಭಾವಚಿತ್ರ ವ್ಯಕ್ತಿಚಿತ್ರಗಳನ್ನು ಚಿತ್ರಿಸುವಲ್ಲಿ ಕಲಾವಿದನ ನೈಪುಣ್ಯತೆಯನ್ನು ಕಾಣಬಹುದು. ಈ ಚಿತ್ರ ನೈಜವಾಗಿ ಮೂಡಿಬಂದಿರುವುದನ್ನು ಕಾಣಬಹುದು. ಗುಂಗುರು ಕೂದಲನ್ನು ಹೊಂದಿದ ಸ್ತ್ರೀ ಕೇರಳದ ವಸ್ತ್ರದಲ್ಲಿದ್ದು, ಶಾಲನ್ನು ಹೊಂದಿಕೊಂಡು ನಿಂತಿದ್ದಾಳೆ, ಅವಳ ಬಲಗೈಯನ್ನು ಸೋಪಾದ ಮೇಲೆ ಇಟ್ಟುಕೊಂಡಿದ್ದಾಳೆ, ಶಾಲನ್ನು ಎಡಗೈಯಲ್ಲಿ ಹಿಡಿದುಕೊಂಡಿದ್ದಾಳೆ.

ಸ್ತ್ರೀಯ ಕೂದಲೂ ಗುಂಗುರಾಗಿದ್ದು, ಹಾಗೂ ಮುಖಭಾಗದಲ್ಲಿ ಕುತ್ತಿಗೆ ಹಾಗೂ ಕೈಗಳಿಗೆ ಹಳದಿ, ಕೆಂಪು, ಕೇಸರಿ, ಕೆಂದು, ಬಿಳಿ, ವರ್ಣಗಳಿಂದ ಮೆದುಗೊಳಿಸಲಾಗಿದೆ. ಕಣ್ಣು, ಮೂಗು, ಬಾಯಿ ಕೆನ್ನೆಗಳಲ್ಲಿ ಉಬ್ಬುತಗ್ಗುಗಳನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಆಭರಣಗಳಲ್ಲಿ ಸರಳತೆಯನ್ನು ಕಾಣಬಹುದು. ಹಾಗೂ ವಿಜೃಂಭಿಸುವ ಹೊಳಪನ್ನು ಮೆರಗನ್ನು ಕಾಣಬಹುದು. ಕಲಾವಿದನ ತಾಳ್ಮೆಯನ್ನು ಈ ಕಲಾಕೃತಿಯಲ್ಲಿ ಗಮನಿಸಬಹುದು. ವಸ್ತುಗಳನ್ನು ರೇಷ್ಮೆಗಿಂತಲೂ ಹೊಳಪುಳ್ಳುವಂತೆ ಚಿತ್ರಿಸಲಾಗಿದೆ. ಬಿಳಿ, ಹಳದಿ ವರ್ಣದ ಮೆದುಗೊಳಿಸಿದ್ದು, ಶಾಲನ್ನು ಪ್ರಧಾನವಾಗಿ ಚಿತ್ರಿಸಿರುವುದನ್ನು ತೋರುತ್ತದೆ. ಅದರ ಮೇಲೆ ಸರಳವಿನ್ಯಾಸಗಳನ್ನು ಕಾಣಬಹುದು. ಸೂಫದ ಮೇಲೆ ಶಾಲಿನ ವರ್ಣಗಳ ಬಳಕೆಯನ್ನು ಕಾಣಬಹುದು. ಮಹಾರಾಜರ ಇಚ್ಛೆಯ ಮೇರೆಗೆ ಕಲಾಕೃತಿಗಳ ರಚನೆಯನ್ನು ಕಾಣಬಹುದು.

ಇಲ್ಲಿಯ ರೇಖೆಗಳನ್ನು ಸೂಕ್ಷ್ಮವಾಗಿ ಬಳಸಿಕೊಂಡಿದ್ದು ವರ್ಣಗಳಿಂದ ಮರ್ಜ್‌ಮಾಡಲಾಗಿದೆ. ಹಾಗೂ ವಸ್ತ್ರವು ಮುದಿಡಿರುವ ಭಾಗವನ್ನು ಉತ್ತಮವಾಗಿ ಚಿತ್ರಿಸಲಾಗಿದೆ. ಈ ಭಾವಚಿತ್ರದಲ್ಲಿಯ ಪಾಶ್ಚಾತ್ಯದ ಪ್ರಭಾವ ಕಾಣಬಹುದು. ಹಿನ್ನೆಲೆಯಲ್ಲಿ ಕಂಬ, ಗೋಡೆಗೆ ಕಂದು ಮಿಶ್ರಣದಿಂದ ಮೆದುಗೊಳಿಸಿ ಭಾವಚಿತ್ರಕ್ಕೆ ಹಿನ್ನೆಲೆಗಿಂತಲೂ ಹೆಚ್ಚು ಒತ್ತುಕೊಡಲಾಗಿದೆ.

ಊರ್ವಶಿ

ಈ ಕಲಾಕೃತಿಯಲ್ಲಿ ಸ್ತ್ರೀಯನ್ನು ನಗ್ನವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಉದ್ದನೆಯ ಗುಂಗುರು



ಕೂದಲೂ ಹಾಗೂ ಉಬ್ಬುಗಳನ್ನು ಗಮನಿಸಿದರೆ ಕೇರಳಿಯ ಸ್ತ್ರೀ ಎಂದು ಗುರುತಿಸಬಹುದು. ಈಕೆಯು ನಿದ್ದೆಯಲ್ಲಿ ನಿರತಳಾಗಿರುವಂತೆ ಚಿತ್ರಿಸಲಾಗಿದೆ. ಅವಳ ಜೊತೆ ಸಂಗೀತದ ವಾದ್ಯವನ್ನು ಕಾಣಬಹುದು. ಸ್ತ್ರೀಯ ಎದೆಭಾಗವನ್ನು ನಗ್ನವಾಗಿರಿಸಿ ಪಾರದರ್ಶಕದಂತೆ (ತೆಳುವಸ್ತ್ರವನ್ನು) ಕಾಣಬಹುದು.

ಮುಖಭಾಗದಿಂದ ಕುತ್ತಿಗೆ, ಎದೆ, ಕೈಗಳಿಗೆ ಹಳದಿ, ಕೇಸರಿ, ಕೆಂಪು Burnt Sienna, Naples, Yellow ವರ್ಣಗಳಿಂದ ಮೆದುಗೊಳಿಸುಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಕಲಾವಿದನನ್ನು ಪಾಶ್ಚಾತ್ಯದ ಪ್ರಭಾವವು ಈ ಕಲಾಕೃತಿಯಲ್ಲಿ ಎದ್ದುತೋರುತ್ತದೆ. ಹಾಗೂ ಪಾರದರ್ಶಕಕ್ಕೆ ಬಳಸಿದ ಬಿಳಿ, ಹಳದಿ, ನೀಲಿ, tyory Black, ವರ್ಣಗಳಿಂದ ವಿಶಾದವಾಗಿ ತೋರಿಸಿರುವುದನ್ನು ಗಮನಿಸಬಹುದು. ಸಂಗೀತದ ವಾದ್ಯವನ್ನು ಅವಳು ಪಕ್ಕದಲ್ಲಿಯೇ ಇದ್ದು ಅವಳ ಮೇಲೆ ಇಟ್ಟುಕೊಂಡು ನಿದ್ರಿಸುತ್ತಿದ್ದಾಳೆ. ಅವಳು ವಸ್ತ್ರದಲ್ಲಿ ಮುದುಡಿರುವ ಭಾಗವನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಅವಳ ತಲೆಯ ಹಿಂಭಾಗದಲ್ಲಿ ಪಿಲೋತರದಂತೆ ತೋರುತ್ತದೆ. ಅದರ ಮೇಲೆ ಉತ್ತಮವಾದ ವರ್ಣಗಳ ಬಳಕೆಯಾಗಿದೆ. ಕೆಂಪು, ಕೆಂದು ಹಳದಿ ವರ್ಣದಿಂದ ರೇಷ್ಮೆಯ ಪಟ್ಟಿಯನ್ನು ಕಾಣಬಹುದು. ಅವಳಿಂಭಾಗದಲ್ಲಿ Burnt Umber, Burnt, Sienna, Nory Black ಯಿಂದ ನೆರಳಿನಿಂದ ಕೂಡಿದ ಹಾಗೂ ಸ್ತ್ರೀಯ ಕೆಲವುಭಾಗಗಳಲ್ಲಿ ಮಿಶ್ರಣಮಾಡಲಾಗಿದೆ. ಉತ್ತಮವಾದ ವರ್ಣಗಳ ಸಮತೋಲನವನ್ನು ಕಾಣಬಹುದು.

ರೇಖೆಗಳ ಬಳಕೆಗೆ ಬಂದಾಗ ಕಡಿಮೆ ಪ್ರಮಾಣದಲ್ಲಿ ಗುರುತಿಸಬಹುದು. ಸಂಗೀತದ ವಾದ್ಯದ ಮೇಲೆ ನೇರ ರೇಖೆಗಳನ್ನು ಕಾಣಬಹುದು. ಸ್ತ್ರೀಯ ಕಣ್ಣು ಕುತ್ತಿಗೆ, ಕೈತೋಳು ಅಲ್ಲಲ್ಲಿ ಸೂಕ್ಷ್ಮವಾಗಿರುವ ವರ್ಣಗಳಿಂದ ಮೆದುಗೊಳಿಸಲಾಗಿದೆ. ಕಲಾವಿದ ಹೊಸತನಕ್ಕೆ ಉತ್ತಮವಾದ ಪ್ರಯತ್ನ ಎನ್ನಬಹುದು.

ಕಲಾವಿದ ಭಾವನೆಗಳಿಗೆ ರೇಖೆಗಳಿಗೆ ಗಮನ ಹರಿಸುವಲ್ಲಿ ಸ್ವಲ್ಪ ವಿಫಲನಾಗಿರುವುದು ಗಮನಿಸಬಹುದು. ಪಾಶ್ಚಾತ್ಯರ ಶೈಲಿಯಲ್ಲಿ ನ್ಯೂಡ್ ಕಲಾಕೃತಿಯನ್ನು ಚಿತ್ರಿಸುವಲ್ಲಿ ಅವಳ ಮುಖಭಾವನೆಗೆ ಗಮನ ತೋರಿದಂತೆ ಕಾಣದು, ನಿದ್ರೆಯಲ್ಲಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಅವಳ ಕಣ್ಣುಗಳು ಆ ಭಾವತೋರದ್ದಂತಿವೆ. ಕಲಾವಿದನನ್ನು ವರ್ಣಗಳಲ್ಲಿನ ಹೊಳಪು ನೋಡುಗನ ಗಮನ ಸೆಳೆಯುವಂತಹ ಕಲಾಕೃತಿ ಇದಾಗಿದೆ. ಒಟ್ಟಾರೆಯಾಗಿ ಉತ್ತಮ ಕಲಾಕೃತಿಗೊಳ್ಳಲಾಗಿದೆ.

ರವಿವರ್ಮನ ಹೊಸಶೈಲಿಯನ್ನು ಪಾಶ್ಚತ್ಯರ ಕಲ್ಪನೆಗೆ ಹತ್ತಿರವಾದ ವಿಷಯಗಳನ್ನು ಬಳಸಿಕೊಂಡು ಭಾರತೀಯ ಸ್ತ್ರೀಯರನ್ನು ಮಾಡೆಲ್‌ಗಳನ್ನಾಗಿಸಿಕೊಂಡು ಹೊಸ ಹೊಸ ಪ್ರಯೋಗಳಲ್ಲಿ ಈ ಕಲಾಕೃತಿಯೂ ಒಂದಾಗಿದೆ. ನಗ್ನ ಚಿತ್ರಗಳನ್ನು ಮಾಡುವಲ್ಲಿ ಮೊದಲಿಗನೂ ಎಂದರೆ ತಪ್ಪಾಗಲಾರದು ಅಂದಿನಿಂದ ಇಂದಿನವರೆಗೂ ಕೆಲವು ಕಲಾ ಕಾಲೇಜುಗಳಲ್ಲಿ ನ್ಯೂಡ್ ಪೆಂಟೀಂಗ್‌ಗಳನ್ನು ಮಾಡುತ್ತಿರುವುದನ್ನು ಗಮನಿಸಬಹುದು. ಪಾಶ್ಚಾತ್ಯದ ಪ್ರಭಾವವು ರವಿವರ್ಮನನ್ನು ಮಾತ್ರವಲ್ಲದೆ ಇಂದಿನ ಕಲಾವಿದರು

ಇದೇ ದಾರಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು. ಮೊದಲ ಪ್ರಯತ್ನದಲ್ಲಿ ರವಿವರ್ಮನ ಮೇಲುಗೈಯನ್ನು ಕಾಣಬಹುದು. ಅದಕ್ಕೆ ಪ್ರೇರಣೆಯನ್ನು ಸ್ತ್ರೀಯರೆ ಎಂದರೆ ತಪ್ಪಾಗಲಾರದು. ರವಿವರ್ಮನು ಹೆಚ್ಚು ಹೆಚ್ಚು ಸ್ತ್ರೀಯ ಚಿತ್ರಗಳನ್ನು ರಚಿಸುವಲ್ಲಿಯು ಉನ್ನತ ಮಟ್ಟಕ್ಕೆ ತಂದಿರಬಹುದುದೆಂದು ಹೇಳಬಹುದು.

ಹಾಲು ಮಾರುವ ಸ್ತ್ರೀ

ಈ ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಿದ್ದು, ಜಗನ್‌ಮೋಹನ ಪ್ಯಾಲಸ್ ಮೈಸೂರ್‌ನಲ್ಲಿ ಸಂಗ್ರಹಗೊಂಡಿದೆ. ಈ ಭಾವಚಿತ್ರವನ್ನು ಮುಖಭಾಗದಿಂದ ಕೈಗಳವರೆಗೆ ಚಿತ್ರಿಸಲಾಗಿದೆ. ಸ್ತ್ರೀಯು ಅವಳ ತಲೆಯಮೇಲೆ ತುಂಬು ಮುಸುಖನ್ನು ಹಾಕಿಕೊಂಡಿದ್ದಾಳೆ, ಅವಳು ಬಲಗೈಯಲ್ಲಿ ಮುಸುಗನ್ನು ಕೈಯಲ್ಲಿ ಹಿಡಿದುಕೊಂಡಿದ್ದಾಳೆ. ಎಡಗೈಯಲ್ಲಿ ಹಾಲಿನ ಚರಿಗೆಯನ್ನು ಕಾಣಬಹುದು. ಈ ಭಾವಚಿತ್ರವು ನೈಜವಾಗಿ ಮೂಡಿಬಂದಿದ್ದು ಕಲಾವಿದನು ಅತೀ ಸರಳ ಮೈವಳಿಕೆಯಿಂದ ಕಲಾಕೃತಿಯನ್ನು ಚಿತ್ರಿಸಿದ್ದಾರೆ. ಜಲವರ್ಣದ ಕಲಾಕೃತಿ ಇದಾಗಿದೆ.

ಕಡಿಮೆ ಪ್ರಮಾಣದ ವರ್ಣ ಬಳಕೆಯನ್ನು ಈ ಕಲಾಕೃತಿಯಲ್ಲಿ ಬಳಸಲಾಗಿದೆ. ಮುಖದ ಭಾಗ ಹಾಗೂ ಕೈಗಳಿಗೆ Burnt Sienna, Cadmium orange, Gamboge Hue, ಕಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಕಣ್ಣು, ಮೂಗು, ತುಟಿ ಕೆನ್ನೆಯ ಭಾಗದಲ್ಲಿ ಉತ್ತಮವಾದ ನೆರಳು ಬೆಳಕಿನಿಂದ ಮೆದುಗೊಳಿಸಲಾಗಿದೆ. ಉಬ್ಬು ತಗ್ಗುಗಳೊಂದಿಗೆ ಮುಖದ ಮುದ್ದುಭಾವನೆಯನ್ನು ಕುಂಚದ ಮೂಲಕ ಸೆರೆ ಹಿಡಿದಿದ್ದಾಳೆ. ಕಲಾವಿದ ರವಿವರ್ಮನ ವರ್ಣಗಳ ಮೂಲಕ ನೈಜ ರೂಪವನ್ನು ನೀಡುವ ಕಲಾವಂತಿಕೆ ಇವರದು. ಕೈಗಳಲ್ಲಿ ಬೆರಳು ಹಾಗೂ ಮೊಣಕೈಯ ಭಾಗದಲ್ಲಿ ಉತ್ತಮವಾದ ನೆರಳು ಬೆಳಕನ್ನು ಸೆರೆಹಿಡಿಯಲಾಗಿದೆ.

ಕೈಯಲ್ಲಿ ಇರುವ ಚರುಗಿ ಅದರ ಮೇಲಿನ ಇನ್ನೊಂದು ಚಿಕ್ಕ ಚರುಗಿಯು ಸಹ ಸ್ತ್ರೀಯ ಮೇಲಿನ ವರ್ಣನೆಗೆ ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳನ್ನು ತೋರಿಸಿದ್ದಾರೆ. ಕಲಾವಿದ ಹೊಳಪಿಗೆ ಹೆಚ್ಚು ಒತ್ತುಕೊಟ್ಟಿರುವುದು ಗಮನಿಸಬಹುದು. ಸ್ತ್ರೀಯ ವಸ್ತ್ರದಲ್ಲಿ ಕಂದು, ಕೆಂಪು, Burnt Sicnna, Orange, ಹಳದಿ, Yellw Ocbre ಇತ್ಯಾದಿ ಬಳಸಿ ಮೆದುಗೊಳಿಸಲಾಗಿದೆ ಸೀರೆ ಮುದುಡಿರುವ ಭಾಗವನ್ನು ಅತ್ಯಂತ ಆಕರ್ಷಕವಾಗಿ ಕಾಣುವಂತೆ ಚಿತ್ರಿಸಲಾಗಿದೆ. ಸೀರೆಯಲ್ಲಿ ಬೇರೆ ವರ್ಣದ ಪಟ್ಟಿ ಇದ್ದು ಅದಕ್ಕೆ ಹಚರುಗಿರ ವರ್ಣ ಒಂದೇಯಾಗಿರುವುದು ಗಮನಿಸಬಹುದು. ಸ್ತ್ರೀಯ ಕುಬ್ಬಸ ಹಾಗೂ ಕೈಬಳೆಯ ವರ್ಣ ಹಸಿರು, ಹಳದಿ Burnt Sienna, ಇತ್ಯಾದಿ ವರ್ಣಗಳಿಂದ ಹೊಳಪು ನೀಡಲಾಗಿದೆ. ಸ್ತ್ರೀ ಹಿಂಭಾಗವನ್ನು ಚರುಗೆಗೆ ಬಳಸಿದ ವರ್ಣವನ್ನು ಒಂದೇ ಪ್ರಮಾಣದಲ್ಲಿ ಬಳಸಿ ಸ್ತ್ರೀ ಸೊಂಟದ ಭಾಗದವರೆಗೆ ಮರ್ಜ್ ಮಾಡಲಾಗಿದೆ. ಉತ್ತಮವಾದ ವರ್ಣಗಾರಿಕೆಯಾಗಿದ್ದು ಹಾಗೂ ವರ್ಣದ ಸಮತೋಲನವನ್ನು ಕಾಣಬಹುದು. ಕಲಾವಿದನು ವರ್ಣಗಳನ್ನು ಸೂಕ್ಷ್ಮ ರೀತಿಯಲ್ಲಿ ಬಳಸಿರುವುದು



ಕಾಣಬಹುದು. ವರ್ಣ ಬಳಕೆಯ ಜೊತೆಗೆ ಸ್ತ್ರೀಯಲ್ಲಿ ಸೂಕ್ಷ್ಮವಾದ ಹೊರ ರೇಖೆಗಳನ್ನು ಗಮನಿಸಬಹುದು. ಸ್ತ್ರೀಯ ಕೆನ್ನೆ, ಕಣ್ಣಿನ ತುದಿ, ಮೂಗು, ತುಟಿ, ಕೈಗಳ ಭಾಗ, ಬೆರಳು, ಚರುಗೆಯಲ್ಲಿ ಸೂಕ್ಷ್ಮವಾದ ಹಾಗೂ ವಸ್ತ್ರದಲ್ಲಿ ಗಾಢವಾದ ರೇಖೆಗಳನ್ನು ಬಳಸಿ ವರ್ಣಗಳ ಮೂಲಕ ಮೆದುಗೊಳಿಸಲಾಗಿದೆ. ರೇಖೆಗಳ ಬಳಕೆಯನ್ನು ಕಲಾವಿದನು ಅತ್ಯುತ್ತಮವಾಗಿ ಬಳಸಿರುವುದನ್ನು ಕಾಣಬಹುದು. ಈ ಕಲಾ ಕೃತಿ ನೈಜತೆಯಿಂದ ಕೂಡಿದ್ದು ಉತ್ತಮವಾದ ಕಲಾಕೃತಿಯಾಗಿದೆ.

ನಿದ್ರೆಯಲ್ಲಿರುವ ಸ್ತ್ರೀ ಚಿತ್ರ

ಈ ಚಿತ್ರವು ಚಿತ್ರ ಆರ್ಟ್‌ಗ್ಯಾಲರಿ ತಿರುವನಂತಪುರ್‌ಂನಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯಲ್ಲಿ ಸ್ತ್ರೀಯು ನಿದ್ರೆಯಲ್ಲಿರುವ ಭಂಗಿಯು ಕಲಾವಿದ ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಅವಳ ಕೈಯಲ್ಲಿ ವೈಲ್ಲಿನ್ ಹಿಡಿದುಕೊಂಡು ದಿಂಬುವಿನ ಮೇಲೆ ಮಲಗಿರುವ ಈ ಕೃತಿಯಲ್ಲಿ ಸ್ತ್ರೀಯು ಗುಂಗುರು ಕೂದಲನ್ನು ಕಾಣಬಹುದು. ಮುಖದಿಂದ ಕುತ್ತಿಗೆ ಹಾಗೂ ಕೈಗಳಿಗೆ ಹಳದಿ, ಕೆಂಪು, ಕೇಸರಿ, ಬಿಳಿ, ಕಂದು ಇತ್ಯಾದಿ ವರ್ಣಗಳನ್ನು ಬಳಸಿ ಮೆರುಗುಗೊಳಿಸಲಾಗಿದೆ. ಸ್ತ್ರೀಯ ಮುಖದ ಭಾವನೆಗಳನ್ನು ಮನಸೆಳೆಯುವಂತೆ ಚಿತ್ರಿಸಲಾಗಿದೆ. ಉತ್ತಮವಾಗಿ ಉಬ್ಬುತಗ್ಗುಗಳನ್ನು ಮೃದುಗೊಳಿಸಲಾಗಿದೆ. ಮುಖದ ಅರ್ಧಭಾಗಗಳಲ್ಲಿ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಉತ್ತಮ ರೀತಿಯಲ್ಲಿ ಬೆಳಕಿನ ಪರಿಣಾಮವನ್ನು ಕಾಣಬಹುದು.

ಸ್ತ್ರೀಯ ಎದೆ ಭಾಗವನ್ನು ನಗ್ನವಾಗಿ ಚಿತ್ರಿಸಿ ಅದಕ್ಕೆ ತೆಳುವಾದ ಪಾರದರ್ಶಕದ ವಸ್ತ್ರವನ್ನು ಕಾಣಬಹುದು. ಅದಕ್ಕೆ ಬಿಳಿ, ನೀಲಿ, ಕೆಂಪು ವರ್ಣದಿಂದ ನೆರಳು ಬೆಳಕನ್ನು ತೋರಿಸಲಾಗಿದೆ. ಅದೇ ವರ್ಣದಿಂದ ಸ್ತ್ರೀಯ ವಸ್ತ್ರವನ್ನು ಕಾಣಬಹುದು. ದಿಂಬಿಗೆ ಬಳಸಿರುವ ವರ್ಣಗಳು ಕೆಂಪು, ಹಳದಿ, ಕಪ್ಪು, ನೀಲಿ ಕ್ರಿಂಜಾನ್‌ರೇಟ್, ಇತ್ಯಾದಿ ವರ್ಣಗಳಿಂದ ಮೆದುಗೊಳಿಸಿ ನೆರಳು ಬೆಳಕನ್ನು ತೋರಿಸಲಾಗಿದೆ. ಮಲಗಿರುವ ರೀತಿ ನೈಜತೆಗಿಂತಲೂ ಆಕರ್ಷಕವಾಗಿದೆ. ಅವಳ ಕೈಯಲ್ಲಿರುವ ವೈಲಿನ್ ಹಾಗೂ ಕೆನ್ನೆಗೆ ಬಳಸಿದ ವರ್ಣಗಳು ಕೆಂಪು, ಕಂದು, ಕಪ್ಪು ಇತ್ಯಾದಿ ವರ್ಣಗಳನ್ನು ಬಳಸಿ ಹಿನ್ನೆಲೆಯನ್ನು ಮಿಶ್ರಣ ಮಾಡಲಾಗಿದೆ. ವೈಲಿನ್‌ಗೆ ನೆರಳು ಬೆಳಕನ್ನು ಕಾಣಬಹುದು. ಈ ಕಲಾಕೃತಿಯ ಕಲಾವಿದನ ಕಲಾವಂತಿಕೆಯನ್ನು ಕಾಣಬಹುದು.

ರೇಖೆಗಳು ಕಡಿಮೆ ಪ್ರಮಾಣದಲ್ಲಿ ಗುರುತಿಸಬಹುದು. ಸ್ತ್ರೀಯ ಕಣ್ಣು, ಮೂಗು, ತುಟಿ, ಕಿವಿ, ಕೈಬೆರಳು, ವೈಲಿನ್‌ಗಳಲ್ಲಿ ಸೂಕ್ಷ್ಮ ರೇಖೆಗಳನ್ನು ವರ್ಣದಿಂದ ಮೆದುಗೊಳಿಸಲಾಗಿದೆ. ಪಾಶ್ಚಾತ್ಯರ ನ್ಯೂಡ್ ಕಲಾಕೃತಿಗಳ ಪ್ರಭಾವದಿಂದ ಕಲಾವಿದ ರಾಜರವಿವರ್ಮ ಈ ಭಾರತೀಯ ಸಂಪ್ರದಾಯಕ್ಕೆ ಬಳಸಿಕೊಂಡಿರುವ ರೀತಿ ಗಮನಾರ್ಹ. ಇಂತಹ ಪ್ರಯತ್ನಗಳಿಂದಲೇ ರವಿವರ್ಮ ಉತ್ತಮ ಕಲಾವಿದನಾದನೆಂದರೆ ತಪ್ಪಾಗಲಾರದು, ಇಲ್ಲಿ ಅಕಾಡೆಮಿ ಶೈಲಿಯನ್ನು ಕಾಣಬಹುದು, ಉತ್ತಮವಾದ ಕಲಾಕೃತಿಯಾಗಿದೆ.

ಇಬ್ಬರ ಭಾವಚಿತ್ರ

ಕಲಾವಿದ ಇಬ್ಬರನ್ನು ಬಳಸಿಕೊಂಡು ಚಿತ್ರ ರಚಿಸುವುದನ್ನು ಕಾಣಬಹುದು. ಈ ರೀತಿಯ ಇಬ್ಬರ ಭಾವಚಿತ್ರವನ್ನು ಚಿತ್ರಿಸುವುದನ್ನು ಇಂದಿಗೂ ಕಾಣಬಹುದು. ಕೇರಳದ ಶೈಲಿಯ ವಸ್ತ್ರ ಧರಿಸಿರುವುದನ್ನು ಕಾಣಬಹುದು. ಬಲಭಾಗದ ಸ್ತ್ರೀಯು ಅವಳ ಕೂದಲೂ ಎಡಭಾಗಕ್ಕೆ ಸುತ್ತಿಕೊಂಡಿದ್ದಾಳೆ, ಉತ್ತಮವಾದ ವರ್ಣಗಾರಿಕೆ ನೆರಳು ಬೆಳಕನ್ನು ಕಾಣಬಹುದು. ಮುಖಭಾವನೆಯಲ್ಲಿ ಸರಳತೆ ಹಾಗೂ ಉಬ್ಬುತಗ್ಗುಗಳಿಂದಲೂ ಆಕೃತಿಯಲ್ಲಿ ನೈಜರೂಪ ಕಾಣಬಹುದು. ಹಳದಿ, ಹಸಿರು, ಕೆಂಪು, ಕೇಸರಿ ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ.

ಕಣ್ಣುಗಳಲ್ಲಿ ಏನನ್ನೋ ದಿಟ್ಟಿಸಿನೋಡುವಂತ ಭಾವನೆಯನ್ನು ಕಾಣಬಹುದು. ನೆರಳು ಬೆಳಕಿನ ಪ್ರಭಾವ ಉತ್ತಮವಾಗಿದ್ದು, ವಯಸ್ಸಾದ ರೇಖೆಗಳನ್ನು ಕಾಣಬಹುದು. ವಿಭೂತಿನಯನ್ನು ಧರಿಸಿರುವುದು ನೈಜವಾಗಿ ಚಿತ್ರಿಸಲಾಗಿದೆ. ಅವಳ ಮೇಲಿನ ಶಲ್ಯ ಹಾಗೂ ವಸ್ತ್ರವನ್ನು ನೈಜತೆಗಿಂತಲೂ ಆಕರ್ಷಕವಾಗಿ ಚಿತ್ರಿಸಲಾಗಿದೆ. ಅವಳ ಪಕ್ಕದಲ್ಲಿರುವ ಚಿಕ್ಕ ಹುಡುಗಿಯ ಸೌಮ್ಯವಾದ ಭಾವನೆಯನ್ನು ಹಾಗೂ ವಿಜೃಂಭಿಸುವ ಆಭರಣಗಳನ್ನು ಮತ್ತು ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು.

ಕಲಾವಿದನ ನೈಪುಣ್ಯತೆ ತಾಳ್ಮೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಸ್ತ್ರೀಯು ಕಿವಿಯ ಹೋಲು ಹರಿದಿರುವುದನ್ನು ನೈಜವಾಗಿಯೇ ಚಿತ್ರಿಸಲಾಗಿದೆ. ಶ್ರೀಮಂತರ ಬೇಡಿಕೆಯಂತೆ ಸೌಂದರ್ಯ ಹೆಚ್ಚಿರುವಂತೆ ಚಿತ್ರಿಸುವುದು ಕಲಾವಿದನ ಕರ್ತವ್ಯ ಎನ್ನಬಹುದು. ಯಂತವರನ್ನೂ ಸುಂದರವಾಗಿ ಚಿತ್ರಿಸುವ ಕೌಶಲ್ಯ ರವಿವರ್ಮನವರದು.

ಮಲೆಯಾಳಿ ಸ್ತ್ರೀ ಚಿತ್ರಣ

ಈ ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚನೆಯಾಗಿದ್ದು, ಇದು ಶ್ರೀಭವಾನಿ ಮ್ಯೂಸಿಯಂ ಹೈದ್ರಾಬಾದ್‌ನಲ್ಲಿ ಸಂಗ್ರಹಗೊಂಡಿದೆ. ಈ ಭಾವಚಿತ್ರಣದಲ್ಲಿ ಕಲಾವಿದ ಸ್ತ್ರೀಯ ಭಾವನೆಯನ್ನು ಸೆರೆಯಿಡಿಸುವಲ್ಲಿ ಹೆಚ್ಚಿನ ಗಮನವನ್ನು ಕಾಣಬಹುದು. ಗುಂಗುರು ಕುದಲಿನ ಸ್ತ್ರೀಯು ಓರೆಮುಖವಾಗಿದ್ದು, ಅವಳ ಎದೆಭಾಗವನ್ನು ಪರದರ್ಶಕವಾಗಿ ಚಿತ್ರಿಸಲಾಗಿದೆ. ವಸ್ತುವನ್ನು ಹಿಡಿದುಕೊಂಡಿದ್ದಾಳೆ, ಮುಖಭಾವನೆಯಲ್ಲಿ ಸ್ತ್ರೀಯು ಏನನ್ನೂ ಚಿಂತಿಸುವಂತೆ ತೋರುವ ಭಾವನೆಗಳನ್ನು ವರ್ಣಗಳಲ್ಲಿ ಸೆರೆಹಿಡಿದಿದ್ದಾರೆ. ಮುಖಭಾಗಕ್ಕೆ ಕೇಸರಿ, ಕಂದು, ಕೆಂಪು, ಬಿಳಿ, ಹಳದಿ ವರ್ಣಗಳಿಂದ ಮೆದುಗೊಳಿಸಿ ಉಬ್ಬು ತಗ್ಗುಗಳನ್ನು ವಿಂಗಡಿಸಿ ಉತ್ತಮವಾದ ನೆರಳು ಬೆಳಕಿನೊಂದಿಗೆ ಪೂರ್ಣಗೊಳಿಸಲಾಗಿದೆ.

ವಸ್ತ್ರದಲ್ಲಿ ಪಾರದರ್ಶಕವನ್ನು ಮನಸೆಳೆಯುವಂತೆ ಚಿತ್ರಿಸಲಾಗಿದೆ. ಮುದುಡಿರುವ ಭಾಗಗಳನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ವಸ್ತ್ರವನ್ನು ಹಿಡಿದು ಕೈಯಲ್ಲಿ ಸೌಮ್ಯತೆಯನ್ನು ಕಾಣಬಹುದು. ಈ ಭಾವಚಿತ್ರದಲ್ಲಿಯು ಸಹ ಪಾಶ್ಚಾತ್ಯ ಪ್ರಭಾವಗಳನ್ನು ಕಾಣಬಹುದು.



ಚಿಂತನೆಯಲ್ಲಿರುವ ಸ್ತ್ರೀ ಚಿತ್ರಣ

ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚನೆಯಾದ ಈ ಕಲಾಕೃತಿಯು ಸಾಲರ್‌ಜಂಗ್ ಮ್ಯೂಸಿಯಂ, ಹೈದ್ರಾಬಾದ್‌ನಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಸ್ತ್ರೀಯು ಚಿಂತಿಸುತ್ತಿರುವ ಭಾವನೆಯನ್ನು ಕಲಾವಿದ ಸೆರೆಹಿಡಿಯುವದನ್ನು ಯಶಸ್ವಿಯಾಗಿದ್ದಾರೆ. ಉತ್ತಮವಾದ ವರ್ಣಗಳ ಬಳಕೆಯಾಗಿದ್ದು, ಇಲ್ಲಿಯು ಅಕಾಡೆಮಿ ಶೈಲಿಯ ಬಳಕೆಯನ್ನು ಕಾಣಬಹುದು. ವಸ್ತ್ರದಲ್ಲಿನ ಹೊಳಪು, ವರ್ಣಗಾರಿಕೆ ನೆರಳು ಬೆಳಕಿನ ಸಂಯೋಜನೆ ಉತ್ತಮವಾಗಿ ಸೆರೆಹಿಡಿದಿರುವುದನ್ನು ಕಾಣಬಹುದು. ರವಿವರ್ಮ ಕೇರಳದ ರಾಜಕಾರಣ ಹೆಚ್ಚು ಕೇರಳ ಸ್ತ್ರೀಯನ್ನು ಭಾವಚಿತ್ರಕ್ಕೆ ಬಳಸಿಕೊಂಡಿರುವುದನ್ನು ಕಾಣಬಹುದು.

ಕೇರಳದ ಸುಂದರ ಹುಡಗಿ

ಈ ಚಿತ್ರವು ಕೇರಳ ಸ್ತ್ರೀಯಾಗಿದ್ದು ನೋಡುಗರಿಗೆ ಆಕರ್ಷಕವಾಗುವಂತಹ ವಸ್ತ್ರ ಶೈಲಿಯನ್ನು ಕಾಣಬಹುದು. ಮುಖಭಾವನೆಗಿಂತಲೂ ನೋಡಲೂ ಆಕರ್ಷಕವಾಗಿ ಕಾಣುವಂತೆ ರವಿವರ್ಮ ಚಿತ್ರಿಸಿರುವುದನ್ನು ಗಮನಿಸಬಹುದು. ಇದು ಅಕಾಡೆಮಿಕ್ ಶೈಲಿಯಲ್ಲಿ ರಚಿಸಿರುವುದನ್ನು ಕಾಣಬಹುದು.

ಹಣ್ಣನ್ನು ಹಿಡಿದಿರುವ ಸ್ತ್ರೀ ಚಿತ್ರಣ

ಈ ಭಾವಚಿತ್ರದಲ್ಲಿ ಸ್ತ್ರೀಯು ಅವಳ ಕೈಯಲ್ಲಿ ಹಣ್ಣನ್ನು ಹಿಡಿದುಕೊಂಡು ನಮ್ಮ ಕಡೆಗೆ ತೋರಿಸುತ್ತಿರುವಂತೆ ಚಿತ್ರಿಸಲಾಗಿದೆ. ತನ್ನ ಇನ್ನೊಂದು ಕೈಯಲ್ಲಿ ಅವಳ ವಸ್ತ್ರವನ್ನ ಗಲ್ಲದ ಹತ್ತಿರ ಇಟ್ಟುಕೊಂಡಿದ್ದಾಳೆ. ಉದ್ದನೆಯ ಕೂದಲುಳ್ಳ ಸ್ತ್ರೀಯಾಗಿದ್ದು ಮುಖ ಭಾಗವನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಶ್ರೀಮಂತರ ಬೇಡಿಕೆಯಂತೆ ಚಿತ್ರಿಸಿರುವುದನ್ನು ಕಾಣಬಹುದು.

ಯುರೋಪಿಯನ್ ಸ್ತ್ರೀಯ ಭಾವಚಿತ್ರ

ರಾಜರವಿವರ್ಮ ಪಾಶ್ಚಾತ್ಯ ಸ್ತ್ರೀ ಭಾವಚಿತ್ರಗಳನ್ನು ಚಿತ್ರಿಸುತ್ತಿದ್ದರು ಎಂದು ಈ ಕಲಾಕೃತಿಗಳಿಂದ ತಿಳಿದುಬರುತ್ತದೆ. ಸ್ತ್ರೀಗೆ ಭಾರತೀಯ, ವಸ್ತ್ರದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ನೈಜವಾಗಿ ಮೂಡಿಬಂದಿದ್ದು, ಉತ್ತಮವಾದ ವರ್ಣಗಳ ನೆರಳು ಬೆಳಕನ್ನು ಕಾಣಬಹುದು. ಅಕಾಡೆಮಿಕ್ ಶೈಲಿಯಲ್ಲಿ ಚಿತ್ರಿಕರಿಸಲಾಗಿದೆ.

ಸ್ತ್ರೀ ಭಾವಚಿತ್ರ

ಕಡಿಮೆ ವರ್ಣಗಳಿಂದ ರಚಿಸಿದ ಭಾವಚಿತ್ರ ಇದಾಗಿದೆ. ಮುಖದ ಅರ್ಧಭಾಗವನ್ನು ಚಿತ್ರಿಸಿರುವುದು ಗಮನಾರ್ಹ. ಮುಖಭಾವನೆಯಲ್ಲಿ ಸೌಮ್ಯತೆಯನ್ನು ಕಾಣಬಹುದು. ಉತ್ತಮವಾದ ವರ್ಣಗಾರಿಕೆ, ಉಬ್ಬುತಗ್ಗುಗಳನ್ನು ನೈಜತೆಗಿಂತಲೂ ಸುಂದರವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಉತ್ತಮವಾದ

ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಸ್ತ್ರೀ ಮೇಲಿನ ವಸ್ತ್ರ ಹಾಗೂ ಆಭರಣಗಳನ್ನು ಗಮನಿಸಿದಾಗ ಮಧ್ಯಮ ವರ್ಗದವಳೆಂದು ಗುರುತಿಸಬಹುದು. ಅದರಲ್ಲಿ ಉತ್ತಮವಾದ ನೆರಳು ಬೆಳಕನ್ನು ತೋರಿಸಿ ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಮಹಾರಾಣಿಯ ಚಿತ್ರ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಪ್ರಸ್ತುತ ಈ ಕಲಾಕೃತಿಯು ಸಾಲರ್‌ಜಂಗ್ ಮ್ಯೂಸಿಯಂ, ಹೈದ್ರಾಬಾದ್‌ನಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿಯ ಕಲಾವಿದ ಕಲಾವಂತಿಕೆ ಕಾಣಬಹುದು ಪಾಶ್ಯತ್ಯ ಪ್ರಭಾವದಿಂದ ಸ್ತ್ರೀಯ ಕೈಗೆ ಬಿಸಣಿಯನ್ನು ಕಾಣಬಹುದು. ಮುಖಭಾವನೆಯಲ್ಲಿ ಸೌಮ್ಯತೆಯನ್ನು ಕಾಣಬಹುದು ಹಾಗೂ ನೈಜತೆಗೆ ಅತ್ತಿರವಾಗುವಂತೆ ಚಿತ್ರಿಸಲಾಗಿದೆ. ಮುಖಭಾಗದಿಂದ ಕುತ್ತಿಗೆ ಹಾಗೂ ಕೈಗಳಿಗೆ ಕೇಸರಿ, ಕೆಂಪು, ಹಳದಿ, ಬಿಳಿ, ಕೆಂಪು ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ಉಬ್ಬ ತಗ್ಗುಗಳನ್ನು ತೋರಿಸಿ ಅದರಲ್ಲಿ ನೆರಳು ಬೆಳಕಿನ ಭಾಗವನ್ನು ನೈಜವಾಗಿ ಚಿತ್ರಿಸಲಾಗಿದೆ. ವಸ್ತ್ರ ಹಾಗೂ ಆಭರಣಗಳು ಕೇರಳ ಶೈಲಿಯಲ್ಲಿ ಕಾಣಬಹುದು., ಅಕಾಡೆಮಿಕ್ ಶೈಲಿಯ ಪ್ರಭಾವದಿಂದ ರಚಿಸಿದ ಭಾವಚಿತ್ರ ಇದಾಗಿದೆ.

ಮಹಾರಾಣಿ ಲಕ್ಷ್ಮಿಬಾಯಿಯ ಚಿತ್ರ

ಶ್ರೀಮಂತಿಕೆಯಿಂದ ಕೂಡಿದ ಭಾವಚಿತ್ರ ಇದಾಗಿದೆ. ನೈಜತೆಗಿಂತಲೂ ಹೆಚ್ಚು ಸೌಂದರ್ಯವನ್ನು ರವಿವರ್ಮನ ಕಲಾಕೃತಿಗಳಲ್ಲಿ ಕಾಣಬಹುದು ಎನ್ನುವುದಕ್ಕೆ ಈ ಕಲಾಕೃತಿಯನ್ನು ಗಮನಿಸಬಹುದು. ಅಕಾಡೆಮಿಕ್ ಶೈಲಿಯನ್ನು ಬಳಸಿಕೊಂಡು ಪಾಶ್ಯಾತ್ಯರಿಂಗಿಂತಲೂ ಉತ್ತಮ ರೀತಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಈ ಭಾವಚಿತ್ರದಲ್ಲಿ ಉತ್ತಮವಾದ ವರ್ಣಗಳ ಬಳಕೆಯಾಗಿದ್ದು, ಉಬ್ಬು ತಗ್ಗುಗಳಿಂದ ಹಾಗೂ ನೆರಳು ಬೆಳಕಿನಿಂದ ಪೂರ್ಣಗೊಳಿಸಲಾಗಿದೆ., ಎಲ್ಲಿಯೂ ಪ್ಯಾಚ್‌ಗಳು ಕಾಣುವುದಿಲ್ಲ ಎಲ್ಲ ವಸ್ತುಗಳಲ್ಲಿಯು, ಸ್ತ್ರೀಯ ಮೇಲೂ ವರ್ಣಗಳನ್ನು ಮೆದುಗೊಳಿಸಿ ಆಕರ್ಶಕವಾಗಿ ಕಾಣುವಂತೆ ಚಿತ್ರಿಸಲಾಗಿದೆ.

ಮಹಾರಾಷ್ಟ್ರದ ಮಹಾರಾಣಿ

ಮಹಾರಾಷ್ಟ್ರದ ಶೈಲಿಯಲ್ಲಿರುವ ಮಹಾರಾಣಿಯ ವ್ಯಕ್ತಿಚಿತ್ರ ಇದಾಗಿದೆ. ಶ್ರೀಮಂತರ ಬೇಡಿಕೆಯಂತೆ ಅವಳ ಚಿತ್ರಗಳನ್ನು ರವಿವರ್ಮ ಚಿತ್ರಿಸುತ್ತಿದ್ದನು ಎಂದು ತಿಳಿಯಬಹುದಾಗಿದೆ. ರಾಣಿ ತನ್ನ ಬಲಗೈಯನ್ನು ಕುರ್ಚಿಯ ಮೇಲೆ ಇಟ್ಟುಕೊಂಡಿದ್ದಾಳೆ ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡು ನಿಂತಿದ್ದಾಳೆ ವಿಜೃಂಭಿಸುವ ವಜ್ರ, ವೈಡುರ್ಯಗಳಿಂದ ರಾರಾಜಿಸುವಂತೆ ಚಿತ್ರಿಸಲಾಗಿದೆ. ಅವಳ ಬಲಭಾಗದಲ್ಲಿ ಕುರ್ಚಿ ಇದ್ದು ಅದರ ಮೇಲೆ ಪರದೆಯನ್ನು ಕಾಣಬಹುದು. ಎಡಭಾಗದಲ್ಲಿ ಶ್ವಾನವು ಕುಳಿತುಕೊಂಡಿದೆ. ಹಿಂಭಾಗದಲ್ಲಿ ಕಂದು, ಕುರ್ಚಿ, ಕಿಟಕಿಗಳನ್ನು ಸೂಕ್ಷ್ಮವಾಗಿ ಕಾಣಬಹುದು.


ಸ್ತ್ರೀಯನ್ನು ಪ್ರಧಾನವನ್ನಾಗಿ ಆಕರ್ಶಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ವ್ಯಕ್ತಿಚಿತ್ರಕ್ಕೆ ಬೇಕಾದ ಅಳತೆ, ಪ್ರಮಾಣ ಸಂಯೋಜನೆ ಉತ್ತಮ ರೀತಿಯಲ್ಲಿ ಕಲಾವಿದ ಜೋಡಿಸಿಕೊಂಡಿದ್ದಾನೆ. ಗುಂಗುರು ಕೂದಲಿನ ಸ್ತ್ರೀಯ ಮುಖ, ಕೈ, ಕಾಲುಗಳಿಗೆ ಹಳದಿ, Raw Sienna, Naples Yellow Gamboge Hue ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಉಬ್ಬು ತಗ್ಗುಗಳನ್ನು ತೋರಿಸಲಾಗಿ. ಮುಖಭಾವನೆಗಿಂತಲೂ ವಸ್ತು ವಿನ್ಯಾಸದ ಕಡೆಗೆ ಹೆಚ್ಚು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಮೂಗುತಿ, ಕಿವಿಯೋಲೆ, ಬಳೆ ಕಾಲು ಗೆಜ್ಜೆಯನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸ್ತ್ರೀ ಮೇಲಿನ ವರ್ಣಗಳ ಬಳಕೆ ಕಾಣಬಹುದು.

ಆಭರಣಗಳ ಮೇಲೆ ಅವಳ ವಸ್ತ್ರದಲ್ಲಿ ಕೆಂಪು, Lighr Red, Burnt Sienna ಕೇಸರಿ ಹಳದಿ ಹಸಿರು ವರ್ಣಗಳಿಂದ ಮೆದುಗೊಳಿಸಲಾಗಿದೆ. ಮುದುಡಿರುವ ಭಾಗವನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ರೇಷ್ಮೆ ಪಟ್ಟಿಯನ್ನು ಸೀರೆಯ ಮೇಲೆ ಕಾಣಬಹುದು. ವಸ್ತ್ರದಲ್ಲಿ ಶೈನಿಗ್ ಕಾಣಬರುತ್ತದೆ. ಕುರ್ಚಿಯ ಮೇಲಿನ ವಸ್ತ್ರವು ಸ್ತ್ರೀಯ ಅಂಚು ಮೇಲಿನ ವರ್ಣಗಳ ಬಳಕೆಯನ್ನು ಕಾಣಬಹುದು. ಹಾಗೂ ಪಕ್ಕದಲ್ಲಿ ಇರುವ ಶ್ವಾನದಲ್ಲಿಯು ಅದೇ ವರ್ಣಗಳ ಬಳಕೆಯಾಗಿದ್ದು ಉತ್ತಮವಾದ ವರ್ಣಗಳ ಸಮತೋಲನವನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ರೇಖೆಗಳ ಬಳಕೆ ಹಿನ್ನೆಲೆಯಲ್ಲಿ ಕಾಣಬಹುದು. ಅವುಗಳು ಸಹ ವರ್ಣಗಳಿಂದ ಮೆದುಗೊಳಿಸಲಾಗಿದೆ. ಪಾಶ್ಚಾತ್ಯರ ಪ್ರಭಾವವನ್ನು ಇಲ್ಲಿಯು ಕಾಣಬಹುದು. ಶ್ವಾನವನ್ನು ಕಲಾಕೃತಿಯಲ್ಲಿ ಬಳಸಿದವರಲ್ಲಿ ಪಾಶ್ಚಾತ್ಯರು ಮಾತ್ರ ಆ ಪದ್ಧತಿಯಲ್ಲಿ ರವಿವರ್ಮನ ಕಲಾಕೃತಿಯಲ್ಲಿಯು ಕಾಣಬಹುದು. ಬೆಳಕಿನ ಪ್ರಭಾವವನ್ನು ಗಮನಿಸಿದಾಗ ನಾಟಕದ ಪ್ರಭಾವ ಪ್ರೇರಣೆಯನ್ನು ಕಾಣಬಹುದು ಹಾಗೂ ಹೊಸ ಹೊಸ ಪ್ರಯೋಗಗಳು ಪಾಶ್ಚಾತ್ಯರಿಂದ ಕಲಿತು ಭಾರತೀಯ ಸಂಪ್ರದಾಯದಲ್ಲಿ ಅಳವಡಿಸುವಲ್ಲಿ ಯಶಸ್ವಿಯಾಗಿದ್ದಾನೆ.

ವ್ಯಕ್ತಿ ಸ್ತ್ರೀ ಚಿತ್ರಣ

ಸ್ತ್ರೀಯು ಕಾರ್‌ಪೇಟ್‌ನ ಮೇಲೆ ಕುಳಿತುಕೊಂಡಿರುವ ಚಿತ್ರ ಇದಾಗಿದೆ. ಓರೆಯಾಗಿ ಕುಳಿತಿರುವ ಭಂಗಿ ಕಾಲುಗಳನ್ನು ಮಡಿಚಿಕೊಂಡಿದ್ದಾಳೆ. ಎಡಗೈ ಮಾತ್ರ ಕಾಣಿಸುವಂತೆ ಚಿತ್ರಿಸಿದ್ದ ಶಾಲನ್ನು ಹೊದ್ದುಕೊಂಡಿದ್ದಾಳೆ, ಕೇರಳದ ಸ್ತ್ರೀಯೆಂದು ವಸ್ತ್ರದಿಂದ ಗುರುತಿಸಬಹುದು. ಕೂದಲಿಗೆ ಕೆಂಪು, ಹಳದಿ, ನೀಲಿ, ಬಿಳಿ, ಕಂದು ವರ್ಣದಿಂದ ನೆರಳು ಬೆಳಕನ್ನು ತೋರಿಸಲಾಗಿದೆ. ಬಿಳಿಕೂದಲನ್ನು ಕಾಣಬಹುದು. ಮುಖಭಾಗದಿಂದ ಕುತ್ತಿಗೆ ಹಾಗೂ ಕೈಗೆ ಹಳದಿ, ಕೆಂಪು, ಕಂದು, ಕೇಸರಿ, ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಉಬ್ಬು ತಗ್ಗುಗಳನ್ನು ತೋರಿಸಲಾಗಿದೆ. ಮೃದುವಾದ ಚರ್ಮವನ್ನು ನೈಜವಾಗಿ ಕಾಣಬಹುದು. ವಿಭೂತಿಯನ್ನು ಧರಿಸಿರುವುದು ಅಲ್ಲಲ್ಲಿ ಕಾಣಬಹುದು. ಮಣಿಸರಗಳನ್ನು ಕಾಣಬಹುದು.



ಅದಕ್ಕೂ ಉತ್ತಮವಾದ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಸ್ತ್ರೀಯ ವಸ್ತ್ರದ ವರ್ಣ ಬಿಳಿ, ಹಳದಿ ವರ್ಣದಿಂದ ಮಿಶ್ರಣಗೊಳಿಸಿ ಮೆದುಗೊಳಿಸಲಾಗಿದೆ. ಹಸಿರು ಪಟ್ಟಿಯನ್ನು ಕಾಣಬಹುದು. ಶಾಲನ್ನು ಹೊದ್ದುಕೊಂಡಿರುವ ರೀತಿ ನೈಜತೆಗಿಂತಲೂ ಉತ್ತಮ ಹೊಳಪು ರೇಷ್ಮೆಯನ್ನು ಮೀರಿಸುವಂತಹ ಶೈನಿಂಗ್‌ಕೊಡಲಾಗಿದೆ. ಕಂದು, ಕೆಂಪು, ಮಿಶ್ರಣದ ಶಾಲಿನಲ್ಲಿ ಮುದುಡಿರುವ ಭಾಗವನ್ನು ಉತ್ತಮವಾಗಿ ಮೂಡಿ ಬಂದಿದೆ. ಅದರ ರೇಷ್ಮೆ ಅಂಚಿನ ಮೇಲೆ ವಿನ್ಯಾಸಗಳನ್ನು ಗಮನಿಸಬಹುದು. ಹಾಗೂ ಸ್ತ್ರೀಯು ಕುಳಿತಿರುವ ಕಾರ್‌ಪೆಟ್ ಮೇಲೂ ವಿನ್ಯಾಸಗಳನ್ನು ಗಮನಿಸಬಹುದು. ಹಿನ್ನೆಲೆಯನ್ನು ಪ್ಲೇನಾಗಿ ತೋರಿಸಿದ್ದು ನೆರಳು ಬೆಳಕನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ರೇಖೆಗಳು ಕಡಿಮೆ ಪ್ರಮಾಣದಲ್ಲಿ ಕಾಣಬಹುದು. ಶಾಲು ಕಾರ್‌ಪೆಟ್ ಮೇಲೆ ವರ್ಣಗಳಿಂದ ರೇಖೆಗಳ ಬಳಕೆಯನ್ನು ಹಾಗೂ ಇಲ್ಲಿಯ ಪಾಶ್ಚಾತ್ಯರ ಪ್ರಭಾವವನ್ನು ಕಾಣಬಹುದು.

ಸ್ತ್ರೀ ವ್ಯಕ್ತಿಚಿತ್ರ

ಇದು ವ್ಯಕ್ತಿ ಚಿತ್ರವಾಗಿದ್ದು ಶ್ರೀಮಂತರ ಬೇಡಿಗೆ ತಕ್ಕಂತೆ ಕಲಾವಿದ ಚಿತ್ರಿಸುತ್ತಿದ್ದ ಎಂಬುದು ತಿಳಿದುಬರುತ್ತದೆ. ಆಗಿನ ಕಾಲದಲ್ಲಿ ಫೋಟೋಗ್ರಾಫಿ ಇಲ್ಲದ ಕಾರಣ ಅದಕ್ಕೆ ಹೆಚ್ಚು ಚೆನ್ನಾಗಿ ಮೂಡುವಂತೆ ನೈಜವಾಗಿ ಚಿತ್ರಿಸುವ ಶೈಲಿ ರವಿವರ್ಮ ಅವರದು. ಈ ಚಿತ್ರದಲ್ಲಿ ಸ್ತ್ರೀ ಕುರ್ಚಿಯ ಮೇಲೆ ಕುಳಿತುಕೊಂಡಿದ್ದಾಳೆ. ತನ್ನ ಎಡಗೈಯಲ್ಲಿ ಮೇಜಿನ ಮೇಲೆ ಅರ್ಧಮಡಿಚಿ ಇಟ್ಟುಕೊಂಡಿದ್ದಾಳೆ, ಬಲಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡು ಕರವಸ್ತ್ರ ಹಿಡಿದಿರುವುದನ್ನು ಕಾಣಬಹುದು. ಮೇಜಿನ ಮೇಲೆ ಹೂದಾನಿಯನ್ನು ಕಾಣಬಹುದು ಕಾಲಿನ ಕೆಳಭಾಗದಲ್ಲಿ ಕಾರ್‌ಪೆಟ್ ಹಿಂಭಾಗದಲ್ಲಿ ಪರದೆಯನ್ನು ತೋರಿಸಲಾಗಿದೆ.

ಮಹಾರಾಷ್ಟ್ರದ ಶೈಲಿಯಲ್ಲಿರುವ ಸ್ತ್ರೀಯ ಚಿತ್ರ ನೈಜವಾಗಿ ಚಿತ್ರಿಸಲಾಗಿದೆ, ಮುಖದ ಭಾಗದಿಂದ ಕುತ್ತಿಗೆ, ಕೈ, ಕಾಲುಗಳಿಗೆ ಹಳದಿ, ಬಿಳಿ, ಕೆಂಪು, ಕೇಸರಿ ಇತರೆ ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕುನ್ನು ಕಾಣಬಹುದು. ಮುಖಭಾವಗಳನ್ನು ನೈಜವಾಗಿ ಚಿತ್ರಿಕರಿಸಲಾಗಿದೆ. ಉಬ್ಬುತಗ್ಗುಗಳನ್ನು ತೋರಿಸಲಾಗಿದೆ. ಆಭರಣಗಳು ಹೊಳಪು ಮೆರುಗಿನಿಂದ ರಾರಾಜಿಸುವಂತೆ ಚಿತ್ರಿಕರಿಸಲಾಗಿದೆ. ಮುತ್ತಿನ ಸರವನ್ನು ಅರ್ಧಭಾಗ ಪಾರದರ್ಶಕವಾಗಿ ಚಿತ್ರಿಸಿರುವ ರೀತಿ ಗಮನಸೆಳೆಯುವಂತಿದೆ.

ವಸ್ತ್ರದಲ್ಲಿ ಕಪ್ಪು ಸೀರೆಗೆ ರೇಷ್ಮೆ ಅಂಚನ್ನು ಉಪಯೋಗಿಸಿಕೊಂಡು ಚಿತ್ರಿಸಲಾಗಿದೆ. ಸ್ತ್ರೀಯ ವಸ್ತ್ರವು ಆಕರ್ಶಕವಾಗಿದ್ದು ನೋಡುಗನ ಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಕುರ್ಚಿಯಲ್ಲಿ ಮಕಮಲ್ ಪರಿಣಾಮ ಕಾಣಬಹುದು. ಅದರಲ್ಲಿಯ ನೆರಳು ಬೆಳಕಿನ ಸಂಯೋಜನೆ ಉತ್ತಮವಾಗಿ ಮೂಡಿ ಬಂದಿರುವುದನ್ನು ಕಾಣಬಹುದು. ಹಿನ್ನೆಲೆ ಹಾಗೂ ಕಾರ್‌ಪೆಟ್ ಮತ್ತು ಟೇಬಲ್ ಮೇಲೆ ಹಾಸಿರುವ ವಸ್ತ್ರಗಳು ಒಂದೇ ವರ್ಣದಿಂದ ಕೂಡಿದ್ದು ಕೆಂಪು, ಹಳದಿ, ವರ್ಣಗಳಿಂದ ಮೆದುಗೊಳಿಸಲಾಗಿದೆ. ಅಲ್ಲಲ್ಲಿ ವಿನ್ಯಾಸಗಳನ್ನು



ಬಳಸಲಾಗಿದೆ. ಹೂದಾನಿಯನ್ನು ಪಾಶ್ಚಾತ್ಯ ಶೈಲಿಯಲ್ಲಿ ಬಳಸುವ ಪದ್ಧತಿ ರವಿವರ್ಮ ತನ್ನ ಕಲಾಕೃತಿಯಲ್ಲಿ ಬಳಸಿರುವುದನ್ನು ಕಾಣಬಹುದು. ಒಟ್ಟಾರೆಯಾಗಿ ಅಕಾಡೆಮಿಕ್ ಶೈಲಿಯಲ್ಲಿ ಮೂಡಿಬಂದಿದೆ.

ಸುಂದರವಾದ ಮಹಿಳೆ ಹೂವು ಹಿಡಿದಿರುವ ಚಿತ್ರ

ಈ ಚಿತ್ರದಲ್ಲಿ ಸ್ತ್ರೀಯು ನಿಂತಿರುವ ಭಂಗಿ ತನ್ನ ಎಡಗೈಯನ್ನು ಮೇಜಿನ ಮೇಲೆ ಅರ್ಧ ಮಡಿಚಿ ಮುಂಗೈಯನ್ನು ಕೆಳಗೆ ಬಿಟ್ಟಿದ್ದಾಳೆ. ಬಲಗೈಯಲ್ಲಿ ಒಂದು ಹೂವನ್ನು ಹಿಡಿದುಕೊಂಡು ಮೇಜಿಗೆ ಒರಗಿಕೊಂಡು ನಿಂತಂತೆ ಚಿತ್ರಿಸಲಾಗಿದೆ. ವ್ಯಕ್ತಿ ಚಿತ್ರಣಕ್ಕೆ ಉತ್ತಮವಾದ ಸಂಯೋಜನೆ ಮೂಡಿರುವುದನ್ನು ಕಾಣಬಹುದು. ಸ್ತ್ರೀ ಮುಖಭಾಗದಿಂದ ಕುತ್ತಿಗೆ ಕೈಗಳಿಗೆ ಕೇಸರಿ, ಹಳದಿ, Burnt Sienna, ಇತ್ಯಾದಿ ವರ್ಣದಿಂದ ಮೆದುಗೊಳಿಸಲಾಗಿದೆ. ಉಬ್ಬುತಗ್ಗುಗಳನ್ನು ಕಾಣಬಹುದು. ಮುಖ ಅರ್ಧಭಾಗ ಬೆಳಕು ನೆರಳಿನಿಂದ ವಿಭಜಿಸಲಾಗಿದೆ. ಸಂಪೂರ್ಣವಾಗಿ ಮೃದುಗೊಳಿಸಲಾಗಿದೆ. ಕೈಗಳು ನೈಜವಾಗಿ ಮೂಡಿಬಂದಿದ್ದು ಉತ್ತಮವಾದ ನೆರಳು ಬೆಳಕು ಕಾಣಬಹುದು.

ವಸ್ತ್ರದಲ್ಲಿ ಸೀರೆ, ಕುಪ್ಪಸಕ್ಕೆ ಕಾನ್‌ಟ್ರೇಸ್ಟ್ ಕಲರ್‌ನ ಬಳಕೆ ಕಾಣಬಹುದು. ಕಂದು ವರ್ಣದ ಕುಪ್ಪಸಕ್ಕೆ ಹಳದಿ, ಕೇಸರಿ, ಕಂದು ಮಿಶ್ರಣ ಸೀರೆ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಮತ್ತು ಮುದುಡಿರುವ ಭಾಗವನ್ನು ನೈಜವಾಗಿ ಚಿತ್ರಿಸಲಾಗಿದೆ. ಹಿನ್ನೆಲೆಗೆ ಒಂದು ಭಾಗಕ್ಕೆ ಗಾಢವರ್ಣಗಳನ್ನು ಬಳಸಿ ನೆರಳಿನ ಪ್ರಭಾವ ಹೆಚ್ಚು ತೋರಿಸಿ ಬೆಳಕಿನ ಪ್ರಭಾವಕ್ಕೆ ಸ್ತ್ರೀಯ ಮೇಲಿನ ವರ್ಣಗಳನ್ನು ಕಾಣಬಹುದು, ಸ್ತ್ರೀಯ ಹಿನ್ನೆಲೆಯಲ್ಲಿ ಮೇಜಿನ ಮೇಲೂ ವರ್ಣವನ್ನು ಪರದೆಯ ರೀತಿಯಲ್ಲಿ ಕಾಣಬಹುದು ಅದಕ್ಕೆ ಮತ್ತು ಹಿನ್ನೆಲೆಗೆ ಕಂದು, ಕಪ್ಪು ವರ್ಣಗಳಿಂದ ಮೆದುಗೊಳಿಸಿದ್ದು, ಅಂಚನ್ನು ಚಿತ್ರಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿಯು ವ್ಯಕ್ತಿಚಿತ್ರಕ್ಕೆ ಈ ರೀತಿಯಲ್ಲಿ ಬಳಸಿಕೊಂಡು ಚಿತ್ರಿಸುತ್ತಿರುವುದನ್ನು ಕಾಣಬಹುದು. ಈ ಚಿತ್ರವು ಅಕಾಡೆಮಿಕ್ ಶೈಲಿಯಲ್ಲಿ ಮೂಡಿಬಂದಿದ್ದೆ.

ಬ್ರಾಹ್ಮಣ ಸ್ತ್ರೀ ಚಿತ್ರ

ರವಿವರ್ಮನ ಕಲಾಕೃತಿಯಲ್ಲಿ ವ್ಯಕ್ತಿಚಿತ್ರ ಹಾಗೂ ಭಾವಚಿತ್ರವನ್ನು ಚಿತ್ರಿಸುವಲ್ಲಿ, ಪರಿಣಿತಿಯನ್ನು ಸಾಧಿಸಿಕೊಂಡವರಲ್ಲಿ ಇವರೆ ಮೊದಲಿಗರು ಎಂದರೆ ತಪ್ಪಾಗಲಾರದು. ಈ ಕಲಾಕೃತಿಯಲ್ಲಿ ಬ್ರಾಹ್ಮಣ ಸ್ತ್ರೀಯನ್ನು ವ್ಯಕ್ತಿ ಚಿತ್ರದಲ್ಲಿ ಕಲಾವಿದನ ನೈಜತೆಗೆ ಹತ್ತಿರವಾಗಿರುವಂತೆ ನಿಂತಿರುವ ಬಂಗಿಯನ್ನು ಬಳಸಿಕೊಂಡಿದ್ದಾನೆ. ಸ್ತ್ರೀಯ ಒಂದು ಕೈಯನ್ನು ಮಡಿಚಿ ಮೇಜಿನ ಮೇಲೆ ಇಟ್ಟುಕೊಂಡು ನಿಂತಿದ್ದಾಳೆ, ಮುಖಭಾಗ ಹಾಗೂ ಕೈಕಾಲುಗಳಿಗೆ ಹಳದಿ, ಕೇಸರಿ, ಕೆಂಪು Burnt Sienna, ಕಂದು ಇತ್ಯಾದಿ ವರ್ಣದಿಂದ ಮೆದುಗೊಳಿಸಿ ಹಾಗೂ ಅಲ್ಲಲ್ಲಿ ಸ್ಟ್ರೋಕ್‌ಗಳನ್ನು ಕಾಣಬಹುದು. ಉಬ್ಬಿನ ಭಾಗ, ಕಣ್ಣು, ಮೂಗು ಭಾಗದಲ್ಲಿ ಉತ್ತಮದ ನೆರಳು ಬೆಳಕನ್ನು ಕಾಣಬಹುದು, ಉಬ್ಬತಗ್ಗುಗಳಿಂದ ಚಿತ್ರಿಸಲಾಗಿದೆ. ಸ್ತ್ರೀಯ ಆಭರಣಗಳ ಮೇಲೂ ಹಾಗೂ ಪ್ರಭಾವ ಹೆಚ್ಚಾಗಿರುವುದನ್ನು ಕಾಣಬಹುದು. ಕೈ ಭಾಗ

ಹಾಗೂ ಕಾಲುಗಳಲ್ಲಿ ನೆರಳಿನ ಪ್ರಭಾವವು ಹೆಚ್ಚಾಗಿದ್ದು ಎಡಭಾಗದ ಕೈಯಲ್ಲಿ ಬೆಳಕಿನ ಪ್ರಭಾವ ಹೆಚ್ಚಿರುವುದನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಆಟದಂತೆ ತೋರುತ್ತದೆ.

ವಸ್ತ್ರದಲ್ಲಿ ವಿರೋಧ ಕಲರ್‌ಗಳ ಬಳಕೆ ಕಾಣಬಹುದು. ಕೇಸರಿ, ಹಳದಿ, ಕೆಂಪು, ಕಂದು ಮಿಶ್ರಣದ ವರ್ಣದ ಬಳಕೆಯಿಂದ ಮೆದುಗೊಳಿಸಲಾಗಿದೆ. ಕುಪ್ಪಸಕ್ಕೆ ಕಂದು, ಕೆಂಪು ವರ್ಣದಿಂದ ಮೆದುಗೊಳಿಸಲಾಗಿದೆ. ಸೀರೆಯ ಮೇಲೆ ವರ್ಣದಿಂದ ಎಲೆ ವಿನ್ಯಾಸದ ರೇಖೆಗಳನ್ನು ಕಾಣಬಹುದು. ಈ ಕಾಲಕೃತಿಯ ಹಿನ್ನೆಲೆಯ ಎಡಭಾಗದಲ್ಲಿ ಬೆಳಕಿನ ಪ್ರಭಾವ ಹೆಚ್ಚಾಗಿದ್ದು, ಬಲಭಾಗದಲ್ಲಿ ನೆರಳಿನ ಪ್ರಭಾವ ಹೆಚ್ಚಿರುವುದನ್ನು ಕಾಣಬಹುದು. ಪಾಶ್ಚಾತ್ಯ ಶೈಲಿಯ ಒಂದು ಬದಿಯಿಂದ ಬೆಳಕಿನ ಪ್ರಭಾವ ಹರಿದಂತೆ ತೋರಿಸಲಾಗಿದೆ. ಅಂದಿನಿಂದ ಇಂದಿನವರೆಗೂ ಈ ರೀತಿಯಲ್ಲಿಯ ವ್ಯಕ್ತಿ ಭಾವಚಿತ್ರಗಳನ್ನು ಚಿತ್ರಿಸುತ್ತಿರುವುದನ್ನು ಕಾಣಬಹುದು.

ರಾಜಕುಮಾರಿ ಜಾನಕಿ ರಾಜ್ಯೇ

ಇದು ವ್ಯಕ್ತಿಚಿತ್ರವಾಗಿದ್ದು ಸ್ತ್ರೀಯ ಕುರ್ಚಿಯ ಮೇಲೆ ಕುಳಿತುಕೊಂಡಿದ್ದಾಳೆ. ಕುಳಿತುಕೊಂಡಿರುವ ಭಂಗಿ, ಮಧುವಣಗಿತ್ತಿಯ ಅಲಂಕಾರದಲ್ಲಿದ್ದು ಬಲಗೈಯಲ್ಲಿ ಹೂವನ್ನು ಹಿಡಿದುಕೊಂಡಿದ್ದಾಳೆ. ಹಾಗೂ ಎಡಗೈಯನ್ನು ಕುರ್ಚಿಯ ಮೇಲೆ ಇಟ್ಟುಕೊಂಡಿದ್ದಾಳೆ. ಅವಳ ಕಾಲುಗಳನ್ನು ಎಡಗಾಲನ್ನು ಮುಂದಕ್ಕೆ ಚಾಚಿಕೊಂಡಿದ್ದಾಳೆ, ಅವಳ ಕಾಲಿನ ಕೆಳಭಾಗದಲ್ಲಿ ತಲೆದಿಂಭನ್ನು ಕಾಣಬಹುದು. ಅವಳ ಎಡಬದಿಯಲ್ಲಿ ಟೇಬಲ್ ಮೇಲೆ (ವಸ್ತ್ರ) ಪ್ಲೆಟ್‌ನ್ನು ಕಾಣಬಹುದು. ಬಟ್ಟಲು ತರಹದ ಲೋಟವನ್ನು ಕಾಣಬಹುದು. ಹಿಂಭಾಗದಲ್ಲಿ ಕುಂಬ ಹಾಗೂ ಪರದೆಯನ್ನು ತೋರಿಸಲಾಗಿದೆ.

ಸ್ತ್ರೀಯನ್ನು ವಜ್ರ ವೈಡೂರ್ಯಗಳಿಂದ ವಿಜೃಂಭಿಸುವ ವಿನ್ಯಾಸಗಳನ್ನು ಆಭರಣಗಳಲ್ಲಿ ಕಾಣಬಹುದು. ಹೆಚ್ಚಾಗಿ ವೈಭವತೆಗೆ ಒತ್ತುಕೊಟ್ಟಂತೆ ತೋರುತ್ತದೆ. ಮುಖಭಾಗದಿಂದ ಕುತ್ತಿಗೆ ಕೈ ಕಾಲುಗಳಲ್ಲಿ Gamboge Hue, Cadmium Yellow Burntfienna, ಕೇಸರಿ, ಕೆಂಪು ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಉಬ್ಬು ತಗ್ಗುಗಳನ್ನು ಸೂಕ್ಷ್ಮವಾಗಿ ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ನೈಜತೆಗಿಂತಲೂ ಹೆಚ್ಚು ಆಕರ್ಷಕವಾಗಿ ಚಿತ್ರಕರಿಸಿರುವುದನ್ನು ಕಾಣಬಹುದು. ಆಭರಣಗಳಲ್ಲಿ ಕಿವಿಯೋಲೆ, ಸರಗಳು, ಬೈತಲೆ ಸೆಟುಗಳು, ಬಳೆಗಳು, ಕಾಲಿನ ಕಡಗ, ಗೆಜ್ಜೆ ಹಾಗೂ ಕಾಲುಂಗುರ ಇತ್ಯಾದಿ ಇವುಗಳನ್ನು ಹೆಚ್ಚಿನ ಹೊಳಪಿನಿಂದ ಚಿತ್ರಿಸಿದ್ದು ನೋಡುಗನ ಮನ ಸೆಳೆಯುವಂತಹ ವಿನ್ಯಾಸಹೊಂದಿದೆ. ಸ್ತ್ರೀಯ ಕುಪ್ಪಸ ಹಾಗೂ ಸೀರೆ ಮೇಲೆ ಹೆಚ್ಚಾಗಿ ಹೊಳಪು ಕಾಣಬಹುದು ಕುಬ್ಬಸಕ್ಕೆ ಕಂದು, Burnt umber, ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ರೇಷ್ಮೆ ಪಟ್ಟಿಗಳನ್ನು ಬಳಸಲಾಗಿದೆ. ಸೀರೆಗೆ Varmilion Hue, Venetian Red, ಕಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಿ ರೇಷ್ಮೆಯ ಅಂಚು, ವಿನ್ಯಾಸಗಳನ್ನು ಹೊಳೆಯುವಂತೆ ಚಿತ್ರಿಸಲಾಗಿದೆ. ಸ್ತ್ರೀಯು ಕುಳಿತಿರುವ ಕುರ್ಚಿಯನ್ನು ಹಾಗೂ ಹಿಂಭಾಗದ ಗೋಡೆಯ ವರ್ಣ Raw Umber, Vandyke Brown ಇತ್ಯಾದಿಗಳಿಂದ ಮೆದುಗೊಳಿಸಲಾಗಿದೆ. ಕುರ್ಚಿಯ



ಮಧ್ಯಭಾಗದಲ್ಲಿ ಉಲ್ಲನ್‌ನಿಂದ ಹೆಣೆದ ಡಿಜೈನ್ ತೋರಣದಂತೆ ತೋರುವ ಪಟ್ಟಿಯನ್ನು ಕಾಣಬಹುದು. ಅದನ್ನು ಕೇಸರಿ, ಹಳದಿ, ಹಸಿರು ವರ್ಣಗಳಿಂದ ಕೂಡಿದೆ. ಸ್ತ್ರೀಯ ಪಾದದಲ್ಲಿನ ಟೇಬಲ್ ಮೇಲಿನ ವಸ್ತ್ರ ಹಳದಿ ವರ್ಣದ ರೇಷ್ಮೆವಸ್ತ್ರವಾಗಿದ್ದು ಅದರ ಮೇಲೆ ಬೆಳ್ಳಿಯ ಪೆಟ್ಟಿಗೆ ಮತ್ತು ಲೋಟವನ್ನು ನೈಜತೆಯಿಂದ ಚಿತ್ರಿಸಿದ್ದು ನೆರಳು ಬೆಳಕಿನ ಸಂಯೋಜನೆ ಉತ್ತಮವಾಗಿದೆ. ಹಿಂಭಾಗದ ಪರದೆ ಹಸಿರು ವರ್ಣದಿಂದ ಮಿಶ್ರಣ ಮಾಡಲಾಗಿದೆ. ಉತ್ತಮವಾದ ವರ್ಣಸಂಯೋಜನೆ ಕಾಣಬಹುದು. ರೇಖೆಗಳಿಗೆ ಬಂದಗ ಇದರಲ್ಲಿಯು ಸೂಕ್ಷ್ಮವಾದ ರೇಖೆಗಳು ವಿನ್ಯಾಸಗಳನ್ನು ಕಲಾವಿದ ಬಳಸಿರುವುದನ್ನು ಕಾಣಬಹುದು. ಕಲಾವಿದನ ತಾಳ್ಮೆ, ನೈಪುಣ್ಯತೆಯನ್ನು ತೋರುತ್ತದೆ. ಒಟ್ಟಾರೆಯಾಗಿ ಉತ್ತಮವಾದ ವ್ಯಕ್ತಿಚಿತ್ರ ಇದಾಗಿದೆ.

ವೀಣೆಯೊಂದಿಗೆ ಸ್ತ್ರೀ

ಉತ್ತಮವಾದ ವ್ಯಕ್ತಿ ಚಿತ್ರಣ ಇದಾಗಿದೆ. ಸ್ತ್ರೀಯು ವೀಣೆಯನ್ನು ನುಡಿಸುತ್ತಿದ್ದಾಳೆ, ಕೇರಳದ ಶೈಲಿಯಲ್ಲಿರುವ ಸ್ತ್ರೀಯ ವರ್ಣಗಳು ಕೇಸರಿ, ಬಿಳಿ, ಕೆಂಪು, ಕಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಿ ಉಬ್ಬು ತಗ್ಗುಗಳನ್ನು ನೈಜವಾಗಿ ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕನ್ನು ಕಾಣಬಹುದು. ವಸ್ತ್ರದಲ್ಲಿಯು ಕಾನ್‌ಟ್ರೆಸ್ಟ್ ವರ್ಣಗಳ ಬಳಕೆಯಾಗಿದ್ದು, ರೇಷ್ಮೆ ಹೊಳಪಿನಿಂದ ಕೂಡಿದೆ. ವೀಣೆಯನ್ನು ಬಳಸಿರುವ ಕೈಗಳನ್ನು ಸೌಮ್ಯವಾಗಿ ಚಿತ್ರಿಸಲಾಗಿದೆ. ನೈಜತೆಗೆ ಅತೀವಾಗುವಂತಹ ಕಲಾಕೃತಿಯಾಗಿದ್ದು, ಬೇಡಿಕೆ ತಕ್ಕಂತೆಹ ಕಲಾಕೃತಿ ಇದಾಗಿದೆ. ಇದು ಚಿತ್ರ ಆರ್ಟ್ ಗ್ಯಾಲರಿ, ತಿರುವನಂತಪುರಂ (ಕೇರಳ)ದಲ್ಲಿ ಸಂಗ್ರಹಿಸಲಾಗಿದೆ.

ಶ್ರೀಮಂತಿಕೆಯಿಂದಿರುವ ಸ್ತ್ರೀ ಚಿತ್ರ

ನೋಡುಗನನ್ನು ಗಮನ ಸೆಳೆಯುವಂತಹ, ವಸ್ತ್ರ ವಿನ್ಯಾಸ ಹಾಗೂ ವಿಜೃಂಭಿಸುವ ಆಭರಣಗಳನ್ನು ಈ ವ್ಯಕ್ತಿ ಚಿತ್ರಣದಲ್ಲಿ ಕಾಣಬಹುದು. ಕಲಾವಿದ ಮುಖಭಾವಕ್ಕಿಂತಲೂ ಇತರೆಗೆ ಹೆಚ್ಚು ಗಮನ ಸೆಳೆಯುವಂತೆ ಚಿತ್ರಿಸಿರುವುದನ್ನು ಕಾಣಬಹುದು. ಕೇರಳ ಶೈಲಿಯಲ್ಲಿರುವ ಸ್ತ್ರೀಯು ಅತ್ಯಂತ ದೊಡ್ಡಗಾತ್ರದ ಶಾಲನ್ನು ಹಾಕಿಕೊಂಡು ಹಿಂಬದಿಯಲ್ಲಿ ಉದ್ದವಾಗಿ ಬಿಟ್ಟುಕೊಂಡು ಕುಳಿತಿದ್ದಾಳೆ, ಕುಳಿತಿರುವ ಭಂಗಿ ನೈಜವಾಗಿರುವುದನ್ನು ಕಾಣಬಹುದು. ಕಾನ್‌ಟ್ರೆಸ್ಟ್ ವರ್ಣಗಳ ಬಳಕೆ ಬಳಿ ವಸ್ತ್ರಕ್ಕೆ ಕೆಂಪು ಶಾಲು ರಾಜಮನೆತನದ ಸ್ತ್ರೀಯಾಗಿದ್ದು, ಅಕಾಡೆಮಿಕ್ ಶೈಲಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಹೊರಗೆ ಹೊರಟಿರುವ ಸ್ತ್ರೀ

ಸರಳತೆಯಿಂದ ಕೂಡಿರುವ ಈ ಚಿತ್ರ ಹೊರಗೆ ಹೋಗುತ್ತಿರುವ ದೃಶ್ಯವಿದಾಗಿದೆ. ಅವಳ ಕೈಯಲ್ಲಿ ಛತ್ರಿ ಹಿಡಿದುಕೊಂಡಿದ್ದಾಳೆ ಮತ್ತು ಇನ್ನೊಂದು ಕೈಯಿಂದ ಬಾಗಿಲನ್ನು ತೆರೆದಿದ್ದಾಳೆ. ವಿಭಿನ್ನತೆಯಿಂದ ಕೂಡಿದ ಪಾಶ್ಚತ್ಯದ ಸ್ತ್ರೀಯಂತೆ ಕಂಡು ಬರುತ್ತಾಳೆ. ವಸ್ತ್ರದಲ್ಲಿಯು ಪಾಶ್ಚತ್ಯ ರೀತಿಯಲ್ಲಿದ್ದು, ಭಾರತೀಯರ

ಸೀರೆಯನ್ನು ಧರಿಸಿರುವುದನ್ನು ಕಾಣಬಹುದು. ಉತ್ತಮದ ಕಲಾಕೃತಿ ಇದಾಗಿದೆ. ಕಲಾವಿದ ಚಿತ್ರಗಳನ್ನು ರಚನೆಮಾಡಬಹುದು ಆದರೆ ಅದರಲ್ಲಿ ಸ್ತ್ರೀಯರ ಭಾವಚಿತ್ರ ಹಾಗೂ ವ್ಯಕ್ತಿಚಿತ್ರಗಳನ್ನು ರಚಿಸುವಾಗ ತುಂಬಾ ಜಾಣ್ಮೆಯಿಂದಿರಬೇಕಾಗುತ್ತದೆ. ಅದು ಒಬ್ಬ ವ್ಯಕ್ತಿಯ ಮುಖದ ಅವಾ-ಬಾವನೆಯನ್ನು ತುಂಬಾ ಪ್ರೀತಿಯಿಂದ ಕಂಡುಹಿಡಿಯಬೇಕಾಗಿರುವುದು. ಹಾಗೆಯೆ ಶ್ರಮದ ಪ್ರತೀಕ ಒಬ್ಬ ಕಲಾವಿದ ಚಿತ್ರಗಳನ್ನು ರಚನೆಮಾಡಿರುತ್ತಾನೆ. ಹಾಗೆಯೇ ಪ್ರಸ್ತುತ ಅಧ್ಯಾಯದಲ್ಲಿ ಸ್ತ್ರೀಯ ಭಾವಚಿತ್ರ ಹಾಗೂ ವ್ಯಕ್ತಿಚಿತ್ರಗಳ ನೇರ ರಚನೆಮಾಡಿರುವ ಪ್ರಮುಖ ಅಂಶಗಳನ್ನು ಗಮನಿಸಬಹುದಾಗಿದೆ.

❖❖❖❖



ವಾದ್ಯದೊಂದಿಗೆ ಸ್ತ್ರೀ

೧೬



ಮಹಾರಾಷ್ಟ್ರದ ಸುಂದರಿ



ಮಹಾರಾಷ್ಟ್ರದ ಸುಂದರಿ

ರಾಜಾ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಮಳಿಯಾಳಿ ಸ್ತ್ರೀ ಭಾವಚಿತ್ರ



ಮಹಾರಾಣಿ ಲಕ್ಷ್ಮೀಬಾಯಿ



ಸ್ತ್ರೀ ಭಾವಚಿತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜಾ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ರಾಣಿ ಲಕ್ಷ್ಮೀಬಾಯಿ



ಶ್ರೀಮಂತ ಸ್ತ್ರೀ



ಪು.ಮಹಾಪ್ರಭ ತಂಪುರಟ್ಟಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಹಣ್ಣು ಹಿಡಿದಿರುವ ಸ್ತ್ರೀ

ರಾಜಾ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಗುಜರಾತಿ ಸ್ತ್ರೀ



ಮಹಾರಾಣಿ ಸೇತು ಲಕ್ಷ್ಮೀಬಾಯಿ



ಊರ್ವಸಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಹಾಲು ಮಾರುವ ಸ್ತ್ರೀ



ಇಬ್ಬರ ಭಾವಚಿತ್ರ



ನಿದ್ರೆಯಲ್ಲಿರುವ ಸ್ತ್ರೀ ಚಿತ್ರ



ಬ್ರಾಹ್ಮಣ ಸ್ತ್ರೀ



ರಾಜಕುಮಾರಿ ಜಾನಕಿ ರಜ್ಯೋ



ವೀಣೆಯೊಂದಿಗೆ ಸ್ತ್ರೀ



ಯುರೋಪಿಯನ್ ಸ್ತ್ರೀ



ಹೊರಗೆ ಹೊರಡುತ್ತಿರುವ ಸ್ತ್ರೀ



ಮಹಾರಾಷ್ಟ್ರದ ಮಹಾರಾಣಿ



ಸ್ತ್ರೀ ವ್ಯಕ್ತಿ ಚಿತ್ರಣ



ಸ್ತ್ರೀ ವ್ಯಕ್ತಿ ಚಿತ್ರಣ

ಅಧ್ಯಾಯ : ನಾಲ್ಕು

ರವಿವರ್ಮನ ಸಂಯೋಜನಾ ಸ್ತ್ರೀ ಕಲಾಕೃತಿಗಳು



ಅಧ್ಯಾಯ : ನಾಲ್ಕು

ರವಿವರ್ಮನ ಸಂಯೋಜನಾ ಸ್ತ್ರೀ ಕಲಾಕೃತಿಗಳು

ಯಾವುದೇ ಕಲಾಕೃತಿಗಳಾಗಲಿ ಸಂಯೋಜನೆಯಿಂದ ಕೂಡಿರಬೇಕು. ಇಲ್ಲದಿದ್ದರೆ ಕಲಾಕೃತಿಯು ತನ್ನ ಗುಣಮಟ್ಟವನ್ನು ಕಾಪಾಡಿಕೊಳ್ಳಲಾರದು. ರವಿವರ್ಮ ಕಲಾಕೃತಿಯಲ್ಲಿ ಸ್ತ್ರೀ ಸಂಯೋಜನೆಯು ಆತ್ಯಂತ ನೆಚ್ಚಿನ ವಿಷಯವಾಗಿದ್ದು, ಚಿತ್ರಿಸಿದ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಮಾನವಾಕೃತಿಗಳು, ಹಣ್ಣುಗಳು, ಪ್ರಾಣಿಗಳು, ಪಕ್ಷಿಗಳು ಅಥವಾ ಬೇರೆ ಬೇರೆ ಆಕೃತಿಯನ್ನು ಹೊಂದಿಸಿ ವರ್ಣಚಿತ್ರಗಳನ್ನು ರಚಿಸುವ ಕಲಾತ್ಮಕ ಕೃತಿ ಸಂಯೋಜನೆ ಅಥವಾ ಕಾಂಪೋಜೆಷನ್ ಎಂದು ಕರೆಯುತ್ತಾರೆ.[೧] ರವಿವರ್ಮನ ಕಲಾಕೃತಿಗಳಲ್ಲಿ ಈ ಎಲ್ಲ ವಿಷಯಗಳು ಪ್ರಮುಖವಾಗಿದ್ದು, ಕಲಾವಿದನ ಬುದ್ಧಿವಂತಿಕೆ, ಕ್ರಿಯಾತ್ಮಕ, ರಚನಾತ್ಮಕ, ಅಭಿವ್ಯಕ್ತಿ ಕೌಶಲ್ಯಗಳ ಮೂಲಕ ಸ್ತ್ರೀ ಸಂಯೋಜನೆಯ ಮುಖಾಂತರವೇ ಬೆಳಕಿಗೆ ತಂದಿದ್ದಾರೆ. ಮೂಲ ತತ್ವಗಳಾದ ರೇಖೆ, ವರ್ಣ, ಆಕೃತಿ, ವಿನ್ಯಾಸ ಸ್ಥಾನವಕಾಶ, ಮೈವಳಿಕೆ, ಐಕ್ಯತೆ, ವ್ಯಾಪ್ತಿ, ಪ್ರಮಾಣ ಮುಂತಾದ ಚಿತ್ರ ಸಂಯೋಜನೆಯ ನಿಯಮಗಳನ್ನು ಗಮನಿಸಬಹುದಾಗಿದೆ. ಸ್ತ್ರೀ ಸಂಯೋಜನ ಕಲಾಕೃತಿಗಳಲ್ಲಿ ವಿಷಯಕ್ಕೆ ಸಂಬಂಧಪಟ್ಟಂತೆ ಗುಣವಿಶೇಷಗಳು, ವರ್ಣಗಳು, ರೇಖೆಗಳನ್ನು ಅರ್ಥಪೂರ್ಣವಾಗಿ ಕಾಣಸಿಗುತ್ತವೆ. ರವಿವರ್ಮ ಕಲಾಕೃತಿಗಳಲ್ಲಿ ಹೆಚ್ಚಾಗಿ ಸಾಂಪ್ರದಾಯಿಕ, ರಾಮಾಯಣ, ಮಹಾಭಾರತ, ಪುರಾಣ ಇತರೆ ವಿಷಯಕ್ಕೆ ಸಂಬಂಧಿಸಿದ ಸ್ತ್ರೀ ಸಂಯೋಜನ ಚಿತ್ರಗಳನ್ನು ಕಾಣಬಹುದು. ವಿಶೇಷವೆಂದರೆ ವಸ್ತ್ರ ವೈಡೂರ್ಯಗಳಿಂದ ಕಣ್ಮನ ಸೆಳೆಯುವಂತಹ ಹೊಳಪುಳ್ಳ ಸ್ತ್ರೀಯನ್ನು ಚಿತ್ರಿಸಿದ್ದಾರೆ.

೦೧. ಮಲ್ಲಿಕಾರ್ಜುನ ಸಿ. ಬಾಗೋಡಿ : ಚಿತ್ರಕಲಾವಿದ ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ, ಪುಟ - ೮೬



ಮನ ಸೆಳೆಯುವಂತಹ ದೃಶ್ಯಾವಳಿಗಳನ್ನು ನಾವು ರಾಜರವಿವರ್ಮರ ಸ್ತ್ರೀ ಸಂಯೋಜನ ಕಲಾಕೃತಿಗಳಲ್ಲಿ ಕಾಣಸಿಗುತ್ತವೆ.

ಸರಸ್ವತಿ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಪ್ರಸ್ತುತ ಈ ಕಲಾಕೃತಿಯು ಸೈಯಾಜಿರಾಮ್ ಆರ್ಟ್‌ಗ್ಯಾಲರಿ, ಬರೋಡದಲ್ಲಿ ಸಂಗ್ರಹಿಸಲಾಗಿದೆ. ಸರಸ್ವತಿ ಜ್ಞಾನದ ಮಾತೃ ದೇವತೆಯಾಗಿದ್ದಾಳೆ, ಸ್ವರಗಳ, ಶಬ್ದಗಳ ಮತ್ತು ಕಲಿಕೆಯ ಅದಿಪತಿ, ಇವುಗಳನ್ನು ರಚಿಸುವಲ್ಲಿ ಇವಳ ಅವಶ್ಯಕತೆ ಪ್ರಮುಖವಾಗಿದೆ. ವೇದಗಳ ಕಾಲದಲ್ಲಿ ಸರಸ್ವತಿಯನ್ನು ಅಚೇತ ವಸ್ತುವಾದ ನದಿಗೆ ಸಚೇತಳಾದ ಸರಸ್ವತಿಗೆ ಹೋಲಿಸಿದ್ದಾರೆ. ಇದು ಹಿಂದೂ ನಾಗರಿಕತೆಯ ಕೇಂದ್ರ, ಕವಿಗಳು ಇದರ ಪವಿತ್ರ ನೀರಿನ ವರ್ಣನೆ ಹಾಡುತ್ತಾರೆ. ನಂತರ ಅವಳು ಸಂಗೀತ ಮತ್ತು ಕವನದ ಮಾತೃ ದೇವತೆಯಾದಳು, ಉಚ್ಚರಣೆಯ ದೇವತೆ ಮತ್ತು ಮಾತಿನ ದೇವತೆಯೆಂದು ಗುರುತಿಸಲೂ ಆರಂಭಿಸಿದರು, ಪ್ರಜಾಪತಿಯ ಶಕ್ತಿ ದೇವತೆ, ಪ್ರಜಾಪತಿಯ ರಚನೆಯ ದೇವಿ, ವೇದಗಳಲ್ಲಿ ಸರಸ್ವತಿ ಇಂದ್ರನ ಹೆಂಡತಿ ಎಂದು ಗುರುತಿಸಿದ್ದಾರೆ. ನಂತರ ವಿಷ್ಣು ಪುರಾಣದೊಳಗೆ ಬ್ರಹ್ಮನ ಪತ್ನಿಯಾದಳು ಎಂದು ತಿಳಿಸುತ್ತವೆ.[೨]

ರವಿವರ್ಮನ ಕಲಾಕೃತಿಗಳಲ್ಲಿ ಸರಸ್ವತಿಯ ಅತ್ಯಂತ ಆಕರ್ಷಕ ಹಾಗೂ ಪ್ರಭಾವ ಚಿತ್ರದಲ್ಲಿ ಒಂದಾಗಿದೆ. ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚಿಸಿದ ಕಲಾಕೃತಿ ಇದಾಗಿದೆ. ಸರಸ್ವತಿಯು ದಟ್ಟವಾದ ಕಾಡಿನ ನದಿತೀರದಲ್ಲಿ ದೊಡ್ಡ ಬಂಡೆಯ ಮೇಲೆ ವೀಣೆಯನ್ನು ನುಡಿಸುತ್ತ ಕುಳಿತುಕೊಂಡಿದ್ದಾಳೆ. ಈ ಚಿತ್ರದಲ್ಲಿ ಸಂಯೋಜನೆಗೆ ತಕ್ಕಂತೆ ಪರಿಸರ ಬಳಸಿಕೊಂಡು ಕಲಾಕೃತಿ ರಚಿಸಿರುವುದನ್ನು ಕಾಣಬಹುದು. ಸರಸ್ವತಿಯು, ನಾಲ್ಕು ಕೈಗಳನ್ನು ಹೊಂದಿದ್ದು. ಎರಡು ಕೈಗಳು ವೀಣೆಯನ್ನು ನುಡಿಸುವುದರಲ್ಲಿ ನಿರತವಾಗಿದ್ದು, ಹಿಂಭಾಗದ ಬಲ ಕೈಯಲ್ಲಿ ಬಿಳಿ ಜಪದ ಮಣಿ ಹಾಗೂ, ಎಡಗೈಯಲ್ಲಿ ಹಸ್ತ ಪ್ರತಿಯನ್ನು ಕಾಣಬಹುದು. ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತಿದ್ದು, ಸರಸ್ವತಿಯ ಭಂಗಿಯು ಅತ್ಯಂತ ಆಕರ್ಷಮಯವಾಗಿದೆ. ಕಲಾವಿದನ ಸೃಜನಶೀಲತೆಯನ್ನು ಕಾಣಬಹುದು.

ಸರಸ್ವತಿಯ ಪಕ್ಕದಲ್ಲಿ ನವಿಲನ್ನು ಚಿತ್ರಿಸಲಾಗಿದೆ. ಸರಸ್ವತಿಯ ಮುಖಭಾಗ, ಕುತ್ತಿಗೆ, ಕೈಕಾಲುಗಳ ಭಾಗವನ್ನು ಹಳದಿ, ಕೇಸರಿ ಕೆಂಪು ಕಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ನೆರಳು ಬೆಳಕಿನ ಸಂಯೋಜನೆ ಅತ್ಯುತ್ತಮವಾಗಿದೆ. ಕಲಾವಿದನ ವರ್ಣ ನೈಪುಣ್ಯತೆಯನ್ನು ಕಾಣಬಹುದು. ಕಣ್ಣು, ಮೂಗಿನ ತುದಿ, ಕೆನ್ನೆ, ಹಣೆ ಭಾಗದಲ್ಲಿ ಬೆಳಕನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ಕೈಗಳ ಹಾಗೂ ಕಾಲ್ಗಳ ಮೇಲೂ ಸಹ ನೆರಳಿನ ಛಾಯೆ ಕಾಣಬಹುದು. ವೈಭವದಿಂದ ಕೂಡಿದ ಸರಸ್ವತಿಯು ಬಿಳಿ ವಸ್ತ್ರ ವಜ್ರ, ವೈಡುರ್ಯಗಳಿಂದ ಗಮನಾರ್ಹವಾಗಿ ಚಿತ್ರಿಸಲಾಗಿದೆ, ಮತ್ತು ಶಾಂತಿಯ ಸಂಕೇತವಾಗಿದೆ.

೦೨. Enrico castelli : Divin Lithography, P.No. 117

ಪಿಂಕ್ ವರ್ಣದ ಕುಪ್ಪಸ, ಬಿಳಿ ಹಾಗೂ ಅಲ್ಲಲ್ಲಿ ಹಳದಿ ಮಿಶ್ರಣವನ್ನು ಹೊಂದಿದ ವಸ್ತ್ರ(ಸೀರೆ)ವನ್ನು ಚಿತ್ರಿತವಾಗಿದೆ. ಸೀರೆಯಲ್ಲಿ ರೇಷ್ಮೆಬಾರ್‌ಡರ್ (ಪಟ್ಟಿ) ಮಾಡಿ ಡಿಸೈನ್ ಮಾಡಲಾಗಿದೆ. ವೀಣೆಯನ್ನು ಕಂದು, ಕೆಂಪು, ಹಳದಿ, ಬಿಳಿ ವರ್ಣಗಳನ್ನು ಬಳಸಲಾಗಿದೆ. ಸರಸ್ವತಿಯು ವೀಣೆಯನ್ನು ತನ್ನ ಕೈಗಳಿಂದ ಬಳಸಿರುವ ರೀತಿ ಸೌಮ್ಯವಾಗಿ ಚಿತ್ರಿಸಲಾಗಿದೆ. ಪಕ್ಕದಲ್ಲಿ ನವಿಲೂ ಸಹ ವೀಣಾವಾದ್ಯವನ್ನು ಕೇಳುತಿರುವಂತೆ ತೋರಿಸಲಾಗಿದೆ. ಹಸಿರು, ನೀಲಿ, ಕೇಸರಿ, ಕಂದು, ಹಳದಿ ಇತ್ಯಾದಿ ವರ್ಣಗಳನ್ನು ಕಾಣಬಹುದು. ಈ ಎಲ್ಲಾ ವರ್ಣಗಳನ್ನು ಮೆದುಗೊಳಿಸಲಾಗಿದೆ. ಸುತ್ತಲಿನ ಪರಿಸರವು ಸಹ ವೀಣಾವಾದ್ಯವನ್ನು ಕೇಳುತ್ತ ತಲ್ಲೀನತೆಹೊಂದಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು, ನವಿಲೂ ಹಾಗೂ ಸರಸ್ವತಿಯ ಮೇಲಿನ ವರ್ಣಗಳನ್ನು ಸಂಯೋಜನೆಯ ಛಾಪನ್ನು ತೋರಿಸಿದ್ದಾನೆ. ಸಂಯೋಜನೆಯಲ್ಲಿ ಅಂತರವನ್ನು ನಾವು ಕಾಣಬಹುದು.

ರೇಖೆಗಳನ್ನು ಅತ್ಯುತ್ತವಾಗಿ ಬಳಸಿರುವುದನ್ನು ಗಮನಿಸಬಹುದು. ಕಿರೀಟದ ಮೇಲೆ ನೇರ ರೇಖೆಗಳನ್ನು ಕಾಣಬಹುದು. ವರ್ಣಗಳಲ್ಲಿ ಒಂದೇ ಅಳತೆಯುಳ್ಳ ರೇಖೆಗಳು ಕಾಣಸಿಗುತ್ತವೆ. ಮುಖಭಾವದಲ್ಲಿ ಕಣ್ಣು ಮೂಗು, ತುಟಿಗಳಲ್ಲಿ ರೇಖೆಗಳನ್ನು ವರ್ಣದೊಂದಿಗೆ ಮೆದುಗೊಳಿಸಲಾಗಿದೆ. ಕೈಗಳಲ್ಲಿಯು ಮೇಲೂ ರೇಖೆಯನ್ನು ಬಳಸಿ ಸೂಕ್ಷ್ಮತೆಯಿಂದ ಕೂಡಿದ ಬೆರಳುಗಳ ಮೇಲೂ ಉಗುರು ವರ್ಣದ್ದೊಂದು ಮೆದುಗೊಳಿಸಲಾಗಿದೆ. ರೇಖೆಯಲ್ಲಿ ಗಾಢ, ಮತ್ತು ಸೂಕ್ಷ್ಮತೆಯನ್ನು ಕಾಣಬಹುದು. ವಸ್ತ್ರದ ಮೇಲಿನ ವಿನ್ಯಾಸಗಳನ್ನು ಮಾವಿನ ಡೈಸೈನ್ ಒಂದೇ ತರವಾದ ರೇಖೆಗಳ ಲಾಲಿತ್ಯವನ್ನೂ ಕಾಣಬಹುದು.

ವೀಣೆ, ನವಿಲು, ಬಂಡೆಯ ಹಾಗೂ ಸುತ್ತಲಿನ ಪರಿಸರದಲ್ಲಿ ಸೂಕ್ಷ್ಮವಾದ ರೇಖೆಗಳನ್ನು ಬಳಸಿಕೊಂಡು ವರ್ಣಗಳಿಂದ ಮೆದುಗೊಳಿಸಿದ್ದಾರೆ. ಕಲಾವಿದನ ತಾಳ್ಮೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಕಲಾವಿದ ವರ್ಣ, ಸಂಯೋಜನೆ, ರೇಖೆಗಳ ಲಾಲಿತ್ಯವನ್ನು ಗಮನ ಸೆಳೆಯುವಂತೆ ಚಿತ್ರಿಕರಿಸಿರುವನು.

ಒಟ್ಟಾರೆಯಾಗಿ ಈ ಕಲಾಕೃತಿಯನ್ನು ನೋಡುಗರ ಕಣ್ಣುಗಳಿಗೆ ಕಲಶವಿಟ್ಟಂತೆ ತೋರುತ್ತದೆ. ನವಿಲಿನ ಕೊಕ್ಕಿನ ತುದಿಯಿಂದ ಹಿಡಿದು ಸುತ್ತಲಿನ ಪ್ರಕೃತಿ, ಆಕಾಶ ನದಿ, ನಂತರ ಸರಸ್ವತಿ ಕಾಲು ಅವಳ ವಸ್ತ್ರ ಮುಖ ಭಾಗದವರೆಗೂ ನೋಡುಗನ ದೃಷ್ಠಿಗೆ ಗಮನ ಸೆಳೆಯುವಂತೆ ಚಿತ್ರಿಸಿದ್ದಾನೆ. ಆದರೆ, ಸರಸ್ವತಿಯು ಕಲ್ಲಿನ ಮೇಲೆ ಕಾಲು ಹಾಕಿ ಕುಳಿತಿರುವ ಭಂಗಿ ಪಾಶ್ಚಾತ್ಯರದ್ದು, ನಮ್ಮ ಸಂಪ್ರದಾಯವಲ್ಲ ಆದರೂ ವೀಣೆಯನ್ನು ಹಿಡಿವಲ್ಲಿ ಉತ್ತಮ ಭಂಗಿಯಂತೆ ತೋರುತ್ತದೆ. ಒಟ್ಟಾರೆಯಾಗಿ ನಮ್ಮ ಭಾರತೀಯರ ದೇವರ ಕಲ್ಪನೆಗೆ ಹೊಸ ರೂಪವನ್ನು ಕೊಟ್ಟವರಲ್ಲಿ ರವಿವರ್ಮನೊಬ್ಬನೆ ಎಂದು ಹೇಳಬಹುದು ಕಲ್ಪನೆಯನ್ನು ವಾಸ್ತವವಾಗಿ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾನೆ. ಉತ್ತಮವಾದ ಕಾಲ್ಪನಿಕತೆಯನ್ನು ಕಾಣಬಹುದು. ಪಾಶ್ಚಾತ್ಯ ವರ್ಣ, ಶೈಲಿಗಳಾದರೂ ಭಾರತೀಯ ವಸ್ತು ವಿಷಯವನ್ನು ಬಳಸಿರುವುದು ವಿಶೇಷವಾಗಿದೆ. ಅಂದಿನಿಂದ ಇಂದಿನವರೆಗೂ ದೇವರ ಕಲ್ಪನೆ ಹೀಗೆ ಇದೆ ಎಂದು ರವಿವರ್ಮ ಕಲಾಕೃತಿಗಳಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಉತ್ತಮ ಕಲಾಕೃತಿಯಾಗಿದೆ.



ಲಕ್ಷ್ಮೀ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಪ್ರಸ್ತುತ ಈ ಕಲಾಕೃತಿಯು ಸೈಯಾಜಿರಾಮ್ ಆರ್ಟ್‌ಗ್ಯಾಲರಿ, ಬರೋಡದಲ್ಲಿ ಸಂಗ್ರಹಿಸಲಾಗಿದೆ. ಶಕ್ತಿತ್ರೆಯದಲ್ಲಿ ಒಬ್ಬಳು, ಕ್ಷೀರ ಸಮುದ್ರದಿಂದ ಜನಿಸಿದವಳು. ವಿಷ್ಣು ಆದಿತ್ಯಾನಾದಾಗ ಲಕ್ಷಿ ತಾವರೆಯಿಂದ ಜನಿಸಿದವಳು, ವಿಷ್ಣುನ ಪತ್ನಿಯಾದಂತಹ ಲಕ್ಷ್ಮೀದೇವಿ ಸಂಪತ್ತಿನ ಆದಿ ದೇವತೆಯಾಗಿದ್ದಾಳೆ,[೩] ಪ್ರಾಚೀನ ಕಾಲದಿಂದಲೂ ವಿಶ್ವವನ್ನು ಸಿರಿ, ಸಂಪತ್ತು, ಸಂತೋಷ ಹಾಗೂ ಶಕ್ತಿಯ ಸಂಕೇತವಾಗಿ ಮಾನವ ಜಗತ್ತನ್ನು ಮುನ್ನಡೆಯುವುದಕ್ಕೆ ಇವಳೆ ಕಾರಣಕರ್ತಳು ಹಿಂದೂ ಧರ್ಮದಲ್ಲಿ ಮೂರ್ತಿಗಳ ಹಾಗೂ ಚಿತ್ರಗಳ ರೂಪದಲ್ಲಿ ಪೂಜಿಸುತ್ತಾ ಆರಾಧಿಸುತ್ತಾ ಬಂದಿದ್ದಾರೆ, ಜಗತ್ತನ್ನು ಮುನ್ನಡೆಸುವುದಕ್ಕೆ ಇವಳೆ ಕಾರಣಕರ್ತಳು ಕಮಲದ ಮೇಲೆ ನಿಂತಿರುವ ಲಕ್ಷ್ಮಿಯನ್ನು ಶಾತವಾಹನರ ಕಾಲದಲ್ಲಿ ಕ್ರಿ.ಶ. ೧ನೇ ಶತಮಾನದಲ್ಲಿ ಲಕ್ಷ್ಮಿಯ ಹಿಂದೆ ಎರಡು ಜೋಡಿ ಆನೆಗಳು ನೀರನ್ನು ಲಕ್ಷ್ಮಿಯ ಮೇಲೆ ಸುರಿಯುವಂತೆ ಚಿತ್ರಿಸಲಾರಂಭಿಸಿದರು (ಕೆತ್ತನೆಗೈದರು)[೪] ಎಂದು ತಿಳಿಯಬಹುದಾಗಿದೆ.

ಇಂತಹದೆ ಆದ ಒಂದು ಕಾಲ್ಪನಿಕ ಸ್ತ್ರೀದೇವಿ ಚಿತ್ರವನ್ನು ಬಳಸಿ ರಾಜ ರವಿವರ್ಮ ಕ್ಯಾನ್‌ವಾಸ್ ಮೇಲೆ ತೈಲವರ್ಣವನ್ನು ಬಳಸಿರುವುದನ್ನು ಕಾಣಬಹುದು. ಅತ್ಯಂತ ಪ್ರಭಾವ ದೈವದತ್ತವಾದಂತಹ ಲಕ್ಷ್ಮಿದೇವಿಯ ಸಂಯೋಜನೆಯಲ್ಲಿ ಲಕ್ಷ್ಮಿಯು, ಕಮಲದ ಮೇಲೆ ನಿಂತಿದ್ದಾಳೆ. ಸುತ್ತಲೂ ನೀರಿನಿಂದ ತುಂಬಿದ್ದು ಹಿಂಭಾಗದಲ್ಲಿ ಎರಡು ಆನೆಗಳು, ಬೆಟ್ಟಗಳ ಸಾಲೂ, ಆಕಾಶ ಈ ಎಲ್ಲಾ ಅಂಶಗಳನ್ನು ಈ ಕಲಾಕೃತಿಯಲ್ಲಿ ಪ್ರಧಾನವಾಗಿದೆ. ಲಕ್ಷ್ಮಿಯನ್ನು ಅತ್ಯಂತ ವೈಭವ, ಆಕರ್ಷಕವಾದಂತಹ ಭಂಗಿಯಲ್ಲಿ ಕಾಣಬಹುದು. ಲಕ್ಷ್ಮಿದೇವಿಗೆ ನಾಲ್ಕು ಕೈಗಳಿದ್ದು, ಮುಂಗೈಗಳಲ್ಲಿ ಮತ್ತು ಬಲಗೈ ವರದ ಹಸ್ತದ ಭಂಗಿ, ಎಡಗೈ ಅಭಯ ಹಸ್ತಭಂಗಿಯಲ್ಲಿ ಚಿತ್ರಿತವಾಗಿದೆ.

ಹಿಂಭಾಗದ ಕೈಗಳಲ್ಲಿ ಕೆಂಪು ಕಮಲದ ಹೂವನ್ನು ಹಿಡಿದುಕೊಂಡಿದ್ದಾಳೆ. ಮುಖದ ಭಾಗ ಮತ್ತು ಕೈಗಳನ್ನು ಹಳದಿ, ಕೆಂಪು, ಕೇಸರಿ ಇತ್ಯಾದಿ ವರ್ಣಗಳನ್ನು ಬಳಸಿ ಹಾಗೂ ಕೈಗಳಿಗೆ ಮೆದುಗೊಳಿಸಲಾಗಿದೆ. ನೆರಳ ಬೆಳಕಿನ ಸಂಯೋಜನ ಅತ್ಯುತ್ತಮವಾಗಿದ್ದು ಹಳದಿಯ ಹಾಗೂ ಬಿಳಿವರ್ಣಗಳ ಬಳಕೆಯಿಂದ ಹೊಳಪು ಪ್ರಧಾನವಾಗಿ ಕಾಣಬಹುದು. ಕಣ್ಣು, ಭಾಗ ಮೂಗು, ತುಟಿಯ ಭಾಗಗಳಲ್ಲಿ ವರ್ಣಗಳಿಂದ ಮೆದುಗೊಳಿಸಿರುವುದನ್ನು ಗಮನಿಸಬಹುದು. ವಸ್ತ್ರಕ್ಕೆ ಕೆಂಪು ವರ್ಣ ಬಳಸಿ ಮೆದುಗೊಳಿಸಲಾಗಿದೆ. ಮತ್ತು ಅದಕ್ಕೆ ರೇಷ್ಮೆ ಪಟ್ಟಿಯನ್ನು ಚಿತ್ರಿಸಲಾಗಿದೆ. ವಸ್ತ್ರದಲ್ಲಿ ಕೆಂಪು, ಕೆಂದು, ಕಪ್ಪು, ಹಳದಿ ಇತ್ಯಾದಿ ವರ್ಣಗಳ ಬಳಕೆಯಿಂದ ಮೆದು ಹಾಗೂ ಗಾಢ ವರ್ಣಗಳನ್ನು ಮಿಶ್ರಣದೊಂದಿಗೆ ಮೆದುಗೊಳಿಸಿದ್ದಾರೆ. ಸೀರೆಯ ನೆರೆಗೆಯ ಹಾಗೂ ಹಂಚಿನ ಪಟ್ಟಿಯು ಆಕರ್ಷಕವಾಗಿದ್ದು, ಕಲಾವಿದನ ನೈಪುಣ್ಯತೆ ಹಾಗೂ

---

೦೩. ಬೆನಗಲ್ ರಾಮರಾವ್ : ಪುರಾಣನಾಮ ಚೂಡಾಮಣಿ, ಪುಟ – ೫೧೪

೦೪. Enrico castelli : Divin Lithography, P.No. 117

ತಾಳ್ಮೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಸುತ್ತಲೂ ನೀರಿನಿಂದ ಕೂಡಿದೆ. ಅದರಲ್ಲಿ ಎರಡು ಬಿಳಿ ಆನೆಗಳು ಕಮಲದ ಹೂವುಗಳನ್ನು ಸೊಂಡಲಿನಲ್ಲಿ ಹಿಡಿದುಕೊಂಡು ಮೇಲಕ್ಕೆ ಎತ್ತಿದ್ದಂತೆ ಚಿತ್ರಿಸಲಾಗಿದೆ. ಈ ಸೂಚನೆಯ ಗಮನಿಸಿದಾಗ ಲಕ್ಷ್ಮಿದೇವಿಗೆ ನಮಸ್ಕರಿಸಿ ಹೂವನ್ನು ಅರ್ಪಿಸುವಂತೆ ಚಿತ್ರಿಸಿದ್ದಾರೆ, ಆನೆ, ನೀರು, ಬೆಟ್ಟ, ಆಕಾಶ ಇವುಗಳಲ್ಲಿ ಒಂದೇ ರೀತಿಯ ವರ್ಣಗಳ ಬಳಸಲಾಗಿದೆ. ವರ್ಣಗಳಲ್ಲಿ ವ್ಯತ್ಯಾಸ ಅಂತರವನ್ನು ಗಮನಿಸಬಹುದು. ಒಟ್ಟಾರೆಯಾಗಿ ಕಲಾಕೃತಿಯ ಸಂಯೋಜನೆಯಲ್ಲಿ ಕಲಾವಿದರ ನೈಪುಣ್ಯತೆ, ವಸ್ತುನಿಷ್ಠತೆ, ವರ್ಣಗಳ ಸಂಯೋಜನೆಯಲ್ಲಿ ಮೇಲೂಗೈಯನ್ನು ಕಾಣಬಹುದಾಗಿದೆ. ಯುರೋಪಿಯನ್ನು ಹಾಗೂ ಭಾರತೀಯ ಭಾವವು ಹೆಚ್ಚುಗೆ ಲಕ್ಷ್ಮಿದೇವಿಯಲ್ಲಿ ಕಾಣಬಹುದು.

ಕಲಾಕೃತಿಯಲ್ಲಿ ಸಂಯೋಜನೆ, ವಸ್ತು ವಿಷಯ, ವರ್ಣಗಳಷ್ಟೆ ಅಲ್ಲದೆ ರೇಖೆಗಳ ಮಹತ್ವವನ್ನು ನಾವು ಕಾಣಬಹುದು. ಲಕ್ಷ್ಮಿದೇವಿಯ ಕಿರೀಟದ ಮೇಲಿನ ರೇಖೆಗಳು ಅತ್ಯಂತ ಸೂಕ್ಷ್ಮತೆಗಳನ್ನು ಬಳಸಿ ವರ್ಣಗಳೊಂದಿಗೆ ಮೆದುಗೊಳಿಸಲಾಗಿದೆ, ಆಭರಣಗಳಲ್ಲಿ ಅಲ್ಲಲ್ಲಿ ರೇಖೆಗಳ ಬಳಕೆ ಕಾಣಬಹುದು. ವಸ್ತ್ರದಲ್ಲಿ ಕೆಂದು ಬಣ್ಣದಿಂದ ರೇಖೆಯನ್ನು ಕಾಣಬಹುದು. ರೇಷ್ಮೆ ಅಂಚಿನ ಅಲ್ಲಲ್ಲಿ ರೇಖೆಗಳನ್ನು ಗಾಢ, ಮೆದುಗೊಳಿಸಿದ್ದಾರೆ. ವರ್ಣಗಳಿಂದ ವಿನ್ಯಾಸಗಳು ಒಂದೇ ಪ್ರಮಾಣದಲ್ಲಿ ಕಾಣಸಿಗುತ್ತವೆ. ಆನೆ, ಕಮಲ, ಸುತ್ತಲಿನ ಪರಿಸರವನ್ನು ವರ್ಣಗಳಿಂದ ರೇಖೆಗಳನ್ನು ಮೆದುಗೊಳಿಸಲಾಗಿದೆ.

ಈ ಕಲಾಕೃತಿ ನೋಡುಗರ ದೃಷ್ಟಿಯನ್ನು ಆನೆಯಿಂದ ಪ್ರಾರಂಭವಾಗಿ ಆಕಾಶದತ್ತ ಸಾಗಿ ಕಮಲದ ಮೇಲೆ ಹರಿದು ಲಕ್ಷ್ಮಿಯ, ವಸ್ತ್ರ ಹಾಗೂ ಮುಖ ಭಾಗದವರೆಗೂ ಪ್ರೇಕ್ಷರನನ್ನು ಗಮನ ಸೆಳೆಯುವಂತೆ ಚಿತ್ರಿಸಿದ್ದಾನೆ. ಕಮಲದ ಮೇಲೆ ನಿಲ್ಲಿಸುವ ಕಾರಣ ಚಂಚಲ ಸ್ವಾಭಾವದವಳು ನಿಂತಿರುವ ಭಂಗಿ ವಾಸ್ತವಿಕತೆಗಿಂತ ದೂರವಿದ್ದರು ಉತ್ತಮವಾಗಿದೆ. ಪಾಶ್ಚಾತ್ಯ ವರ್ಣಗಳ ಬಳಕೆಯಿಂದ ಲಕ್ಷ್ಮಿಯ ಸುಂದರಗೊಳಿಸಲಾಗಿದೆ. ಎಲ್ಲೋ ಒಂದು ಕಡೆ ಕಲಾವಿದ ಮುಖಭಾವನೆಗಳನ್ನು ಇನ್ನೂ ಹೆಚ್ಚು ಭಾವನೆಗಳನ್ನು ಮೂಡುವಂತೆ ಚಿತ್ರಿಸಬಹುದಾಗಿತ್ತು ಎಂದು ತೋರುತ್ತದೆ. ಆದರೂ ದೇವರ ಕಲ್ಪನೆಗಳನ್ನು ಕಲಾಕೃತಿಗಳ ಮೂಲಕ ಜನಸಾಮಾನ್ಯರನ್ನು ಮನ ಮುಟ್ಟುವಂತೆ ಮಾಡಿದ ಹಿರಿಮೆ ರವಿವರ್ಮನದ್ದು ಎಂದರೆ ತಪ್ಪಲಾಗರದು.

ಲಕ್ಷ್ಮೀ

ಈ ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಸಂಪತ್ತಿನ ಆದಿ ದೇವತೆಯಾಗಿರುವ ಲಕ್ಷ್ಮಿದೇವಿಯನ್ನು ಹಿಂದೂ ಧರ್ಮದಲ್ಲಿ ಪ್ರಾಚೀನ ಕಾಲದಿಂದಲೂ ಪೂಜಿಸುತ್ತಾ ಆರಾಧಿಸುತ್ತಾ ಬಂದಿದ್ದಾರೆ. ವಿಶ್ವವನ್ನು ಸಿರಿಸಂಪತ್ತು, ಐಶ್ವರ್ಯಗಳಿಂದ ಸಮೃದ್ಧ ಹೊಂದಿ ಮಾನವನನ್ನು ಸಂತೋಷಗಳನ್ನು ಉಂಟುಮಾಡುವ ದೇವಿಯಾಗಿದ್ದಾಳೆ. ಲಕ್ಷ್ಮಿದೇವಿಯ ಕಲಾಕೃತಿಯನ್ನು ರವಿವರ್ಮ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಿರುವುದನ್ನು ಕಾಣಬಹುದು. ಇದೇ ವೈವಿದ್ಯಮಯವಾದ




ಸ್ತ್ರೀ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ಲಕ್ಷ್ಮಿದೇವಿಯ ಕಲಾಕೃತಿಯಾಗಿದೆ. ಈ ಕಲಾಕೃತಿಗಳಲ್ಲಿ ಲಕ್ಷ್ಮಿಯು ಕೆಂಪು ಕಮಲದ ಮೇಲೆ ನಿಂತಿರುವಂತೆ ಸಂಯೋಜಿಸಿದ್ದಾರೆ. ನಾಲ್ಕು ಕೈಗಳನ್ನು ಹೊಂದಿರುವ ಲಕ್ಷ್ಮಿ ಮುಂಗೈಯ ಬಲಗೈ ವರದಹಸ್ತ ಭಂಗಿಯಲ್ಲಿದ್ದು ಇಷ್ಟಾರ್ಥಗಳು ಅನುಗ್ರಹಿಸುವ ಮುದ್ರೆಯಾಗಿದೆ. ಎಡಗೈ ಅಭಯ ಹಸ್ತ ಯಾವಾಗಲೂ ರಕ್ಷಿಸುವ ಮುದ್ರೆಯಾಗಿದೆ. ಹಿಂಬಾಗದ ಕೈಗಳಲ್ಲಿ ಕಮಲವನ್ನು ಹಿಡಿದುಕೊಂಡಿದ್ದಾಳೆ, ಕಮಲವು ನೀರಿನ ಮೇಲೆ ಸೌಮ್ಯವಾಗಿ ಹರಡಿಕೊಂಡಿದೆ. ಕಮಲದ ಮಧ್ಯ ಭಾಗದಲ್ಲಿ ಲಕ್ಷ್ಮಿಯನ್ನು ಸಂಯೋಜಿಸಿದ್ದಾರೆ.

ನಿತ್ಯ ಪುಷ್ಪವಂತೆ ಚಿತ್ರಿಸಿದ್ದಾರೆ. ಕಮಲದ ವದನೆಯಂತೆ ತೋರಿಬರುತ್ತಾಳೆ. ನಿಂಬಾದಿಯಲ್ಲಿ ನಿಸರ್ಗದ ಮಡಿಲಿನಿಂದ ಹರಿಯುವಂತೆ ನದಿಯನ್ನು ಕಾಣಬಹುದು. ಲಕ್ಷ್ಮಿಯ ಎಡಭಾಗದ ಹಿಂಬದಿಯಲ್ಲಿ ಒಂದು ಆನೆಯು ಕಮಲದ ಹೂವಿನ ಹಾರವನ್ನು ಸೊಂಡಿಲಿನಲ್ಲಿ ಹಿಡಿದು ಮೇಲಕ್ಕೆ ಎತ್ತಿದೆ ಇದು ದೇವಿಗೆ ಅರ್ಪಿಸುವ ಸಂಕೇತವಾಗಿದೆ. ಬಲಭಾಗದ ಹಿಂಬದಿಯಲ್ಲಿ ಎರಡು ಹಂಸಗಳನ್ನು ಕಾಣಬಹುದು. ಮರದ ರೆಂಬೆ ಕೊಂಬೆಗಳು ಬಳಸಿಕೊಂಡು ಕಲಾಕೃತಿಯನ್ನು ಸಂಯೋಜಿಸಿದ್ದಾರೆ. ಕಲಾವಿದ ನಿಸರ್ಗದ ಮಡಿಲಿನಲ್ಲಿ ಸಂಮೃದ್ಧಿಯ ಸಂಕೇತಗಳನ್ನು ಬಳಸಿಕೊಂಡು ಈ ಕಲಾಕೃತಿಯನ್ನು ಸಂಯೋಜಿಸಿದ್ದಾರೆ. ಈ ಸಂಯೋಜನೆಯಲ್ಲಿ ಕಲಾವಿದನ ಸೂಕ್ಷ್ಮ ವಸ್ತುವನ್ನು ಜೋಡಣೆ, ಅಳತೆ ಪ್ರಮಾಣಗಳ ಪೋಟೋಗ್ರಾಫಿಯಂತೆ ಜೋಡಣೆ ಮಾಡಿಕೊಂಡಂತೆ ತೋರುತ್ತದೆ.

ಲಕ್ಷ್ಮಿಯು ಕಿರೀಟದಾರೆಯಾಗಿರುವುದು ಅದಕ್ಕೆ ತಕ್ಕಂತ ಆಭರಣಗಳ ಸಂಯೋಜನೆ ಇದ್ದು, ವಜ್ರ ವೈಭವದಿಂದ ಹೊಳೆಯುತ್ತಿದ್ದಾಳೆ. ಮುಖದಭಾಗ ಕುತ್ತಿಗೆ ಕೈಗಳನ್ನು ಸೌಮ್ಯವಾದ ವರ್ಣಗಾರಿಕೆಯಿಂದ ಹಳದಿ, ಕೆಂಪು, ಕೇಸರಿ, ಬಿಳಿ ಇತ್ಯಾದಿ ವರ್ಣಗಳಿಂದ ಮೆದುಗೊಳಿಸಿದ್ದಾರೆ. ನೆರಳ ಬೆಳಕಿನ ಸಂಯೋಜನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಮುಖದ ಭಾಗದಲ್ಲಿ ಎರಡು ಕಡೆಯಿಂದ ಬೆಳಕನ್ನು ಕಾಣಬಹುದು. ಸ್ವಲ್ಪ ಸ್ವಲ್ಪ ನೆರಳಿನ ಸಂಯೋಜನೆ ಹೊಂದಿದೆ. ಕೈಗಳ ಭಾಗದಲ್ಲಿ ನೆರಳು ಬೆಳಕು ಸ್ಪಷ್ಟವಾಗಿ ಕಾಣಬಹುದು. ವಸ್ತ್ರಗಳನ್ನು ಗಮನಿಸಿದಾಗ ಬಿಳಿ, ನೀಲಿ ಮಿಶ್ರಿತವಾದ ಕುಬಸಹೊಂದಿದ್ದು ಕೆಂಪು, ಕೇಸರಿ, ನೀಲಿ, ಮಿಶ್ರಿತವಾದ ವಸ್ತ್ರವನ್ನು ಕಾಣಬಹುದು. (ಸೀರೆ) ಈ ವಸ್ತ್ರದಲ್ಲಿ ಸೀರೆಯ ಅಂಚು (ಪಟ್ಟಿ)ನ ಭಾಗದಲ್ಲಿ ಉತ್ತಮವಾದ ಡಿಸೈನ್ ಬಳಸಿ ರೇಷ್ಮೆಯ ಹೊಳಪನ್ನು ನೀಡಲಾಗಿದೆ. ವಸ್ತ್ರದ ಮೇಲಿನ ನೆರಿಗೆಗಳನ್ನು ಗಾಢ ಹಾಗೂ ಮೆದು ವರ್ಣಗಳನ್ನು ಬಳಸಿ ಚಿತ್ರಿಸಲಾಗಿದೆ. ಕಮಲದ ಹೂವಿನಲ್ಲಿಯು ಸಹ ಎರಡು ರೀತಿಯ ವರ್ಣಗಳ (ಕೆಂಪು, ಬಿಳಿ,) ಮಿಶ್ರಣದಿಂದ ಮೆದುಗೊಳಿಸಿ ನೆರಳು ಬೆಳಕನ್ನು ತೋರಿಸಲಾಗಿದೆ.

ಹಿಂಭಾಗದಲ್ಲಿ ಹಂಸಗಳ ವರ್ಣ ಬಿಳಿ, ಕೆಂಪು, ನೀಲಿ ಮಿಶ್ರಣಗಳಿಂದ ಮೆದುಗೊಳಿಸಲಾಗಿದೆ. ಸುತ್ತಲಿನ ಪರಿಸರ ನದಿ ತೀರವನ್ನು ಹಳದಿ, ಹಸಿರು, ಕೆಂಪು ಕಂದು. ವರ್ಣಗಳಿಂದ ಚಿತ್ರಿತವಾಗಿದೆ.



ಲಕ್ಷ್ಮಿಗೆ ಬಳಸಿದ ವರ್ಣಗಳು ಆಕಾಶದಲ್ಲಿನ ವರ್ಣಗಳನ್ನು ಹೋಲುತ್ತದೆ. ಕಮಲದ ಹೂ, ವಸ್ತ್ರ ಇವುಗಳನ್ನು ಸಮತೋಲನಗೊಳಿಸಿದ್ದಾರೆ. ನದಿ, ಪರಿಸರ ಇವುಗಳಲ್ಲಿ ಏಕವರ್ಣಗಳ ಬಳಕೆಯಾಗಿದ್ದು, ಹಂಸ, ಆನೆ, ಕುಬ್ಬಸ, ಬಳೆಗಳು ಕಿರೀಟದಲ್ಲಿ ಅಲ್ಲಲ್ಲಿ ವರ್ಣಗಳು ಒಂದೇ ತೆರನಾಗಿ ಸಂಯೋಜಿಸಲಾಗಿದೆ. ಇದನ್ನು ಗಮನಿಸಿದರೆ ಕಲಾವಿದನ ವರ್ಣಗಳ ಮೈವಳಿಕೆಯು ಸೂಚಿಸುತ್ತದೆ.

ಒಂದು ಅರ್ಥಪೂರ್ಣವಾದ ಚಿತ್ರ ಸಂಯೋಜನೆಯಲ್ಲಿ ವರ್ಣ, ಆಕೃತಿ, ವಸ್ತು ವಿಷಯ ಸ್ಥಳ, ಅವಕಾಶ ಇತ್ಯಾದಿಗಳು ಅಷ್ಟೇ ಅಲ್ಲದೆ ರೇಖೆಗಳು ಅಷ್ಟೆ ಪ್ರಾಮುಖ್ಯತೆ ಹೊಂದಿದೆ ಈ ಕಲಾಕೃತಿಗಳಲ್ಲಿ ಕಿರೀಟದ ಮೇಲೆ ಆಭರಣಗಳ ಮೇಲೆ (ಸೀರೆ) ವಸ್ತ್ರಗಳು ಮೇಲೆ ಕಮಲ ನೀರಿನ ಸುತ್ತಲೂ ಸೂಕ್ಷ್ಮ ಹಾಗೂ ಗಾಢವಾದ ರೇಖೆಗಳನ್ನು ಕಾಣಬಹುದು. ಆನೆ, ಹಂಸದ ಮೇಲೆಯು ವಣಗಳಿಂದ ಮೆದುಗೊಳಿಸಿ ರೇಖೆಗಳಿಂದ ಮೆದುಗೊಳಿಸಿರುವುದನ್ನು ಅಲ್ಲಲ್ಲಿ ಕಾಣಬಹುದು. ಒಟ್ಟಾರೆಯಲ್ಲಿ ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಅತ್ಯುತ್ತಮ ಕಲಾಕೃತಿ ಇದಾಗಿದೆ.

ಸೂಕ್ಷ್ಮವಾಗಿ ಗಮನಿಸಿದಾಗ ಈ ಕಲಾಕೃತಿಯಲ್ಲಿಯೂ ಸಂಯೋಜನೆಯ ನೆರಳ, ಬೆಳಕಿನ ಪ್ರಭಾವ ಹೆಚ್ಚಿರುವುದನ್ನು ಗಮನಿಸಬಹುದು. ಹಂಸದಿಂದ ಹಿಡಿದು ಆಕಾಶ, ನದಿ, ಆನೆ, ನಂತರ ಕಮಲ ಲಕ್ಷ್ಮಿಯ ವಸ್ತ್ರ ಮುಖಭಾವದವರೆಗೂ ಪ್ರೇಕ್ಷಕನ ಮನಸೆಳೆಯುತ್ತೆ ಕಣ್ಣುಗಳ ದೃಷ್ಟಿ ಹಾಯುವಂತೆ ಚಿತ್ರಿಸಲಾಗಿದೆ. ಉತ್ತಮವಾದ ಕಲಾಕೃತಿಯಾಗಿದ್ದು ಅಲ್ಲಲ್ಲಿ ಕಲಾವಿದನ ನ್ಯೂನತೆಯನ್ನು ಕಾಣಬಹುದು. ಲಕ್ಷ್ಮಿಯ ಕೈಗಳಲ್ಲಿ ಮುಖಕ್ಕೆ ಹೊಂದಂತಹ ದೇಹ ಹೆಚ್ಚು ಮುಖದ ಭಾಗಕ್ಕೆ ಗಮನವ ತೋರಿರುವದನ್ನು ಕಾಣಬಹುದು. ನೈಜತೆ ಇದ್ದರು ವಸ್ತ್ರದ ನೆರುಗೆಯಲ್ಲಿ ವಿಭಿನ್ನತೆ ಪಾಶ್ಚಾತ್ಯ ಪ್ರಭಾವವನ್ನು ಗಮನಿಸಬಹುದು. ಭಾರತೀಯ ಸಂಪ್ರದಾಯವನ್ನು ಬಳಸಿಕೊಂಡು ದೈವ ಭಾವವನ್ನು ತೋರಿಸುವ ಶೈಲಿ ಅತ್ಯುತ್ತಮವಾಗಿ ಕಾಣಬಹುದು. ದೈವದ ಕಲ್ಪನೆಯನ್ನು ಮೂಡಿಸುವಲ್ಲಿ ಕುಂಚ ಬ್ರಹ್ಮನೆಂದು ಹೇಳಬಹುದು.

ಶಕುಂತಲಾ ಪತ್ರ ಲೇಖನ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಇದನ್ನು ರಂಗವಿಲಾಸ್, ತಿರುವನಂತಪುರಂನಲ್ಲಿ ಸಂಗ್ರಹಿಸಲಾಗಿದೆ. ವಿಶ್ವಾಮಿತ್ರನಿಂದ ಮೇನಕೆಯೆಂಬ ಅಪ್ಸರೆಯಲ್ಲಿ ಜನಿಸಿದಳು. ಮೇನಕೆ ಆ ಕೂಸನ್ನು ಅಲ್ಲಿಯೇ ಬಿಟ್ಟು ದೇವಲೋಕಕ್ಕೆ ಹೋದಳು. ವಿಶ್ವಾಮಿತ್ರನೂ ತಪಸ್ಸಿಗೆ ಹೋದ, ಆಗ ಶಿಶುವನ್ನು ಶಕುಂತ(ಹಕ್ಕಿ)ಳು ಲಾ (ಕೈಕೊಂಡು) ಪೋಷಿಸುತ್ತಿದ್ದವು. ಈ ಕಾರಣದಿಂದ ಶಕುಂತಲೆಯೆಂದು ಹೆಸರು ಬಂತು ಎಂದಿದ್ದಾರೆ.[೫]

ಶಕುಂತಲೆ ಪ್ರೇಮ ಪಾಶದಲ್ಲಿ ಸಿಲುಕಿ ದುಷ್ಯಂತನಿಗೆ ಮನೋಭಿಲಾಷೆಯನ್ನು ಕಮಲದ ಪತ್ರದಿಂದ ತಿಳಿಸಬೇಕಿದೆ. ಈ ಸಂಯೋಜನೆಯ ಚಿತ್ರದಲ್ಲಿ ಕಣ್ವಾಶ್ರಮದ ಒಂದು ಬದಿಯಲ್ಲಿ ಕಲ್ಲಿನ ಮೇಲೆ

---

೦೫. ಬೆನಗಲ್ ರಾಮರಾವ್ : ಪುರಾಣನಾಮ ಚೂಡಾಮಣಿ, ಪುಟ – ೫೧೪




ಶಕುಂತಲೆ ಕಮಲದ ಪತ್ರವನ್ನು ಹಿಡಿದು ಏನೇನೋ ಬರೆದು ಕೈ ಎತ್ತಿದ್ದಾಳೆ. ಅವಳೊಟ್ಟಿಗೆ ಪ್ರಾಣ ಸಖಿಯರಾದ ಅನುಸೂಯೆ ಮತ್ತು ಪ್ರಿಯಂವದೆ ಇದ್ದಾರೆ, ಒಬ್ಬ ಸಖಿ ಪಕ್ಕದಲ್ಲಿ ತನ್ನ ಕೆನ್ನೆಯ ಮೇಲೆ ಕೈಯಿಟ್ಟುಕೊಂಡು ಯೋಚಿಸುತ್ತಿದ್ದಾಳೆ. ಇನ್ನೊಬ್ಬ ಸಖಿ ಶಕುಂತಲೆಯೂ ಎದುರಿದ್ದು, ತನ್ನ ಗಲ್ಲದ ಮೇಲೆ ಕೈಯಿಟ್ಟುಕೊಂಡು ತನ್ನ ಇನ್ನೊಂದು ಕೈ ಪತ್ರದ ಮೇಲಿದ್ದು ಮುಂದಿನ ಸಾಲುಗಳನ್ನು ಏನೆಂದು ವರ್ಣಿಸುವುದು ಎಂಬುದರ ಬಗ್ಗೆ ಚಿಂತಿಸುತ್ತಿದ್ದಾಳೆ. ಶಕುಂತಲೆ ತನ್ನ ಕಣ್ಣುಗಳನ್ನು ಮೇಲೆತ್ತಿಕೊಂಡು ಪ್ರಿಯಕರನನ್ನು ಏನೆಂದು ಸಂಬೋಧಿಸುವುದು. ಮನದ ಇಂಗಿತವನ್ನು ಹೇಗೆ ವ್ಯಕ್ತಪಡಿಸುವುದು[೬] ಎಂದು ತಿಳಿದೆ ಮಗ್ನಳಾಗಿದ್ದಾಳೆ. ತನ್ನ ಮೈ ಮೇಲಿನ ಸೆರಗು ಜಾರಿ ಬಿದ್ದಿರುವುದನ್ನು ತಿಳಿಯದಷ್ಟು ತಲ್ಲೀನಳಾಗಿದ್ದಾಳೆ. ಶಕುಂತಲೆಯ ಪ್ರೀತಿಯ ಹರಣಿಯೂ ಅವಳ ಕಾಲಿನ ಹತ್ತಿರ ಕುಳಿತು ದುಷ್ಯಂತನು ಬಂದನೇನ್ನೋ ಎಂದು ಬರುವ ಕಡೆ ಮುಖಮಾಡಿದಂತೆ ಚಿತ್ರಿಸಿದ್ದಾರೆ. ಅವರೊಂದಿಗೆ ಪುಷ್ಪದ ಬುಟ್ಟಿಯು ಮತ್ತು ಸುತ್ತಲಿನ ಪ್ರಕೃತಿ ಸ್ಪಂದಿಸುವಂತೆ ಚಿತ್ರಿಕರಿಸಲಾಗಿದೆ.

ರವಿವರ್ಮ ಕಲಾಕೃತಿಗಳಲ್ಲಿ (ಸ್ತ್ರಿ ಸಂಯೋಜನ ಕಲಾಕೃತಿಗಳಲ್ಲಿ) ಅತ್ಯಂತ ಹೆಸರು ಮಾಡಿದ ಕೃತಿ ಇದಾಗಿದೆ. ಕಲಾವಿದ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಸಲಾದ ಈ ಕಲಾಕೃತಿ, ಪ್ರಮಾಣ, ವಸ್ತು ವಿಷಯ, ಬಳಸಿರುವ ಸ್ಥಳಾವಕಾಶದ ಸಂಯೋಜನೆಯನ್ನು ಗಮನಿಸಿದಾಗ ಕಲಾವಿದನ ನೈಪುಣ್ಯತೆಯನ್ನು ಕಾಣಬಹುದು. ಶಕುಂತಲೆಯನ್ನು ಅತ್ಯಂತ ಪ್ರಧಾನವಾಗಿ ಹೆಚ್ಚು ಗಮನ ಸೆಳೆಯುವಂತಹ ಕೆಂಪು, ಹಳದಿ, ಕೇಸರಿ, ಕಂದು, ನೀಲಿ ಇತ್ಯಾದಿ ವರ್ಣಗಳನ್ನು ಬಳಸಿ ಮುಖಭಾಗ, ಕುತ್ತಿಗೆ, ಕೈ ಕಾಲುಗಳನ್ನು ಮೆದುವಾಗಿಸಿದೆ, ಮೂವರು ಸ್ತ್ರೀಯರಿಗೆ ಬೇರೆ ಬೇರೆ ವರ್ಣಗಳನ್ನು ಬಳಸಿರುವುದನ್ನು ಕಾಣಬಹುದು. ವಸ್ತ್ರಗಳಲ್ಲಿ ಯಾವುದೇ ರೀತಿಯ ಆಡಂಭರವಿಲ್ಲದೆ ಆಶ್ರಮ ವಾಸಿಯಂತಹ ವಸ್ತ್ರಗಳ ಬಳಕೆಯಾಗಿದ್ದು, ಗಾಢ ಹಾಗೂ ಮೆದುವರ್ಣಗಳ ಬಳಕೆಯಿಂದ ನೆರುಗೆಗಳಲ್ಲಿನ Fooldigsನ್ನು ಕಾಣಬಹುದು. ನೆರಳು ಬೆಳಕಿನ ಸಂಯೋಜನೆಯು ಅತ್ಯುತ್ತಮವಾಗಿದ್ದು, ತಾಳ್ಮೆಮನೋಭಾವವನ್ನು ಕಲಾವಿದನಲ್ಲಿ ಗಮನಿಸಬಹುದಾಗಿದೆ. ಸ್ತ್ರೀಯರ ಹಣೆ, ಕಣ್ಣು, ಮೂಗು, ತುಟಿ, ಕಿವಿಗಳಲ್ಲಿ ಬೆಳಕಿನ ಪ್ರಭಾವ ಪ್ರಧಾನವಾಗಿದ್ದು, ಕೈಗಳಲ್ಲಿ ಎರಡು ರೀತಿಯಿಂದಲೂ ಬೆಳಕು, ನೆರಲಿನಿಂದ ಬೇರೆ ಬೇರೆಯಾಗಿ ಗುರುತಿಸುವಂತೆ ವರ್ಣಗಳ ಬಳಕೆಯಾಗಿದ್ದು, ಮೂವರು ಸ್ತ್ರೀಯಲ್ಲಿನ ವರ್ಣಗಳು ಮಿಶ್ರಣವಾಗಿರುವಂತೆ ಚಿತ್ರಿಸಲಾಗಿದೆ.

ಜಿಂಕೆಯ ಮೇಲಿನ ವರ್ಣಗಳನ್ನು ಸ್ತ್ರೀಯ ವರ್ಣಗಳನ್ನು ಬಳಸಿ ಮೆದುವಾಗಿರುವುದನ್ನು ಕಾಣಬಹುದು. ಬುಟ್ಟಿಯಲ್ಲಿನ ಹೂಗಳಿಗೆ ಹಾಗೂ ಆಕಾಶಕ್ಕೆ ಮತ್ತು ಸ್ತ್ರೀಯರು ಕುಳಿತಿರುವ ಸುತ್ತಲಿನ ನೆಲದ ಭಾಗದಲ್ಲಿ ಹುಲ್ಲಿನ ಭಾಗ, ಹಿಂಭಾಗದಲ್ಲಿನ ಪರಿಸರವು ಒಂದೆ ವರ್ಣದಿಂದ ಅಂದರೆ ಹಸಿರು, ಹಳದಿ, ಕಂದು, ನೀಲಿ ಕೆಂಪು ಇತ್ಯಾದಿ ವರ್ಣಗಳನ್ನು ಬಳಸಿ ಮೆದು ಹಾಗೂ ಗಾಢ ವರ್ಣಗಳಿಂದ

---

೦೬. ಪ್ರೊ. ಬಿ. ಜಿ. ಅಂದಾನಿ : ಡಾ. ಎಸ್. ಎಂ. ಪಂಡಿತ, ಪುಟ – ೨೯




ಮೆತ್ತಲ್ಪಟ್ಟಿದೆ. ಒಂದು ಉತ್ತಮ ಕಲಾಕೃತಿಯ ಸಂಯೋಜನೆಯಲ್ಲಿ ಪ್ರಮುಖವಾಗಿ ಪ್ರಮಾಣ, ಭಾವ, ವಸ್ತು, ವಿಷಯ, ವರ್ಣಗಾರಿಕೆ ಇತ್ಯಾದಿ ಗುಣಗಳದೆ ರೇಖೆಯು ಮುಖ್ಯವಾಗಿದೆ. ಈ ಕಲಾಕೃತಿಯಲ್ಲಿ ಕಣ್ಣು, ಮೂಗು, ತುಟಿ, ಕಿವಿಗಳಲ್ಲಿ ಸರಳ ರೇಖೆಗಳನ್ನು ಸೂಕ್ಷ್ಮವಾಗಿ ಗಮನಿಸಬಹುದು. ಆ ರೇಖೆಗಳಲ್ಲಿ ವರ್ಣ ಮಿಶ್ರಣವಾಗಿದ್ದು, ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಗಾಢ ರೇಖೆಗಳನ್ನು ಪ್ರಕೃತಿಯ ಸುತ್ತಲೂ ಗಮನಿಸಬಹುದು. ಸ್ತ್ರೀಯ ಕುಳಿತಿರುವ ಬಂಡೆ, ಹುಲ್ಲು, ಪುಟ್ಟಿಯಲ್ಲಿನ ಹೂಗಳಲ್ಲಿ ರೇಖೆ ಗಮನ ಸೆಳೆಯುವಂತೆ ಕಲಾವಿದನು ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಈ ಕಲಾಕೃತಿಯಲ್ಲಿ ಸ್ತ್ರೀಯಲ್ಲಿ ಹೆಚ್ಚಾಗಿ ಯೂರೋಪಿಯನ್ ಪ್ರಭಾವವಿರುವುದು ಗಮನಿಸಬಹುದಾಗಿದೆ. ಭಾರತೀಯ ಸಂಪ್ರದಾಯದಿಂದ ಕೂಡಿದ್ದು, ಒಂದು ಉತ್ತಮ ಹೆಸರು ಪಡೆದಂತಹ ಕಲಾಕೃತಿಯಾಗಿದೆ.

ಕಲಾವಿದರ ಉತ್ತಮ ಕಲಾಕೃತಿಯಲ್ಲಿ ಕೆಲವೊಂದು ಕುಂದು ಕೊರತೆಗಳನ್ನು ಗಮನಿಸಬಹುದು. ಶಕುಂತಲೆಯ ಕುಬ್ಬಸವನ್ನು ನವ್ಯ ಶೈಲಿಯಲ್ಲಿ ಬಳಸಿದ ರೀತಿ ನಮ್ಮ ಸಂಪ್ರದಾಯಕ್ಕೆ ಎಲ್ಲೋ ಒಂದು ರೀತಿ ಕೊರತೆ ಕಂಡರು. ಹೊಸತನವನ್ನು ಬಳಸಿರುವ ಕಲಾವಿದನ ಬೌದ್ಧಿಕ ಮಟ್ಟವನ್ನು ತೋರುತ್ತದೆ. ಕಲಾವಿದನನ್ನು ಹೆಚ್ಚು ಗಮನವನ್ನು ತರಲು ಬೆಳಕಿನ ಕಡೆಗೆ ತೋರಿ, ಸಖಿಯ ಮುಖ ಭಾವನೆಯಲ್ಲಿ ಸ್ತ್ರೀಯ ಕೋಮಲತೆಯನ್ನು ಮೂಡಿಸುವಲ್ಲಿ ಹಾಗೂ ಕೈಗಳ ಭಾಗಗಳಲ್ಲಿ ಮುಖಭಾಗಕ್ಕಿಂತ ಕಮ್ಮಿ ಅಳತೆಯನ್ನು ಕಾಣಬಹುದು. ಏನೇಯಾಗಲಿ ನೋಡುಗನ ಗಮನ ಸೆಳೆಯುವಂತಹ ಸಂಯೋಜನೆ, ಹೊಳಪು, ಬಣ್ಣಗಾರೀಕೆ, ವಸ್ತುವಿಷಯ, ಅವನ ಕಲ್ಪನಾಶಕ್ತಿ, ಎಲ್ಲಾ ನ್ಯೂನತೆಗಳನ್ನು ಮುಚ್ಚಿಹಾಕಿ, ಉತ್ತಮ ಕಲಾಕೃತಿ ಎನ್ನಿಸುವಂತಹ ಭಾವನೆಯನ್ನು ಕಾಣಬಹುದು. ಭಾರತೀಯ ವಸ್ತುವಿಷಯ, ಪಾಶ್ಚಾತ್ಯರಲ್ಲಿ ವರ್ಣಗಳ ಬಳಕೆಯಿಂದ ಉತ್ತಮ ಕಲಾಕೃತಿಗಳನ್ನು ರಚಿಸಿದವರಲ್ಲಿ ಮೊದಲಿಗರು ಎನ್ನಬಹುದು.

ಶಕುಂತಲ ಪತ್ರ ಲೇಖನ

ಈ ಕಲಾಕೃತಿಯನ್ನು ಸಹ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಈ ಸಂಯೋಜನೆಯನ್ನು ಸಹ ದಟ್ಟವಾದ ಅರಣ್ಯದ ನಡುವೆ ಚಿತ್ರಿಕರಿಸಲಾಗಿದೆ. ಕಲ್ಲು ಬಂಡೆಗಳ ಮೇಲೆ ಕುಳಿತು ಶಕುಂತಲೆ ದುಷ್ಯಂತ ಮಹಾರಾಜನಿಗೆ ತನ್ನ ಪ್ರೇಮದ ಮನೋಭಿಲಾಷೆಯನ್ನು ಕಮಲ ಪತ್ರದಿಂದ ತಿಳಿಸಬೇಕಾಗಿದೆ. ಕಣ್ವಾಶ್ರಮದ ಅರಣ್ಯದಲ್ಲಿ ಶಕುಂತಲ ಅವಳ ಪ್ರೀತಿಯ ಸಖಿಯರಾದ ಅನುಸೂಯೆ ಮತ್ತು ಪ್ರೀಮಂವದೆಯರೊಂದಿಗೆ ಗಾಢವಾದ ಚಿಂತೆಯಲ್ಲಿದ್ದಂತೆ ಚಿತ್ರಿಕರಿಸಲಾಗಿದೆ. ಶಕುಂತಲೆಯ ಕಮಲದ ಎಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ಪತ್ರದಲ್ಲಿ ತನ್ನ ಪ್ರೀತಿಯನ್ನು ಏನೆಂದು ಸಂಭೋದಿಸಲಿ ಎಂದು ತಿಳಿಯದೆ ಚಿಂತಿಸುತ್ತಿದ್ದಾಳೆ. ಅವಳ ಸಖಿಯರಲ್ಲಿ ಒಬ್ಬ ಸಖಿಯು ಹಿಂಭಾಗದಿಂದ ಶಕುಂತಲೆಯ ಪತ್ರವನ್ನು ಹಿಡಿದುಕೊಂಡು ಚಿಂತಸ್ಥಳಾಗಿದ್ದಾಳೆ. ಇನ್ನೊಬ್ಬ ಸಖಿ ಶಕುಂತಲೆಯ ಪಕ್ಕದಲ್ಲಿ ಅವಳನ್ನೆ ನೋಡುತ್ತ ಕೆನ್ನೆ ಮೇಲೆ ಕೈ ಇಟ್ಟುಕೊಂಡು ನೋಡುತ್ತ ಚಿಂತೆಯೊಳಗೆ ಮಗ್ನಳಾಗಿದ್ದಾಳೆ



ಶಕುಂತಲೆಯ ಎದುರಿಗೆ ಪುಷ್ಪದ ಬುಟ್ಟಿಯ ಅವರ ಆಲೋಚನೆಗಳಿಗೆ ಸ್ಪಂದಿಸುವಂತೆ ತೋರಿಬರುತ್ತದೆ. ಸುತ್ತಲಿನ ಪ್ರಕೃತಿಯು ಸಮೃದ್ಧಿಯಿಂದ ಕೂಡಿ ಅವರ ತಲ್ಲಣಗಳಲ್ಲಿ ಭಾಗಿಯಾದಂತೆ ಕಲಾವಿದನು ತನ್ನ ಸೃಜನಶೀಲತೆಯನ್ನು ವ್ಯಕ್ತಪಡಿಸಿದ್ದಾನೆ.

ಶಕುಂತಲೆ ಪತ್ರಲೇಖನದಲ್ಲಿ ದುಷ್ಯಂತನಿಗೆ ತನ್ನ ಪ್ರೇಮಪಾಶದಲ್ಲಿ ಸಿಲುಕಿದ ಶಕುಂತಲೆ ತನ್ನ ಮನೋಭಿಲಾಷೆಯನ್ನು ವ್ಯಕ್ತಪಡಿಸುವಲ್ಲಿ ತನ್ನ ಮೈಮೇಲಿನ ಸೆರಗು ಜಾರಿ ಕೈ ಮೇಲೆ ಬಿದ್ದಿರುವುದನ್ನು ಗಮನಿಸಿಕೊಳ್ಳಲಾರದಷ್ಟು ಮಗ್ನತೆಯನ್ನು ಕಲಾವಿದ ಚಿತ್ರಿಸಿದ್ದಾನೆ. ಶಕುಂತಲೆಯನ್ನು ಅತ್ಯಂತ ಆಕರ್ಷಕವಾಗಿ ಚಿತ್ರಿಸಿದ್ದನ್ನು ನಾವು ಕಾಣಬಹುದು. ಸ್ತ್ರೀಯರ ಮುಖ ಭಾಗ, ಕುತ್ತಿಗೆ, ಕೈ ಕಾಲುಗಳನ್ನು ಹಳದಿ, ಕೇಸರಿ, ಕೆಂಪು, ಬಿಳಿ ಇತ್ಯಾದಿ ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಆಶ್ರಮ ವಾಸಿಯಾದ ಕಾರಣ ಹೆಚ್ಚಾಗಿ ಆಭರಣವನ್ನು ತೋರದೆ ರುದ್ರಾಕ್ಷಿ ಮಾಲೆ, ಹೂಮಾಲೆಯನ್ನು ಧರಿಸಿದ್ದಾರೆ. ಅವುಗಳು ಕೆಂಪು, ಬಿಳಿ, ಹಳದಿ ವರ್ಣಗಳನ್ನು ಮಿಶ್ರಣದಿಂದ ಮೆದುಗೊಳಿಸಿ ಅಲ್ಲಲ್ಲಿ ಹಸಿರನ್ನು ಬಳಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು.

ವಸ್ತ್ರಗಳಲ್ಲಿಯೂ ನಾವು ವ್ಯತ್ಯಾಸಗಳನ್ನು ಗಮನಿಸಬಹುದು. ಶಕುಂತಲೆಯ ವಸ್ತ್ರದಲ್ಲಿ ಹಳದಿ ಬಡ್‌ಸೇನ, ಕಂದು ವರ್ಣಗಳನ್ನು ಬಳಸಿ ಗಾಢ ಹಾಗೂ ಮೆದು ಎರಡು ರೀತಿಯಲ್ಲಿ ಮಿಶ್ರಣಗೊಳಿಸಲಾಗಿದೆ. ಶಕುಂತಲೆಯ ಸಖಿಯಲ್ಲಿನ ವಸ್ತ್ರಗಳ ಕೆಂಪು, ಕಂದು, ಬಿಳಿ, ಮಿಶ್ರಣದಿಂದ ಕೂಡಿದ ವಸ್ತ್ರದಲ್ಲಿ ಅದರಲ್ಲಿಯೂ ಗಾಢ ಹಾಗೂ ಮೆದು ವರ್ಣಲೇಪನ ಕಾಣಬಹುದು. ಇನ್ನೊಬ್ಬ ಸಖಿಯ ವಸ್ತ್ರದಲ್ಲಿ ಬಿಳಿ ಮಿಶ್ರಣ ಹಳದಿ, ಹಸಿರು ವರ್ಣ ಬಳಸಿ ಮಿಶ್ರಣಮಾಡಲಾಗಿ ಈ ಸಖಿಯ ತನ್ನ ತಲೆ ಮೇಲೆ ಸೆರಗನ್ನು ಹೊದ್ದುಕೊಂಡಿರುವಂತಿದೆ. ಪುಷ್ಪದ ಬುಟ್ಟಿಯನ್ನು ಅತ್ಯಂತ ವರ್ಣಮಯವಾಗಿ ವರ್ಣಗಳನ್ನು ಬಳಸಲಾಗಿದೆ. ಬುಟ್ಟಿಯಲ್ಲಿ ಸಖಿಯರಿಗೆ ಬಳಸಿ ದವರ್ಣವನ್ನು ಕಾಣಸಿಗುತ್ತವೆ. ಹೂಗಳು ನೈಜವಾಗಿದ್ದು, ಸುತ್ತಲಿನ ಪರಿಸರದಲ್ಲಿ ಕಂದು ಹಸಿರು, ನೀಲಿ, ಕೆಂಪು ಇತ್ಯಾದಿ ಹೊಳಪುಳ್ಳ ವರ್ಣಗಳನ್ನು ಬಳಸಿ ಚಿತ್ರಿಸಲಾಗಿದೆ. ಆಕಾಶದಲ್ಲಿ ಸ್ತ್ರೀಯ ಮೇಲಿನ ವರ್ಣಗಳನ್ನು ಬಳಸಿಕೊಂಡು ಮಿಶ್ರಣವನ್ನು ವಿಭಜಿಸಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯಾಗಿದ್ದು, ವರ್ಣಗಳ ಸಮತೋಲ ಹಾಗೂ ಬೆಳಕಿಗೆ ತಕ್ಕ ನೆರಳಿನ ಸಂಯೋಜನೆಯಾಗಿದೆ. ಅಷ್ಟೇ ಅಲ್ಲದೆ ಕೆಲವೊಂದು ಸ್ಥಳಗಳಲ್ಲಿ ನೆರಳನ್ನು ಉಪಯೋಗಿಸಿಕೊಂಡು ಸ್ತ್ರೀಯ ಚಿತ್ರಣವನ್ನು ಮಿಶ್ರಣಮಾಡಲಾಗಿದೆ. ಇಬ್ಬರ ಸ್ತ್ರೀಯ ಕಾಲುಗಳು ಸ್ಪಷ್ಟವಾಗಿ ಕಾಣುವಂತೆ ಮಿಶ್ರಣಮಾಡಲಾಗಿದೆ. ಅವರ ಕೇಶಗಳನ್ನು ಮಿಶ್ರಣಮಾಡಿರುವುದನ್ನು ಗಮನಿಸಬಹುದು. ಅಲ್ಲಲ್ಲಿ ಬೆಳಕನ್ನು ಬಳಸಿಕೊಂಡಿರುವುದನ್ನು ಕಾಣಬಹುದು. ಒಂದು ಸಂಯೋಜನೆಯ, ವರ್ಣ ಪ್ರಮಾಣ, ಮೈವಳಿಕೆ, ವಸ್ತುವಿಷಯಗಳು ಎಷ್ಟು ಪ್ರಧಾನ್ಯವಸ್ಥೆಯಲ್ಲಿದೆಯೋ ರೇಖೆಗಳು ಕೂಡ

ಅತ್ಯಮೂಲ್ಯತೆಯನ್ನು ಕಾಣಬಹುದು. ಸ್ತ್ರೀಯಲ್ಲಿನ ಕಣ್ಣು ಮೂಗು, ತುಟಿ, ಕಿವಿಗಳಲ್ಲಿ ಸೂಕ್ಷ್ಮರೇಖೆಗಳನ್ನು ಬಳಸಿ ವರ್ಣದೊಂದಿಗೆ ಮೆದುಗೊಳಿಸಲಾಗಿ. ಅವರ ರುದ್ರಾಕ್ಷಿ, ಹೂವಿನಹಾರಗಳನ್ನು ಚುಕ್ಕಿಗಳನ್ನು ಬಳಸಿಕೊಳ್ಳಲಾಗಿದೆ. ಕೈ ಬೆರಳು, ಉಗುರಿನಲ್ಲಿ ನೈಜವಾದ ರೇಖೆಗಳ ಬಳಕೆಯಾಗಿದೆ. ಅವರ ವಸ್ತುಗಳಲ್ಲಿ ಗಾಢ-ಮೆದು ರೇಖೆಗಳನ್ನು ಸಹ ಗಮನಿಸಬಹುದು. ಹೂ ಬುಟ್ಟಿಯಲ್ಲಿ ಗಾಢರೇಖೆ, ಸೂಕ್ಷ್ಮರೇಖೆಗಳನ್ನು ಒಳಗೊಂಡಿದೆ. ಸುತ್ತಲಿನ ಪರಿಸರದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಚುಕ್ಕಿಗಳು, ರೇಖೆಗಳನ್ನು ಕಾಣಬಹುದು. ಕಲಾವಿದನ್ನು ತನ್ನ ಕಲಾ ನೈಪುಣ್ಯತೆಯನ್ನು ಈ ಕಲಾಕೃತಿಯಲ್ಲಿ ಎತ್ತಿ ಹಿಡಿದಿದ್ದಾರೆ. ಅವನ ಸೃಜನಶೀಲತೆಯನ್ನು ತೋರ್ಪಡಿಸಿದ್ದಾರೆ. ಒಟ್ಟಾರೆಯಾಗಿ ಯುರೋಪಿನ ಪ್ರಭಾವಗಳು ಈ ಕಲಾಕೃತಿಗಳಲ್ಲಿ ಗಮನಾರ್ಹ ಪಾತ್ರವಾಗಿದ್ದು, ಒಂದು ಉತ್ತಮ ಕಲಾಕೃತಿಯಾಗಿದೆ.

ಈ ಕಲಾಕೃತಿಯಲ್ಲಿಯು ಸಹ ಪಾಶ್ಚಾತ್ಯ ಪ್ರಭಾವವನ್ನು ಗಮನಿಸಬಹುದು. ಶಕುಂತಲೆಯ ಕುಬ್ಬಸವನ್ನು ನವ್ಯಶೈಲಿಯನ್ನು ಕಾಣಬಹುದು. ಹಾಗೂ ಆಶ್ರಮವಾಸಿಯಾದ ಈಕೆಯ ವಸ್ತ್ರ ಹೊಳಪಿನಿಂದ ಕೂಡಿದ್ದನ್ನು ಗಮನಿಸಬಹುದು. ಪಕ್ಕದಲ್ಲಿದ್ದು ಸಖಿಯರು ಮುಖ ಭಾಗದಲ್ಲಿ ಕೋಮಲತೆಯನ್ನು ಕೊಂಚ ಕಡಿಮೆಯಾದಂತೆ ತೋರುತ್ತದೆ. ಶಕುಂತಲೆಯ ಭುಜದಭಾಗದಲ್ಲಿಯು ಸಹ ನ್ಯೂನ್ಯತೆಯನ್ನು ಕಾಣಬಹುದು. ಕಲಾವಿದನನ್ನು ಈ ಕಲಾಕೃತಿಯಲ್ಲಿ ಉತ್ತಮವಾಗಿ ಚಿತ್ರಿಸಿದ್ದು ಅಲ್ಲಲ್ಲಿ ಇಂತಹ ವಿಷಯದಲ್ಲಿ ಗಮನಹರಿಸದಿರುವುದನ್ನು ಕಾಣಬಹುದು. ಪಾಶ್ಚಾತ್ಯರ ವರ್ಣಗಳ ಬಳಕೆಯಾಗಿದ್ದು, ಶೈಲಿಯಿಂದ ಕೂಡಿದ್ದರು ಸಹ ಭಾರತೀಯ ವಿಷಯ ವಸ್ತುವ ಆಯ್ಕೆ ಇದನ್ನು ಪ್ರಧಾನವನ್ನಾಗಿಸಿರುವುದನ್ನು ಗಮನಿಸಬೇಕಾಗುತ್ತದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯಾಗಿದ್ದು ಪಾಶ್ಚಾತ್ಯದ ಪ್ರಭಾವ ಹೆಚ್ಚಾಗಿ ಕಾಣಸಿಗುತ್ತವೆ. ಇಲ್ಲಿಯು ಸಹ ಶಕುಂತಲೆ ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತಿರುವುದನ್ನು ಗಮನಿಸಬಹುದು. ಒಟ್ಟಾರೆಯಾಗಿ ಉತ್ತಮವಾದ ಕಲಾಕೃತಿಯಾಗಿದೆ.

ಶಕುಂತಲ ಪತ್ರ ಲೇಖನ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚನೆಯಾಗಿದೆ. ಶಕುಂತಲ ಪತ್ರ ಲೇಖನ. ಕಣ್ವಾಶ್ರಮದ ನದಿ ತೀರದಲ್ಲಿ ಒಂದು ಮರದ ಕೆಳಗೆ ಕುಳಿತು ಪತ್ರಲೇಖನದಲ್ಲಿ ಮಗ್ನರಾಗಿರುವುದನ್ನು ಚಿತ್ರಿಸಲಾಗಿದೆ. ಈ ಕಲಾಕೃತಿಯಲ್ಲಿ ಗಮನಾರ್ಹವಾದ ವಿಷಯವೆಂದರೆ ಶಾಕುಂತಲೆ ಮತ್ತು ಒಬ್ಬಳೆ ಸಖಿಯನ್ನು ಕಲಾಕೃತಿಯಲ್ಲಿ ಬಳಸಿಕೊಂಡಿರುವುದು. ಉದ್ದನೆಯ ಕೇಶವನ್ನು ಹೊಂದಿರುವ ಶಕುಂತಲೆಯು ಕುಳಿತಿರುವ ಭಂಗಿ ಒಂದು ಕಾಲನ್ನು ಮಡಿಚಿಕೊಂಡು ಇನ್ನೊಂದು ಕಾಲನ್ನು ಅರ್ಧ ಚಾಚಿಕೊಂಡು ಕುಳಿತಿದ್ದಾಳೆ. ಆಕಾಶದ ಕಡೆಗೆ ನೋಡುತ್ತ ಚಿಂತಾಮಗ್ನಳಾಗಿ ಕಮಲದ ಪತ್ರವನ್ನು ಕೈಯಲ್ಲಿ ಹಿಡಿದಿದ್ದು, ಏನನ್ನೊ ಬರೆದು ಚಿತ್ರಿಸುತ್ತಿದ್ದಾಳೆ, ಅವಳ (ಬಲಭಾಗದ) ಪಕ್ಕದಲ್ಲಿ ಅವಳ ಸಖಿಯು ತನ್ನ ಕೆನ್ನೆಯ ಮೇಲೆ ಕೈಯನ್ನು ಇಟ್ಟುಕೊಂಡು ಕಣ್ಣು ಮುಚ್ಚಿಕೊಂಡು ಚಿಂತಿಸುತ್ತಿದ್ದಾಳೆ.

ಶಕುಂತಲೆಯನ್ನು ಅತ್ಯಂತ ಸುಂದರವಾಗಿ ಕಾಣುವಂತೆ ಚಿತ್ರಿಸಲಾಗಿದೆ. ಉದ್ದನೆಯ ಕೇಶಕ್ಕೆ ಕಪ್ಪು, ಕೆಂದು, ನೀಲಿ ಬಳಕೆಯನ್ನು ಕಾಣಹುದು. ಯಾವುದೇ ರೀತಿಯ ನೆರಳಬೆಳಕಿನ ಸಂಯೋಜನೆ ಕಾಣುವುದಿಲ್ಲ. ಶಕುಂತಲೆ ಮತ್ತು ಸಖಿಯ ಮೇಲಿನ ವರ್ಣಗಳು ಹಳದಿ, ಕೇಸರಿ, ಕೆಂಪು, ಕಂದು, ನೀಲಿ, ಹಸಿರು ಇತ್ಯಾದಿ ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಶಕುಂತಲೆಯಲ್ಲಿ ನೆರಳು ಬೆಳಕಿನ ವ್ಯತ್ಯಾಸವನ್ನು ಅತ್ಯಂತ ಸೊಗಸಾಗಿ ಕಾಣಬಹುದು. (ಬಲ) ಅರ್ಧಭಾಗದಲ್ಲಿ ನೆರಳನ್ನು ಬಳಸಿದ್ದು ಉಳಿದ ಅರ್ಧಭಾಗ (ಎಡ)ದಲ್ಲಿ ಉತ್ತಮವಾದ ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಕಣ್ಣುಗಳನ್ನು ಆಕರ್ಷಕವಾಗಿ ಮನಸೆಳೆಯುವಂತೆ ಕಲಾವಿದ ಚಿತ್ರಿಸಿದ್ದಾನೆ. ವಸ್ತ್ರ ಸಂಯೋಜನೆಯಲ್ಲಿ ಕೆಂಪು, ನೀಲಿ, ಹಳದಿ, ಕೇಸರಿ ಇತ್ಯಾದಿ ವರ್ಣಗಳನ್ನು ಬಳಸಿ ನೆರಳು ಬೆಳಕನ್ನು ತೋರಿಸಲಾಗಿದೆ. ಅತ್ಯಂತ ಗಾಢ ಮತ್ತು ಎಂದು ಎರಡು ರೀತಿಯಲ್ಲಿ ವರ್ಣವನ್ನು ಬಳಸಲಾಗಿದೆ. ಈಕೆಯ ಕಾಲುಭಾಗದ ಪಾದವನ್ನು ಬೆರಳು ಹಿಮ್ಮಡಿಯ ಭಾಗದಲ್ಲಿ ವರ್ಣದಲ್ಲಿ ನೆರಳು ಬೆಳಕು ತೋರಿಸಲಾಗಿದೆ.

ಶಕುಂತಲೆಯ ಮತ್ತು ಸಖಿಯ ವಸ್ತ್ರದಲ್ಲಿ ಮಿಶ್ರಣ ಮಾಡಿ ತೋರಿಸಲಾಗಿದೆ. ಅವರಲ್ಲಿ ಗಾಢವಾದ ವರ್ಣಗಳ ಬಳಕೆಯಾಗಿದೆ. ಸುತ್ತಲೂ ಪ್ರಕೃತಿಯ ಪ್ರಮಾಣವನ್ನು ಕಾಣಬಹುದು. ಉತ್ತಮವಾದ ಸ್ಥಳಾವಕಾಶವನ್ನು ಬಳಸಿಕೊಂಡು ನದಿಯನ್ನು ಹಿನ್ನೆಲೆಗೆ ಮಿಶ್ರಣಮಾಡಲಾಗಿದೆ. ಬೆಟ್ಟಗಳ ಸಾಲನ್ನು ದೂರವಿರುವಂತೆ ಆಕಾಶದಲ್ಲಿರುವ ವರ್ಣಗಳು ಶಕುಂತಲೆಯ ಮುಖಭಾಗಗಳಲ್ಲಿ ಬಳಸಿದ ವರ್ಣಗಳನ್ನು ಕಾಣಬಹುದು. ಇದನ್ನು ಗಮನಿಸಿದಾಗ ವರ್ಣಗಳಲ್ಲಿ ಉತ್ತಮವಾದ ಬ್ಯಾಲೆನ್ಸ್‌ನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ಸ್ತ್ರೀಯರ ಕಣ್ಣು, ಮೂಗು, ತುಟಿ, ಕುತ್ತಿಗೆ ಕೈ ಬೆರಳುಗಳ ಕಾಲಿನ ಬೆರಳುಗಳನ್ನು ಸೂಕ್ಷ್ಮವಾದ ರೇಖೆಗಳನ್ನು ಬಳಸಿ ವರ್ಣಗಳ ಮಿಶ್ರಣಗೊಳಿಸಲಾಗಿದೆ. ಸ್ತ್ರೀಯರ ವಸ್ತ್ರಗಳಲ್ಲಿಯು ಸುತ್ತಲಿನ ಹುಲ್ಲು, ಮರಗಳು ಬೆಟ್ಟಗಳನ್ನು ರೇಖೆಗಳನ್ನು ಗಮನಾರ್ಹವಾಗಿದೆ. ಈ ಚಿತ್ರಕಲಾ ಕೃತಿಯಲ್ಲಿ ಕಲಾವಿದ ವಿಷಯಕ್ಕೆ ತಕ್ಕಂತೆ ವರ್ಣ, ವಸ್ತ್ರ, ಬಳಸಿಕೊಂಡು ಸ್ತ್ರೀಯಲ್ಲಿ ಯುರೋಪಿಯನ್ ಬಳಸಿ ಒಂದು ಉತ್ತಮ ಕಲಾಕೃತಿ ರಚನೆಮಾಡಿದ್ದಾರೆ.

ಕಲಾ ಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪಾಶ್ಚಾತ್ಯದ ಪ್ರಭಾವಗಳನ್ನು ಶಕುಂತಲೆಯ ಕುಬ್ಬಸವನ್ನು ನವ್ಯ ಶೈಲಿಯಲ್ಲಿ ಕಾಣಬಹುದು. ಅವಳ ಎತ್ತರವನ್ನು ಗಮನಿಸಿದಾಗ ಪಾಶ್ಚಾತ್ಯರನ್ನು ಹೋಲುತ್ತದೆ. ಪಾಶ್ಚಾತ್ಯ ವರ್ಣ, ಶೈಲಿಯಿಂದ ಕೂಡಿದ್ದು ಕಲಾಕೃತಿ, ಭಾರತೀಯ ಗುಣಗಳನ್ನು ವಸ್ತು ವಿಷಯಗಳನ್ನು ಬಳಸಿಕೊಂಡು ಉತ್ತಮವಾದ ಕಲಾಕೃತಿಯನ್ನು ಚಿತ್ರಿಸಿದ್ದಾರೆ.

ಶಕುಂತಲ ಪತ್ರ ಲೇಖನ

ಈ ಕಲಾಕೃತಿಯನ್ನು ಸಹ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಶಕುಂತಲಾ, ಒಬ್ಬಳೆ ಸಖಿ, ಹಾಗೂ ಅವಳ ಪ್ರೀತಿಯ ಹರಿಣಿ (ಜಿಂಕೆ)ಯನ್ನು ಕಾಣಬಹುದು. ಶಕುಂತಲೆಯು



ಒಂದು ಬಂಡೆಯ ಮೇಲೆ ಕುಳಿತು ದುಷ್ಯಂತನಿಗೆ ಪ್ರೇಮ ಪತ್ರವನ್ನು ಬರೆಯುತ್ತಿದ್ದಾಳೆ ಅವಳ ಸಖಿಯ ಪಕ್ಕದಲ್ಲಿ ಆ ಪತ್ರ (ಕಮಲದ) ಕೈ ಬೆರಳಿನಿಂದ ಹಿಡಿದುಕೊಂಡಿದ್ದಾಳೆ, ಅವಳ ಎಡಭಾಗದಲ್ಲಿ ಶಕುಂತೆಯ ಪ್ರೀತಿಯ ಹರಿಣಿ ದುಷ್ಯಂತನ ಆಗಮನ ದಾರಿಯ ಕಡೆ ಮುಖಮಾಡಿ ಕುಳಿತುಕೊಂಡಿದೆ. ಅವರ ಹಿಂಭಾಗದಲ್ಲಿ ನದಿಯು ಹರಿಯುತ್ತಿದ್ದು ಸುತ್ತಲೂ ದಟ್ಟವಾದ ಬೆಟ್ಟ ಗುಡ್ಡಗಳ ಮರಗಳನ್ನು ಕಾಣಬಹುದು.

ಶಕುಂತಲೆಯ ನೀಳವಾದ ಕೇಶರಾಶಿಯನ್ನು ಹೊಂದಿದ್ದು ಆಕರ್ಷಕವಾಗಿ ಚಿತ್ರಿಸಲಾಗಿದೆ. ಪ್ರೇಮದ ಪಾಶದಲ್ಲಿ ಸಿಲುಕಿದ ಶಕುಂತಲೆಗೆ ತನ್ನ ಮೈಮೇಲಿನ ಸೆರಗು ಜಾರಿರುವುದನ್ನು ಗಮನಿಸಿಕೊಳ್ಳಲಾರದಷ್ಟು ಮಗ್ನಳಾಗಿದ್ದಾಳೆ. ಕೂದಲು ಮುಖದ ಭಾಗದಿಂದ ಕುತ್ತಿಗೆ, ಕೈ ಕಾಲುಗಳನ್ನು ಕೆಂಪು, ಕಂದು, ಹಳದಿ, ಕೇಸರಿ ಬಣ್ಣಗಳಿಂದ ಬಳಸಿರುವುದು ಗಮನಿಸಬಹುದು. ಇವುಗಳನ್ನು ಬಳಸಿ ಮೆದುಗೊಳಿಸಲಾಗಿದೆ. ವಸ್ತ್ರವನ್ನು ಬಹಳ ಸರಳತೆಯಿಂದ ಕೂಡಿದೆ ಅದರಲ್ಲಿನ ನೆರಳು, ಬೆಳಕಿನ ಸಂಯೋಜನೆಯು ಅತ್ಯುತ್ತಮವಾಗಿದ್ದು, ಗಾಢ, ಮೆದು ವರ್ಣಗಳಿಂದ ಮರ್‍ಜ್‌ಮಾಡಲಾಗಿದೆ. ಸಖಿಯನ್ನು ಸಹ ವರ್ಣಗಳನ್ನು ಗಮನಿಸಬಹುದು.

ವಸ್ತ್ರಗಳು ಪೋಲ್ಡಿಂಗ್ ಅನ್ನು ಆಕರ್ಷಕವಾಗಿ ಚಿತ್ರಿಸಿದ್ದಾರೆ. ಅವರಲ್ಲಿನ ಸುತ್ತಲೂ ಹುಲ್ಲುಗಳನ್ನು ಘಡಾವರ್ಣದ ಬಳಕೆಯಾಗಿದೆ. ಹಸಿರು, ಕಂದು, ಬಿಳಿ ಇತ್ಯಾದಿ ಚಿಂತೆಯ ವರ್ಣವು ಕಂದು, ಕೆಂಪು, ಹಳದಿಗಳಲ್ಲಿಂದ ನೆರಲು ಬೆಳಕಿನ ಸಂಯೋಜನೆಯಾಗಿದೆ. ನದಿವರ್ಣ ಹಾಗೂ ಆಕಾಶದ ವರ್ಣಗಳನ್ನು ಗಮನಿಸಿದಾಗ ಸ್ತ್ರೀಯ ವಸ್ತ್ರದ ವರ್ಣವನ್ನು ಹೋಲುತ್ತದೆ. ಬೆಟ್ಟದ ವರ್ಣ ಹಾಗೂ ಸಖಿ ವಸ್ತ್ರವನ್ನು ಹಾಗೂ ಪರಿಸರದಲ್ಲಿ ಬಳಸಿರುವ ವರ್ಣ ಒಂದೇ ತೆರನಾಗಿರುವುದು ಗಮನಾರ್ಹವಾಗಿ ವರ್ಣಗಳನ್ನು ಬಳಸಿ ಚಿತ್ರಿಸಿದ್ದಾರೆ.

ಈ ಸಂಯೋಜನೆಯಲ್ಲಿಯು ಸಹ ರೇಖೆಗಳು ಪ್ರಧಾನವಾಗಿ ಕಾಣಬಹುದು. ಸ್ತ್ರೀಯರ ಕಣ್ಣು, ಮೂಗು, ತುಟಿ, ಕೈಭಾಗ ಬೆರಳುಗಳಲ್ಲಿ ಸೂಕ್ಷ್ಮವಾದಂತಹ ರೇಖೆಗಳ ಬಳಕೆಮಾಡಿಕೊಂಡು ವರ್ಣಗಳೊಂದಿಗೆ ಮಿಶ್ರಣಮಾಡಲಾಗಿದೆ. (ಮೆದುಗೊಳಿಸಲಾಗಿದೆ) ರುದ್ರಾಕ್ಷಿ ಹೂಮಾಲೆಯಲ್ಲಿ ರೇಕೆಗಳು ಸೂಕ್ಷ್ಮತೆಯಿಂದ ಕೂಡಿದೆ. ಅವರ ವಸ್ತ್ರಗಳಲ್ಲಿಯೂ ಘಾಡವಾದ ರೇಖೆಗಳನ್ನು ಬಳಸಿದ್ದಾರೆ. ವರ್ಣಗಳಿಂದ ಸುತ್ತಲಿನ ಪರಿಸರದಲ್ಲಿ ರೇಕೆಗಳನ್ನು ಬಳಸಲಾಗಿದೆ. ಒಟ್ಟಾರೆಯಾಗಿ ಇದು ಒಂದು ಉತ್ತಮ ಕಲಾ ಕೃತಿಯಾಗಿದೆ.

ಶಂಕುಂತಲಾ ಮತ್ತು ಸಖಿಯರು

ಈ ಕಲಾಕೃತಿಯನ್ನು ಸಹ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದ್ದು, ಇದನ್ನು ಚಿತ್ರ ಆರ್ಟ್‌ಗ್ಯಾಲರಿ, ತಿರುವನಂತಪುರಂನಲ್ಲಿ ಸಂಗ್ರಹಿಸಲಾಗಿದೆ. ಈ ಸಂಯೋಜನೆಯಲ್ಲಿ ಶಕುಂತಲೆಯ ಕಾಲಿಗೆ ಮುಳ್ಳು ಚುಚ್ಚಿಕೊಂಡಿರುವ ದೃಶ್ಯ ಇದಾಗಿರಬಹುದು. ಶಕುಂತಲೆಯು ತನ್ನ ಎಡಗಾಲನ್ನು ಮೇಲಕ್ಕೆ ಎತ್ತಿ ತನ್ನ ಕೈಯಲ್ಲಿ ಹಿಡಿದುಕೊಂಡಿದ್ದಾಳೆ. ಅವಳ ನೋಟ ಬೇರೆಯಾರನ್ನು ಆಲಿಸುವಂತೆ




ಚಿತ್ರಿಸಲಾಗಿದೆ. ಅವಳ ಸಕಿಯ ಬೆನ್ನ ಮೇಲೆ ತನ್ನ ಬಲಗೈಯನ್ನು ಇಟ್ಟುಕೊಂಡಿದ್ದಾಳೆ. ಇಬ್ಬರು ಸಖಿಯರು ಸಂಭಾಷಣೆಯಲ್ಲಿ ತೊಡಗಿದ್ದಾರೆ, ಅವರ ಮುಂಭಾಗದಲ್ಲಿ ಮುಸುಕುದಾರಿಯ ಪುರುಷಹೋಗುತ್ತಿದ್ದಾನೆ. ಸುತ್ತಲೂ ದಟ್ಟವಾದ ಬೆಟ್ಟಗುಡ್ಡಗಳು, ಅರಣ್ಯವನ್ನು ಕಾಣಬಹುದು. ಆಶ್ರಮವಾಸಿಗಳಾದ ಸ್ತ್ರೀಯನ್ನು ಮನ ಸೇಳೆಯುವಂತಹ ವಸ್ತ್ರಗಳಿಂದ ಚಿತ್ರಿಸಿರುವದನ್ನು ಕಾಣಬಹುದು. ಅವರ ಮುಖಭಾಗದಿಂದ ಕುತ್ತಿಗೆ, ಕೈ, ಬೆನ್ನು, ಕಾಲುಗಳಿಗೆ, ಹಳದಿ, ಕೇಸರಿ, ಕಂದು, ಬಿಳಿ, ಕೆಂಪು, ಬಟ್‌ಸೇನ್ಸ್, ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಶಕುಂತಲೆಯನ್ನು ಪ್ರಧಾನವಾಗಿ ಕಣ್ ಸೆಳೆಯುವಂತೆ ಚಿತ್ರಿಸಲಾಗಿದೆ. ವಸ್ತ್ರದಲ್ಲಿ ಕೇಸರಿ, ಹಳದಿ, ಕಂದು, ಕೆಂಪು ವರ್ಣಗಳಿಂದ ಮೆದುಗೊಳಿಸಿ, ಉತ್ತಮವಾದ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಹಾಗೂ ವಸ್ತ್ರ ಮುದುಡಿರುವ ಭಾಗವನ್ನು ಸೂಕ್ಷ್ಮವಾಗಿ ನೈಜತೆಗೆ ಹತ್ತಿರವಾಗುವಂತೆ ಚಿತ್ರಿಸಲಾಗಿದೆ. ಸ್ತ್ರೀಯರಲ್ಲಿ ಕೈಗಳನ್ನು ನೀಳವಾಗಿ ಚಿತ್ರಿಸಿರುವುದನ್ನು ಕಾಣಬಹುದು.

ಹಿನ್ನಲೆಯನ್ನು ಗಮನಿಸಿದಾಗ ನೆರಳು ಬೆಳಕಿನ್ನು ಪ್ರಧಾನವಾಗಿ ನೋಡುಗನ ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಬೆಟ್ಟಗುಡ್ಡಗಳಿಗೆ ನೀಲಿ ವರ್ಣಗಳಿಂದ ಮೆದುಗೊಳಿಸಿ ನೆರಳು, ಬೆಳಕನ್ನು ತೋರಿಸಲಾಗಿದೆ. ಸುತ್ತಲಿನ ನಿಸರ್ಗಕ್ಕೆ ಹಳದಿ, ಹಸಿರು, ಕಂದು, ಕೆಂಪು, ಕಪ್ಪು, ನೀಲಿ ವರ್ಣಗಳಿಂದ ಮೆದು ಹಾಗೂ ಗಾಢ ಎರಡು ರೀತಿಯಲ್ಲು ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಆಟವನ್ನು ಕಾಣಬಹುದು. ಇದರಲ್ಲಿರುವ ಪಾಶ್ಚಾತ್ಯ ಪ್ರಭಾವಗಳು ಎದ್ದು ಕಾಣುತ್ತವೆ. ಸ್ತ್ರೀಯ ಎತ್ತರಲ್ಲಿ ಹಾಗೂ ಪ್ರಕೃತಿಯಲ್ಲಿ ಪಾಶ್ಚಾತ್ಯರ ಪ್ರಭಾವವನ್ನು ಕಾಣಬಹುದು.

ಮೇನಕೆ ಮತ್ತು ಶಕುಂತಲ

ಈ ಕಲಾಕೃತಿಯನ್ನು ಸಹ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಈ ಸಂಶೋಜನೆಯ ಚಿತ್ರವನ್ನು ನೋಡಿದಾಗ ಕಲಾವಿದನ ಕಲ್ಪನೆ ಹಾಗೂ ಕಲಾವಂತಿಕೆಯನ್ನು ಕಾಣಬಹುದು. ರವಿವರ್ಮನ ಕಲಾಕೃತಿಗಳಲ್ಲಿ ಅತ್ಯಂತ ಸುಂದರ ಕಲಾಕೃತಿ ಇದಾಗಿದೆ. ವಿಭಿನ್ನತೆಯನ್ನು ಕಾಣಬಹುದು. ಮೇನಕೆ ಮತ್ತು ಶಕುಂತಲೆಯು ಆಕಾಶದಿಂದ ಒಬ್ಬರನೊಬ್ಬರು ತಮ್ಮ ಬಾಹುಗಳನ್ನು ಬಳಸಿಕೊಂಡು ಆಕಾಶದಿಂದ ಕೆಳಕ್ಕೆ ಇಳಿಯುವಂತಹ ಕಲಾಕೃತಿ ಇದಾಗಿರಬಹುದು. ತಾಯಿಯಾದ ಮೇನಕೆ ತನ್ನ ಮಗಳಾದ ಶಕುಂತಲೆಯನ್ನು ಮಮತೆಯಿಂದ ಬಳಸಿರುವ ರೀತಿ ನೈಜತೆಯಂತೆ ತೋರುತ್ತದೆ. ಶಾಕುಂತಲೆಯು ಸಹ ಅವಳ ತಾಯಿಯನ್ನು ತನ್ನ ಬಾಹುಗಳಿಂದ ಬಳಸಿ ತಾಯಿಯ ಮುಖವನ್ನು ನೋಡುತ್ತಿದ್ದಾಳೆ. ವಿಭಿನ್ನವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಕಲಾವಿದನ ಕಲ್ಪನೆಗೆ ಮೀರಿದ ಕಲಾಕೃತಿ ಇದಾಗಿದೆ.

ಸ್ತ್ರೀಯರ ಮುಖಭಾಗಕ್ಕೆ ಹಾಗೂ ಕೈ ಕಾಲುಗಳಿಗೆ ಬಿಳಿ, ಕೇಸರಿ, ಕೆಂಪು, ಹಳದಿ ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳ ಬೆಳಕನ್ನು ಕಾಣಬಹುದು. ಅವರ ವಸ್ತ್ರಗಳನ್ನು



ಹಳದಿ ಕೆಂಪು, ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಹಾರಾಡುತ್ತಿರುವ ವಸ್ತ್ರವನ್ನು ನೈಜತೆಗೆ ಹತ್ತಿರವಾಗುವಂತೆ ಚಿತ್ರಿಸಲಾಗಿದೆ. ಹಾಗೂ ಮುದುಡಿರುವ ಭಾಗಗಳನ್ನು ಉತ್ತಮವಾದ ನೆರಳು ಬೆಳಕಿನಿಂದ ಸಂಯೋಜಿಸಲಾಗಿದೆ. ಅತ್ಯಂತ ವೈಭವವು ಅಲ್ಲ, ಅಂತ್ಯತ ಬಡತನವು ಅಲ್ಲ ಮಧ್ಯಮ ವರ್ಗದವರಂತೆ ಸಾಧಾರಣ ವಸ್ತ್ರ, ಆಭರಣಗಳನ್ನು ಕಾಣಬಹುದು. ಹಿನ್ನೆಲೆಯಲ್ಲಿ ದಟ್ಟವಾದ ಮೋಡಗಳು ಸ್ತ್ರೀಯರ ಮೇಲಿನ ವರ್ಣಗಳು ಹಾಗೂ ಅಲ್ಲಲ್ಲಿ ನೀಲಿವರ್ಣ, ಕಂದು ವರ್ಣವನ್ನು ಬಳಸಿ ಮೋಡಗಳನ್ನು ಮಿಶ್ರಣಮಾಡಲಾಗಿದೆ.


ಈ ಕಲಾಕೃತಿಯಲ್ಲಿ ಯುರೋಪಿಯನ್ ಪ್ರಭಾವವನ್ನು ಕಾಣಬಹುದು. ವರ್ಣಗಳಲ್ಲಿ ಹೆಚ್ಚು ಕಂಡುಬರುತ್ತದೆ. ಕಲಾವಿದ ಸ್ತ್ರೀಯರ ಭಾವನೆಯನ್ನು ಸೆರೆಹಿಯುವಲ್ಲಿ ವಿಫಲತೆಯನ್ನು ಕಾಣಬಹುದು. ಈ ವಿಫಲತೆಯನ್ನು ಮುಚ್ಚುವಂತಹ ಭಂಗಿ, ವರ್ಣಗಳ ಬಳಕೆ ಸಂಯೋಜನೆಯಲ್ಲಿನ ವಿಭಿನ್ನತೆಗಳು ಎಲ್ಲಾ ಕೊರತೆಗಳನ್ನು ಮುಚ್ಚಿ ಹಾಕಿ ನೋಡಗನ ಗಮನ ಸೆಳೆಯುವಂತಹ ಕಲಾಕೃತಿ ಇದಾಗಿದೆ.

ಶಕುಂತಲಾ ಪ್ರಣಯ ಪತ್ರ ಲೇಖನ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ದಟ್ಟವಾದ ಕಾಡಿನಲ್ಲಿ ಶಾಕುಂತಲೆಯು ಓರೆಯಾಗಿ ಮಲಗಿದಾಕೃತಿ ಇದಾಗಿದೆ. ತಲೆಗೆ ಕೈಯನ್ನೊರೆಗೊಟ್ಟು ಪ್ರಣಯ ಪತ್ರವನ್ನು ಬರೆಯುತ್ತಲಿದ್ದಾಳೆ. ಪ್ರಿಯಂವದೆ ಮತ್ತು ಅನುಸೂಯೆಯರು ಶಿರ: ಪಾದಗಳ ಬಳಿ ಕುಳಿತಿದ್ದಾರೆ. ಕಾಲ ಬಳಿ ಕುಳಿತಿರುವವಳು ಪ್ರಿಯಂವದೆಯೋ ಅನುಸುಯೆಯೋ ನಿಶ್ಚಯಿಸುವುದಕ್ಕಾಗುವುದಿಲ್ಲ. ಒಂದು ತೆರನ ನಿಶ್ಚಿಂತಭಾವದಿಂದಲೂ, ತಲೆಯ ಬಳಿ ಕುಳಿತಿರುವವಳು ಒಂದು ಬಗೆಯ ಕುತೂಹಲದಿಂದಲೂ ಶಾಕುಂತಲೆಯ ಪತ್ರವನ್ನು ನೋಡುತ್ತಿದ್ದರೆ,[೭] ಶಾಕುಂತಲೆಯು ಪತ್ರದಲ್ಲಿ ಎರಡು ಸಾಲುಗಳನ್ನು ಬರೆದು ಮುಂದಿನ ಸಾಲುಗಳಿಗೆ ಯೋಚಿಸುತ್ತ ತನ್ನ ಕಣ್ಣುಗಳನ್ನು ಮೇಲಕ್ಕೆ ಎತ್ತಿದ್ದಾಳೆ. ಅವಳ ಪ್ರೀತಿಯ ಹರಣಿ ನೀರಿನ ಬಿಂದಿಗೆ, ಹೂಬುಟ್ಟಿಯನ್ನು ಕಾಣಬಹುದು.

ಸ್ತ್ರೀಯರಿಗೆ ಹಳದಿ, ಕೆಂಪು, ಕೇಸರಿ, ಕಂದು, ಬಿಳಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಶಾಕುಂತಲೆಯ ಪ್ರಮುಖವಾಗಿ ಚಿತ್ರಿಸಿದ್ದು, ಅವಳ ವಸ್ತ್ರಗಳಲ್ಲಿ ಹಳದಿ, ಕೇಸರಿ, ಕಂದು ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಮುದುಡಿರುವ ಭಾಗವನ್ನು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಹಿನ್ನಲೆಯ ದಟ್ಟ ಅರಣ್ಯವನ್ನು ಕಂದು, ಹಸಿರು, ಹಳದಿ, ನೀಲಿ ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ವರ್ಣ ಸಂಯೋಜನೆಯನ್ನು ಕಾಣಬಹುದು. ಪಾಶ್ಚಾತ್ಯ ಪ್ರಭಾವವನ್ನು ಶಾಕುಂತಲೆಯ ಮುಖದ ಮೇಲೆ ಕಾಣಬಹುದು. ಮತ್ತು

೦೭. ಅ. ನ. ಕೃಷ್ಣರಾಯ : ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ, ಪುಟ – ೫೧



ನಾಟಕದ ನೆರಳು ಬೆಳಕಿನ ಪ್ರಭಾವ ಹಾಗೂ ಕಲಾವಿದನ ಸೃಜನಶೀಲತೆಯನ್ನು ಕಾಣಬಹುದು. ಉತ್ತಮವಾದ ರೀತಿಯ ಕಾಪೋಜ್ ಹಾಗೂ ವಸ್ತು ವಿಷಯ ನೋಡುಗನ ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ.

ಹಂಸ ದಮಯಂತಿ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ದಮಯಂತಿಯ ಸ್ವಯಂ ವರಕ್ಕೆ ಸಂಬಂಧಿಸಿದ ಕಲಾಕೃತಿ ಇದಾಗಿದೆ. ವಿದರ್ಬ ರಾಜನಾದ ಭೀಮಭೂಪಾಲನು ದಮನೆಂಬ ಮುನಿಯ ವರಪ್ರಸಾದದಿಂದ ಪಡೆದ ಮಗಳೆ ದಮಯಂತಿ. ಅತ್ಯಂತ ರೂಪವತಿ, ಗುಣವತಿಯಾದ ದಮಯಂತಿಗೆ ಸ್ವಯಂವರ ಮಾಡುವ ಬಗ್ಗೆ ಆಲೋಚಿಸುತ್ತಿರುವುದು ದಮಯಂತಿ ತಿಳಿಯಪಡಿಸುತ್ತಾರೆ. ಅವಳು ಸಹ ಅನೇಕ ವರಗಳ ಭಾವಚಿತ್ರವನ್ನು ನೋಡಿ ಅದರಲ್ಲಿ ನಳನ ರೂಪ, ಆಡಳಿತದ ಬಗ್ಗೆ ತಿಳಿದು ತನ್ನ ಮನದಲ್ಲಿಯೆ ನೆನೆಯುತ್ತ ಅವಳ ಅಂತಪುರದಲ್ಲಿ ನಿಂತಿದ್ದಾಳೆ. ಅವರ ಅರಮನೆಯಲ್ಲಿ ಹಲವು ಬಂಗಾರದ ಹಂಸಗಳಿದ್ದು ಅವು ವಿದರ್ಬನ ಬಳಿಯಿಂದ ಎಲ್ಲಾ ಹಂಸಗಳು ದಮಯಂತಿಯ ಅಂತಪುರಕ್ಕೆ ಹಾರಿಬಂದವು. ಅದರಲ್ಲಿ ಒಂದು ಹಂಸವು ದಮಯಂತಿಯ ಮನದ ಇಂಗಿತವನ್ನು ಅರ್ಥೈಸಿಕೊಂಡು ಅವಳ ಹತ್ತಿರಬಂದು ಅವಳೊಂದಿಗೆ ಮಾತುಕಥೆಯಲ್ಲಿ ತೊಡಗಿದ್ದಾಗ. ನಿಷಧ ದೇಶದ ಅಧಿಪತಿಯಾದ ವೀರಸೇನ ರಾಜನ ಮಗನಾದ ನಳನನ್ನು ಕುರಿತು ಗುಣಗಾನ ಮಾಡಲೂ ಆರಂಭಿಸಿತು ಅವನಿಗೆ ಯಾರಿಗೂ ಸರಿಸಾಟಿಯಿಲ್ಲ, ಶ್ರೀಮಂತ ಎನ್ನುವ ಗರ್ವವಿಲ್ಲ, ಅತೀ ರೂಪವಂತನು ಎಂದು ದಮಯಂತಿಗೆ ತಿಳಿಸಿತು. ನಿನ್ನ ಭಾವಚಿತ್ರವನ್ನು ನೋಡಿ ದೇವ ಪುರುಷರು ಇವಳನ್ನು ನೋಡಿದರೆ ಮದುವೆಯಾಗಲೂ ಸಿದ್ಧನಾಗುತ್ತಾರೆ. ಅಂತಹ ರೂಪವತಿ ಯುವತಿ ಇದ್ದಾಳೆ ಎಂದು ನಳನು ಹೇಳುತ್ತಿದ್ದ ಎಂದಾಕ್ಷಣ ದಮಯಂತಿಯು ನಾಚಿಕೊಂಡು ಅವಳ ಕೈ ಕೆನ್ನೆಯನ್ನು ಆವರಿಸಿಕೊಂಡಳು, ನಳನು ಸಹ ನನ್ನ ಚಿಂತೆಯಲ್ಲಿಯೇ ಇದ್ದಾನೆ ಎಂದು ಮನವರಿಕೆ ಮಾಡಿಕೊಂಡು ಸ್ವಲ್ಪ ಸಮಯ ಮೌನವಾಗಿದ್ದು ನಂತರ ನಳನನ್ನು ನಾನು ಸಹಿತ ಮನಸ್ಸಿನಲ್ಲಿಯೇ ಆರಾಧಿಸುತ್ತಿರುವುದನ್ನು ಅರಿತುಕೊಂಡು ಅವಳು ತನ್ನ ತಂದೆಯ ಏರ್ಪಡಿಸಿದ್ದ ಸ್ವಯಂವರ ಯೋಜನೆಯ ಬಗ್ಗೆ ತಿಳಿದುಕೊಂಡಳು ಇಚ್ಛೆ ಉಳ್ಳವರಿಗೆ ಹಾರಹಾಕುವುದರ ಬಗ್ಗೆ ತಿಳಿಸಿದಳು, ಯೋಗ್ಯವಾದ ವರ ದೊರಕುವವರೆಗೂ[೦೮] ಈ ಸ್ವಯಂವರ ಮಾಡುವುದಾಗಿ ತಿಳಿಸಿದರು.

ಈ ಕಥಾ ಸಂದರ್ಭವನ್ನು ರವಿವರ್ಮ ತನ್ನ ಕಲಾ ಕೃತಿಯಲ್ಲಿ ಬಳಸಿಕೊಂಡಿರುವ ರೀತಿ ಅದ್ಭುತವಾಗಿದೆ. ಸಂಯೋಜನೆಗೆ ತಕ್ಕ ವಸ್ತು ವಿಷಯಗಳನ್ನು ಬಳಸಿಕೊಂಡಿದ್ದಾರೆ. ಹಂಸ ಮತ್ತು ದಮಯಂತಿಯನ್ನು ಅತ್ಯಂತ ಆಕರ್ಷಕವಾಗಿ ಚಿತ್ರಿಸಿರುವುದನ್ನು ನಾವು ಕಾಣಬಹುದು. ಈ ಕಲಾಕೃತಿಯಲ್ಲಿ ಸ್ತ್ರೀಯು ಮಹಾರಾಷ್ಟ್ರ ಶೈಲಿಯಲ್ಲಿದ್ದು, ಅವಳು ತನ್ನ ಎಡಗೈಯಿನ ಬೆರಳುಗಳನ್ನು ತನ್ನ ಕೆನ್ನೆ ಮೇಲೆ ಇಟ್ಟುಕೊಂಡು. ಚಿಂತಿಸುತ್ತ

೦೮. Enrico castelli : Divin Lithography, P.No. 110

ನಿಂತಿದ್ದಾಳೆ. ಹಂಸವು ಅವಳ ಎದುರಿಗೆ ನಿಂತುಕೊಂಡಿದೆ. ಸುತ್ತಲೂ ಅರಮನೆಯ ವಾತಾವರ್ಣದಿಂದ ಕೂಡಿದ್ದು, ಅಲ್ಲಿ ಕೊಳದಲ್ಲಿ ಕಮಲದ ಹೂ, ಹಾಗೂ ಹಿನ್ನೆಲೆಯಲ್ಲಿ ಪರಿಸರವನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಹಂಸ ನಿಂತಿರುವ ಸ್ಥಳದಲ್ಲಿ ಕಮಲದ ಎಲೆಗಳು ಕಾಣಸಿಗುತ್ತವೆ. ಈ ಸಂಯೋಜನೆಯನ್ನು ಕಲಾವಿದ ತನ್ನ ಭಾವನೆಗೆ ತಕ್ಕಂತೆ ಚಿತ್ರಿಸಿದ್ದಾರೆ. ಸಂಯೋಜನೆಗೆ ತಕ್ಕ ವರ್ಣಗಾರಿಕೆಯನ್ನು ಕಾಣಬಹುದು. ಸ್ತ್ರೀಯ ಮುಖಭಾಗ, ಕುತ್ತಿಗೆ, ಕೈಗಳ ಮತ್ತು ಕಾಲುಗಳಿಗೆ ಹಳದಿ, ಕೆಂಪು ಕೇಸರಿ Magenta, ಕಂದು Light Red, ಬಿಳಿ, ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿಕೊಂಡು ಮೆದುಗೊಳಿಸಿ. ನೆರಳು, ಬೆಳಕಿನ ತೋರಿಸಲಾಗಿದೆ. ವಸ್ತ್ರದಲ್ಲಿ ದಕ್ಷಿಣ ಭಾರತ ಶೈಲಿ ಸೀರೆಯನ್ನು ಉಟ್ಟಿದ್ದು ಅತ್ಯಂತ ಆಕರ್ಶಕವಾದ ವರ್ಣಗಾರಿಕೆಯಿಂದ ಕೂಡಿದೆ. ಅವಳ ಕುಬ್ಬಸ ಹಾಗೂ ಸೀರೆಗೆ Carmin, Rose madder, Crimson Lake, Red Deep Charome ornge ಕಂದು, ಹಸಿರು ಇತ್ಯಾದಿ ಮಿಶ್ರವರ್ಣಗಳನ್ನು ಮೆದುಗೊಳಿಸಲಾಗಿದೆ.

ಹಂಸವನ್ನು ನೈಜವಾಗಿ ಚಿತ್ರಿಸಿದ್ದು ಬಿಳಿ, ಕ್ರೀಮ್ ಜಾನ್‌ರೆಡ್, ಹಳದಿ ವರ್ಣಗಳನ್ನು ಬಳಸಿಕೊಂಡು ಮೆದುಗೊಳಿಸಿ ನೆರಳು ಬೆಳಕನ್ನು ತೋರಿಸಲಾಗಿದೆ. ಈ ಕೃತಿಯಲ್ಲಿ ರೇಖೆಗಳನ್ನು ಪ್ರಧಾನವಾಗಿ ಗಮನಿಸಬಹುದು (ಬಳಸಿಕೊಳ್ಳಲಾಗಿದೆ). ದಮಯಂತಿಯ ಕುಬ್ಬಸದಿಂದ ಕೈವರೆಗೂ ಹಾಗೂ ಬೆರಳುಗಳು, ಆಭರಣ ವಸ್ತ್ರದ ಮೇಲೆ ಗಾಢ ಹಾಗೂ ಮೆದು ರೇಖೆಗಳನ್ನು ಬಳಸಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಹಂಸದ ಪುಕ್ಕಗಳ ಮೇಲೆ, ಅರಮನೆಯ ಸುತ್ತಲಿನ ಕಂಬಗಳ ಹಾಗೂ ಮೆಟ್ಟಿಲಿನ ಮೇಲೆ ಕಮಲ ಹೂ, ಎಲೆಗಳು, ಪರಿಸರದಲ್ಲಿ ಮಿಶ್ರಣವಾಗುವಂತೆ ಚಿತ್ರಿಸಲಾಗಿದೆ. ಹಂಸ ನಳನ ಮಹಾರಾಷ್ಟ್ರದ ಸ್ತ್ರೀಯ ಎತ್ತರ ನಿಲುವು, ಇವುಗಳಲ್ಲಿ ಕೊಂಚ ನ್ಯೂನ್ಯತೆ ಕಂಡುಬಂದರು ಕಲಾವಿದನು ಅವನ ತಂತ್ರಗಾರಿಕೆ, ವರ್ಣಗಳಿಂದ ಪಾಶ್ಚಾತ್ಯರಿಂದ ಭಾರತೀಯ ಕಲಾಕೃತಿಯನ್ನು ಅದರಂತೆ ನಾವು ಉತ್ತಮ ಕಲಾಕೃತಿಗಳನ್ನು ರಚಿಸಬಲ್ಲೆವು ಎಂದು ತೋರಿಸಿಕೊಟ್ಟವರಲ್ಲಿ ರವಿವರ್ಮ ಗಮನಾರ್ಹರಾಗಿದ್ದಾರೆ.

ದಮಯಂತಿ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈ ವರ್ಣದಿಂದ ಚಿತ್ರಿಸಲಾಗಿದೆ. ಇದು ಜಗನ್ ಮೋಹನ್ ಪ್ಯಾಲೆಸ್, ಮೈಸೂರ್‌ನಲ್ಲಿ ಸಂಗ್ರಹಗೊಂಡಿದೆ. ದಮಯಂತಿ ದುಃಖಿಸುತ್ತಿರುವ ಕಲಾಕೃತಿಯಾಗಿದೆ. ಪುಷ್ಕರನ ಸಂಗಡ ಜೂಜಾಡಿ ರಾಜ್ಯವನ್ನು ಕಳೆದುಕೊಂಡು ದಮಯಂತಿಯೊಂದಿಗೆ ಕಾಡಿಗೆ ಬದ್ದರು, ಅಲ್ಲಿ ಕಂಡುಬರುವ ಕೆಲವು ಹಕ್ಕಿಗಳನ್ನು ಹಿಡಿಯುವುದಕ್ಕಾಗಿ ತಾನು ಹೊದ್ದುಕೊಂಡಿದ್ದ ಉತ್ತರೀಯವನ್ನು ಎಸೆಯಲಾಗಿ, ಅವು ಆ ವಸ್ತವನ್ನು ಎತ್ತಿಕೊಂಡು ಹಾರಿ ಹೊದದ್ದು ಬಳಿಕ ದಮಯಂತಿ ಉಟ್ಟಿದ್ದ ಸೀರೆಯ ಸೆರಗನ್ನು ಹರಿದುಹೊದ್ದುಕೊಂಡು, ರಾತ್ರಿ ಮಲಗಿರುವಾಗ ದಮಯಂತಿಯನ್ನು ಬಿಟ್ಟುಹೊದುದ್ದರ[೦೯]

೦೯. ಬೆನಗಲ್ ರಾಮರಾವ್ : ಪುರಾಣನಾಮ ಚೂಡಾಮಣಿ, ಪುಟ – ೩೪೭

ಸನ್ನಿವೇಶವನ್ನು ಕಲಾವಿದ ತನ್ನ ಕಲಾಕೃತಿಯಲ್ಲಿ ಸ್ತ್ರೀಯ ನೋವಿನ ಯಾತನೆಯನ್ನು, ಆಶ್ಚರ್ಯದ ಸೂಚನೆಯನ್ನು ಕಲಾವಿದ ತನ್ನ ಕಲಾಕೃತಿಯಿಂದ ಚಿತ್ರಿಸಲೂ ಪ್ರಯತ್ನಿಸಿದ್ದಾನೆ.

ಈ ಸಂಯೋಜನೆಯಲ್ಲಿ ದಮಯಂತಿ ನಿದ್ದೆಯಿಂದೆದ್ದು ತನ್ನ ಪತಿಯಾದ ನಳನನ್ನು ನೆನೆಸುತ್ತ ಏಕಾಂಗಿಯಾಗಿ ಕಣ್ಣೀರು ಸುರಿಸುತ್ತ ಕಲ್ಲಿನ ಮೇಲೆ ಕುಳಿತಿರುವ ದೃಷ್ಯಾಂತವನ್ನು ಮನಕರಗುವಂತೆ ಚಿತ್ರಿಸಲಾಗಿದೆ. ಕುಳಿತಿರುವ ಭಂಗಿ ಬಲಗಾಲನ್ನು ಕಲ್ಲಿನ ಮೇಲೆ ಅರ್ಧ ಮಡಿಚಿ ಕೈಯನ್ನು ತಲೆಯ ಮೇಲೆ ಇಟ್ಟುಕೊಂಡು ಕುಳಿತಿದ್ದಾಳೆ ಎಡಗೈಯನ್ನು ತೊಡೆ ಮೇಲೆ ಕಾಣಬಹುದು. ದಮಯಂತಿಯ ಹಿನ್ನೆಲೆಯಲ್ಲಿ ದಟ್ಟವಾದ ಕಾಡು ಅವಳ ಪಕ್ಕದಲ್ಲಿ ಮರ ಕಾಣಬಹುದು. ಅವಳ ಕಾಲಿನ ಸ್ವಲ್ಪ ಪಟ್ಟದಲ್ಲಿ ಹಾವೊಂದು ಅವಳ ಬಳಿ ಬರುವಂತೆ ಚಿತ್ರಿಸಲಾಗಿದೆ. ಕಲಾವಿದ ಕಲ್ಪನೆ ಹಾಗೂ ನೈಪುಣ್ಯತೆಯನ್ನು ಕಾಣಬಹುದು. ಸ್ತ್ರೀಯನ್ನು ಅತಿ ಸರಳ ಹಾಗೂ ನೈಜತೆಗೆ ಹತ್ತಿರವಾದಂತೆ ಚಿತ್ರಿಸಿರುವುದು ಗಮನಾರ್ಹ, ಸ್ತ್ರೀಯ ಕೂದಲಿಗೆ ಕೆಂಪು, ಕಂದು, ವರ್ಣದಿಂದ ಮೆದುಗೊಳಿಸಲಾಗಿದೆ. ಮುಖದಿಂದ ಕುತ್ತಿಗೆ ಹಾಗೂ ಕೈ ಕಾಲುಗಳಿಗೆ ಹಳದಿ, ಕೇಸರಿ, ಬಿಳಿ, ಕೆಂಪು, ಕಂದು, ಕ್ರಿಮ್‌ಜಾನ್ ರೇಡ್ ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಿ ನೆರಳು ಬೆಳಕನ್ನೂ ತೋರಿಸಲಾಗಿದೆ.

ವಸ್ತ್ರದಲ್ಲಿ ಮಿಶ್ರವರ್ಣಗಳ ಬಳಕೆಯನ್ನು ಗಮನಿಸಬಹುದು. ಕುಬ್ಬಸಕ್ಕೆ ಕೆಂಪು ಸೀರೆಗೆ ಹಳದಿ ವರ್ಣಗಳನ್ನು ಕಾಣಬಹುದು. ಸೆರಗನ್ನು ಹರಿದುಕೊಂಡು ನಳನು ತೆಗೆದುಕೊಂಡು ಹೋಗಿರುವ ಗುರತನ್ನು ಕಾಣಬಹುದು. ಮುಸುಕಿನ ಭಾಗ ಕುಬ್ಬಸಕ್ಕೆ ಕಟ್ಟಿಕೊಂಡಿದ್ದಾಳೆ, ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಪರಿಸರವನ್ನು ದಟ್ಟವಾಗಿ ತೋರಿಸಿ ಎಲ್ಲೋ ಒಂದು ಕಡೆ ಬೆಳಕಿನ ಪ್ರಭಾವವನ್ನು ಚಿತ್ರಿಸಲಾಗಿದೆ. ಅಲ್ಲಿನ ಗಿಡ, ಬಂಡೆಗಳಿಗೆ ಬಳಸಿದ ವರ್ಣಗಳ ಹಸಿರು, ಕೆಂಪು, ಹಳದಿ, ಕಂದು, ಕಪ್ಪು ಇತ್ಯಾದಿ ಮಿಶ್ರವರ್ಣಗಳಿಂದ ಹಿನ್ನಲೆಯನ್ನು ಮೆದುಗೊಳಿಸಿ ನೆರಳು ಬೆಳಕಿನ್ನು ತೋರಿಸಲಾಗಿದೆ. ಹಾವು ತೆವಳಿಕೊಂಡು ದಮಯಂತಿಗೆ ದುಃಖದ ಕಾರಣವನ್ನು ಕೇಳಲು ಬರುತ್ತಿದೆಯೇನೋ ಎನ್ನುವ ರೀತಿ ಚಿತ್ರಿಸಲಾಗಿದೆ. ಅಲ್ಲಲ್ಲಿ ರೇಖೆಗಳಿದ್ದು ವರ್ಣದೊಂದಿಗೆ ಮಿಶ್ರಣಮಾಡಲಾಗಿದೆ. ಈ ಕಲಾಕೃತಿಯಲ್ಲಿಯು ಸಹ ಪಾಶ್ಚಾತ್ಯದ ಪ್ರಭಾವವನ್ನು ಕಾಣಬಹುದು. ಸ್ತ್ರೀಯ ಮೇಲಿನ ವರ್ಣಗಳಲ್ಲಿ ಅವಳ ದುಃಖದ ಕಣ್ಣೀರುನಿ ಹನಿ, ಮುಖ ಭಾವನೆಗಳನ್ನು ನೈಜತೆಗೆ ಹತ್ತಿರವಾಗುವಂತೆ ಚಿತ್ರಿಸಲಾಗಿದೆ. ಇವರ ಅತ್ಯುತ್ತಮ ಕಲಾ ಕೃತಿಗಳಲ್ಲಿ ಇದು ಒಂದಾಗಿದೆ.

ದಮಯಂತಿ

ಈ ಕಲಾಕೃತಿ ಕ್ಯಾನುವಾಸ್, ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಈ ಸಂಯೋಜನ ಚಿತ್ರದಲ್ಲಿ ದಮಯಂತಿ ನಳನ ಪ್ರೀತಿಯ ಸೆರೆಯಲ್ಲಿ ಸಿಲುಕಿರುವಂತೆ, ಚಿತ್ರಿಸಲಾಗಿದೆ. ಅವಳೊಂದಿಗೆ ಸಖಿಯು ಇದ್ದಾಳೆ. ದಮಯಂತಿಯನ್ನು ಅತ್ಯಂತ ಆಕರ್ಶಕವಾದ ನಿಲುವು ಅವಳ ಕೈಯಲ್ಲಿ ಎಲೆಯನ್ನು ಹಿಡಿದಿದ್ದಾಳೆ.

ಸ್ತ್ರೀಯರ ಮುಖಭಾಗದಿಂದ ಕುತ್ತಿಗೆ ಸೊಂಟ, ಕೈಗಳಿಗೆ ಹಳದಿ, ಕೇಸರಿ, ಕಂದು ಕೆಂಪು, ಕ್ರಿಂಜಾನ್‌ರೇಟ್ ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕನ್ನು ಕಾಣಬಹುದು. ವಸ್ತ್ರಕ್ಕೆ ಹಳದಿ, ಕಂದು, ಬಿಳಿ, ಕೆಂಪು ವರ್ಣಗಳಿಂದ ಮೆದುಗೊಳಿಸಲಾಗಿದೆ. ನೆರಳು ಬೆಳಕನ್ನು ಕಾಣಬಹುದು. ಸ್ತ್ರೀಯ ಮುಂದೆ ಹೂಗಳನ್ನು ವಸ್ತ್ರಕ್ಕೆ ಹಳದಿ, ಬಿಳಿ, ಕಂದು ಇತ್ಯಾದಿ ಮಿಶ್ರವರ್ಣಗಳಿಂದ ನೆರಳು ಬೆಳಕನ್ನು ತೋರಿಸಲಾಗಿದೆ.

ಕಲಾವಿದನು ದಮಯಂತಿಗೆ ಹೆಚ್ಚು ಒತ್ತು ಕೊಟ್ಟಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿ ಕೆಂಪು, ಕಂದು, ನೀಲಿ ಹಳದಿ, ಕೆಂಪು, ಬಿಳಿ ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಿ ದೂರದಲ್ಲಿ ಚಂದ್ರನ ಬೆಳಕನ್ನು ತೋರಿಸಿ ಮಿಶ್ರವಾಗುವಂತೆ ಚಿತ್ರಿಸಲಾಗಿದೆ. ರೇಖೆಗಳ ಬಳಕೆಯನ್ನು ಕಡಿಮೆ ಪ್ರಮಾಣದಲ್ಲಿ ಕಾಣಬಹುದು. ಸ್ತ್ರೀಯ ಮೂಗು, ವಸ್ತ್ರ, ಕೈ ಬಳೆಗಳಲ್ಲಿ ಕಾಣಬಹುದು. ಪಾಶ್ಚಾತ್ಯರ ಪ್ರಭಾವ ಎದ್ದು ತೋರುವಂತಹ ಕುಬ್ಬಸವನ್ನು ಗಮನಿಸಬಹುದು. ಕಲಾವಿದನ ನೈಪುಣ್ಯತೆ, ಹೊಸ ಆಲೋಚನೆ ಹಾಗೂ ಭಾರತೀಯ ವಸ್ತು ವಿಷಯ ಆಧಾರದಿಂದ ಉತ್ತಮ ಕಲಾಕೃತಿಗಳಲ್ಲೊಂದಾಗಿದೆ.

ಸೀತಾದೇವಿ

ಈ ಸಂಯೋಜನ ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲ ವರ್ಣದಲ್ಲಿ ಚಿತ್ರಿಸಲಾಗಿದೆ. ಈ ಕಲಾಕೃತಿಯನ್ನು ಸರ್ಕಾರಿ ಮ್ಯೂಸಿಯಂ, ಚೈನ್ನೈನಲ್ಲಿ ಸಂಗ್ರಹಗೊಂಡಿದೆ. ನಮ್ಮ ದೇಶದ ಸಂಪತ್ತುಗಳಲ್ಲೊಂದಾದ ರಾಮಾಯಣದ ಸೀತಿಯ ಕಲಾಕೃತಿ ಇದಾಗಿದೆ. ರಾಮಾಯಣ ಒಂದು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕತೆಯ ಸಂಪತ್ತನ್ನೂ ಹೊಂದಿದ ಭಾರತೀಯ ಗ್ರಂಥವಾಗಿದೆ. ಸೀತಾ ರಾಮನ ವಿಶ್ವಾಸನೀಯ ಪತ್ನಿಯಾಗಿದ್ದು, ಈಕೆ ವೈದೇಹ ರಾಜ ಜನಕನ ಮಗಳಾಗಿದ್ದಳು. ಆದರೆ ರಾಮನ ಚಿಕ್ಕಮ್ಮನ ಹೊಟ್ಟೆ ಕಿಚ್ಚಿನಿಂದಾಗಿ ೧೪ ವರ್ಷ ದಂಡಕ ಅರಣ್ಯದಲ್ಲಿ ವನವಾಸ ಮಾಡಿದರು ಈ ಚಿತ್ರದಲ್ಲಿ ಸೀತೆ ನಿರಾಡಂಬರ ಸೀರೆ (Plain) ಧರಿಸಿದ್ದಾಳೆ. ವರ್ಗಕ್ಕೆ ಸೇರಿದಳೆಂದು ಸೂಚಿಸುತ್ತದೆ. ರಾಮನು ರಾಕ್ಷಸ ರಾವಣನು ಕಳುಹಿಸಿದ ಮಾಯಾ ಬಂಗಾರದ ಜಿಂಕೆ ಬೇಟೆಯಾಡಲೂ ಹೋಗಿದ್ದ ಅವನ ಹಿಂದೆಯೇ ಲಕ್ಷ್ಮಣ ಹಿಂಭಾಲಿಸಿದ ರಾವಣನಿಂದ ಸೀತೆಯನ್ನು ಈಗ ರಕ್ಷಿಸುವವರು ಯಾರು ಇಲ್ಲಿ ಎಂದು ತೋರುತ್ತದೆ.[೧೦] ಎನ್ನುವಂತೆ ಕಲಾವಿದ ರವಿವರ್ಮ ಚಿತ್ರಿಸಿದ್ದಾನೆ. ಕಲಾವಿದ ಕಾಲ್ಪನಿಕತೆಯನ್ನು ಬಲಸಿರುವ ರೀತಿ ಉತ್ತಮವಾಗಿದೆ ಎನ್ನಬಹುದು.

ಈ ಕಲಾಕೃತಿಯಲ್ಲಿ ಜಗನ್ಮಾತೆಯಾದ ಸೀತಾದೇವಿಯು ಒಂದು ಶೀಲಾ ಪೀಠ ಮೇಲೆ (ಬಂಡೆಯ ಮೇಲೆ) ತಾಳೆಯಮರದ ನೆರಳಿನಲ್ಲಿ ಕುಳಿತಿದ್ದಾಳೆ. ಎರಡು ಕೈಗಳ ಮುಂಗೈ ಬೆರಳುಗಳನ್ನು ಹಿಡಿದುಕೊಂಡಿದ್ದಾಳೆ. ಕಾಲಿನ ಮುಂಗಾಲನ್ನು ಒಂದರ ಮೇಲೆ ಒಂದನ್ನು ಹಾಕಿ ಮೌನತೆಯ ಭಾವದಿಂದ

೧೦. Enrico castelli : Divin Lithography, P.No. 148

ಕುಳಿತಿದ್ದಾಳೆ. ಅವಳ ಎಡಬದಿಯಲ್ಲಿ ಗುಡಿಸಲೂ ಅದರ ಮುಂದೆ ರಾವಣ ನಿಂತಿದ್ದಾನೆ ಎನ್ನಲಾಗಿದೆ. ಬಲಬದಿಯಲ್ಲಿ ಒಂದು ಪುಷ್ಕರಣಿಯಿದೆ ಹಾಗೂ ಬೆಟ್ಟವನ್ನು ಕಾಣಬಹುದು.

ಸ್ತ್ರೀಯನ್ನು ನೈಜವಾಗಿ ಚಿತ್ರಿಸಿರುವುದನ್ನು ಗಮನಿಸಬಹುದು, ಅವಳ ಮುಖಭಾವದಿಂದ ಕುತ್ತಿಗೆ ಕೈ ಹಾಗೂ ಕಾಲುಗಳಿಗೆ ಹಳದಿ, ಕೆಂಪು, ಕೇಸರಿ, ಕೆಂಪು, ಬಿಳಿ, ಕಂದು ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ವಿಶೇಷ ಎಂದರೆ ಅವಳ ವಸ್ತ್ರದಲ್ಲಿ ಕುಬ್ಬಸವನ್ನು ಗಮನಿಸಿದಾಗ ನವ್ಯ ಕಲೆಗೆ ಹತ್ತಿರವಾದಂತೆ ಸ್ಲೀವ್‌ಲೇಸ್ ಕುಬ್ಬಸವನ್ನು ಚಿತ್ರಿಸಿರುವುದು, ನಿರಾಡಂಬರ ಸೀರೆ ಹಳದಿ, ಕಂದು, ಕೇಸರಿ, ಕೆಂಪು ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಹಾಗೂ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಅವಳ ಮೇಲಿನ ಆಭರಣಗಳನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಮುಖ ಭಾವನೆಯಲ್ಲಿ ಸರಳತೆಯನ್ನು ಕಾಣಬಹುದು.

ಅವಳು ಕುಳಿತಿರುವ ಬಂಡೆಗೆ ಬಳಸಿರುವ ವರ್ಣಗಳು ಕೆಂದು, ಕಪ್ಪು, ಕೆಂಪು, ಕೇಸರಿ ಇತ್ಯಾದಿ ಮಿಶ್ರವರ್ಣಗಳನ್ನು ಹಿಂದಿರುವ ತಾಳೆ ಮರದ ಬುಡಕ್ಕೆ ಅದೇ ವರ್ಣಗಳ ಬಳಕೆ ಕಾಣಬಹುದು. ಅದರಲ್ಲಿಯು ನೆರಳು ಬೆಳಕನ್ನು ತೋರಿಸಲಾಗಿದೆ. ಹಿನ್ನೆಲೆಯ ರಾವಣನನ್ನು ಸ್ಪಷ್ಟವಾಗಿ ಕಾಣಿಸುವುದಿಲ್ಲ ಸುತ್ತಲೂ ನೀರು, ಬೆಟ್ಟ, ಆಕಾಶ, ಆಕಾಶದಲ್ಲಿ ಬೆಳಕಿನ ಪ್ರಭಾವವನ್ನು ಹೆಚ್ಚು ತೋರಿಸಲಾಗಿದೆ. ಉತ್ತಮ ಕಲಾಕೃತಿ ಪಾಶ್ಚಾತ್ಯ ಪ್ರಭಾವಿಧರರು ವಸ್ತ್ರ ವಿಷಯ ಆಧರಿಸಿದ ಕಲಾಕೃತಿಯಾದ್ದರಿಂದ ಉತ್ತಮವಾದ ಚಿತ್ರಿಸಲಾಗಿದೆ.

ಈ ಕಲಾಕೃತಿಯ ಬಗ್ಗೆ ಶ್ರೀಮಾನ್ ಎಸ್.ಎನ್. ಜೋಶಿಯವರ ಪುಸ್ತಕದಲ್ಲಿ ಈ ಚಿತ್ರದ ವಿಚಾರವಾಗಿ ಹೀಗೆ ಟಿಪ್ಪಣಿಯಿದೆ. ಸೀತೆಯು ರಾಮನನ್ನು ಹನ್ನೆರಡು ವರ್ಷಗಳು ವನವಾಸಕ್ಕೆ ದಂಡಾರಣ್ಯಕ್ಕೆ ಹಿಂಬಾಲಿಸಿದಳು ಅಲ್ಲಿ ಸೀತಾ ರಾಮಲಕ್ಷ್ಮಣರು ಋಷಿಗಳಂತಿದ್ದರು. ಇಲ್ಲಿ ಸೀತೆಯು ಗೋದಾವರಿ ತೀರಲ್ಲಿ ಏಕಾಂಗಿಯಾಗಿ ಕುಳಿತಿರುವಂತೆ ಚಿತ್ರಿಸಲ್ಪಟ್ಟಿದ್ದಾಳೆ. ಹಿಂಬದಿಯಲ್ಲಿ ಪ್ರವಾಸಿಗಳು ನಿರ್ಮಿಸಿಕೊಂಡಿದ್ದ ತಾತ್ಕಾಲಿಕ ಪರ್ಣಕುಟೀರವನ್ನು ಕಾಣಬಹುದು. ಸೀತಾದೇವಿಯ ಉಡುಗೆತೊಡುಗೆಗಳು ಯಾರಿಗೂ ಕೀರ್ತಿತರುವಂತಿಲ್ಲ ಆಕೆಯ ಮುಖದಲ್ಲಿ ನೀರಸವಾದ ವೈಧವ್ಯದ ಕಳೆಯು ತುಂಬಿ ತುಳುಕಾಡುತ್ತಿದೆ. ದಂಡಕಾರಣ್ಯದಲ್ಲಿದ್ದ ಸೀತಾ ದೇವಿಗೆ ಯಾವ ಬಗೆಯ ದುಃಖವೂ ಇರಲಿಲ್ಲ. ರಾಮಾಯಣದಲ್ಲಿ ಶೋಕವು ಕಾಲಿಡುವುದು ಸೀತಾಪಹರಣದ ನಂತರ ಇಲ್ಲಿ ಗೋದಾವರಿ ತೀರದಲ್ಲಿ ಪಚ್ಚೆಪಯಿರುಗಳು ಜೀವದುಂಬುವ ವಾತಾವರಣದಲ್ಲಿ ಸೀತಾದೇವಿಯ ಮುಖದಲ್ಲಿ ಕಳಾಹೀನವಾದ ಶೋಕಮುದ್ರೆ ಏತಕ್ಕೆ?[೧೧] ಎಂಬ ಅಂಶವನ್ನು ಅ.ನ.ಕೃರವರು ಪ್ರಶ್ನಿಸಿದ್ದಾರೆ.

ಈ ಕಲಾಕೃತಿಯನ್ನು ಕೆಲವು ಸಾಹಿತಿಗಳು ಶಕುಂತಲಾ ಮತ್ತು ದೂರ್ವಾಸು ಎಂದು ಗುರುತಿಸಿದ್ದಾರೆ. ಆದರೆ, ಈ ಪೇಂಟಿಂಗ್ ಅನ್ನು (ಲಿಡೋಗಾಫಿ) ಮುದ್ರಣ ಮಾಡುವಾಗ ಇದು ಶಕುಂತಲೆ ಎಂದು

---

೧೧. ಅ. ನ. ಕೃಷ್ಣರಾಯ : ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ, ಪುಟ – ೪೬

ಓದಲಾಯಿತು. ನವ ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ನೈಜ ಚಿತ್ರಗಳನ್ನು ನೋಡಿದಾಗ ಇದು ದೇಶಭ್ರಷ್ಟಹೊಂದಿದ್ದಾಗ ಕಾಡಿನಲ್ಲಿರುವ ಸೀತೆಯೆಂದು[೧೨] ಗುರುತಿಸಲಾಗಿದೆ.

ಏನೇ ವಿವಾದವಿರಲಿ ಕಲಾವಿದನ ಬೌದ್ಧಿಕ ಮಟ್ಟವನ್ನು ಗುರುತಿಸಬಹುದು ಹಾಗೂ ಕಲಾನೈಪುಣ್ಯತೆಯನ್ನು ಕಾಣಬಹುದು. ವರ್ಣಗಳಲ್ಲಿ ಹೊಳಪು ಹಾಗೂ ರಾಮಾಯಣದ ವಸ್ತು ವಿಷಯಗಳು ಎಲ್ಲಾ ಕುಂದುಕೊರತೆಗಳನ್ನು ಮುಚ್ಚಿಹಾಕುತ್ತದೆ. ನೋಡುಗನ ಗಮನಸೆಳೆಯುವಂತೆ ಚಿತ್ರಿಸಲಾಗಿದೆ. ಇದು ಒಂದು ರವಿವರ್ಮನ ಕೃತಿಯಲ್ಲಿ ಉತ್ತಮವಾದ ಸ್ಥಾನ ಕಲ್ಪಿಸಿಕೊಟ್ಟಿದೆ ಎಂದರೆ ತಪ್ಪಾಗಲಾರದು.

ಸೈರಂಧ್ರಿ

ಈ ಹೆಂಗಸರಿಗೆ ಅಲಂಕಾರಗಳನ್ನು ಮಾಡುವ ದಾದಿಗೆ ಈ ಹೆಸರು ಸಲ್ಲುತ್ತದೆ. ಪಾಂಡವರ ಅಜ್ಞಾತವಾಸ ಕಾಲದಲ್ಲಿ ದ್ರೌಪದಿವಿರಾಟನ ರಾಣಿಯಾದ ಸುದೇಷ್ಣೆಯ ಬಳಿ ಶಿಲ್ಪ ಕಾರಿಣಿಯಾಗಿದ್ದಳು. ವಿರಾಟನ ಅಳಿಯ ದ್ರೌಪದಿಯ ಸೌಂದರ್ಯಕ್ಕೆ ಮಾರುಹೋಗಿದ್ದನು. ಅವಳ ಮನಸ್ಸನ್ನು ಗೆದೆಯುವ ಪ್ರಯತ್ನದಲ್ಲಿ ಸೋತು ಅವನ ತಂಗಿಯಾದ ಸುದೇಷ್ಣಳಿಗೆ ಹೇಳಿ ದ್ರೌಪದಿಯನ್ನು ಹಣ್ಣು ಪಂಲುಗಳನ್ನು ಕೊಟ್ಟು ತನ್ನ ಅರಮನೆಗೆ ಕಳುಸುವಂತೆ ಕೇಳಿಕೊಂಡನು. ನಂತರ ಸುದೇಷ್ಣಳಿಗೆ ಹೇಳಿ ದ್ರೌಪದಿಯನ್ನು ಹಣ್ಣುಹಂಪಲುಗಳನ್ನು ಕೊಟ್ಟು ತನ್ನ ಅರಮನೆಗೆ ಕಳುಹಿಸುವಂತೆ ಕೆಲಿಕೊಂಡನು, ನಂತರ ಸುದೇಷ್ಣ ವಿನಂತಿ ಮಾಡಿ ಅವಳಿಗೆ ಈ ಕೆಲಸಮಾಡಲು ಕೇಳಿಕೊಂಡಳು. ಇದಕ್ಕೆ ಒಪ್ಪಿದ ದ್ರೌಪದಿ ಮನಸ್ಸಿನಲ್ಲಿಯೇ ಕೊರಗುತ್ತ ಹೋಗುತ್ತಿರುವ ದೃಶ್ಯ ಇದಾಗಿದೆ. ಸನ್ನಿವೇಶಕ್ಕೆ ತಂಕ್ಕಂತಹ ಸಂಯೋಜನೆಯನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಪಾಶ್ಚಾತ್ಯ ಪ್ರಭಾವದಿಂದ ಕಲಾಕೃತಿ ನೋಡುಗನ ಗಮನ ಸೆಳೆಯುವಂತಿದೆ. ಆದರೆ ಅವಳ ಕೈಗಳಲ್ಲಿ ಸ್ವಲ್ಪ ಕೊರತೆಗಳಿದ್ದರು. ವಸ್ತು ವಿಷಯ ಇವನೆಲ್ಲ ಮುಚ್ಚಿಹಾಕುತ್ತದೆ. ಕಲಾವಿದನ ಕಲಾವಂತಿಕೆಯನ್ನು ಕಾಣಬಹುದು.

ದ್ರೌಪದಿ ಮತ್ತು ಸಿಂಹಿಕಾ

ದ್ರೌಪದಿಯು ಕೀಚಕನು ಮಾಡುತ್ತಿದ್ದ ಹಿಂಸೆಯನ್ನು ತನ್ನ ಪತಿಯಾದ ಭೀಮನ ಮುಂದೆ ಹೇಳಿಕೊಂಡಳು, ಭೀಮನು ಸ್ತ್ರೀವೇಶವನ್ನು ಹಾಕಿಕೊಂಡು ದ್ರೌಪದಿಯನ್ನು ಕರೆದುಕೊಂಡು ಹೋಗುತ್ತಿರುವ ದೃಶ್ಯ ಇದಾಗಿದೆ. ಉತ್ತಮವಾದ ಸಂಯೋಜನೆ ಇದ್ದಾಗಿದೆ.ದ್ರೌಪದಿಯು ಭಯದಿಂದ ಹಿಂದಕ್ಕೆ ಸರಿಯುತ್ತಿದ್ದಾಳೆ. ಅವಳನ್ನು ಸಿಂಹಿಕಾ ಅವಳನ್ನು ಕೈಯಲ್ಲಿ ಬಳಸಿ ದಾರಿ ತೋರಿಸುವಂತಹ ಭಂಗಿಯಲ್ಲಿ ಕಾಣಬಹುದು. ಉತ್ತಮವಾದ ವರ್ಣಗಾರಿಕೆ ಹಾಗೂ ನೆರಳು ಬೆಳಕನ್ನು ಕಾಣಬಹುದು. ಇಬ್ಬರ ವಸ್ತ್ರದಲ್ಲಿಯು ವಿರುದ್ಧ ವರ್ಣಗಳ ಬಳಕೆಯಾಗಿದ್ದು ಸಿಂಹಿಕಾ ಪುರುಷ ಎಂದು ಗುರುತಿಸಲೂ ಮುಖ ಹಾಗೂ ಕೈಯಲ್ಲಿನ ಗಡಸುತ್ತದ ಹಾಗೂ ಕಾಲುಗಳಲ್ಲಿ ಕಾಣಬಹುದು. ಕಲಾವಿದನ ಕಲಾನೈಪುಣ್ಯತೆ ಕಾಣಬಹುದು.

---

೧೨. Enrico castelli : Divin Lithography, P.No. 148

ಕೃಷ್ಣ ಮತ್ತು ಯಶೋಧ

ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾದ ಈ ಕಲಾಕೃತಿಯಲ್ಲಿ ಕೃಷ್ಣ ಮತ್ತು ಯಶೋಧೆಯ ಮಮತೆಯನ್ನು ಕಾಣಬಹುದು. ಈ ಕಲಾಕೃತಿಯನ್ನು ಸರ್ಕಾರಿ ಮ್ಯೂಸಿಯಂ, ಚೈನ್ನೈನಲ್ಲಿ ಸಂಗ್ರಹಗೊಂಡಿದೆ. ಶ್ರೀಮನ್ನಾರಾಯಣ ಹತ್ತು ಅವತಾರಗಳಲ್ಲಿ ಎರಡನೆಯದು, ಚಂದ್ರವಂಶದ ಯದುಕುಲದಲ್ಲಿ ಜನಿಸಿದ ಸಾತ್ವತ ರಾಜನ ಸಂತತಿಯಲ್ಲಿ ಶೂರ ರಾಜನ ಮಗನಾದ ವಸುದೇವನ ಹೆಂಡತಿಯಾದ ದೇವಕಿಯಲ್ಲಿ ಜನಿಸಿದ ಎಂಟು ಮಕ್ಕಳಲ್ಲಿ ಕಡೆಯವ, ಕೃಷ್ಣನ ಸಾಕು ತಾಯಿ ಯಶೋದ, ಈ ಸನ್ನಿವೇಶವನ್ನು ಕಲಾವಿದ ರವಿವರ್ಮ ಅತ್ಯದ್ಭುತವಾಗಿ ತನ್ನ ಆಲೋಚನೆಗೆ ತಕ್ಕಂತೆ ಸಂಯೋಜಿಸಿಕೊಂಡಿದ್ದಾನೆ. ಯಶೋಧ ಬಾಲಕೃಷ್ಣನಿಗೆ ಎನನ್ನೊ ತೋರಿಸುತ್ತಿದ್ದು ಕೃಷ್ಣನು ಅದನ್ನು ನೋಡಿ ಮುಂದಕ್ಕೆ ಹೋಗುತ್ತಿರುವಂತೆ ಕಾಲನ್ನು ಎತ್ತಿದ್ದಾನೆ. ಸಂಯೋಜನೆಯು ಬಾಲಕೃಷ್ಣನನ್ನು ಪೂರ್ಣವಾಗಿ ಚಿತ್ರಿಸಿದ್ದು ಕೈಯಲ್ಲಿ ಚಿಕ್ಕ ಕಹಳೆಯನ್ನು ಹಿಡಿದಿರುವುದನ್ನು ಕಾಣಬಹುದು. ಯಶೋದೆಯನ್ನು ಅರ್ಧಭಾಗ ಮಾತ್ರ ಚಿತ್ರಿಸಲಾಗಿದೆ.

ಈ ಸಂಯೋಜನೆಯಲ್ಲಿ ಅತ್ಯಂತ ಗಮನ ಸೆಳೆಯುವಂತಹುಗಳು ವಿಜೃಂಭಿಸುವಂತಹ ವಿನ್ಯಾಸಗಳನ್ನೊಳಗೊಂಡ ಆಭರಣಗಳು, ಹಾಗೂ ಆಕರ್ಶಕವಾಗಿ ಚಿತ್ರಿಸಿರುವ ಸ್ತ್ರೀ ಚಿತ್ರಣ ಹಾಗೂ ಮಗುವಿನ ಚಿತ್ರಣ ಅತ್ಯಂತ ರಮಣೀಯತೆಯಿಂದ ಕೂಡಿದೆ. ಸ್ತ್ರೀಯ ಹಾಗೂ ಮಗುವಿನ ಮೇಲೆ ಹಳದಿ, ಕೆಂಪು, ಕೇಸರಿ, ಹಸಿರು, ಕಂದು, Raw sienna, ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಭಾವನೆಗೆ ತಕ್ಕಂತಹ ವರ್ಣಗಳ ಬಳಕೆಯನ್ನು ಗಮನಿಸಬಹುದು. ಉತ್ತಮಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಯಶೋದ ಅತ್ಯಂತ ಹೊಳಪು, ವರ್ಣಗಳಿಂದ ನೈಜವಾಗಿಯೇ ಮೂಡಿಬಂದಿರುವದನ್ನು ಗಮನಿಸಬಹುದು. (ಕೃಷ್ಣನ) ಮಗು ಮೇಲಿನ ಆಭರಣಗಳನ್ನು ಮುತ್ತು, ಕೆಂಪು ಹರಳುಗಳನ್ನು ಹಾಗೂ ಹಸಿರು ಹರಳುಗಳನ್ನು ಉಪಯೋಗಿಸಿ ನೈಜತೆಗಿಂತಲೂ ಹೆಚ್ಚು ಹೊಳಪುಳ್ಳ ಆಭರಣಗಳನ್ನು ಕಾಣಬಹುದು. ಸೊಂಟದ ಗೆಜ್ಜೆ ಹಾಗೂ ಕಾಲುಗೆಜ್ಜೆಯನ್ನು ಅತ್ಯಂತ ಸೊಗಸಾಗಿ ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಕೃಷ್ಣನ ಹೂಹಾರದಲ್ಲಿಯು ಕೆಂಪು ವರ್ಣಗಳನ್ನು ಬಳಸಿ ನೆರಳು ಬೆಳಕು ತೋರಿಸಲಾಗಿದೆ.

ಈ ಸಂಯೋಜನೆಯಲ್ಲಿ ವಸ್ತ್ರದಲ್ಲಿ ಸರಳತೆಯನ್ನು ಕಾಣಬಹುದು. ಅವಳ ಕುಬಸಕ್ಕೆ ಹಸಿರು, ನೀಲಿ, ಗಾಢ ವರ್ಣಗಳನ್ನು ಬಳಸಿರುವುದನ್ನು ಕಾಣಬಹುದು. ಹಾಗೂ ಸ್ತ್ರೀಯ ಸೀರೆಗೆ ಕೆಂಪು, ಕೆಂದು, ಹಳದಿ, ಹಸಿರು Venetian Red ಇತ್ಯಾದಿ ಮಿಶ್ರವರ್ಣಗಳಲ್ಲಿ ಮೆದುಗೊಳಿಸಲಾಗಿದೆ. ಅವರ ಹಿಂಭಾದಲ್ಲಿ ಪ್ರಕೃತಿಯನ್ನು ಕಾಣಬಹುದು. ಸ್ತ್ರೀಯ ವಸ್ತ್ರದಲ್ಲಿರುವ ವರ್ಣಗಳನ್ನು ಬಳಸಲಾಗಿದೆ. ಹಾಗೂ ಆಕಾಶಕ್ಕೆ ಕೃಷ್ಣನಿಗೆ ಬಳಸಿರುವ ವರ್ಣಗಳಿಂದ ಮೆದುಗೊಳಿಸಿ ಉತ್ತಮವಾದ ವರ್ಣಗಳ ಸಮತೋಲನವನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ಸೂಕ್ಷ್ಮವಾದ ರೇಖೆಗಳನ್ನು ಗಮನಿಸಬಹುದು. ಸ್ತ್ರೀಯ ಹಾಗೂ ಮಗುವಿನ ಮೇಲಿನ ಆಭರಣಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕಣ್ಣು, ಮೂಗು, ಕೈ ಕಾಲುಗಳ ಬೆರಳುಗಳಲ್ಲಿ ಸೂಕ್ಷ್ಮವಾದ ರೇಖೆಗಳನ್ನು ಕಾಣಬಹುದು. ಸ್ತ್ರೀ ಹಾಗೂ ಮಗುವಿಗೆ ಬಳಸಿದ ವರ್ಣಗಳು ಟೋನಿಂಗ್‌ಗಳಲ್ಲಿ ಪಾಶ್ಚಾತ್ಯ ಮಕ್ಕಳ ಸ್ಕಿನ್‌ಟೋನ್‌ದಂತೆಯೆ ಕಂಡುಬರುತ್ತದೆ.

ಕೃಷ್ಣನನ್ನು ಕಾಯುತ್ತಿರುವ ರಾಧ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ದಟ್ಟವಾದ ಕಾಡಿನ ಮಧ್ಯೆ ರಾಧೆಯು ಕೃಷ್ಣನನ್ನು ಕಾಯುತ್ತ ಕುಳಿತಿದ್ದಾಳೆ. ಸ್ತ್ರೀಯು ಕುಳಿತಿರುವ ಭಂಗಿ ಬಲಗೈಯನ್ನು ಕೆಳಗೆ ಊರಿಕೊಂಡು ತನ್ನ ಎಡಗೈಯನ್ನು ಮೊಣಕಾಲಿನ ಮೇಲಿನಟ್ಟು ಕೈ ಬೆರಳನ್ನು ಕೆನ್ನೆಗೆ ಆವರಿಸುವಂತೆ ಚಿತ್ರಿಸಲಾಗಿದೆ. ಅವಳ ಮುಂದೆ ಹಣ್ಣುಗಳನ್ನು, ಹಿಂಭಾಗದ ದೂರದಲ್ಲಿ ಕುಳಿತುಕೊಳುವ ಬೆಂಚನ್ನು ಕಾಣಬಹುದು.

ಸ್ತ್ರೀಯ ಮುಖ ಭಾವನೆಗಳಲ್ಲಿ ಮಂದಹಾಸವನ್ನು ಕಾಣಬಹುದು. ಮುಖಭಾಗದಿಂದ ಕುತ್ತಿಗೆ ಹಾಗೂ ಕೈ ಕಾಲುಗಳಿಗೆ ಹಳದಿ, ಕೆಂಪು, ಕೇಸರಿ, ಕೆಂದು, Raw Sienna, Naples, Yellow ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಿ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು, ಮುಖದ ಅರ್ಧಭಾಗ ನೆರಲು ಬೆಳಕಿನಿಂದ ಗುರುತಿಸಬಹುದು. ವಸ್ತ್ರದಲ್ಲಿ ಕುಬ್ಬಸ ಮತ್ತು ಸೀರೆಗೆ ಬಳಸಿರುವ ವರ್ಣಗಳು ಕೆಂಪು, ಕಂದು, ಕೇಸರಿ, ಹಳದಿ, ಹಸಿರು, ಇತ್ಯಾದಿ ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿ. ರೇಷ್ಮೆಯ ಪಟ್ಟಿಗೂ (ಬಾರ್‌ಡಾರ್) ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಹಾಗೂ ಸೀರೆಯು ಸ್ತ್ರೀಯ ಮುಂದಿರುವ ಹಣ್ಣುಗಳಲ್ಲಿ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಹಿಂಭಾಗದಲ್ಲಿ ಚಿಕ್ಕಮರದ ಮೇಲಿನ ವರ್ಣಗಳ ಸ್ತ್ರೀಯ ಮೇಲಿನ ವರ್ಣಗಳ ಬಳಕೆಯನ್ನು ಕಾಣಬಹುದು.

ಸ್ತ್ರೀಯ ಆಭರಣ, ಹಾಗೂ ಮರದಲ್ಲಿ ಎಲೆಗಳಲ್ಲಿ ಕಣ್ಣು, ಕೈ, ಕಾಲು ಹಾಗೂ ಬೆರಳು ರೇಖೆಗಳನ್ನು ಕಾಣಬಹುದು. ಮತ್ತು ಅದನ್ನು ವರ್ಣಗಳಿಂದ ಮೆದುಗೊಳಿಸಲಾಗಿದೆ. ಪ್ರಮುಖವಾಗಿ ಈ ಕಲಾಕೃತಿಯಲ್ಲಿಯ ಪಾಶ್ಚಾತ್ಯರ ಪ್ರಭಾವಗಳನ್ನು ಗುರುತಿಸಬಹುದು. ಸ್ತ್ರೀಗೆ ಬಳಸಿದ ವರ್ಣಗಾರಿಕೆಯಲ್ಲಿ ಹಾಗೂ ಹಿನ್ನಲೆಯ ನಿಸರ್ಗದಲ್ಲಿ ಕೆಲವು ಸೂಕ್ಷ್ಮತೆಗಳು ಕಂಡುಬರುತ್ತವೆ.

Shita Expecting Child

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚನೆಗೊಂಡಿದ್ದು, ಪ್ರಸ್ತುತ ಸಂದರ್ಭದಲ್ಲಿ ರಂಗ ವಿಲಾಸ ಪಾಲಸ್, ತಿರುವನಂತಪುರ(ಕೇರಳ)ದಲ್ಲಿ ಸಂಗ್ರಹಗೊಂಡಿದೆ. ಸೀತಾ ದೇವಿಯು ಗರ್ಭವತಿಯಾದಾಗ ವನವಾಸಕ್ಕೆ ಬಂದಿರುವ ದೃಶ್ಯ ಇದಾಗಿರಬಹುದು. ಕಲಾವಿದನನ್ನು ಸ್ತ್ರೀಯ ಮುಖ

ಭಾವನೆಯಲ್ಲಿ ದುಃಖದಿಂದ ಕಣ್ಣೀರು ಸುರಿಸುತ್ತಿರುವುದನ್ನು ಮನಸ್ಸನ್ನು ಕಲಕುವಂತೆ ಚಿತ್ರಿಸಿದ್ದಾನೆ. ಅವಳು ದುಃಖದಿಂದ ಅವಳ ಮೈ ಮೇಲಿನ ಆಭರಣಗಳನ್ನು ಚಲಡಿರುವುದನ್ನು ನೈಜವಾಗಿ ಸೆರೆಹಿಡಿಯಲಾಗಿದೆ. ಚಿಂತಿಸುತ್ತ ಕುಳಿತಿರುವ ರೀತಿ ನೋಡುಗನ ಗಮನ ಸೆಳೆಯುವಂತೆ ಕಾಣುತ್ತದೆ. ದಟ್ಟವಾದ ಅರಣ್ಯದಲ್ಲಿ ಒಬ್ಬಳೆ ಚಿಂತಿಸುತ್ತ ಕುಳಿತುಕೊಂಡಿದ್ದಾಳೆ.

ಪಾಶ್ಚಾತ್ಯ ವರ್ಣಗಳಿಂದ ಉತ್ತಮವಾಗಿ ಹೊಳಪುಳ್ಳಂತಹ ವಸ್ತ್ರ ಆಭರಣಗಳನ್ನು ಚಿತ್ರಿಸಿದ್ದು, ಆಕರ್ಷಕವಾಗಿದೆ. ಹಳದಿ, ಕೇಸರಿ, ಕೆಂಪು, ಹಸಿರು, ಕಂದು, ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾದೆ. ವಸ್ತ್ರದಲ್ಲಿಯು ಮೆದುತ್ವವನ್ನು ಕಾಣುವುದು. ಹಿನ್ನೆಲೆಯನ್ನು ನೆರಲಿಂದ ಚಿತ್ರಿಸಿ, ಸ್ತ್ರೀಯನ್ನು ಬೆಳಕಿನ ಪ್ರಮಾಣ ಜಾಸ್ತಿಯಾಗಿ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಕಲಾವಿದ ನಾಟಕದ ಪ್ರಭಾವವನ್ನು ಕಾಣಬಹುದು. ಸ್ತ್ರೀಯಲ್ಲಿ ಪಾಶ್ಚಾತ್ಯ ಪ್ರಭಾವವನ್ನು ಕಾಣಬಹುದು. ಅಲ್ಲಲ್ಲಿ ಕುಂದುಕೊರತೆಗಳು ಕಂಡುಬಂದರು. ವಸ್ತುವಿಷಯ ಎಲ್ಲವನ್ನು ಮುಚ್ಚಿಹಾಕುತ್ತದೆ. ಇದರಿಂದ ಇದೊಂದು ಉತ್ತಮ ಕಲಾಕೃತಿಗಳಲ್ಲೊಂದಾಗಿದೆ.

ಕಾರಾಗೃಹದಲ್ಲಿರುವ ಸ್ತ್ರೀ ಚಿತ್ರಣ

ಈ ಕಲಾಕೃತಿಯು ಚಿತ್ರ ಆರ್ಟ್‌ಗ್ಯಾಲರಿ, ತಿರುವನಂತಪುರ (ಕೇರಳ)ದಲ್ಲಿ ಸಂಗ್ರಹಗೊಂಡಿದ್ದು, ಕ್ಯಾನ್‌ವಾಸ್ ಮೇಲೆ ತಿಳಿವರ್ಣದಿಂದ ಚಿತ್ರಿಸಲಾಗಿದೆ. ಈ ಸಂಯೋಜನೆಯು ವಿಭಿನ್ನತೆಯಿಂದ ಕೂಡಿದೆ ರವಿವರ್ಮನ ಕಲಾಕೃತಿಯಲ್ಲಿ ಶ್ರೀಮಂತಿಕೆಯಿಂದ ಕೂಡಿದಾಗಿರುತ್ತದೆ. ಇಲ್ಲಿ ಭಿನ್ನವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸ್ತ್ರೀಯು ಎಷ್ಟು ಸೌಮ್ಯ, ಸುಂದರ ಸರಳತೆ, ಭಾವನೆಗಳಿಂದ ಚಿತ್ರಿಸಿರುವುದನ್ನು ಸಿಟ್ಟುಗಳನ್ನು ಕಾಣಬಹುದು.

ಸೆರೆಮನೆಯಲ್ಲಿ ಇರುವ ಸ್ತ್ರೀಯು ಅವಳ ಬಲಗೈಯಲ್ಲಿ ಕತ್ತಿಯನ್ನು ಹಿಡಿದುಕೊಂಡಿದ್ದಾಳೆ. ಎಡಗೈಯಲ್ಲಿ ಸೆರೆಮನೆಯ ಕಬ್ಬಿಣದ ಕಂಬಿಯನ್ನು ಹಿಡಿದುಕೊಂಡು ಕ್ರೂರವಾಗಿ ನೋಡುವಂತೆ ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಕಲಾವಿದ ಪ್ರಯತ್ನವನ್ನು ಈ ಕಲಾಕೃತಿಯಲ್ಲಿ ಗಮನಿಸಬಹುದು.

ಯಶೋಧ ಮತ್ತು ಕೃಷ್ಣ

ಈ ಕಲಾಕೃತಿಯಲ್ಲಿ ಸ್ತ್ರೀಯು ಕೇರಳ ಶೈಲಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಮಗುವನ್ನು ಮಿಶ್ರಣಮಾಡಿ ಅವನ ಕೈಯನ್ನು ಮಾತ್ರ ಆಕರ್ಷಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಈ ಕಲಾಕೃತಿಯಲ್ಲಿ ಸ್ತ್ರೀ ಭಾವನೆಗಿಂತಲೂ ಅವಳ ವಸ್ತ್ರ ವೈಭವಕ್ಕೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಅಕಾಡಾಮಿಕ್ ಶೈಲಿಯಲ್ಲಿದ್ದು, ಈ ಕಲಾಕೃತಿಯು ಶ್ರೀಮಂತ ಬೇಡಿಕೆಯಂತೆ ಚಿತ್ರಿಸಿರುವುದನ್ನು ಕಾಣಬಹುದು.

ಮಹಾರಾಷ್ಟ್ರದ ಸ್ತ್ರೀ

ಈ ಸಂಯೋಜನ ಚಿತ್ರದಲ್ಲಿ ಸ್ತ್ರೀಯು ತಲೆಬಾಚಿಕೊಳ್ಳುತ್ತಿರುವ ದೃಶ್ಯ ಇದಾಗಿದೆ. ಮಹಾರಾಷ್ಟ್ರದ ಸ್ತ್ರೀಯೆಂದು ಅವಳ ಉಡುಪಿನಿಂದ ಗುರುತಿಸಬಹುದು. ಅಲಂಕಾರಕ್ಕೆ ಬೇಕಾದ ವಸ್ತುಗಳ ಸಂಯೋಜನೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಕಿಟಕಿಯಲ್ಲಿ ಬೆಳಕು ಹರಿದು ಬರುವಂತೆ ಚಿತ್ರಿಸಲಾಗಿದೆ. ಉತ್ತಮವಾದ ವರ್ಣಗಳು ಬಳೆ, ಈ ಕಲಾಕೃತಿಯಲ್ಲಿ ಕಾಣಬಹುದು.

ವಿಶಾಲವಾದ ಸ್ಥಳ ಬಳಕೆ, ಅಲ್ಲಲ್ಲಿ ಅವಳಿಗೆ ಬೇಕಾದ ವಸ್ತುಗಳು ಮೇಜಿನ ಮೇಲೆ ಕಾಣಬಹುದು. ಸ್ತ್ರೀಯನ್ನು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಉದ್ದನೆಯ ಗುಂಗುರು ಕೂದಲಿನ ಸ್ತ್ರೀಯು ಕನ್ನಡಿಯನ್ನು ನೋಡುತ್ತ ಬಾಚಿಕೊಳ್ಳುತ್ತಿದ್ದಾಳೆ. ಅವಳ ಮುಖಭಾಗ ಕೈ ಕಾಲುಗಳಿಗೆ, ಹಳದಿ, ಕೆಂಪು, ಕೇಸರಿ, ವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು, ವಸ್ತ್ರದಲ್ಲಿಯು ಕೂಡ ಕೆಂಪು ಕಂದು ಪ್ರಧಾನವಾಗಿಸಿ ಉತ್ತಮ ನೆರಳು ಬೆಳಕಿನ ಹಾಗೂ ಮುದುಡಿರುವ ಭಾಗಗಳನ್ನು ನೈಜವಾಗಿ ಚಿತ್ರಿಸಲಾಗಿದೆ. ಅವಳ ಹಿಂಭಾಗದ ಉತ್ತಮವಾದ ರೇಷ್ಮೆ ಸೀರೆ, ಆಭರಣಗಳನ್ನು ಸೃಜತೆಗೆ ಹತ್ತಿರವಾಗುವಂತೆ ಚಿತ್ರಿಸಲಾಗಿದೆ. ಅವಳ ಮುಭಾಗದಲ್ಲಿ ಅವಳಿಗೆ ಬೇಕಾದ ವಸ್ತ್ರ, ಮಾಧ್ಯಮ ವರ್ಗಕ್ಕೆ ಸೇರಿದ ಸ್ತ್ರೀಯೆಂದು ಉತ್ತಮವಾಗಿ ಮೂಡಿಬಂದಿದೆ.

ಕನ್ನಡಿಯನ್ನು ನೋಡುತ್ತಿರುವ ಸ್ತ್ರೀ

ಈ ಸಂಯೋಜನ ಚಿತ್ರದಲ್ಲಿ ತಾಯಿ ಮತ್ತು ಮಗವಿನ ಮಮತೆಯನ್ನು ಕಣ್‌ಸೆಳೆಯುವಂತೆ ಚಿತ್ರಿಸಲಾಗಿದೆ. ಸ್ತ್ರೀಯು ಮಗುವಿಗೆ ಕನ್ನಡಿಯನ್ನು ತೋರಿಸುತ್ತಿದ್ದಾಳೆ. ಕೇರಳದ ಸ್ತ್ರೀಯಾಗಿದ್ದು ಸೌಮ್ಯತೆಯ ಭಾವವನ್ನು ಕಾಣಬಹುದು. ಉತ್ತಮವಾದ ವರ್ಣಗಳ ಬಳಕೆ ಹಾಗೂ ನೆರಳು ಬೆಳಕನ್ನು ಕಾಣಬಹುದು. ಮಗುವಿನ ಆಟಾಡುವ ವಸ್ತುಗಳು, ಸ್ತ್ರೀ ಅವಶ್ಯಕ ವಸ್ತುಗಳು ಸಂಯೋಜನೆಗೆ ತಕ್ಕಂತೆ ಚಿತ್ರಿಸಿರುವುದನ್ನು ಕಾಣಬಹುದು. ಮಧ್ಯಮ ವರ್ಗದ ಜೀವನವನ್ನು ಚಿತ್ರಣದಲ್ಲಿ ಸೆರೆಹಿಡಿದಿರುವುದನ್ನು ಕಾಣಬಹುದು.

ತಾಯಿ ಮತ್ತು ಮಗು

ಈ ಕಲಾಕೃತಿಯಲ್ಲಿ ಸ್ತ್ರೀಯು ಮಗುವಿಗೆ ಹಾಲೂಣಿಸುತ್ತಿದ್ದಾಳೆ. ಕಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಸ್ತ್ರೀಯು ದಿಂಬುವಿಗೆ ಒರಗಿಕೊಂಡು ನಿದ್ರಿಸುತ್ತಿದ್ದಾಳೆ. ಅವಳ ಕೈಯನ್ನು ತಲೆಯ ಮೇಲೆ ಇಟ್ಟುಕೊಂಡಿದ್ದಾಳೆ. ಅವಳ ಎದೆಯ ಭಾಗವನ್ನು ಅರೆನಗ್ನವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಮಗುವನ್ನು ಹಾಲುಣಿಸುತ್ತಿದ್ದು ನೋಡುಗನ ಕಡೆಗೆ ತಿರುಗಿದೆ. ಉತ್ತಮವಾದ ವರ್ಣಗಾರಿಕೆಯನ್ನು ಕಾಣಬಹುದು. ಅವರ ಮುಖಭಾಗದಿಂದ ಕೈ ಎದೆಯಭಾಗಕ್ಕೆ ಕೇಸರಿ, ಬಿಳಿ, ಕೆಂಪು, ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಿ ಉತ್ತಮವಾದ ನೆರಳು ಬೆಳಕಿನೊಂದಿಗೆ ಪೂರ್ಣಗೊಳಿಸಲಾಗಿದೆ.



ಅವರ ವಸ್ತ್ರದಲ್ಲಿ ವಿರುದ್ಧ ವರ್ಣಗಳ ಬಳಕೆಯನ್ನು ಕಾಣಬಹುದು. ಸೀರೆ ಕೆಂಪುವರ್ಣ ಹಾಗೂ ಕುಬ್ಬಸಕ್ಕೆ ಹಳದಿ ಹಸಿರು, ಕಂದು ಮಿಶ್ರಣದಲ್ಲಿ ಕಾಣಬಹುದು. ಹಿನ್ನಲೆಯನ್ನು ಪ್ಲೇನ್ ಆಗಿ ಕಾಣಬಹುದು. ಪಾಶ್ಚಾತ್ಯ ಪ್ರಭಾವಗಳನ್ನು ಈ ಕಲಾಕೃತಿಯಲ್ಲಿಯು ಕಾಣಬಹುದು. ವಿಭಿನ್ನವಾದ ಕಲಾಕೃತಿಗಳಲ್ಲಿ ಒಂದಾಗಿದೆ.

ಕೇರಳದ ಸ್ತ್ರೀ

ಹೂವನ್ನು ಪೋಣಿಸುತ್ತಿರುವ ಕೇರಳದ ಸ್ತ್ರೀಯಾಗಿದ್ದು ಅತ್ಯಂತ ಆಕರ್ಷಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಮುಖ ಭಾವಕ್ಕಿಂತಲೂ, ವಸ್ತ್ರ, ಆಭರಣ, ಹೂಗಳನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಪಾಶ್ಚಾತ್ಯ ವರ್ಣಗಳಿಂದ ಉತ್ತಮ ಹೊಳಪನ್ನು ಮೂಡಿಸುವಂತೆ ಕಲಾವಿದ ನೈಪುಣ್ಯತೆಯನ್ನು ಕಾಣಬಹುದು. ನೆರಳು ಬೆಳಕಿನ ಪ್ರಮಾಣ ಉತ್ತಮವಾಗಿದ್ದು ನೋಡುಗನಿಗೆ ಗಮನ ಸೆಳೆಯುವಂತಹ ಕಲಾಕೃತಿ ಇದಾಗಿದೆ.

ದೃಷ್ಟಿತೆಗೆಯುತ್ತಿರುವ ಸ್ತ್ರೀ ಸಂಯೋಜನ ಚಿತ್ರಣ

ಈ ಒಂದು ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಕೃಷ್ಣನಿಗೆ ದೃಷ್ಟಿತೆಗೆಯುವ ಸನ್ನಿವೇಶದ ಕಲಾಕೃತಿಯಾಗಿದೆ, ತಾಯಿ ಮತ್ತು ಮಗು ಒಂದು ಮೇಜಿನ ಮೇಲೆ ಕುಳಿತುಕೊಂಡಿದ್ದಾರೆ. ಅವಳ ಎದುರಿಗೆ ಇಬ್ಬರು ಸ್ತ್ರೀಯರು ದೃಷ್ಟಿತೆಗೆಯಲೂ ಆರತಿ ತಟ್ಟೆಯನ್ನು ಕೈಯಲ್ಲಿ ಹಿಡಿದುಕೊಂಡಿದ್ದಾಳೆ. ತಾಯಿಯ ಬಲಬಾಗದಲ್ಲಿ ಒಬ್ಬ ಸ್ತ್ರೀಯು ಕುಳಿತಿದ್ದಾರೆ. ಎಡಭಾಗದಲ್ಲಿ ಒಬ್ಬಳು ಬಾಗಿದ್ದು ಇನ್ನೊಬ್ಬಳು ಕುಳಿತಿದ್ದಾಳೆ. ಸಂಯೋಜನೆಗೆ ತನ್ನ ವಸ್ತ್ರಗಳನ್ನು ಬಳಸಿಕೊಂಡು ಅವರ ಸುತ್ತಲೂ ಅಲ್ಲಲ್ಲಿ ಕಂಬಗಳನ್ನು ಕಾಣಬಹುದು.

ಸ್ತ್ರೀಯರಲ್ಲಿ ಮಹಾರಾಷ್ಟ್ರದ ಮತ್ತು ಕೇರಳದ ಸ್ತ್ರೀಯರನ್ನು ಕಾಣಬಹುದು. ಕಲಾವಿದ ಹೆಚ್ಚಾಗಿ ತಾಯಿ ಮತ್ತು ಮಗುವನ್ನು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಸ್ತ್ರೀಯ ಮೇಲೆ ಹಳದಿ, ಕೇಸರಿ Burnt Sienna, Naples, Yellow ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಮುಖದ ಭಾಗಗಳಲ್ಲಿ ಹೆಚ್ಚು ನೆರಳು ಬೆಳಕಿನ ಪ್ರಭಾವ ಹೆಚ್ಚಿರುವಂತೆ ಚಿತ್ರಿಸಲಾಗಿದೆ. ಅವರ ವಸ್ತ್ರದಲ್ಲಿನ ವರ್ಣಗಳ ಹೊಂದಾಣಿಕೆ, ಉತ್ತಮವಾದ ಸಂಯೋಜನೆಯಿಂದ ಕೂಡಿದೆ. ವಿರುದ್ಧ ವರ್ಣಗಳನ್ನು ಬಳಸಿಕೊಂಡು ಉತ್ತಮವಾದ ಹೊಳಪುಳ್ಳಂತೆ ಚಿತ್ರಿಸಲಾಗಿದೆ. ಬೆಳಕಿನ ಹಾಗೂ ನೆರಳಿನ ಪ್ರಭಾವವು ಕಣ್‌ಗಳಿಗೆ ಆಕರ್ಷಣೆಯನ್ನುಂಟುಮಾಡುತ್ತದೆ. ಸ್ತ್ರೀಯರ ವರ್ಣಗಳೊಂದಿಗೆ ಮಿಶ್ರಣವಾಗುವಂತೆ ಮೆದುಗೊಳಿಸಲಾಗಿದೆ. ಈ ಸಂಯೋಜನೆಯಲ್ಲಿ ಮಗುವನ್ನು ಗಮನಸೆಳೆಯುವಂತೆ ಚಿತ್ರಿಸಿದ್ದು, ಬೆಳಕು ಮಗುವಿಂದ ಹರಿದು ಬಂದಂತೆ ಕಾಣುತ್ತದೆ.

ಕಲಾವಿದ ಈ ಸಂಯೋಜನೆಯ ಕಲ್ಪನೆಯನ್ನು ಪಾಶ್ಚಾತ್ಯರ ಮೆರಿ, ಏಸುವಿನ ಪ್ರಭಾವದಿಂದ ಕಲಾಕೃತಿಯ ಚಿತ್ರಿಸಿರುವುದನ್ನು ಗಮನಿಸಬಹುದು. ಏಸುವಿನ ಜನನ ಕಲಾಕೃತಿಗಳ ಪ್ರಭಾವದಿಂದ,



ಕೃಷ್ಣನ ದೃಷ್ಟಿತಗೆಯುವ ಕಲಾಕೃತಿಯನ್ನು ಕಾಣಬಹುದು. ಕಲಾವಿದನ ಪ್ರಯತ್ನವು ಉತ್ತಮ ಕಲಾಕೃತಿಯನ್ನು ಹೊರತರುವಲ್ಲಿ ಯಶಸ್ವಿಯಾಗಿದ್ದಾನೆ. ಯೇಸುವನ್ನೆ ಹೋಲುವ ಕೃಷ್ಣ ಅವರ ವರ್ಣಗಳಿಂದ ಆ ಮಗುವನ್ನು ಬೆಳಕಿನ ಪ್ರಭಾವದಿಂದ ಗುರುತಿಸಬಹುದು. ಭಾರತೀಯ ವಸ್ತು ವಿಷಯವನ್ನು ಬಳಸಿಕೊಂಡು ಚಿತ್ರ ರಚನೆಮಾಡಿರುವುದು ಕಲಾವಿದನ ನೈಪುಣ್ಯತೆಯನ್ನು, ತಂತ್ರಗಾರಿಕೆ, ಬೌದ್ಧಿಕ ಮಟ್ಟವನ್ನು ಗುರುತಿಸುತ್ತದೆ. ಆದ್ದರಿಂದ ಇದು ಒಂದು ಅದ್ಭುತ ಕಲಾಕೃತಿಗಳಲ್ಲಿ ಒಂದಾಗಿದೆ.

ಅಪ್ಪ ಬರುತ್ತಿದ್ದಾರೆ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಇದು ರಂಗವಿಲಾಸ್, ತಿರುವನಂತಪುರ(ಕೇರಳ)ದಲ್ಲಿ ಸಂಗ್ರಹಗೊಂಡಿದೆ. ಕಲಾವಿದನ ನೈಪುಣ್ಯತೆಯನ್ನು ಉತ್ತಮವಾದ ಕಲಾವಂತಿಕೆಯಲ್ಲಿ ಗಮನ ಸೆಳೆಯುವಂತೆ ಕೇರಳ ಶೈಲಿಯನ್ನು ಬಳಸಿಕೊಂಡು ತಾಯಿ ಮಗುವನ್ನು ಚಿತ್ರಿಸಲಾಗಿದೆ. ಮೇರಿ ಮತ್ತು ಯೇಸುವನ್ನು ಪ್ರಭಾವವು ಈ ಕಲಾಕೃತಿಯಲ್ಲಿ ಕಲಾವಿದನ ಮೇಲೆ ಪ್ರಭಾವದ ಗುರುತುಗಳನ್ನು ಕಾಣಬಹುದು. ಸ್ತ್ರೀ ಮಗುವನ್ನು ಎತ್ತಿಕೊಂಡು ಏನನ್ನೋ ತೋರಿಸುತ್ತಿದ್ದಾಳೆ. ಆ ಮಗು ಅವಳ ಕಡೆ ನೋಡದೆ ಏನನ್ನೋ ನೋಡುವಂತೆ ಚಿತ್ರಿಸಲಾಗಿದೆ. ಅವಳ ಹಿಂಭಾಗದಲ್ಲಿ ಪರದೆಯನ್ನು, ಅವನ ಪಕ್ಕದಲ್ಲಿ ನಾಯಿಯು ಕುಳಿತುಕೊಂಡು ಮಗು ನೋಡುವ ಕಡೆಗೆ ನೋಡುತ್ತಿದೆ. ಉತ್ತಮವಾದ ಸಂಯೋಜನೆ ಇದಾಗಿದೆ.

ಕಲಾವಿದ ಕೇರಳದ ಕೇಶವಿನ್ಯಾಸವನ್ನು ಬಳಸಿ ಅವಳ ಮುಖದ ಭಾಗದಿಂದ ಕುತ್ತಿಗೆ, ಕೈ ಕಾಲುಗಳಲ್ಲಿ ಕೇಸರಿ, ಬಿಳಿ, ಹಳದಿ Raw Sienna, Burnt Sienna ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಿ ನೆರಳು ಬೆಳಕನ್ನು ತೋರಿಸಲಾಗಿದೆ. ಸ್ತ್ರೀಯ ಭಾವನೆಯನ್ನು ಉತ್ತಮವಾಗಿ ಚಿತ್ರಿಸಲಾಗಿದೆ. ಹಾಗೂ ಅವನ ವಸ್ತ್ರವು ರೇಷ್ಮೆ ಹಾಗೂ ಸಿಲ್ಕ್ ರೀತಿಯ ಹೊಳಪನ್ನು ಕಾಣಬಹುದು. ಅದಕ್ಕೆ ಅಂಚಿನ ಪಟ್ಟಿಯ ಆಕರ್ಶಕವಾಗಿದ್ದು ನೋಡುಗರ ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಬಳಸಿದ ವರ್ಣಗಳು ಕೆಂಪು, ಬಿಳಿ, ಹಳದಿ, ಕೇಸರಿ ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಬಿಳಿಯ ಪ್ರಭೆ ಹೆಚ್ಚಾಗಿ ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಚಂದ್ರನ ಬೆಳಕು ಅವಳ ವಸ್ತ್ರದ ಮೇಲೆ ತೋರಿದಂತೆ ಕಂಡುಬರುತ್ತದೆ. ಮಗುವನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು.

ಅವಳ ಪಕ್ಕದಲ್ಲಿ ಶ್ವಾನ (ನಾಯಿ)ಯನ್ನು ಗಮನಿಸಿದಾಗ ಅದರ ಮೇಲಿನ ವರ್ಣ ಹಾಗೂ ಹಿನ್ನಲೆಗೆ ಬಳಸಿದ ಬಣ್ಣಗಳು Lamp Black, Raw Umber, Burnt Umber, ಬಿಳಿ, ಹಳದಿ ಮಿಶ್ರವರ್ಣಳಿಂದ ಮೆದುಗೊಳಿಸಲಾಗಿದೆ. ಹಿಂಭಾಗದ ಪರದೆಯು ಕೆಂಪು ವಸ್ತ್ರವಾಗಿದ್ದು, ಸಂಯೋಜನೆಯು ನೋಡುಗರ ಕಣ್ಣುಗಳಿಗೆ ಕಳಸವಿಟ್ಟಂತೆ ತೋರುತ್ತದೆ. ಅದರ ಒಂದು ನೆರಳು ಬೆಳಕಿನ ಪ್ರಭಾವ ಸ್ತ್ರೀಯ ವಸ್ತ್ರದಲ್ಲಿಯು ಕಾಣಬಹುದು.

ಈ ಕಲಾ ಕೃತಿಯಲ್ಲಿಯು ಪಾಶ್ಚಾತ್ಯರ ಪ್ರಭಾವ ಪ್ರೇರಣೆ ಶೈಲಿಗಳು ಎದ್ದು ತೋರುತ್ತದೆ. ಸ್ತ್ರೀಯ ಮಗುವನ್ನು ಗಮನಿಸಿದಾಗ ಏಸುವಿನ ಪ್ರಭಾವವನ್ನು ಗುರುತಿಸಬಹುದು. ಹಾಗೂ ಶ್ವಾನವನ್ನು ಬಳಸುವ ಶೈಲಿ ಪಾಶ್ಚಾತ್ಯರದ್ದು, ಹೀಗೆ ಎಲ್ಲಾ ವಸ್ತು ವಿಷಯಗಳಲ್ಲಿ ಭಾರತೀಯತೆಯನ್ನು ತೋರುವಲ್ಲಿ ಪ್ರಭಾವಿತರಾಗಿದ್ದಾರೆ. ಭಾರತೀಯ ವಿಷಯ, ವಿಚಾರಗಳನ್ನು ಬಳಸಿಕೊಂಡು ಉತ್ತಮವಾದ ಕಲಾಕೃತಿ ರಚಿಸುವಲ್ಲಿ ರವಿವರ್ಮನ ಜ್ಞಾನದ ಮಟ್ಟವನ್ನು ಗುರುತಿಸಬಹುದು. ಪ್ರಸ್ತುತವಾಗಿ ಈ ಕಲಾಕೃತಿ ರಂಗ ವಿಲಾಸ ಪ್ಯಾಲೆಸ್ ತಿರುವನಂತಪುರದಲ್ಲಿ ಸಂಗ್ರಹಗೊಂಡಿದೆ.

ತಾಯಿ ಮತ್ತು ಮಗು

ಈ ಸಂಯೋಜನ ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲ ವರ್ಣದಿಂದ ಚಿತ್ರಿಸಲಾಗಿದೆ. ಈ ಕಲಾಕೃತಿ ರಂಗ ವಿಲಾಸ ಪ್ಯಾಲೆಸ್ ತಿರುವನಂತಪುರದಲ್ಲಿ ಸಂಗ್ರಹಗೊಂಡಿದೆ. ಕ್ಯಾನವಾಸ್‌ನಲ್ಲಿ ವೃತ್ತಕರವನ್ನು ಬಳಸಿಕೊಂಡು ತಾಯಿ ಮತ್ತು ಮಗುವಿನ ಕಲಾಕೃತಿ ರಚಿಸಲಾಗಿದೆ. ಅದರಲ್ಲಿ ಇಬ್ಬರು ಸ್ತ್ರೀಯರಿದ್ದು, ಒಬ್ಬ ಸ್ತ್ರೀ ಮಗುನ್ನು ಎತ್ತಿಕೊಂಡಿದ್ದಾಳೆ. ಅವಳ ಪಕ್ಕದಲ್ಲಿ ಇನ್ನೊಬ್ಬ ಸ್ತ್ರೀಯು ಅವಳ ಮುಖವನ್ನು ನೀಡುತ್ತಿದ್ದು, ಕೇರಳಶೈಲಿಯಲ್ಲಿರುವ ಸ್ತ್ರೀಯರನ್ನು ನೈಜವಾಗಿ ಚಿತ್ರಿಕರಿಸಲಾಗಿದೆ.

ಸ್ತ್ರೀರ ಮುಖಭಾಗ ಹಾಗೂ ಕುತ್ತಿಗೆ ಕೈಗಳನ್ನು ಹಳದಿ, ಕೇಸರಿ, ಕೆಂಪು, ಕಂದು, ಬಿಳಿ ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿ. ಮಗುವಿಗು ಸಹ ತಾಯಿಯ ವರ್ಣಗಳನ್ನು ಬಳಸಿ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ತಾಯಿಯನ್ನು ಪ್ರಧಾನವಾಗಿ ಚಿತ್ರಿಸಿ ಪಕ್ಕದಲ್ಲಿರುವ ಸ್ತ್ರೀಯನ್ನು ಗಾಢ ವರ್ಣಗಳಿಂದ ಮೆದುಗೊಳಿಸಲಾಗಿದೆ. ಅವಳನ್ನು ಹಣೆಯ ಭಾಗ ಮೂಗು ಕೆನ್ನೆಯ ಭಾಗದಲ್ಲಿ ಮಾತ್ರ ನೆರಳನ್ನು ಕಾಣಬಹುದು. ಈ ಸಂಯೋಜನೆಯಲ್ಲಿ ತಾಯಿ ಮಗುವಿನ ಪ್ರೀತಿ ವಾತ್ಸಲ್ಯದ ಸಂಕೇತವನ್ನು ಸೂಚಿಸುವಂತೆ ಕಲಾವಿದನು ಚಿತ್ರಿಸಿದ್ದನ್ನು ಕಾಣಬಹುದು.

ಸ್ತ್ರೀಯ ವಸ್ತ್ರದಲ್ಲಿ ವಿಶೇಷವಾಗಿ ಕೇರಳ ಶೈಲಿಯಲ್ಲಿದ್ದು, ಉತ್ತಮವಾದ ಹೊಳಪುಳ್ಳ ವರ್ಣಗಳಿಂದ ಮೆದುಗೊಳಿಸಲಾಗಿದೆ. ಮಗುವಿನ ಮೇಲೆ ಕಾಣಬಹುದು. ಹಾಗೂ ಮಗುವಿನ ಕೆಳಗಿನ ವಸ್ತ್ರದಲ್ಲಿ ವಿಶೇಷವಾಗಿ ಪಾರದರ್ಶಕರಂತೆ ಬಳಸಿರುವುದು ಗಮನ ಸೆಳೆಯುವಂಹ ವರ್ಣಗಳಿದ್ದು ಶಾಂತಿಯ ಸಂಕೇತವನ್ನು ಕಾಣಬಹುದು. ಈ ಸಂಯೋಜನೆಯಲ್ಲಿ ಹೆಚ್ಚಾಗಿ ರೇಖೆಗಳನ್ನು ಸ್ತ್ರೀಯರ ಕೈಭಾಗ ವಸ್ತ್ರದಲ್ಲಿ ಹೆಚ್ಚಾಗಿ ರೇಖೆಗಳನ್ನು ಬಳಕೆಯನ್ನು ಕಾಣಬಹುದು. ಹಾಗೂ ಮಗುವಿನ ಕೆಳಗಿನ ವಸ್ತ್ರದಲ್ಲಿ ವರ್ಣಗಳ ಬಳಕೆಯಿಂದ ಕೇಸರಿ, ಹಸಿರು ವರ್ಣಗಳಿಂದ ಭಾರತದ ಧ್ವಜದಂತೆ ವರ್ಣಗಳಿಂದ ರೇಖೆಗಳನ್ನು ಕಾಣಸಿಗುತ್ತವೆ. ಇದರಲ್ಲಿಯು ದಪ್ಪ, ಸಣ್ಣ ರೇಖೆಗಳ ಬಳಕೆಯನ್ನು ಕಾಣಬಹುದು.

ಇವರ ಹಿನ್ನಲೆಯಲ್ಲಿ ಹಸಿರು, ಹಳದಿ, ಕಂದು, ಕಪ್ಪು ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ ಅವರ ವಸ್ತ್ರವು ಸಹ ಹಿನ್ನೆಲೆಯ ವರ್ಣಗಳೊಂದಿಗೆ ಮಿಶ್ರಣಮಾಡಲಾಗಿದೆ. ಒಟ್ಟಾರೆಯಾಗಿ ಉತ್ತಮವಾದ

ಸಂಯೋಜನ ಕಲಾಕೃತಿ ಇದಾಗಿದೆ. ಪಾಶ್ಚಾತ್ಯದ ಪ್ರಭಾವವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೆಚ್ಚಾಗಿ ಮಗುವಲ್ಲಿ ಕಾಣಬಹುದು.

ಮೋಡಿ, ಆಟದೊಂದಿಗೆ ಸ್ತ್ರೀ

ಈ ಕಲಾಕೃತಿಯನ್ನು ಕ್ಯಾನ್‌ವಾಸ್ ಮೇಲೆ ತೈಲವರ್ಣಗಳಿಂದ ಚಿತ್ರಿಸಲಾಗಿದೆ. ಈ ಸಂಯೋಜನೆಯಲ್ಲಿ ಸ್ತ್ರೀಯು ಮೂರು ಬಾಲುಗಳಿಂದ ಮೋಡಿಯಲ್ಲಿ ನಿರತಳಾಗಿದ್ದಳೆ. ಸ್ತ್ರೀಯು ಕುಳಿತಿರುವ ಭಂಗಿ ಅವಳ ಎಡಗಾಲನ್ನು ಮಡಚಿ ಬಲಗಾಲನ್ನು ಹಿಂಭಾಗದಲ್ಲಿ ಅರ್ಧಭಾಗ ಮಡಿಚಿಕೊಳ್ಳುತ್ತಿದ್ದಾಳೆ. ಅವಳ ಬಲಗೈಯಲ್ಲಿ ಒಂದು ಬಾಲನ್ನು, ಎಡಗೈಯಿಂದ ಇನ್ನೊಂದು ಬಾಲನ್ನು ಮೇಲಕ್ಕೆ ಎಸೆದಿದ್ದಾಳೆ ಅದಕ್ಕಿಂತ ಮೇಲೆ ಇನ್ನೊಂದು ಬಾಲು ಸಹ ಕಾಣಬುದು. ಇವನ್ನ ಸಮತೋಲನ ಮಾಡುವುದರಲ್ಲಿ ತೊಡಗಿದ್ದಾಳೆ. ಅವಳು ಕುಳಿತಿರುವ ಎದುರಿನಲ್ಲಿಯು ಸಹ ಎರಡು ಬಾಲುಗಳನ್ನು ಕಾಣಬಹುದು.

ಸ್ತ್ರೀಯ ಮುಖಭಾಗದಿಂದ ಕುತ್ತಿಗೆ, ಹಾಗೂ ಕಾಲುಗಳಿಗೆ Naples Yellow, Charome orange, Cadmium orange, Burnt Sinna ಬಳಿ ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿಕೊಂಡು ಮೆದುಗೊಳಿಸಲಾಗಿ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಸ್ತ್ರೀಯ ವಸ್ತ್ರವನ್ನು ಅವಳ ಮುಖ ವಸ್ತ್ರಗಳಿಂದ ವಿಭಿನ್ನವಾದ ವರ್ಣದ ಬಳಕೆ ಕಾಣಬಹುದು ಕುಬ್ಬಸ ಹಾಗೂ ಸೀರೆಗೆ ಒಂದೇ ವರ್ಣದ ಬಳಕೆಯಾಗಿದೆ ಅವುಗಳು. Ultramarine, Prussian Blue, ಕೆಂಪು, ಬಿಳಿ ವರ್ಣಗಳ ಮಿಶ್ರಣದಿಂದ ಉತ್ತಮವಾದ ನೆರಳ ಬೆಳಕಿನ ಸಂಯೋಜನೆ ಕಾಣಬಹುದು. ಅದರ ಮುಸುಗಿನ ಅಂಚಿನ ಭಾಗಕ್ಕೆ Raw Sienna, Yellow Ochre ವರ್ಣದಿಂದ ರೇಷ್ಮೆಯ ಹೊಳಪನ್ನು ತೋರಿಸಲಾಗಿದೆ.

ಸ್ತ್ರೀಗೆ ಹೊಂದುವಂತಹ ಆಭರಣಗಳನ್ನು ಚಿತ್ರಿಸಲಾಗಿದೆ. ಅವಳ ಕೆಳಭಾಗದ ಹಾರಿಸುವ ಜಮಕಾನದ ವರ್ಣ ಸ್ತ್ರೀಯ ಮೇಲಿನ ವರ್ಣವನ್ನು ಹೋಲುತ್ತದೆ. ಅವಳ ಹಿಂಭಾಗದ ಗೋಡೆಯ ಮೇಲೆ Burnt Sieena, Burnt umber, ಕಪ್ಪು, ವರ್ಣದಿಂದ ಉತ್ತಮವಾದ ನೆರಳು ಬೆಳಕನ್ನು ಕಾಣಬಹುದು. ಕೀಟಕಿಯ ಮೂಲಕ ಬೆಳಕು ಹರಿದು ಬಂದಂತೆ ಚಿತ್ರಿಸಲಾಗಿದೆ. ಗೋಡೆಯ ಮೇಲೆ ಸ್ತ್ರೀಯ ನೆರಳನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ಅಲ್ಪ ಪ್ರಮಾಣದಲ್ಲಿ ರೇಖೆಗಳ ಬಳಕೆ ಕಾಣಬಹುದು. ಸ್ತ್ರೀಯ ಕಣ್ಣಿನ ಅಂಚು ಮೂಗು, ತುಟಿಯ ಅಂಚಿನ ಭಾಗದಲ್ಲಿ, ಹೆಚ್ಚಾಗಿ ಆಭರಣಗಳ ಮೇಲೆ ಹಾಗೂ ಕೈ ಬೆರಳುಗಳ ಭಾಗದಲ್ಲಿ ವಸ್ತ್ರದ ಮೇಲೆ ಗಾಢ ಸೂಕ್ಷ್ಮ ರೇಖೆಗಳ ಬಳಕೆಗೊಂಡಿವೆ. ಸ್ತ್ರೀಯ ಸೀರೆ ಮುದುಡಿರುವ ಭಾಗಗಳಲ್ಲಿ ಕಾಣಬಹುದು. ಇಲ್ಲಿಯು ಸಹಾ ನಾಟಕದಯ ಬೆಳಕಿನ ಪ್ರಭಾವವನ್ನು ಗಮನಿಸಬಹುದು. ಪಾಶ್ಚಾತ್ಯ ಪ್ರಭಾವ ಪ್ರೇರಣೆಯಿಂದ ಉತ್ತಮ ಕಲಾಕೃತಿ ಇದಾಗಿದೆ.

ತಿಲೋತ್ತಮೆ


ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚಿಸಲಾಗಿದೆ. ದಟ್ಟವಾದ ಮೋಡಗಳ ನಡುವೆ. ಅರೆ ನಗ್ನ ಸ್ತ್ರೀಯು ಆಕಾಶದಲ್ಲಿ ಹಾರಾಡುತ್ತ ಬಾಲನ್ನು ಹೊಡೆಯುವಂತೆ ಚಿತ್ರಿಸಲಾಗಿದೆ. ಉದ್ದನೆಯ ಗುಂಗುರು ಕೂದಲಿನವಳಾಗಿದ್ದು, ಸೊಂಟದವರೆಗೂ ನಗ್ನವಾಗಿ ಸೊಂಟದ ಕೆಳಭಾಗದಲ್ಲಿ ಸೀರೆಯು ಕೆಳಗೆ ಬೀಳುತ್ತಿರುವುದನ್ನು ತನ್ನ ಎಡ ಕೈಯಲ್ಲಿ ಹಿಡಿದು ಕೊಂಡಿದ್ದಾಳೆ. ಬಲಗೈಯಲ್ಲಿ ಬಾಲನ್ನು ಹೊಡೆಯಲೂ ಮೇಲಕ್ಕೆ ಎತ್ತಿದ್ದಾಳೆ. ಈ ಕಲಾಕೃತಿಯನ್ನು ಗಮನಿಸಿದಾಗ ಗ್ರೀಕ್ ಶಿಲ್ಪಗಳನ್ನು ನೆನಪಿಸಿಕೊಳ್ಳಬಹುದು. ಕಲಾವಿದನ ಸೃಜನಶೀಲತೆಯನ್ನು ಕಾಣಬಹುದು.

ಸ್ತ್ರೀಗೆ ಬಳಸಿದ ವರ್ಣಗಳನ್ನು ಗಮನಿಸಿದಾಗ ಮುಖಭಾಗದಿಂದ ಕುತ್ತಿಗೆ, ಎದೆಯಭಾಗ, ಸೊಂಟಕ್ಕೆ ಕೆಂಪು, ಹಳದಿ, ಕೇಸರಿ, ಕ್ರಿಂಜನ್ ರೇಡ್ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ ಹಾಗೂ ಉತ್ತಮವಾದ ನೆರಳು ಬೆಳಕಿನ ವಿಭಜನೆಯನ್ನು ಕಾಣಬಹುದು. ವಸ್ತ್ರದಲ್ಲಿಯು ಸಹ ರೇಷ್ಮೆಯಂತಹ ಹೊಳಪನ್ನು ಹಾಗೂ ಮುದುಡಿರುವ ವಸ್ತ್ರವನ್ನು ಸ್ತ್ರೀಗಿಂತಲೂ ಹೆಚ್ಚಾಗಿ ಆಕರ್ಶಿಸುವಂತೆ ಚಿತ್ರಿಸಲಾಗಿದೆ. ಕೆಂಪು, ಕೇಸರಿ, ಕಂದು, ಹಳದಿ, ಮಿಶ್ರವರ್ಣಗಳಿಂದ ಮೆದುಗೊಳಿಸಿ ನೆರಳು ಬೆಳಕನ್ನು ತೋರಿಸಲಾಗಿದೆ. ನೋಡುಗನ ಗಮನವು ವಸ್ತ್ರವನ್ನು ಪ್ರಧಾನವಾಗಿ ಕಾಣಬಹುದು. ಬಾಲ್ ಹಾಗೂ ವಸ್ತ್ರದ ವರ್ಣ ಒಂದೇ ಆಗಿದ್ದು. ವರ್ಣಗಳ ಹೊಂದಾಣಿಕೆ ಮತ್ತು ಸ್ತ್ರೀಯ ಹಿನ್ನಲೆಯಲ್ಲಿ ಹಸಿರು, ಹಳದಿ, ಕೆಂಪು, ನೀಲಿ ಮೋಡಗಳನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು.

ಇಲ್ಲಿ ರೇಖೆಗಳ ಪ್ರಮಾಣ ಕಡಿಮೆ ಎಂದು ತೋರಿದರು ವಸ್ತ್ರದಲ್ಲಿ ಗಾಢ ರೇಖೆಗಳನ್ನು ವರ್ಣಗಳಿಂದ ಬಳಸಿರುವುದನ್ನು ಕಾಣಬಹುದು. ಹಾಗೂ ವರ್ಣಗಳೊಂದಿಗೆ ಮೆದುಗೊಳಿಸಲಾಗಿದೆ. ಈ ಕಲಾಕೃತಿಯಲ್ಲಿಯು ಪಾಶ್ಚಾತ್ಯದ ಪ್ರಭಾವ ಎದ್ದು ತೋರುತ್ತದೆ. ಗ್ರೀಕ್‌ನ ಶಿಲ್ಪದಂತೆ ಕಾಣುವ ಸ್ತ್ರೀ ಚಿತ್ರವು ವರ್ಣಗಳಲ್ಲಿ ನೆರಲು ಬೆಳಕಿನ ಸಂಯೋಜನೆ ಕಣ್ಣಿಗೆ ಗಾಢತೆಯನ್ನು ಕಲಾಕೃತಿಯಲ್ಲಿ ತೋರಿಸಲಾಗಿದೆ.

ಮೋಹಿನಿ

ಅಮೃತವನ್ನು ಹಂಚುವ ಸಮಯದಲ್ಲಿ ವಿಷ್ಣು ರಾಕ್ಷಸರನ್ನು ವಂಚಿಸಲು ಧರಿಸಿದ ಸ್ತ್ರೀರೂಪ ಮೋಹಿನಿಯ ರೂಪ ಎಂದು ತಿಳಿದುಬರುತ್ತದೆ. ರಾಜರವಿವರ್ಮ ಕಾಲ್ಪನಿಕ ಮೋಹಿನಿಯನ್ನು ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ ಜೋಕಾಲಿಯಲ್ಲಿ ತೂಗುಯ್ಯಾಲೆಯಾಡುತ್ತಿರುವಂತೆ ಚಿತ್ರಿಸಲಾಗಿದೆ. ಅವಳ ಸುತ್ತಲೂ ನಿರ್ಜನವಾದ ವಾತಾವರ್ಣವನ್ನು ಕಲ್ಪಿಸಲಾಗಿದೆ. ಕಲಾವಿದ ಅವನ ಕಲ್ಪನೆಗೆ ತಕ್ಕಂತೆ ಚಿತ್ರಿಸಿರುವುದನ್ನು ಕಾಣಬಹುದು. ಬಿಳಿ ವಸ್ತ್ರದಲ್ಲಿರುವಂತೆ ಮೋಹಿನಿಯನ್ನು ಚಿತ್ರಿಸಲಾಗಿದೆ. ಅವಳ ಉದ್ದನೆಯ ಗುಂಗುರು ಕೂದಲಿಗೆ ಕೆಂಪು, ಕಂದು, ಹಸಿರು ವರ್ಣಗಳಿಂದ ಮೆದುಗೊಳಿಸಲಾಗಿದೆ. ಮತ್ತು ಮುಖಭಾಗದಿಂದ ಕುತ್ತಿಗೆ ಕೈ ಕಾಲುಗಳಿಗೆ ಹಳದಿ, ಕೆಂಪು, ಕೇಸರಿ, ಬಿಳಿ ಮಿಶ್ರವರ್ಣದಿಂದ



ಮೆದುಗೊಳಿಸಲಾಗಿದೆ. ಅವಳ ವಸ್ತ್ರಕ್ಕೆ ಬಿಳಿ, ಕೇಸರಿ, ಹಳದಿ ನೀಲಿ ವರ್ಣಗಳಿಂದ ತೇಪೆಗಳನ್ನು ಬಳಸಿ ಉತ್ತಮವಾದ ನೆರಳು ಬೆಳಕು ತೋರಿಸಲಾಗಿದೆ. ಜೋಕಾಲಿ ಅವಳ ಮರ, ಮತ್ತು ನೆಲದ ಭಾಗಕ್ಕೆ ಕೇಸರಿ, ನೀಲಿ, ಕಂದು, ಹಳದಿ, ಕಪ್ಪು, ಬಿಳಿ, ಕೆಂಪು ಮಿಶ್ರ ವರ್ಣಗಳಿಂದ ತೇಪೆಗಳಿಂದ ಮೆದುಗೊಳಿಸಿ ನೆರಳು ಬೆಳಕು ತೋರಿಸಲಾಗಿದೆ. ಮರದ ಎಲೆಗಳನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ಕಲಾವಿದನ ಹೊಸ ರೀತಿಯ ವರ್ಣದ ತೇಪೆಗಳ ಬಳಕೆ ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಅವಳ ಅನಾಟಮಿಯ ಬಗ್ಗೆ ಗಮನ ಹರಿಸಿದಂತೆ ಕಾಣುವುದಿಲ್ಲ. ವಸ್ತು ವಿಷಯ ಈ ಎಲ್ಲಾ ಅಂಶಗಳನ್ನು ಮುಚ್ಚಿ ಹಾಕುತ್ತದೆ. ಕಲಾವಿದನ ಹೊಸರೀತಿಯ ಕಲಾಕೃತಿಯ ಪ್ರಯತ್ನವನ್ನು ಕಾಣಬಹುದು.

ಸಂಗೀತಗಾರರು

ಈ ಕಲಾಕೃತಿಯು ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಪ್ರಸ್ತುತ ಇದು ಜಗನ್ ಮೋಹನ್ ಪ್ಯಾಲೆಸ್, ಮೈಸೂರಿನಲ್ಲಿ ಸಂಗ್ರಹಿಸಡಲಾಗಿದೆ. ಸಂಗೀತಗಾರರ ಕಲಾಕೃತಿ ಇದಾಗಿದ್ದು, ವಿಶೇಷ ಹಾಗೂ ವಿಶಿಷ್ಠತೆಯಿಂದ ಇರುವುದನ್ನು ಕಾಣಬಹುದು. ಭಾರತದ ಎಲ್ಲಾ ಸಂಪ್ರದಾಯದ ಉಡುಪುಗಳನ್ನು ಒಳಗೊಂಡ ಸ್ತ್ರಿಯರನ್ನು ಕಾಣಬಹುದು. ಈ ಸಂಯೋಜನೆಯಲ್ಲಿ ೧೧ ಜನ ಸ್ತ್ರೀಯರನ್ನು ಉಪಯೋಗಿಸಿಕೊಂಡು ಚಿತ್ರಿಸಲಾಗಿದೆ. ಮೂಲತಃ ಕೇರಳದವರಾದ ಕಾರಣ ಕೇರಳ ಸ್ತ್ರೀಯನ್ನು ಗಮನಾರ್ಹವಾಗಿ ಚಿತ್ರಿಸಲಾಗಿದೆ. ಇಂಗ್ಲಿಷ್ ಸ್ತ್ರೀ ಸೇರಿದಂತೆ ಸಿದ್ದಿ, ಗುಜರಾತಿ, ಮರಾಠಿ, ರಾಜಸ್ಥಾನ, ಕಾಶ್ಮೀರ ಅಥವಾ ಮುಸ್ಲಿಂ, ಕ್ರಿಶ್ಚಿಯನ್ ಎಲ್ಲಾ ಪ್ರಾಂತ್ಯದ ಸ್ತ್ರೀಯದ್ದು ಅದರಲ್ಲಿ ಕೆಲವರು ವಾದ್ಯಗಳನ್ನು ಹಿಡಿದುಕೊಂಡು ಕುಳಿತಿರುವುದನ್ನು ಕಾಣಬಹುದು.

ಈ ಕಲಾಕೃತಿಯನ್ನು ಗಮನಿಸಿದಾಗ ಪಾಶ್ಚಿಮಾತ್ಯ ಕಲಾವಿದರಾದ ರೆಂಬ್ರಾಟ್‌ನ ಪ್ರಭಾವವನ್ನು ಕಾಣಬಹುದು. ಈ ಕಲಾಕೃತಿಯ ವಿಶೇಷವೆಂದರೆ ಕಣ್ಣುಗಳ ನೋಟ, ಮೊದಲಿಗೆ ಕೇರಳದ ಸ್ತ್ರೀಯ ಕಣ್ಣಿನ ನೋಟದಿಂದ ಕಲಾಕೃತಿಯನ್ನು ಪ್ರಧಾನವಾಗಿ ಕಾಣಬಹುದು. ಕೆಲವು ಸ್ತ್ರೀಯನ್ನು ಪ್ರಧಾನವಾಗಿ ಚಿತ್ರಿಸಿ, ನಿಂತಿರುವ ಸ್ತ್ರೀಯರನ್ನು ಕತ್ತಲಲ್ಲಿ ಮಿಶ್ರಣವಾಗುವಂತೆ ಚಿತ್ರಿಸಲಾಗಿದ್ದು, ಭಾರತದಲ್ಲಿ ಪ್ರತಿನಿಧಿಸುವ ಪೂರ್ವದ ವಿವಿಧ ಪ್ರದೇಶಗಳಲ್ಲಿನ ಹನ್ನೊಂದು ಜನ ಸ್ತ್ರೀಯರ ಚಿತ್ರದಲ್ಲಿ ಕೆಲವರು ಪರಿಪೂರ್ಣವಾದ ಶರೀರಶಾಸ್ತ್ರವಿದೆ, ಇಲ್ಲಿ ಪಾಶ್ಚಿಮಾತ್ಯ ಮತ್ತು ದೇಶೀಶೈಲಿಯ ಮಧ್ಯದ ಒಂದು ಚಿತ್ರದ ದಾಖಲೆ ಆಗಿರುವುದರಿಂದ ಚಿತ್ರಕಲಾಕೃತಿಯು ಹೆಚ್ಚಿನ ಸೌಂದರ್ಯಹೊಂದಿದೆ.

ಸ್ತ್ರೀಯರಿಗೆ ಬಳಸಿದ ವರ್ಣಗಳನ್ನು ಗಮನಿಸಿದಾಗ ಮುಖಭಾಗದಿಂದ ಕುತ್ತಿಗೆ, ಕೈ ಕಾಲುಗಳಿಗೆ ಕೆಂಪು, ಹಳದಿ, ಕೇಸರಿ, ಕಂದು, ಬಿಳಿ, ಇತ್ಯಾದಿ ಮಿತ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಸುಂದರವಾದ ಬಿಳಿವರ್ಣದ ಇಬ್ಬರು ಸ್ತ್ರೀಯರು ಕೇರಳದ ಮುಗ್ಧ ಕನಸುಗಾತಿ ಹಾಗೂ ನವಾಬನ ಆಸ್ಥಾನದಲ್ಲಿ

ನರ್ತಕಿಯು ತನ್ನನ್ನೇ ನೋಡಿಕೊಳ್ಳುತ್ತಿರುವ ನಾಜೂಕಾದ ಸ್ತ್ರೀ ಚಿತ್ರದ ಮೇಲಿನ ಅರ್ಧ ಭಾಗದಲ್ಲಿ ಅವರ ದೃಷ್ಠಿಗಳು ಒಂದಕ್ಕೊಂದು ಎದುರಿಸುತ್ತವೆ. ಮತ್ತು ಒಂದು ರೀತಿಯ ತ್ರಿಕೋನವನ್ನು ರಚಿಸುತ್ತವೆ. ಆತ್ರಿಕೋನದಲ್ಲಿ ಒರೆಯಾಗಿ ಮಧ್ಯ ಬಿಂದುವಿನಿಂದ ಸ್ವಲ್ಪ ದೂರದಲ್ಲಿ ಚಂದ್ರಮುಖಿಯಾದ ಮಹಾರಾಷ್ಟ್ರದ ಸ್ತ್ರೀ ಶೇಷ್ಠವಾದ ಕೆಂಪು, ಕಪ್ಪು ವಸ್ತ್ರ ವರ್ಣಗಳ ಸ್ವರೂಪವಾಗಿದ್ದಾಳೆ. ಮಡಿಚಿರುವ ಅವಳ ಕಾಲು ಆ ರಚನೆಗೆ ಹೆಚ್ಚಿನ ಸೌಂದರ್ಯವನ್ನು ನೀಡುತ್ತದೆ. ಹಾಗೂ ಅವಳು ದೂರದಲ್ಲಿ ನೆಟ್ಟಿರುವ ದೃಷ್ಠಿಯಿಂದಾಗಿ ಪ್ರೇಕ್ಷಕನಿಗೆ ಅಂತರದ ಅರಿವನ್ನು ಮೂಡಿಸುತ್ತಾಳೆ. ವಾಸ್ತವವಾಗಿ ಪ್ರೇಕ್ಷಕರು ಚೌಕಟ್ಟಿನ ಆಂತರ್ಯದಲ್ಲಿ ನೆಟ್ಟಿದ್ದ ನೋಟವನ್ನು ಮುಸ್ಲಿಂ ಯುವತಿಯು ತನ್ನ ಸ್ವ ಆರಾಧನಾ ನೋಟದ ಮೂಲಕ ಎಡಗಡೆಗೆ ತಿರುತಿಸುತ್ತಾಳೆ. ಹಾಗೂ ಅತ್ಯಂತ ಬಲಗಡೆ ಎರಡನೆ ಸಾಲಿನಲ್ಲಿ ಅವಿತು ಕುಳಿತಿರುವ ಬಿಡುಗೂದಲಿನ ಕಪ್ಪಾದ ಹುಡುಗಿಯು ಮತ್ತೆ ನಮ್ಮ ನೋಟವನ್ನು ಬದಲಾಯಿಸುತ್ತಾಳೆ ಎಂಬುದು ಸೂಕ್ತವಾಗಿದೆ.

ನೋಡುಗನ ಗಮನವನ್ನು ಸೆಳೆಯುವಂತೆ ಚಿತ್ರಿಸಲಾಗಿದೆ. ಸೂಕ್ಷ್ಮವಾದ ಮತ್ತು ಸಾಕಷ್ಟು ಹೆಚ್ಚಾಗಿ ಅಲಂಕೃತವಾದ ಕೃತಿ, ಬೆಳಕು ಮತ್ತು ಸುತ್ತು ಗೆರೆಗಳನ್ನು ರಚಿಸುವ ವರ್ಣವನ್ನು ಸಂಯೋಜಿಸುವ ಸಂದರ್ಭದಲ್ಲಿ ಅದು ಮುಖ ಮತ್ತು ಭುಜಗಳಿಂದ ತಿರುಗಿದ ಕಟಿಯವರೆಗೆ ಹಾಗೂ ತೊಡೆಯಿಂದ ಪಾದದವರೆಗೆ ಅಲಂಕೃತವಾಗಿರುತ್ತವೆ. ಮತ್ತು ಸಂಗೀತ ವಾದ್ಯಗಳೊಂದಿಗೆ ಸೂಕ್ಷ್ಮವಾದ ತೋಳು, ಕೈಗಳು ಹೊಂದಿಕೊಂಡಿರುವ ರೀತಿ ವಿಶಿಷ್ಟವಾಗಿದೆ.

ವಸ್ತ್ರಗಳಲ್ಲಿ ವರ್ಣಗಳ ಹೊಂದಾಣಿಕೆಯನ್ನು ಕಾಣಬಹುದು. ರೇಖೆ ರಹಿತ ಕಲಾಕೃತಿಯಾಗಿದ್ದು ಕತ್ತಲೂ ಬೆಳಕಿನ ಆಟದಂತೆ ತೋರುತ್ತದೆ. ಅವರ ಕೃತಿಗಳು ಎಷ್ಟೇ ವಿವಾದಕ್ಕೆ ಒಳಗಾದರೂ, ಭಾರತೀಯ ಕಲೆಗೆ ರವಿವರ್ಮನ ಕಾಣಿಕೆ ಮಹತ್ವವಾದುದು ಹಾಗೂ ಭಾರತೀಯ ಕಲಾವಿದರ ಮೇಲೆ ಅವನಷ್ಟು ಪ್ರಭಾವ ಬೀರಿದ ಬೇರೆ ಯಾವ ಕಲಾವಿದನು ಇಲ್ಲ. ಅವರು ಭಾರತದ ಚಿತ್ರಕಲೆಯ ಇತಿಹಾಸದಲ್ಲಿ ಎಂದಿಗೂ ಚಿರಸ್ಥಾಯಿಯಾಗಿ ಉಳಿಯುತ್ತಾರೆ.

ಸ್ತ್ರೀಯ ಸ್ನಾನದ ಕಲಾಕೃತಿ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲ ವರ್ಣದಿಂದ ರಚಿಸಲಾಗಿದೆ. ಸ್ತ್ರೀಯ ಸ್ನಾನದ ಚಿತ್ರವಾಗಿದ್ದು, ಸ್ತ್ರೀಯನ್ನ ಅರೆನಗ್ನತೆಯಲ್ಲಿ ಚಿತ್ರಿಸಲಾಗಿದೆ. ಸ್ತ್ರೀಯು ತನ್ನ ಎರಡು ಕೈಗಳನ್ನು ಗಲ್ಲದ ಮೇಲಿಟ್ಟು ಬೆರಳುಗಳನ್ನು ಮಡಿಚಿಕೊಂಡಿದ್ದಾಳೆ. ಸ್ತ್ರೀಯ ಅರ್ಧಭಾಗ ಎದೆ ನಗ್ನವಾಗಿ ಚಿತ್ರಿಸಿ ತೋರಿಸಿ ಇನ್ನೂ ಅರ್ಧಭಾಗ ವಸ್ತ್ರದಿಂದ ಮುಚ್ಚಿಕೊಂಡಿದ್ದಾಳೆ ನೀರಿನ ಕೊಳದಲ್ಲಿ ನಿಂತಿದ್ದಾಳೆ. ಅವಳ ಹಿಂಭಾಗದಲ್ಲಿ ಮೆಟ್ಟಿಲೂಗಳನ್ನು ಕಾಣಬಹುದು. ಈ ಸಂಯೋಜನೆಯಲ್ಲಿ ಸ್ತ್ರೀ ಮೇಲಿನ ವರ್ಣಗಳನ್ನು ಗಮನಿಸಿದಾಗ ಸ್ತ್ರೀಯ ಕೇಶದಲ್ಲಿ ಯಾವುದೇ ರೀತಿಯ ನೆರಳು ಬೆಳಕು ತೋರಿಸದೆ ಒಂದೆ ತೆರನಾದ ಕಪ್ಪು, ಕೆಂದು ವರ್ಣದಿಂದ ಮೆದುಗೊಳಿಸಲಾಗಿದೆ. ಅವಳ ಮುಖಭಾಗದಿಂದ ಕುತ್ತಿಗೆ ಹಾಗೂ ಕೈ ಎದೆಭಾಗವನ್ನು

ಕೆಂಪು, ಕೇಸರಿ, ಹಳದಿ, Yellow Deep, Burnt Sienna, ಬಿಳಿ, ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳನ್ನು ತೋರಿಸಲಾಗಿದೆ. ಅತ್ಯಂತ ಆಕರ್ಷಕತೆಯಿಂದ ಕೂಡಿದೆ. ಹೆಣ್ಣಿನ ಸೌಂದರ್ಯವನ್ನು ನೈಜತೆಗೆ ಹತ್ತಿರವಾಗುವಂತೆ ಚಿತ್ರಿಸಿದ್ದಾನೆ.

ವಸ್ತ್ರದಲ್ಲಿಯು ಕೆಲವೆ ವರ್ಣಗಳ ಬಳಕೆಯನ್ನು ಕಾಣಬಹುದು. ಬಿಳಿ, Raw, Sienna, Yellow, ಕಂದು ವರ್ಣಗಳನ್ನು ಬಿಳಿ ವರ್ಣಗಳಿಂದ ಮೆದು, ಹಾಗೂ ಗಾಢ ಎರಡು ರೀತಿಯಲ್ಲಿ ತೇಪೆ(Strok)ಗಳನ್ನು ಕಾಣಬಹುದು. ಬಟ್ಟೆ ಮಡಿಸಿಕೊಂಡಿರುವ ಭಾಗವನ್ನು ಅತ್ಯಂತ ಆಕರ್ಷಕವಾಗಿ ಚಿತ್ರಿಸಲಾಗಿದೆ. ಸ್ತ್ರೀಯು ಕೊಳದಲ್ಲಿ ನಿಂತಿರುವ ಪ್ರತಿಬಿಂಬ ಸಹ ನೀರನ್ನು Burnt Sienna, ಹಸಿರು Sepia ವರ್ಣದಿಂದ ಮೆದುಗೊಳಿಸಲಾಗಿದೆ. ಸ್ತ್ರೀಯ ಹಿಂಭಾಗದಲ್ಲಿ ಮೆಟ್ಟಿಲುಗಳಿಗೆ ಸ್ತ್ರೀಮೇಲಿನ ವರ್ಣವನ್ನು ಗಾಢವಾಗಿ ವರ್ಣ ಚಿತ್ರಿಸಲಾಗಿದೆ. ನೆರಳು ಬೆಳಕಿನ ಸಂಯೋಜನೆ ಉತ್ತಮವಾಗಿದ್ದು ಸ್ತ್ರೀಯು ಪ್ರಧಾನವಾಗಿ ಚಿತ್ರಿಸಲಾಗಿದೆ. ಈ ಸಂಯೋಜನೆಯಲ್ಲಿ ರೇಖೆಗಳಿಗೆ ಪ್ರಧಾನವಾಗಿ ಕಾಣಿಸಿರುದಂತೆ ಮೆದುಗೊಳಿಸುತ್ತಾರೆ. ವಸ್ತ್ರದ ಕೆಲವು ಭಾಗ ಹಾಗೂ ಮೆಟ್ಟಿಲುಗಳಲ್ಲಿ ಕಾಣಬಹುದು. ನಾಟಕದ ಪ್ರಭಾವ, ಪ್ರೇರಣೆ ಕಲಾಕೃತಿಯಲ್ಲಿ ಎಲ್ಲ ವರ್ಣ ಹಾಗೂ ಹೊಳಪು ತಂತ್ರಗಾರಿಕೆಯನ್ನು ಕಾಣಬಹುದು.

ಸ್ನಾನದ ಕೊಠಡಿಯಲ್ಲಿ

ಈ ಸಂಯೋಜನ ಚಿತ್ರವನ್ನು ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚಿಸಲಾಗಿದೆ. ಈ ಕಲಾಕೃತಿಯು ರಂಗವಿಲಾಸ ಪ್ಯಾಲೆಸ್, ತಿರುವನಂತಪುರಂದಲ್ಲಿ ಸಂಗ್ರಹಗೊಂಡಿದ್ದು, ಸ್ತ್ರೀಯು ಸ್ನಾನದ ದೃಶ್ಯ ಇದಾಗಿದೆ. ಉದ್ದನೆಯ ಕೂದಲನ್ನೂ ಬಿಟ್ಟುಕೊಂಡು ವಸ್ತ್ರದಿಂದ ಅವಳ ಎದೆಭಾಗವನ್ನು ಮುಚ್ಚಿಕೊಂಡು ನಿಂತುಕೊಂಡಿದ್ದಾಳೆ. ಮುಖಭಾಗದಿಂದ ಕೈಗಳು ಕಾಲಿಗೆ ಹಳದಿ, ಕೇಸರಿ, ಕೆಂಪು, ಕೆಂದು, ಬಿಳಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ನೆರಳು ಬೆಳಕನ್ನು ತೋರಿಸಲಾಗಿದೆ. ಸ್ತ್ರೀ ವಸ್ತ್ರಕ್ಕೆ ಬಿಳಿ, ಕಂದು ನೀಲಿ, ವರ್ಣಗಳಿಂದ ಮೆದುಗೊಳಿಸಲಾಗಿದೆ. ಪಕ್ಕದಲ್ಲಿರುವ ಬಿಂದಿಗೆ, ಮೆಟ್ಟಿಲುಗಳಿಗೆ ಕಂದು, ಹಳದಿ, ಕೆಂಪು, ಕೇಸರಿ, ವರ್ಣಗಳಿಂದ ಮೆದುಗೊಳಿಸಲಾಗಿದೆ.

ನೀರ ಮೇಲೆ ಬಿದ್ದ ಬೆಳಕಿನ ಪ್ರಭಾವ ಸ್ತ್ರೀ ಮೇಲೆ ಪ್ರತಿಬಿಂಬಿಸುವಂತೆ ಚಿತ್ರಿಸಲಾಗಿದೆ. ಬೆಳಕಿನ ಪ್ರಭಾವ ಹಿನ್ನೆಲೆಯಲ್ಲಿ ಬಿಂದಿಗೆಯ ಮೇಲೆ ಹರಿದಂತೆ ತೋರಿಸಲಾಗಿದೆ. ಕಲಾವಿದ ನೆರಳು ಬೆಳಕಿನ ಪ್ರಭಾವವನ್ನು ಪ್ರಧಾನವಾಗಿ ಕಾಣಬಹುದು. ಇದನ್ನು ಗಮನಿಸಿದಾಗ ನಾಟಕದ ಪ್ರಭಾವು ಪರಿಣಾಮವಾದಂತೆ ತೋರುತ್ತದೆ. ಸ್ತ್ರೀಯ ನೈಜರೂಪ ತೋರುವಲ್ಲಿ ಕಲಾವಿದನನ್ನು ಗಮನ ಕಡಿಮೆಯಾದಂತೆ ತೋರಿದರು. ಕೈಗಳಿಂದ ಸೊಂಟ ಹಾಗೂ ಭುಜದವರೆಗೆ ಆಕರ್ಷಕವಾಗಿ ಕಾಣುವಂತೆ ಚಿತ್ರಿಸಿದ್ದಾರೆ. ಉತ್ತಮವಾದ ವಿಭಿನ್ನವಾದ ಬೆಳಕಿನ ಪ್ರಭಾವದ ಈ ಕಲಾಕೃತಿಯಲ್ಲಿ ಕಾಣಬಹುದು. ಇದು ಅಕಾಡೆಮಿಕ ಶೈಲಿಯಲ್ಲಿ ಚಿತ್ರಿಸಿರುವುದಾಗಿದೆ.

Lady on the bench

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚಿಸಲಾಗಿದೆ. ಸ್ತ್ರೀಯು ಸೇತುವೆಯ ಬಂಡೆಯ ಮೇಲೆ ಕುಳಿತುಕೊಂಡಿರುವ ಕಲಾಕೃತಿಯಾಗಿದೆ. ಉದ್ದನೆಯ ಕೂದಲುಳ್ಳ ಇವಳು ತನ್ನ ಬಲಗೈಯನ್ನು ಊರಿಕೊಂಡು ಎಡಗೈಯಲ್ಲಿ ವಸ್ತ್ರವನ್ನು ಸರಿಪಡಿಸಿಕೊಳ್ಳುತ್ತಿದ್ದಾಲೆ, ಅವಳ ಕಾಲ ಕೆಳಭಾಗದಲ್ಲಿ ನೀರು ಹರಿಯುತ್ತಿರುವುದನ್ನು ಹಿಂಭಾಗದಲ್ಲಿ ಕಾಣಬಹುದು ಹುಲ್ಲನ್ನು ತೋರಿಸಲಾಗಿದೆ. ಕಲಾವಿದನ ಸಂಯೋಜನೆಯಲ್ಲಿ ಸ್ತ್ರೀಯು ಹೊರೆಯಾಗಿ ಕುಳಿತಿರುವ ಭಂಗಿ ಕಲಾಕೃತಿಯನ್ನು ನೋಡುಗನ ಗಮನ ಸೆಳೆಯುವಂತಿದೆ.

ಅವಳಿಗೆ ಬಳಸಿದ ವರ್ಣಗಳನ್ನು ನೋಡಿದಾಗ, ಮುಖಭಾಗ ಕೈ ಕಾಲುಗಳಿಗೆ, Burnt Sienna, ಕೇಸರಿ, ಹಳದಿ, ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಮುಖಭಾಗದಲ್ಲಿ ನೆರಳಿನ ಪ್ರಭಾವ ಹೆಚ್ಚಾದ್ದು, ವಸ್ತ್ರಕ್ಕೆ ಹೆಚ್ಚು ಬೆಳಕಿನ ಪ್ರಭಾವವನ್ನು ಕಾಣಬಹುದು. ವಸ್ತ್ರಕ್ಕೆ ಬಿಳಿ, ಹಳದಿ, Raw Siennaಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಮುದುಡಿರುವ ಭಾಗಗಳನ್ನು ಸೂಕ್ಷ್ಮ ಹಾಗೂ ಗಾಢ ವರ್ಣಗಳಿಂದ ಮೆದುಗೊಳಿಸಲಾಗೆ. ಅವಳ ಕಾಲು ಕೆಳಭಾಗದದಲ್ಲಿ ಹರಿಯುವ ನೀರನ್ನು (ಜನ) ಸ್ತ್ರೀಯ ಮೇಲಿನ ವರ್ಣಗಳನ್ನು ಕಾಣಬಹುದು. ಹಿಂಭಾಗದಲ್ಲಿ ಸ್ತ್ರೀಯ ವಸ್ತ್ರದ ಮೇಲಿನ ವರ್ಣಗಳ ಬಳಕೆಯಿಂದ ಹುಲ್ಲು ಹೂಗಳನ್ನು ಚಿತ್ರಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ನೋಡಲು ಆಕರ್ಷಕವಾಗಿದೆ.

ಈ ಕಲಾಕೃತಿಯಲ್ಲಿ ರೇಖೆಗಳನ್ನು ಗಮನಿಸಿದಾಗ ಕೈಗಳಲ್ಲಿ ಹಾಗೂ ವಸ್ತ್ರದಲ್ಲಿ ವರ್ಣವನ್ನು ಉಪಯೋಗಿಸಿ ಮೆದುಗೊಳಿಸಲಾಗಿದೆ. ಹಿಂಭಾಗದಲ್ಲಿ ಅದರಲ್ಲಿಯ ರೇಖೆಗಳನ್ನು ಗಮನಿಸಬಹುದು. ಒಟ್ಟಾರೆಯಾಗಿ ಈ ಕಲಾಕೃತಿಯಲ್ಲಿ ಹಿನ್ನೆಲೆಯ ಪ್ರಕೃತಿಯಲ್ಲಿ ಪಾಶ್ಚಾತ್ಯರ ಪ್ರಭಾವವನ್ನು ಬಳಸಿಕೊಂಡು ಭಾರತೀಯ ಸ್ತ್ರೀಯ ಸಂಯೋಜನೆಯನ್ನು ಅತ್ಯುತ್ತಮವಾಗಿ ಚಿತ್ರಿಕರಿಸಿರುವುದು ಕಾಣಬಹುದು.

ಹೂವನ್ನು ಮುಡಿದುಕೊಳ್ಳುತ್ತಿರುವ ಸ್ತ್ರೀ

ಸಂಯೋಜನ ಚಿತ್ರವನ್ನು ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಈ ಕಲಾಕೃತಿಯು ರಂಗವಿಲಾಸ ಪ್ಯಾಲೆಸ್, ತಿರುವನಂತಪುರಂದಲ್ಲಿ ಸಂಗ್ರಹಗೊಂಡಿದ್ದು, ಕೇರಳದ ಶೈಲಿಯಲ್ಲಿರುವ ಸ್ತ್ರೀಯು ತನ್ನ ಮಂಚದ ಮೇಲೆ ಕುಳಿತು ಅಲಂಕರಿಸಿಕೊಂಡು ತನ್ನ ಮುಡಿಗೆ ಹೂವನ್ನು ಮುಡಿದು ಕೊಳ್ಳುತ್ತಿದ್ದಾಳೆ. ಅವಳ ತೊಡೆಯ ಮೇಲೆ ಹೂವಿನ ತಟ್ಟೆಯನ್ನು ಕಾಣಬಹುದು. ಅವಳ ಸುತ್ತಲೂ ಅವಳ ಬಳಸುವ ವಸ್ತುಗಳನ್ನು ಕಾಣಬಹುದು. ಅವಳ ಬಲಭಾಗದಲ್ಲಿ ರತ್ನಗಂಬಳಿ ಒಂದು ಟೇಬಲ್ ಅದರ ಮೇಲೆ ಕನ್ನಡಿ ಹಾಗೂ ಸುಗಂಧ ದ್ರವ್ಯ, ಹಾಗೂ ಎಡಭಾಗದಲ್ಲಿ ಪಿಲ್ಲೋ ಅವಳ ಕೆಳಭಾಗ ಅಂದರೆ ಕಾಲಿನ ಕೆಳಗೆ ಕಾರ್‌ಪೆಟ್ ಇದ್ದು, ಹಿಂಭಾಗದಲ್ಲಿ ಕಂಬ ಹಾಗೂ (ಸ್ಕ್ರೀನ್) ಪರದೆಯನ್ನು ಕಾಣಬಹುದಾಗಿದೆ.

ಸೌಂದರ್ಯಕ್ಕೆ ತಕ್ಕ ವರ್ಣಗಾರಿಕೆಯನ್ನು ಸ್ತ್ರೀಯ ಮುಖಭಾಗದಿಂದ ಭುಜ ಹಾಗೂ ಕೈ ಕಾಲುಗಳಿಗೆ ಕೇಸರಿ, ಕಂದು, ಬಿಳಿ, ಹಸಿರು, ಕೆಂಪು Naples Yellow ಇತ್ಯಾದಿ ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ತೋರಿಸಿ ಮುಖದ ಅರ್ಧಭಾಗ ನೆರಳು ಬೆಳಕಿನಿಂದ ವಿಭಜಿಸಲಾಗಿದೆ. ಭಾವನೆಗೆ ತಕ್ಕ ವರ್ಣಗಳ ಬಳಕೆಯಾಗಿದ್ದು, ಅವಳ ಕಾಣಬಹುದು. ಕೈಕಾಲುಗಳ ಭಾಗದಲ್ಲಿಯು ಸಹ ನೆರಳು ಬೆಳಕನ್ನು ಅತ್ಯಂತ ಆಕರ್ಶಕವಾಗಿ ತೋರಿಸಿದ್ದಾರೆ. ಮುಖ ವರ್ಣಕ್ಕೆ ಹೊಂದುವಂತಹ ವಸ್ತ್ರವನ್ನು ಕಣ್ಮನ ಸೆಳೆಯುವಂತೆ ಚಿತ್ರಿಸಿದ್ದು ಬಿಳಿ, ಹಳದಿ, ಕೆಂಪು, ಕೇಸರಿ ವರ್ಣಗಳ ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಹಾಗೂ ಆ ವಸ್ತ್ರದಲ್ಲಿ ರೇಷ್ಮೆ ಪಟ್ಟಿಗಳನ್ನು ಬಳಸಿಕೊಂಡು ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಹೊಂದಿದ್ದು, ಅದಕ್ಕೆ ಹೊಂದುವ ಆಭರಣಗಳನ್ನು ಧರಿಸಿದ್ದು, ಸ್ತ್ರೀಯ ಸುತ್ತಲಿನ ವಸ್ತ್ರಗಳ ವರ್ಣಗಳನ್ನು ಗಮನಿಸಿದಾಗ ವರ್ಣಗಳ ಸಮತೋಲನಗೊಳಿಸಿರುವುದನ್ನು ನೋಡಬಹುದಾಗಿದೆ.

ಸ್ತ್ರೀಯ ಮಂಚದ ಕಂಬದ ಮತ್ತು ಗೋಡೆಯ, ಮೇಲಿನ ವರ್ಣ, ಸ್ತ್ರೀ ವಸ್ತ್ರದ ಮೇಲಿನ ವರ್ಣಗಳು ಒಂದೇಯಾಗಿದ್ದು, ಸ್ವಲ್ಪ ಗಾಢವಾಗಿ ಬಳಸಿದ್ದಂತೆ ತೋರಿಬರುತ್ತದೆ. ರತ್ನಗಂಬಳಿ, ಕಾರ್‌ಪೆಟ್, ಪೀಲೋ ಮೇಲಿನ ವರ್ಣಗಳು ಕೆಂಪು, ಹಳದಿ, Charome orange ವರ್ಣಗಳಿಂದ ಕೂಡಿವೆ ಇವು ಸ್ತ್ರೀಯ ಆಭರಣ ಹಾಗೂ ಹೂವನ್ನು ಹೋಲುತ್ತದೆ. ಮಂಚ ಹಾಗೂ ಟೇಬಲ್ ಅದರ ಮೇಲಿನ ಕನ್ನಡಿ ಕಂದು ಕಪ್ಪು ಹಳದಿ ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಸುಗಂಧ ದ್ರವ್ಯ ಸ್ತ್ರೀಯ ವಸ್ತ್ರದಲ್ಲಿ ಬಳಸಿದ ವರ್ಣಗಳನ್ನು ಕಾಣಬಹುದು. ಹಾಗೂ ಹಿಂಭಾಗದ ಸ್ಕ್ರೀನ್ ಹಸಿರು, ನೀಲಿ, ಕೆಂಪು, ಮಿಶ್ರಣದಿಂದ ಕೂಡಿದೆ. ಇದು ಪಿಲ್ಲೋ ಮೇಲೂ ಬಳಸಿರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲದೆ, ಹೂವಿನ ವಿನ್ಯಾಸಗಳು, ಜಾಮಿತಿಕ್ ನಕ್ಷೆಗಳನ್ನು ಬಳಸಿ ವಿನ್ಯಾಸಗಳನ್ನು ಸಹ ಗಮನಿಸಬಹುದು. ಕಲಾವಿದನ ತಾಳ್ಮೆ ಹಾಗೂ ನೈಪುಣ್ಯತೆಯನ್ನು ಕಾಣಬಹುದು.

ಈ ಸಂಯೊಜನೆಯಲ್ಲಿಯ ಸಹ ರೇಖೆಗಳ ಬಳಕೆಯಾಗಿದ್ದು, ಗಾಢ ಸೂಕ್ಷ್ಮ ರೇಖೆಗಳನ್ನು ಗಮನಿಸಬಹುದು. ಸ್ತ್ರೀಯ ಕೂದಲಿಗೆ ಭಾಗದಲ್ಲಿ ಕಣ್ಣು, ಮೂಗು, ತೋಳುಗಳಲ್ಲಿ ವಸ್ತ್ರದ ಹಂಚಿನ ಪಟ್ಟಿಯ ಮೇಲೆ, ವರ್ಣಗಳಿಂದ ಮೆದುಗೊಳಿಸಲಾಗಿದೆ. ಅನಂತರ ಕಂಬ, ಪಿಲ್ಲೋ, ಟೇಬಲ್, ಜಮಖಾನ, ಕನ್ನಡಿ, ಪರದೆಗಳಲ್ಲಿ ಗಾಢವಾದ ರೇಖೆಗಳನ್ನು ಬಳಸಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಅತ್ಯುತ್ತಮ ಕೃತಿಗಳಲ್ಲೊಂದಾಗಿದ್ದು, ಪಾಶ್ಚಾತ್ಯ ಪ್ರಭಾವಗಳು ಎದ್ದು ಕಾಣುವಂತೆ ಚಿತ್ರಿಸಲಾಗಿದೆ.

ಚಿಂತಿಸುತ್ತಿರುವ ಸ್ತ್ರೀ

ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಲಾದ ಈ ಸಂಯೋಜನ ಚಿತ್ರಿತದಲ್ಲಿ ಸ್ತ್ರೀಯು ಅವಳ ಕೋಣೆಯಲ್ಲಿ ಚಿಂತಿಸುತ್ತ ಕುಳಿತುಕೊಂಡಿದ್ದಾಳೆ. ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ಬಾಚಣಿಕೆಯನ್ನು

ಹಿಡಿದುಕೊಂಡು ಕುಳಿತಿರುವ ಸ್ತ್ರೀಯನ್ನು ಕಾಣಬಹುದು. ಅವಳ ಎಡಭಾಗದಲ್ಲಿ ಪರದೆಯ ಹಿಂದೆ ಒಂದು ಕಲಾಕೃತಿ ಇದ್ದು, ಅವಳ ಬಲಭಾಗದಲ್ಲಿ ಟೇಬಲ್ ಇದ್ದು, ಅದರ ಮೇಲೆ ಹೂ ಹಾಗೂ ಸುಗಂಧ ದ್ರವ್ಯಗಳಿದ್ದು, ಸಂಯೋಜನೆಗೆ ತಕ್ಕ ವಸ್ತುಗಳ ಬಳಕೆಯನ್ನು ಕಾಣಬಹುದು. ಚಿಂತಾಮಗ್ನಳಾಗಿ ಕುಳಿತುರುವ ಸ್ತ್ರೀಯನ್ನು ಕಲಾವಿದ ನೈಜವಾಗಿ ಚಿತ್ರಿಸಲಾಗಿದೆ. ಈ ಕಲಾಕೃತಿಯು ಪ್ರಸ್ತುತ ರಂಗವಿಲಾಸ ಪ್ಯಾಲೆಸ್, ತಿರುವನಂತಪುರಂದಲ್ಲಿ ಸಂಗ್ರಹಗೊಂಡಿದೆ.

ಸ್ತ್ರೀಯ ಮುಖಭಾಗದಿಂದ ಕುತ್ತಿಗೆ ಹಾಗೂ ಕೈಕಾಲುಗಳಿಗೆ ಹಳದಿ, ಕೆಂಪು, ಕೇಸರಿ, Red Deep, Yellow, Burnt Sienna, ಇತ್ಯಾದಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ತೋರಿಸಲಾಗಿದೆ. ಅವಳ ವಸ್ತ್ರದಲ್ಲಿ ಬಳಸಿರುವ ವರ್ಣಗಳು ಬಿಳಿ, ಹಳದಿ, ನೀಲಿ Burnt Sienna, Yellow ಇತ್ಯಾದಿ ವರ್ಣಗಳನ್ನು ಬಳಸಿ ಮೆದು ಹಾಗೂ ಗಾಢ ಎರಡು ರೀತಿಯ ಮಿಶ್ರಣವನ್ನು ಉಪಯೋಗಿಸಿಕೊಂಡು ಚಿತ್ರಿಸಲಾಗಿದೆ. ಅವಳ ಸುತ್ತಲಲ್ಲಿ ಇರುವ ಪರದೆ, ಟೇಬಲ್, ಪಿಲ್ಲೋ, ಗೋಡೆಭಾಗಗಳಿಗೆ ಕೆಂದು, ಕೆಂಪು, ಕಪ್ಪು, ಹಳದಿ ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯೊಂದಿಗೆ ವರ್ಣಗಳ ವ್ಯತ್ಯಾಸವನ್ನು ಕಾಣಬಹುದು.

ವರ್ಣಗಳ ಸಂಯೋಜನೆಯಲ್ಲಿ ರೇಖೆಗಳು ಬಹಳ ಮುಖ್ಯ ಪಾತ್ರವಹಿಸುತ್ತವೆ. ಈ ಕಲಾಕೃತಿಯಲ್ಲಿಯು ಸಹ ರೇಖೆಗಳನ್ನು ಗಮನಿಸಬಹುದು. ಸ್ತ್ರೀಯ ಕಣ್ಣು, ಮೂಗು, ತುಟಿಗಳಲ್ಲಿ ಸೂಕ್ಷ್ಮವಾದ ರೇಖೆಗಳನ್ನು ವರ್ಣಗಳೊಂದಿಗೆ ಮೆದುಗೊಳಿಸಲಾಗಿದೆ. ಕೈಗಳು ಹಾಗೂ ಕಾಲುಗಳು ಬೆರಳುಗಳಲ್ಲಿಯು ಟೇಬಲ್‌ನ ಮೇಲೆ ಬಳಸಿರುವ ರೇಖೆಗಳು, ಒಂದೇ ಪ್ರಮಾಣದಲ್ಲಿ ಕಾಣಬಹುದು. ಕಲಾಕೃತಿಯ ಫ್ರೇಮ್‌ನ ಮೇಲೆ, ಕನ್ನಡಿಯ ಮೇಲೆ ಮೊಟ್ಟೆ ಆಕಾರದ ರೇಖೆಗಳನ್ನು ಬಳಸಿ ಚಿತ್ರಿಸಿರುವುದನ್ನು ಗಮನಿಸಬಹುದು. ಒಟ್ಟಾರೆಯಾಗಿ ಇದು ಒಂದು ಉತ್ತಮವಾದ ಕಲಾಕೃತಿಯಾಗಿದೆ. ಪಾಶ್ಚಾತ್ಯದ ಪ್ರಭಾವದಿಂದ ಉತ್ತಮ ಕಲಾಕೃತಿಯಾಗಿದ್ದು.

ಚಂದ್ರೋದಯದಲ್ಲಿ ಸ್ತ್ರೀ

ಈ ಕಲಾಕೃತಿ ಫೋಟೋಗ್ರಾಫಿಯನ್ನು ಮೀರಿಸುವಂತಹ ಕಲಾಕೃತಿಯಾಗಿದ್ದು, ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಇಂದಿನ ಪೀಳಿಗೆಗೆ ಮಾಧರಿಯಾಗಿದೆ. ಒಂದು ಸುಂದರವಾದ ನದಿತೀರದಲ್ಲಿನ ಚಂದ್ರೋದಯ ಸಮಯದಲ್ಲಿ ಕುಳಿತುಕೊಂಡಿರುವ ದೃಶ್ಯವಾಗಿದೆ. ತನ್ನ ಬಲಗೈಯನ್ನು ಎರಡು ಮೊಣಕಾಲಿನ ಮಧ್ಯದಲ್ಲಿ ಇಟ್ಟುಕೊಂಡಿದ್ದಾಳೆ. ಮತ್ತು ಎಡಗೈಯನ್ನು ಅವಳ ಎದೆಭಾಗದ ಸೆರಗನ್ನು ಹಿಡಿದುಕೊಂಡಿದ್ದಾಳೆ. ಅವಳ ಸೆರಗು ಜಾರಿದಂತೆ ತೋರಿಸಲಾಗಿದೆ. ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತಿರುವುದನ್ನು (ಮುಂಗಾಲುಗಳನ್ನು ಮಾತ್ರ) ಕಾಣಬಹುದು.

ಸ್ತ್ರೀಯ ಮುಖಭಾಗದಿಂದ ಕುತ್ತಿಗೆ, ಕೈ, ಕಾಲುಗಳಲ್ಲಿ ಹಳದಿ, ಕೇಸರಿ, ಕೆಂಪು, ಕಂದು ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಮುಖಭಾಗದಲ್ಲಿ ಅರ್ಧಭಾಗ ನೆರಳು ಬೆಳಕಿನ ಸಂಯೋಜನೆಯು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಅವಳ ವಸ್ತ್ರಗಳಿಗೆ ವಿರುದ್ಧವಾದ ವರ್ಣಗಳ ಬಳಕೆ ಕಾಣಬಹುದು. ವಸ್ತ್ರದಲ್ಲಿ ಶ್ರೀಮಂತಿಕೆಯನ್ನು ತೋರಲಾಗಿದೆ. ಸೀರೆಯ ಮೇಲಿನ ಮುದುಡಿರುವ ಭಾಗಗಳನ್ನು ಗಾಢವರ್ಣಗಳಿಂದ ನೆರಳನ್ನು ತೋರಿಸಲಾಗಿದೆ. ಈ ಸಂಯೋಜನೆಯಲ್ಲಿ ನೆರಳು ಬೆಳಕಿನ ಪ್ರಭಾವದಿಂದ ಕಲಾಕೃತಿ ಚಿತ್ರಸಾಲಾಗಿದೆ.

ಹಿನ್ನೆಲೆಯಲ್ಲಿ ನದಿ ತೋರುತ್ತದೆ. ಹಳದಿ, ಬಿಳಿ, ಕೆಂಪು, ಕಂದು, ನೀಲಿ, ಬಿಳಿ,ಇತ್ಯಾದಿ ಮಿಶ್ರವರ್ಣಗಳ ಬಳಕೆಯಿಂದ ಮೆದುಗೊಳಿಸಲಾಗಿದೆ. ಸ್ತ್ರೀಯು ಕುಳಿತಿದ್ದು ಬಂಡೆಯ ಚಂದ್ರನ ಬೆಳಕು ಹಾದಿರುವುದನ್ನು ಗಮನಾರ್ಹವಾಗಿ ಚಿತ್ರಿಸಲಾಗಿದೆ. ಸುತ್ತಲಿನ ಪರಿಸರವನ್ನು ನೆರಳಿನಿಂದ ಮಿಶ್ರಣಮಾಡಲಾಗಿದ್ದು, ಇನ್ನು ರೇಖೆಗಳನ್ನು ಗಮನಿಸಿದಾಗ ಗಾಢ ಹಾಗೂ ಸೂಕ್ಷ್ಮ ರೇಖೆಗಳನ್ನು ಕಾಣಬಹುದು. ಸ್ತ್ರೀಯ ವಸ್ತ್ರದಲ್ಲಿ ಅವಳ ಕಾಲಿನ ಗೆಜ್ಜೆಯ ಭಾಗದಲ್ಲಿ ಹಾಗೂ ಬಂಡೆಗಳ ಮೇಲೆ ವರ್ಣಗಳಿಂದ ರೇಖೆಗಳನ್ನು ಬಳಸಿರುವ ರೀತಿಯನ್ನು ಗಮನಿಸಬಹುದು. ಇಲ್ಲಿಯು ಸಹ ಪಾಶ್ಚಾತ್ಯರ ಶೈಲಿಯಲ್ಲಿ ಗಮನ ಸೆಳೆಯುವಂತಹ ಚಿತ್ರ ಕಲಾಕೃತಿ ಇದಾಗಿದೆ.

ಕಲಾವಿದರನ್ನು ಸ್ತ್ರೀಯ ಭಾವನೆಯನ್ನು ಅವಳು ಯಾರಿಗೆ ಕಾಯುವಂತಿದ್ದು, ಅವರು ಭಾರದ ದುಃಖ ಹಾಗೂ ಚಿಂತೆಯ ನಡುವಿನ ಭಾವನೆಯನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ವರ್ಣಗಾರಿಕೆಯಲ್ಲಿ ವಸ್ತು ವಿಷಯದಲ್ಲಿ ಗಮನಸೆಳೆದಿದ್ದು, ಒಂದು ರೀತಿಯ ಪೋಟೋಗ್ರಾಫಿಯಂತಹ ಭಾವನೆಯನ್ನು ಹಿನ್ನಲೆಯಲ್ಲಿ ಕಾಣಬಹುದು. ಪಾಶ್ಚಾತ್ಯರ ಪ್ರಭಾವದಿಂದ ಭಾರತೀಯ ವಸ್ತು ವಿಷಯಗಳಿಂದ ಪ್ರಭಾವಿತನಾಗಿ ಕಲಾಕೃತಿ ರಚಿಸುವಲ್ಲಿ ಗಮನಾರ್ಹನಾಗಿದ್ದಾನೆ. ಇವರ ಕಲಾಕೃತಿಗಳಲ್ಲಿ ಇದು ಒಂದು ಉತ್ತಮವಾದ ಕಲಾಕೃತಿಯಾಗಿದೆ.

ನಗ್ನ ಸ್ತ್ರೀ ಚಿತ್ರಣ

ಈ ಕಲಾಕೃತಿಯು ಸ್ತ್ರೀಯು ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ನದಿಯ ತೀರದಲ್ಲಿ ಅರೆನಗ್ನವಾಗಿ ಕುಳಿತುಕೊಂಡಿದ್ದಾಳೆ. ಅವಳ ಪಕ್ಕದಲ್ಲಿ ಹುಲ್ಲಿನ ಹೊರೆಯನ್ನು ಕುಡಗೋಲನ್ನು ಕಾಣಬಹುದು. ಸುಂದರವಾದ ನದಿತೀರದಲ್ಲಿ ಸೂರ್ಯ ಮುಳುಗುವುದರ ಕಡೆಗೆ ನೋಡುತ್ತಾ ಕುಳಿತಿರುವಂತೆ ಕಾಣಬಹುದು. ಕಲಾವಿದನ ನೈಪುಣ್ಯವನ್ನು ಕಾಣಬಹುದು. ಪಾಶ್ಚಾತ್ಯರ ರೋಮ್ಯಾಂಟಿಜಂ ಶೈಲಿಯನ್ನು ಬಳಸಿಕೊಂಡು ಚಿತ್ರಿಸಿಂದತೆ ಕಂಡುಬರುತ್ತದೆ.

ಸಂಯೋಜನೆಯನ್ನು ಗಮನಿಸಿದಾಗ ಸ್ತ್ರೀ ತಲೆಯ ಭಾಗಕ್ಕೆ ಬಟ್ಟೆಯನ್ನು ಕಟ್ಟಿಕೊಂಡಿದ್ದಾಳೆ. ಅವಳ ಎದೆ ಭಾಗವನ್ನು ನಗ್ನವಾಗಿದ್ದು. ಸೊಂಟದಿಂದ ಮೊಣಕಾಲಿನವರೆಗೂ ವಸ್ತ್ರವನ್ನು ಕಾಣಬಹುದು.

ಸ್ತ್ರೀಯ ಮುಖಭಾಗದಿಂದ ಕುತ್ತಿಗೆ, ಎದೆಯ ಭಾಗ ಮೊಣಕಾಲಿನಿಂದ ಕಾಲಿನವರೆಗೆ ಕಂದು, ಕೆಂಪು, ಕೇಸರಿ ಹಳದಿ, ನೀಲಿ ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಸ್ತ್ರೀಯ ಮುಖಭಾಗವನ್ನು ಸ್ವಲ್ಪವಾಗಿ ತೋರಿಸದೆ, ಅವಳ ದೇಶಭಾಗವನ್ನು ಪ್ರಧಾನವಾಗಿ ಉತ್ತಮವಾದ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಪಾಶ್ಚಾತ್ಯರ ಶೈಲಿಯನ್ನು ಬಳಸಿಕೊಂಡು ಕಲಾವಿದನ ಕಲಾವಂತಿಕೆಯನ್ನು ಕಾಣಬಹುದು. ವಸ್ತ್ರಕ್ಕೆ ಹಳದಿ, ಕೇಸರಿ, ನೀಲಿ, ಕಂದು, ಮಿಶ್ರವರ್ಣ ಬಳಸಿ ಮೆದುಗೊಳಿಸಲಾಗಿದೆ. ಅವಳ ಪಕ್ಕದಲ್ಲಿ ಹೊಲುಗೆ ಸ್ತ್ರಿಯ ಮೇಲಿನ ವರ್ಣನೆ ಕಾಣಬಹುದು.

ಸ್ತ್ರೀ ಪಕ್ಕದಲ್ಲಿರುವ ನದಿ ಆಕಾಶಕ್ಕೆ ನೀಲಿ, ಕೆಂಪು, ಹಳದಿ, ಕೇಸರಿ ಬಿಳಿ ಇತ್ಯಾದಿ ವರ್ಣಗಳಿಂದ ದೂರದ ಅಂತರವನ್ನು ವರ್ಣದಲ್ಲಿಯೆ ಗುರುತಿಸುವಂತೆ ಚಿತ್ರಿಸಲಾಗಿದೆ. ಕಲಾವಿದನ ಹೊಸತನವನ್ನು ತನ್ನ ಚಿತ್ರದಲ್ಲಿ ತೋರಿಸುವ ಪ್ರಯತ್ನದಲ್ಲಿ ಮುಖದ ಭಾಗಕ್ಕೆ ಹೆಚ್ಚು ಗಮನಕೊಟ್ಟಂತೆ ಕಂಡುಬರುವುದಿಲ್ಲ. ನೆರಳಿನ ಪ್ರಭಾವದಲ್ಲಿ ಕೊಂಚ ನಾಟಕದ ಪ್ರಭಾವ ಕಂಡುಬಂದರು. ಪಾಶ್ಚಾತ್ಯದ ರೋಮ್ಯಾಂಟಿಜಂ ಶೈಲಿಯಲ್ಲಿ ಭಾರತೀಯ ಹಳ್ಳಿ ಸ್ತ್ರೀಯರ ಮೇಲೆ ಪ್ರಯೋಗವನ್ನು ಮಾಡಿ ಉತ್ತಮ ಕಲಾಕೃತಿ ರಚಿಸಿರುವುದನ್ನು ಕಾಣಬಹುದು.

ಸಂಯೋಜನಾ ಸ್ತ್ರೀ ಚಿತ್ರ

ಈ ಕಲಾಕೃತಿಯು ಕ್ಯಾನ್ವಾಸ್ ಮೇಲೆ ತೈಲವರ್ಣದಲ್ಲಿ ರಚನೆಯಾಗಿದೆ. ಈ ಕಲಾಕೃತಿಯಲ್ಲಿ ಸ್ತ್ರೀಯು ಖಡ್ಗಯನ್ನು ಅವಳ ಹಿಂಭಾಗದಲ್ಲಿ ಹಿಡಿದುಕೊಂಡು ನೋಡುತ್ತಿರುವಂತೆ ಅರ್ಧ ಭಾಗಮಾತ್ರ ಚಿತ್ರಿಸಲಾಗಿದೆ. ದೇಹವನ್ನು ನೋಡುಗನಿಗೆ ಎದುರಾಗಿ ಚಿತ್ರಿಸಲಾಗಿದೆ. ಸ್ತ್ರೀಯ ಕುತ್ತಿಗೆಯಿಂದ ಸೊಂಟದವರೆಗೂ ನಗ್ನವಾಗಿ ಚಿತ್ರಿಸಿ ಸೊಂಟಕ್ಕೆ ದೊಡ್ಡಬೆಲ್ಟಿನ ಪಟ್ಟಿ ಹಾಕಿ ಅವಳ ಕೈಯಲ್ಲಿ ದೊಡ್ಡಗಾತ್ರದ ಕತ್ತಿಯನ್ನು ಕಾಣಬಹುದು. ಅವಳ ಕಾಲಿನ ಭಾಗ ಅಸ್ಪಷ್ಟವಾಗಿ ವಸ್ತ್ರದಿಂದ ಸುತ್ತುವರೆದಂತೆ ಕಂಡುಬರುತ್ತದೆ. ಈ ಕಲಾಕೃತಿಯ ಹಿನ್ನೆಲೆಯಲ್ಲಿ ಗಮನಿಸಿದಾಗ ಪ್ರಾಣಿ ಪಕ್ಷಿಗಳು ಚಿತ್ರಗಳನ್ನು ಕಾಣಬಹುದು.

ಸ್ತ್ರೀಯ ಮುಖಭಾಗದಿಂದ ಕುತ್ತಿಗೆಯಿಂದ ಸೊಂಟದವರೆಗೆ ಹಾಗೂ ಕೈಗಳಲ್ಲಿ ಹಳದಿ, ಕೇಸರಿ, ಕೆಂಪು, ಕಂದು ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಪ್ರಭಾವದೊಂದಿಗೆ ಕಾಣಬಹುದು. ಕಲಾವಿದನ ಹೊಸಶೈಲಿಯ ಪ್ರಯತ್ನ ಪರಿಶ್ರಮವನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಮುಖದ ಭಾವನೆಗಳು ಸ್ಪಷ್ಟವಾಗಿ ಗುರುತಿಸಲೂ ಆಗುವುದಿಲ್ಲ. ಏಕೆಂದರೆ ದೇಶ ರಚನೆ ಹೆಚ್ಚು ಗಮನ ತೋರಿದಂತೆ ಕಂಡುಬರುತ್ತದೆ. ಸ್ತ್ರೀಯ ಹಿನ್ನೆಲೆಯಲ್ಲಿ ಕೆಂದು, ಕೇಸರಿ, ಕಂದು ಹಳದಿ ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಅಲ್ಲಲ್ಲಿ ಪ್ರಾಣಿ, ಪಕ್ಷಿಗಳನ್ನು ಸ್ವಲ್ಪವಾಗಿ ಕಾಣಬಹುದು. ಕಲಾವಿದನನ್ನು ಯಾವುದೇ ರೀತಿಯ ಚಲನೆಯನ್ನು ತೋರಿಸಿಲ್ಲ. ಅವಳ ಕೈಗಳಲ್ಲಿ ಪುರುಷರ ಗಟ್ಟಿತನವನ್ನು ಕಾಣಬಹುದು. ನೋಡುಗನಿಗೆ ಮನಸೂರೆಯಾಗುವಂತೆ ಚಿತ್ರಿಸಲಾಗಿದೆ. ಉತ್ತಮ ಕಲಾಕೃತಿಗಳಲ್ಲೊಂದು.

ಮಧುಮಗಳು

ಉತ್ತರ ಭಾರತದ ಗುಜರಾತಿನ ಸ್ತ್ರೀಯರ ಸಂಯೋಜನ ಚಿತ್ರ ಇದಾಗಿದೆ. ಕ್ಯಾನ್‌ವಾಸ್ ಮೇಲೆ ತೈಲ ವರ್ಣದಲ್ಲಿ ಚಿತ್ರಿಸಲಾಗಿದೆ. ಸ್ತ್ರೀಯರು ಮಧುಮಗಳಂತೆ ಅಲಂಕರಿಸುತ್ತಿರುವ ಕಲಾಕೃತಿ ಇದಾಗಿದೆ. ವಧುವನ್ನು ಒಂದು ಮಣಿಯ ಮೇಲೆ ನಿಲ್ಲಸಿ ಅವಳ ಪಕ್ಕದಲ್ಲಿ ಇನ್ನೊಬ್ಬ ಸ್ತ್ರೀಯು ವಧು ಕೊರಳಿನ ಹಾರವನ್ನು ಸರಿಪಡಿಸುತ್ತಿದ್ದಾಳೆ, ಇನ್ನೊಬ್ಬಳು ಅಲ್ಲಿಯೇ ಇದ್ದು, ವಧು ಎನನ್ನೊ ತೆಗೆದುಕೊಡುವಂತೆ ಬಗ್ಗಿರುವ ಭಂಗಿ, ವದುವಿನ ಬಲಭಾಗದಲ್ಲಿ ಕೈ ಬಳೆಯನ್ನು ಹಿಡಿದು ನಿಂತಿರುವ ಇನ್ನೊಬ್ಬ ಸ್ತ್ರೀಯನ್ನು ಕಾಣಬಹುದು. ವದುವಿಗೆ ಬೇಕಾಗುವ ವಸ್ತ್ರಗಳು, ಹಣ್ಣು, ಸುಂಗಧ ದ್ರವ್ಯ, ಹಾರಗಳನ್ನು ಕಾಣಬಹುದು. ವಿಷಯಕ್ಕೆ ಸಂಬಂಧಿಸಿದಂತೆ ವಸ್ತುಗಳನ್ನು ಸಂಯೋಜಿಸಲಾಗಿದೆ. ಹಿನ್ನೆಲೆಯಲ್ಲಿ ಕಂಬಗಳು ಬಾಗಿಲುಗಳನ್ನು ತೋರಿಸಲಾಗಿದೆ.

ಎಲ್ಲಾ ಸ್ತ್ರೀಯರಿಗೆ ಮುಖಭಾಗದಿಂದ ಕೈ ಕಾಲುಗಳಿಗೆ ಹಳದಿ, ಕೆಂಪು, ಕೇಸರಿ, ಕಂದು ಇತ್ಯಾದಿ ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಭಾವನೆಗಳನ್ನು ಗಮನಿಸಿದರೆ, ವಸ್ತ್ರಗಳನ್ನು ವಿರುದ್ಧವಾದ ವರ್ಣಗಳನ್ನು ಬಳಸಲಾಗಿದೆ. ಇಬ್ಬರು ಸ್ತ್ರೀಯಲ್ಲಿ ಒಂದೇ ವರ್ಣದ ಸೀರೆಯನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ವಸ್ತುಗಳು ಮುದುಡಿರುವ ಭಾಗವನ್ನು ಗಾಡವರ್ಣಗಳಿಂದ ಚಿತ್ರಿಸಿರುವುದನ್ನು ಕಾಣಬಹುದು. ಹಾಗೂ ಹಿನ್ನೆಲೆಯನ್ನು ನೆಲದ ಭಾಗವನ್ನು ಒಂದೇ ವರ್ಣದಿಂದ ಚಿತ್ರಿಸಿದ್ದು ಅದರಲ್ಲಿ ನೆರಳು ಹಾಗೂ ಬೆಳಕಿನ ವಿಭಜನೆಯನ್ನು ಕಾಣಬಹುದು.

ರೇಖೆಗಳ ಬಳಕೆಯಲ್ಲಿ ವಸ್ತ್ರದ ಮೇಲೆ ನೆಲದ ಟೈಲ್ಸ್‌ಗಳಲ್ಲಿ ನೇರ ರೇಖೆಗಳ ಬಳಕೆ ಹಾಗೂ ಹಿನ್ನಲೆಯಲ್ಲಿ ಸೂಕ್ಷ್ಮವಾದ ರೇಖೆಗಳನ್ನು ಕಾಣಬಹುದು. ಕಲಾವಿದ ಸ್ತ್ರೀಯರ ಸೌಂದರ್ಯದಲ್ಲಿ ಜಡತ್ವತೆ ಕಂಡುಬರುತ್ತಾರೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯಿಂದ ಈ ಜಡತ್ವ ಮುಚ್ಚಿಹೋಗಿದೆ. ಇದು ಒಂದು ಉತ್ತಮವಾದ ಕಲಾಕೃತಿಗಳಲ್ಲಿ ಇದು ಒಂದಾಗಿದೆ. ಪಾಶ್ಚಾತ್ಯರ ಶೈಲಿ ಭಾರತೀಯ ವಿಷಯ ವಸ್ತುವು ಈ ಕಲಾಕೃತಿಯ ಕಾಣಬಹುದಾಗಿದೆ. ಪ್ರಸ್ತುತ ಈ ಕಲಾಕೃತಿಯು ರಂಗವಿಲಾಸ ಪ್ಯಾಲೆಸ್, ತಿರುವನಂತಪುರಂದಲ್ಲಿ ಸಂಗ್ರಹಗೊಂಡಿದೆ.

ಪೂಜಾ ಸಾಮಗ್ರಿಗಳೊಂದಿಗೆ ಸ್ತ್ರೀ

ಮಹಾರಾಷ್ಟ್ರದ ಸ್ತ್ರೀಯು ಪೂಜಾ ಸಾಮಗ್ರಿಗಳನ್ನು ಹಿಡಿದು ದೇವಸ್ಥಾನಕ್ಕೆ ಹೋಗುತ್ತಿರುವ ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಸ್ತ್ರೀಯು ಮೆಟ್ಟಿಲಿನ ಮೇಲೆ ಹೋಗುತ್ತಿರುವಾಗ ಓರೆಯಾಗಿ ತಿರುಗಿರುವಂತೆ ಚಿತ್ರಿಸಲಾಗಿದೆ. ಅವಳ ಕೈಯಲ್ಲಿ ಪೂಜಾ ಸಾಮಗ್ರಿಗಳ ತಟ್ಟೆಯನ್ನು ಹಿಡಿದುಕೊಂಡಿದ್ದಾಳೆ ಒಂದು ಕಾಲನ್ನು ಮೆಟ್ಟಿಲ ಮೇಲೆ ಇಟ್ಟುಕೊಂಡಿದ್ದು, ಇನ್ನೊಂದು ಕಾಲನ್ನು ಕೆಳಗೆ ಕಾಣಬಹುದು. ಸ್ತ್ರೀಯ ಹಿಂಭಾಗದಲ್ಲಿ ನಂದಿಯ ಅರ್ಧಭಾಗ ಚಿತ್ರಿಸಿದ್ದು, ದೇವಸ್ಥಾನದ

ಗೋಡೆಯ ಮೇಲೆ ಹೂಬಳ್ಳಿಯನ್ನು ಕಾಣಬಹುದು. ಸ್ತ್ರೀಯನ್ನು ನೈಜತೆಗಿಂತಲೂ ಹೆಚ್ಚು ಸುಂದರವಾಗಿ ಚಿತ್ರಿಸಲಾಗಿದೆ. ಅವಳ ಕೂದಲಿನ ಭಾಗಕ್ಕೆ ಕಪ್ಪು, ಕಂದು ವರ್ಣದಿಂದ ಮೆದುಗೊಳಿಸಲಾಗಿದೆ. ಹಿಂಭಾಗದಲ್ಲಿ ತುರುಬನ್ನು ಹಾಕಿ ಹೂವನ್ನು ಮುಡಿದುಕೊಂಡಿದ್ದಾಳೆ. ಮುಖಭಾಗದಿಂದ ಕುತ್ತಿಗೆ, ಕೈ ಕಾಲುಗಳಿಗೆ ಕೇಸರಿ, ಹಳದಿ, ಕೆಂಪು, ಕಂದು, Varwilion Hue, Light Red Venetian Red ಮಿಶ್ರವರ್ಣಗಳಿಂದ ಮೆದುಗೊಳಿಸಲಾಗಿದೆ. ಮುಖದ ಭಾವನೆಯನ್ನು ಸೌಮ್ಯ ಉತ್ತಮವಾದ ನೆರಳು ಬೆಳಕನ್ನು ತೋರಿಸಲಾಗಿದೆ. ಪೋಟೋಗ್ರಾಫಿಯಂತೆ ಚಿತ್ರಿಸಿರುವುದನ್ನು ಕಾಣಬಹುದು.

ವಸ್ತ್ರಕ್ಕೆ ಕೆಂಪು, Light Red, Venetian Red, ಕಂದು Light Red ಮಿಶ್ರವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯೊಂದಿಗೆ ವಸ್ತ್ರ ಮುದುಡಿರುವ ಭಾಗಗಳನ್ನು ನೈಜವಾಗಿ ಮೂಡಿಬಂದಿವೆ. ನೋಡುಗನಿಗೆ ಸುಂದರವಾಗಿ ಕಾಣುತ್ತವಂತೆ ಗಮನ ಸ್ತ್ರೀಯನ್ನು ಆಕರ್ಷಿಸುವಂತೆ ಚಿತ್ರಿಸಲಾಗಿದೆ. ಹಿನ್ನಲೆಗೆ ನಂದಿಗೆ ಸ್ತ್ರೀಯ ಕೂದಲಿಗೆ ಬಳಸಿದ ವರ್ಣವನ್ನು ಕಾಣಬಹುದು. ಮೆಟ್ಟಿಲುಗಳಿಗೆ ಹಾಗೂ ಗೋಡೆಗೆ ಮುಖಭಾಗಕ್ಕೆ ಬಳಸಿದ ವರ್ಣಗಳನ್ನು ಬಳಸಿ ಬೆಳಕಿನ ಪ್ರಭಾವ ಹೆಚ್ಚಾಗಿರುವಂತೆ ತೋರಿಸಲಾಗಿದೆ. ಗೋಡೆಯ ಮೇಲಿನ ಜಾನಪದ ವಿನ್ಯಾಸಗಳನ್ನು ಹಾಗೂ ಹೂ ಬಳ್ಳಿಯನ್ನು ವರ್ಣಗಳಿಂದನೆರಳು ಬೆಳಕನ್ನು ತೋರಿಸಿ ಪೂರ್ಣಗೊಳಿಸಲಾಗಿದೆ.

ರೇಖೆಗಳ ಬಳಕೆ ಹೆಚ್ಚು ಕಂಡುಬರುವುದಿಲ್ಲ. ಸ್ತ್ರೀಯ ಸೀರೆಯ ಮೇಲೆ ಗೋಡೆಯ ವಿನ್ಯಾಸಗಳಲ್ಲಿ ಹೂ ಬಳ್ಳಿಯಲ್ಲಿ ಕಾಣಬಹುದು. ಪಾಶ್ಚಾತ್ಯದ ವರ್ಣಗಳಿಂದ ಭಾರತೀಯ ವಸ್ತುವನ್ನು ಬಳಸಿ ಚಿತ್ರಿಸಿರುವುದನ್ನು ಕಾಣಬಹುದು. ನಾಟಕದ ಪ್ರಭಾವವನ್ನು ಕಲಾಕೃತಿ ಹಿನ್ನಲೆಯಲ್ಲಿ ಬಳಸಿಕೊಂಡಿದ್ದಾರೆ. ಪಾಶ್ಚಾತ್ಯ ಪ್ರಭಾವದಿಂದ ಭಾರತೀಯ ಜನಸಮಾನ್ಯರಿಗೂ ತಲುಪುವಂತಹ ಕಲಾಕೃತಿಗಳನ್ನು ರಚಿಸುವಲ್ಲಿ ಉನ್ನತ ಸಾಧನೆ ಗೈದಿರುವುದನ್ನು ಇಂದಿಗೂ ಕಾಣಬಹುದು.

ಬಾವಿಯ ಹತ್ತಿರ ಮೈಸೂರು ಸ್ತ್ರೀ

ಈ ಕಲಾಕೃತಿಯ ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚನೆಯಾಗಿದ್ದು, ಸ್ತ್ರೀಯ ನೀರು ಸೇದುವ ಭಾವಿಯ ಹತ್ತಿರ ನಿಂತಿದ್ದಾಳೆ. ಅವಳ ಎಡಗೈಯನ್ನು ಕೊಡದ ಮೇಲೆ ಇಟ್ಟುಕೊಂಡು ಬಲಗೈಯಲ್ಲಿ ಸೀರೆಯನ್ನು ಹಿಡಿದುಕೊಂಡು ನಿಂತಿರುವ ಭಂಗಿ ನೈಜವಾಗಿ ಕೊಡವನ್ನು ಭಾವಿಯ ಕಡೆಯ ಮೇಲಿನ ಅದರ ಹಗ್ಗವನ್ನು ಪಕ್ಕದಲ್ಲಿ ತೋರಿಸಲಾಗಿ ಹಿನ್ನಲೆಯಲ್ಲಿ ಗೋಡೆಯನ್ನು ಸೂಕ್ಷ್ಮವಾಗಿ ಕಾಣಬಹುದು. ಉತ್ತಮವಾದ ಸಂಯೋಜನೆಯಾಗಿದ್ದು, ಕಲಾವಿದನ ನೈಪುಣ್ಯತೆಯನ್ನು ತೋರುತ್ತದೆ. ಸ್ತ್ರೀಯ ಮುಖ ಭಾಗದಿಂದ ಕುತ್ತಿಗೆ ಕೈ ಕಾಲುಗಳಿಗೆ ಕಂದು, ಕೇಸರಿ, ಹಳದಿ, ಕೆಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಿದ್ದು ನೆರಳು ಬೆಳಕನ್ನು ತೋರಿಸಲಾಗಿದೆ. ಸ್ತ್ರೀಯ ವಸ್ತ್ರಕ್ಕೆ ವಿರುದ್ಧ ವರ್ಣದ ಬಳಕೆಯಾಗಿದ್ದು. ಕುಬ್ಬಸಕ್ಕೆ ಕೆಂಪು, ಕೇಸರಿ ಮಿಶ್ರವರ್ಣವನ್ನು ಬಳಸಿ ಮೆದುಗೊಳಿಸಲಾಗಿದೆ. ಸೀರೆಗೆ

ಕೆಂದು, ಕೆಂಪು, ಕೇಸರಿ, ಹಳದಿ ವರ್ಣಗಳ ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಭಾರತೀಯ ವಸ್ತ್ರ ಸಂಪ್ರದಾಯದಲ್ಲಿ ಒಂದಾಗಿದೆ. ಕೊಡವನ್ನು ಹಿತ್ತಾಳೆಯ ವರ್ಣಗಳ ಬಳಕೆಯಲ್ಲಿ ಕಾಣಬಹುದು. ಹಗ್ಗ ಹಾಗೂ ಹಿನ್ನಲೆಯಲ್ಲಿ ಸ್ತ್ರೀ ಮೇಲಿನ ವರ್ಣಗಳ ಬಳಕೆಯನ್ನು ಗಮನಿಸಬಹುದು ಭಾವಿಯ ಕಡೆ ಹಾಗೂ ನೆಲದ ಭಾಗಕ್ಕೆ ಕೆಂದು, ನೀಲಿ, ಕೆಂಪು ವರ್ಣಗಳ ಮಿಶ್ರಣದಿಂದ ಮೆದುಗೊಳಿಸಿ ನೆರಳಿನ ಪ್ರಭಾವ ಹೆಚ್ಚಾಗಿ ತೋರಿಸಲಾಗಿದೆ.

ರೇಖೆಗಳನ್ನು ಗಮನಿಸಿದಾಗ ದಪ್ಪ ಹಾಗೂ ಸೂಕ್ಷ್ಮ ರೇಖೆಗಳನ್ನು ಕಾಣಬಹುದು. ಭಾವಿಯ ಕಲ್ಲುಗಳಿಗೆ ದಪ್ಪ ರೇಖೆಗಳ ಬಳಕೆ ಹಾಗೂ ಕೊಡ, ಹಗ್ಗ, ಹಿನ್ನೆಲೆಯ ಕಲ್ಲಿನ ಕಂಬಕ್ಕೆ ಸೂಕ್ಷ್ಮರೇಖೆಗಳು ಬಳಕೆಯಾಗಿದ್ದು, ವರ್ಣದಿಂದ ಮೆದುಗೊಳಿಸಲಾಗಿದೆ. ಪಾಶ್ಚಾತ್ಯದ ಶೈಲಿಯಂತೆ ಒಂದು ಕಡೆಯಿಂದ ಬೆಳಕಿನ ಪ್ರಭಾವವು ಈ ಕಲಾಕೃತಿಯಲ್ಲಿ ಗುರುತಿಸಬಹುದು. ಉತ್ತಮವಾದ ಕಲಾಕೃತಿಗಳಲ್ಲೊಂದಾಗಿದೆ.

ನಿರಾಶಯ ಸುದ್ಧಿ

ಈ ಕಲಾಕೃತಿ ಕ್ಯಾನ್‌ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಿದ್ದು, ಈ ಸಂಯೋಜನ ಕಲಾಕೃತಿಯು ವಿಭಿನ್ನತೆಯಿಂದ ಕೂಡಿರುವುದನ್ನು ಕಾಣಬಹುದು. ಕಲಾವಿದನು ನೈಜತೆಗಿಂತಲೂ ಹೆಚ್ಚು ಸುಂದರ ಹಾಗೂ ಆಕರ್ಷಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸ್ತ್ರೀಯು ಅವಳ ಮಂಚದ ಮೇಲೆ ಮಲಗಿಕೊಂಡು ತನ್ನ ಬಲಗೈಯಲ್ಲಿ ಪತ್ರ, ಮತ್ತು ಎಡಗೈಯನ್ನು ಕಿವಿ ಭಾಗಕ್ಕೆ ಒರಗಿಸಿಕೊಂಡು, ಮೇಲ್ಮುಖವಾಗಿ ನೋಡುತ್ತ ಕಣ್ಣೀರನ್ನು ಸುರಿಸುತ್ತಿದ್ದಾಳೆ. ಕಲಾವಿದ ಭಾವನೆಯನ್ನು ಸೆರೆಹಿಡಿಯುವಂತೆ ಹೆಚ್ಚು ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಅವಳು ಧರಿಸಿರುವ ವಸ್ತ್ರ ಹಿನ್ನಲೆಯನ್ನು ವೈಭವವಾಗಿ ಕಾಣುವಂತೆ ಚಿತ್ರಣಗೈದಿದ್ದಾರೆ.

ಉತ್ತಮವಾದ ನೆರಳು ಬೆಳಕಿನ ಪ್ರಭಾವವನ್ನು ಕಾಣಬಹುದು. ಪಾಶ್ಚಾತ್ಯ ಶೈಲಿ ಪದ್ಧತಿಗಳು ಎಂದ್ದು ತೋರುತ್ತವೆ. ನಾಟಕದ ಪ್ರಭಾವವನ್ನು ಕಾಣಬಹುದು. ಒಂದೇ ಕಡೆಯಿಂದ ಬೆಳಕು ಹರಿದಿರುವ ರೀತಿ, ಹಾಗೂ ವಸ್ತ್ರದಲ್ಲಿ ಅವಳು ಹೊದ್ದುಕೊಂಡಿರುವ ರತ್ನಗಂಬಳಿ, ಹಾಗೂ ಪಿಲ್ಲೊ ಇತ್ಯಾದಿಗಳನನು ವಿರುದ್ಧ ವರ್ಣಗಳ ಬಳಕೆಯನ್ನು ಕಾಣಬಹುದು. ಉತ್ತಮವಾದ ಹೊಳಪುಳ್ಳ ವಸ್ತ್ರ ಅದರಲ್ಲಿನ ರೇಷ್ಮೆ ಜರಿಯ ವಿನ್ಯಾಸಗಳು ನೈಜತೆಗಿಂತಲೂ ಆಕರ್ಷಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಕಲಾವಿದನ ಕಲಾ ನೈಪುಣ್ಯತೆ, ಕಲಾವಂತಿಕೆ, ಸಂಯೋಜನೆ ಕೌಶಲ್ಯಗಳನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ಈ ಕಲಾಕೃತಿಯು ಸಾಲರ್ ಜಂಗ್ ಮ್ಯೂಸಿಯಂ, ಹೈದ್ರಾಬಾದ್‌ದಲ್ಲಿ ಸಂಗ್ರಹಗೊಂಡಿದೆ.

ಅಲೆಮಾರಿಯ ಸಂಯೋಜನ ಚಿತ್ರಣ

ಈ ಸಂಯೋಜನ ಕಲಾಕೃತಿಯನ್ನು ಗಮನಿಸಿದಾಗ ಮಧ್ಯಮ ವರ್ಗಕ್ಕೆ ಸಂಬಂಧಿಸಿದ ವಿಷಯವನ್ನು ಕಲಾಕೃತಿಯಲ್ಲಿ ಬಳಸಿರುವುದನ್ನು ಕಾಣಬಹುದು. ಉತ್ತಮವಾದ ಸಂಯೋಜನೆಯನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ೪ ಜನ ಸ್ತ್ರೀಯರನ್ನು ಕಾಣಬಹುದು. ಒಬ್ಬಳು ಅಂಗಡಿಯಲ್ಲಿ ಕುಳಿತುಕೊಂಡಿದ್ದಾಳೆ. ಅವಳ ಎದುರಿಗೆ ಇನ್ನೊಬ್ಬ ಸ್ತ್ರೀಯು ತಲೆಯ ಮೇಲೆ ಪುಟ್ಟಿಯನ್ನು ಹೊತ್ತುಕೊಂಡು ಕೈಯಲ್ಲಿ ಮೀನನ್ನು ಹಿಡಿದುಕೊಂಡು ಮತ್ತೊಬ್ಬ ಸ್ತ್ರೀ ಒಬ್ಬ ಹುಡುಗಿಯ ತಲೆಯ ಮೇಲೆ ಕೈಯಾಡಿಸುತ್ತಾ ನಿಂತಿದ್ದಾಳೆ. ಅವರ ಪಕ್ಕದಲ್ಲಿಯೆ ನಾಯಿಯು ಮಲಗಿಕೊಂಡಿದೆ. ಕಲಾವಿದನ ಸೃಜನಶೀಲತೆಯನ್ನು ಕಾಣಬಹುದು.

ಒಬ್ಬರನ್ನು ವಿವಿಧ ವರ್ಣಗಳಿಂದ ಚಿತ್ರಿಸಿರುವುದನ್ನು ಕಾಣಬಹುದು. ವಸ್ತ್ರದಲ್ಲಿಯ ವಿರುದ್ಧ ವರ್ಣಗಳು ಬಳಕೆಯಾಗಿದ್ದು, ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಶ್ರೀಮಂತರ ಬೇಡಿಕೆಗನುಗುಣವಾಗಿ ಕಲಾಕೃತಿಗಳನ್ನು ರಚಿಸುತ್ತಿದ್ದು, ಕಲಾವಿದ ರವಿವರ್ಮನು ಬಡತನ ಹಾಗೂ ಮಾಧ್ಯಮ ವರ್ಗದವ ಕಲಾಕೃತಿಗಳನ್ನು ರಚಿಸಬಲ್ಲೆ ಎನ್ನುವುದನ್ನು ಈ ಕಲಾಕೃತಿಯ ಮೂಲಕ ತಿಳಿಸಿಕೊಟ್ಟಿದ್ದಾರೆ ಎನ್ನಬಹುದು. ಉತ್ತಮವಾದ ಪ್ರಯತ್ನವನ್ನು ಕಾಣಬಹುದು.

ಕಾದಂಬರಿ

ಈ ಸಂಯೋಜನ ಚಿತ್ರದಲ್ಲಿ ಸ್ತ್ರೀಯು ವಾದ್ಯವನ್ನು ನುಡಿಸುತ್ತ ಕುಳಿತುಕೊಂಡಿದ್ದಾಳೆ. ಉತ್ತಮವಾದ ಹಿನ್ನೆಲೆಯನ್ನು ಕಾಣಬಹುದು. ಈ ಕಲಾಕೃತಿ ನೈಜವಾಗಿ ಮೂಡಿಬಂದಿದೆ. ಸ್ತ್ರೀಯಲ್ಲಿನ ಭಾವನೆ, ಭಂಗಿ, ವಸ್ತ್ರದಲ್ಲಿ ಹೆಚ್ಚು ಹೊಳಪು ನೋಡುಗನ ಮನಸೆಳೆಯುವಂತಹ ವರ್ಣಗಾರಿಕೆಯನ್ನು ಕಾಣಬಹುದು. ಪಾಶ್ಚಾತ್ಯ ಪ್ರಭಾವವನ್ನು ಹೆಚ್ಚು ಬಳಸಿಕೊಂಡು ಚಿತ್ರಿಸಿರುವುದನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯೊಂದಿಗೆ ಕಲಾಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಅಲೆಮಾರಿ

ರವಿವರ್ಮನ ಕಲಾಕೃತಿಯಲ್ಲಿ ಹೆಚ್ಚು ವೈಭವಿಕರಣದ ಚಿತ್ರಗಳು ಹೆಚ್ಚಿದ್ದು, ಈ ಅಲೆಮಾರಿಯ ಸಂಯೋಜನೆ ವಿಶೇಷವಾದ ಗಮನ ಸೆಳೆಯುವಂತೆ ಚಿತ್ರಿಸಲಾಗಿದೆ. ಕ್ಯಾನ್‌ವಾಸ್ ಮೇಲೆ ತೈಲವರ್ಣದಿಂದ ರಚಿಸಿದ ಈ ಕಲಾಕೃತಿಯಲ್ಲಿ ಸ್ತ್ರೀಯೊಬ್ಬಳು ಅವಳ ಮಕ್ಕಳೊಂದಿಗೆ ದೇವಸ್ಥಾನದ ಹೊರಗೆ ಕುಳಿತಿರುವ ದೃಶ್ಯವಿದಾಗಿದೆ. ಸಂಯೋಜನೆಯಲ್ಲಿ ಸ್ತ್ರೀಯು ತಂಬೂರಿಯನ್ನು ನುಡಿಸುತ್ತಿದ್ದಾಳೆ. ಅವಳ ತೊಡೆಯ ಮೇಲೆ ಮಗು ಮಲಗಿಕೊಂಡಿದೆ. ಅವಳ ಪಕ್ಕದಲ್ಲಿ ಬಟ್ಟೆಯ ಗಂಟು, ಮಡಿಕೆ, ಅದರ ಪಕ್ಕದಲ್ಲಿ ಒಬ್ಬ ಹುಡುಗ ಅವನು ಮೊಣಕೈಯನ್ನು ನೋಡಿಕೊಳ್ಳುತ್ತಿದ್ದಾನೆ.

ಸ್ತ್ರೀಯ ಕಾಲಿನ ಮುಂದೆ ಒಂದು ಬುಟ್ಟಿಯಲ್ಲಿ ದೇವರನ್ನು ಸೂಕ್ಷ್ಮವಾಗಿ ಕಾಣಬಹುದು. ಎಡಭಾಗದ ಕೆಳಗೆ ಒಬ್ಬ ಹುಡುಗಿ ಅವಳ ಮೊಣಕಾಲಿನ ಮೇಲೆ ಕೈಗಳನ್ನು ಹಾಗೂ ತನ್ನ ಗಲ್ಲವನ್ನು ಇಟ್ಟುಕೊಂಡು ಚಿಂತಿಸುತ್ತಿದ್ದಾಳೆ. ಈ ಸಂಯೋಜನೆಯಲ್ಲಿ ಬಡತನದ ಸಂಕೇತವನ್ನು ಗುರುತಿಸಲಾಗಿದೆ. ಸಂಯೋಜನೆಗೆ ತಕ್ಕಂತಂತೆ ಪ್ರಮಾಣ ಆಕೃತಿಗಳನ್ನು ಬಳಸಿರುವುದನ್ನು ಕಾಣಬಹುದು.

ಸ್ತ್ರೀಯು ತನ್ನ ಬಲಗೈಯನ್ನು ತಂಬೂರಿಯನ್ನು ನೋಡಿಸುತ್ತ, ಎಡಗೈಯಲ್ಲಿ ಮಗುವಿನ ಕಾಲುಗಳ ಮೇಲೆ ಇಟ್ಟುಕೊಂಡು ಹಾಡುತ್ತಿರುವಂತೆ ಚಿತ್ರಿಸಲಾಗಿದೆ. ವಿಶೇಷವೆಂದರೆ ಸ್ತ್ರೀ ಕೇಶವಿನ್ಯಾಸದಲ್ಲಿ ಎರಡು ತುರುಬುಗಳನ್ನು ಚಿತ್ರಿಸಲಾಗಿದೆ. ಒಂದು ಬಲ ಭಾಗದಲ್ಲಿ ಇನ್ನೊಂದು ತಲೆಯ ಹಿಂಭಾಗದಲ್ಲಿ ಕಾಣಬಹುದು. ಸ್ತ್ರೀ ಮೇಲಿನ ವರ್ಣಗಳಲ್ಲಿ ಮುಖಭಾಗದಿಂದ ಕುತ್ತಿಗೆ ಹಾಗೂ ಕೈಗಳ ಭಾಗದಲ್ಲಿ ಕಂದು, ಕೆಂಪು ವರ್ಣಗಳನ್ನು ಬಳಸಿ ಮೆದುಗೊಳಿಸಲಾಗಿದೆ. ಸ್ತ್ರೀಯ ಮುಖದ ಅರ್ಧಭಾಗ ಬೆಳಕು, ನೆರಳುಗಳನ್ನು ಉತ್ತಮವಾಗಿ ವಿಭಜಿಸಲಾಗಿದೆ. ಹಾಗೂ ವಸ್ತ್ರದಲ್ಲಿ ಕುಬಸಕ್ಕೆ ನೀಲಿ, ಬಿಳಿ, ಕಂದು ಇತ್ಯಾದಿ ವರ್ಣಗಳಿಂದ ಮೆದುಗೊಳಿಸಲಾಗಿದೆ. ಸಿರೆಯನ್ನು ಸಹ ಕೆಂಪು ಹಳದಿ, ಕಂದು ವರ್ಣಗಳಿಂದ ಮೆದುಗೊಳಿಸಿ ನೆರಳ ಬೆಳಕನ್ನು ವಿಭಜಿಸಲಾಗಿದೆ.

ಅವಳ ತೊಡೆ ಮೇಲಿನ ಮಗುವನ್ನು ಕೇಸರಿ, ಹಳದಿ, ಕೆಂಪು, ಬಿಳಿ ವರ್ಣಗಳಿಂದ ಮೆದುಮಾಡಲಾಗಿದೆ. ಅದರ ವಸ್ತ್ರವು ಬಿಳಿ, ಹಳದಿ ವರ್ಣಗಳಿಂದ ತೋರಿಸಲಾಗಿದೆ. ಅವಳ ಪಕ್ಕದಲ್ಲಿ ಇರುವ ಹುಡುಗ ಹಾಗೂ ಹುಡುಗಿಗೂ ಸಹ ಸ್ತ್ರೀಯ ಮೇಲಿನ ವರ್ಣಗಳನ್ನೆ ಕಾಣಬಹುದು. ವಿಶೇಷವೆಂದರೆ ಹುಡುಗನ ತಲೆಯ ಮಧ್ಯ ಭಾಗದಲ್ಲಿ ಮಾತ್ರ ಕೂದಲಿದ್ದು ಉಳಿದದ್ದು ನುಣುಪಾಗೊಳಿಸಲಾಗಿದೆ. ಹುಡುಗಿಯರ ಮೇಲಿನ ವಸ್ತ್ರ ಹಾಗೂ ಬಟ್ಟೆ ಗಂಡಿನ ಮೇಲಿನ ವರ್ಣಗಳು ಒಂದೇಯಾಗಿರುವಂತಿದೆ ಕೆಳಗೆ ಕುಳಿತಿರುವ ಹುಡುಗಿಯ ವಸ್ತ್ರ ಹಾಗೂ ಮಡಿಕೆಯ ಮೇಲಿನ ವರ್ಣಗಳು ಹೊಂದಿಕೊಂಡಿರುವಂತೆ ಚಿತ್ರಿಸಲಾಗಿದೆ. ಅವರು ಕುಳಿತಿರುವ ನೆಲಭಾಗದಲ್ಲಿ ಹಳದಿ, ಹಸಿರು, ಕೆಂಪು, ಕಂದು Bennt Sinne, ಕೇಸರಿ ಇತ್ಯಾದಿ ವರ್ಣಗಳನ್ನು ಬಳಸಿ ಮೆದು ಹಾಗೂ ತೇಪೆಗಳನ್ನು ಕಾಣಬಹುದು. ಸಂಯೋಜನೆಯ ಹಿಂಭಾಗದಲ್ಲಿ ದೇವಸ್ಥಾನದ ಕಲ್ಲುಗಳ ಜೋಡಣೆ ಮತ್ತು ಕಂಬ ಸ್ವಲ್ಪಭಾಗ ಕಾಣಸಿಗುತ್ತದೆ. ಒಟ್ಟಾರೆಯಾಗಿ ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯಾಗಿದ್ದು, ಹಿಂಭಾಗವನ್ನು ಬೆಳಕಿನಿಂದ ತೋರಿಸಿದ್ದು ಮುಂದಿನ ಸ್ತ್ರೀ ಹಾಗೂ ಮಕ್ಕಳನ್ನು ನೆರಳಿನಿಂದ ವಸ್ತ್ರಗಳನ್ನು ಗಾಢವರ್ಣಗಳ ಬಳಕೆಯಲ್ಲಿ ಕಾಣಬಹುದು.

ಈ ಸಂಯೋಜನೆಯಲ್ಲಿಯ ಉತ್ತಮವಾದ ರೇಖೆಗಳ ಲಾಲಿತ್ಯವನ್ನು ಕಾಣಬಹುದು. ತಂಬೂರಿ, ಸ್ತ್ರೀಯ ಮೇಲೆ ಸೂಕ್ಷ್ಮವಾದ ರೇಖೆಗಳನ್ನು ಅವಳ ಮೇಲಿನ ವಸ್ತ್ರದಲ್ಲಿ ಹರಿದಿರುವ ಭಾಗಗಳಲ್ಲಿ, ಹುಡುಗರ ಮೇಲೆ ಹಾಗೂ ಹುಡುಗಿಯರ ಮೇಲೆ ಹಿಂಭಾಗದಲ್ಲಿ ದೇವಸ್ಥಾನದ ಗೋಡೆಯ ಮೇಲೆ ರೇಖೆಗಳ ಬಳಕೆಯನ್ನು ಕಾಣಬಹುದು. ಮಹಾರಾಜರ ಆಶ್ರಯದಲ್ಲಿಯೇ ಅವರ ಇಚ್ಛೆಗನುಗುಣವಾಗಿ ಚಿತ್ರಿಸುತ್ತ ಬಂದ ಕಲಾವಿದ ರವಿವರ್ಮ ಬಡತನ ಹಾಗೂ ಗ್ರಾಮೀಣ ಬದುಕಿನ ಕಲಾಕೃತಿಗಳನ್ನು ರಚಿಸಿರುವುದು ತೀರ ಇಂತಹ ಸಂದರ್ಭದಲ್ಲಿ ಅಲೆಮಾರಿ ಕಲಾಕೃತಿಯನ್ನು ಸಂಯೋಜಿಸಿ ಚಿತ್ರಿಸುವಲ್ಲಿ ಪ್ರಯತ್ನವನ್ನು ಕಾಣಬಹುದು. ಏಕೆಂದರೆ ಸ್ತ್ರೀ, ಮಕ್ಕಳ ಮೇಲೆ ಯಾವುದೇ ದುಃಖ ಬಡಕಲುತನ, ಇಲ್ಲದಂತೆ ಚಿತ್ರಿಸಿರುವುದು, ಹಾಗೂ ಅವಳ ಮೇಲೆ ಮಲಗಿರುವ ಮಗು ಜೀವವಿಲ್ಲದಂತೆ ಚಿತ್ರಿಸಿರುವ

ಕಾಣಬಹುದು. ಒಟ್ಟಾರೆಯ ಅವರ ವಸ್ತ್ರದಲ್ಲಿ ಮಾತ್ರ ಬಡತನ ಕಾಣಬಹುದು. ಬೇರೆ ಯಾವ ವಿಷಯದಲ್ಲಿ ಇಲ್ಲವೆನಿಸುತ್ತದೆ. ಈ ಪ್ರಯತ್ನದಲ್ಲಿ ಕಲಾವಿದ ವಿಫಲನಾದರು. ನೋಡುಗರ ಕಣ್ಣಿಗೆ ಗಮನ ಸೆಳೆಯುವಂತಹ ವರ್ಣಗಾರಿಕೆ, ಚಿತ್ರಸಂಯೋಜನೆ, ಇವೆಲ್ಲವನ್ನು ಮುಚ್ಚಿಹಾಕುತ್ತಾರೆ. ರೀತಿ ಉತ್ತಮವಾಗಿದ್ದು ವರ್ಣಗಳ ಬ್ಯಾಲೆನ್ಸ್, ಹಾಗೂ ಹೊಳಪು ಎಲ್ಲವನ್ನು ಒಟ್ಟುಗೂಡಿಸಿ ಉತ್ತಮ ಕಲಾಕೃತಿ ಎನ್ನಬಹುದು.

ಹಳ್ಳಿಯ ಸ್ತ್ರೀ

ಈ ಸಂಯೋಜನೆ ಚಿತ್ರವು ಮಧ್ಯಮ ವರ್ಗದವರು ಗ್ರಾಮೀಣ ಬದುಕಿನ ಕಲಾಕೃತಿಯಾಗಿದೆ. ರವಿವರ್ಮನ ಕಲಾಕೃತಿಗಳಲ್ಲಿ ಬರೀ ಶ್ರೀಮಂತ ಮನೆತನಕ್ಕೆ ಸಂಬಂಧಿಸಿದ ಚಿತ್ರಗಳು, ಭಾವಚಿತ್ರಗಳು, ಸಂಯೋಜನೆ ಚಿತ್ರಗಳನ್ನು ಮಾಡಿರುವ ಅವರು ಕೆಲವೆ ಕೆಲವು ಮಧ್ಯವರ್ಗದ ಚಿತ್ರಗಳಲ್ಲಿ ಇದೊಂದಾಗಿದೆ. ಇಂತಹ ಕಲಾಕೃತಿಗಳನ್ನು ರಚಿಸುವಲ್ಲಿ ಗಮನಸೆಳೆದಿದ್ದಾರೆ. ಈ ಕಲಾಕೃತಿಯಲ್ಲಿ ಸ್ತ್ರೀಯು ಬಿಂದಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ನಿಂತಿದ್ದಾಳೆ. ಅವಳ ಬಲಗೈಯಲ್ಲಿ ಕೊಡವನ್ನು ಹಿಡಿದುಕೊಂಡಿದ್ದು, ಎಡಗೈಯನ್ನು ಹಣೆಯ ಹತ್ತಿರ ಇಟ್ಟುಕೊಂಡು ಯಾರನ್ನು ದೂರದಲ್ಲಿ ವೀಕ್ಷಿಸಿರುವಂತೆ ತೋರುತ್ತದೆ. ಎಡಭಾಗದಲ್ಲಿ ಒಬ್ಬಳು ಹುಡುಗಿಯು ಅವಳ ಸೆರಗನ್ನು ಹಿಡಿದುಕೊಂಡು ನಿಂತಿದ್ದಾಳೆ. ಅವಳ ಸುತ್ತಲಿನಲ್ಲಿ ನಾಯಿಗಳು, ಮೇಕೆ (ಆಡುಗಳು) ಹಿಂಭಾಗದಲ್ಲಿ ಸ್ತ್ರೀರನ್ನು ಕಾಣಬಹುದು. ಸುತ್ತಲೂ ಗ್ರಾಮೀಣ ವಾತಾವರಣವನ್ನು ಕಾಣಬಹುದು.

ಇಡೀ ಚಿತ್ರದಲ್ಲಿ ನಿಂತಿರುವ ಸ್ತ್ರೀ ಮತ್ತು ಹುಡುಗಿ ಸುತ್ತಲ್ಲಿನ ಆಡು ಮೇಕೆಗಳನ್ನು ಪ್ರಧಾನವಾಗಿತೋರಿಸಿದ್ದು, ಹಿನ್ನೆಲೆಗೆ ಹಳ್ಳಿ ದಷ್ಯವನ್ನು ಮಿಶ್ರಣಮಾಡಲಾಗಿದೆ. ಸ್ತ್ರೀಮುಖ ಭಾಗ, ಕೈಕಾಲುಗಳಿಗೆ ಕೆಂಪು, ಹಳದಿ ಕೇಸರಿ ಕಂದು ವರ್ಣಗಳನ್ನು ಮಿಶ್ರಣಮಾಡಿ ಮೆದುಗೊಳಿಸಲಾಗಿದೆ, ಉತ್ತಮವಾದ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ಪಕ್ಕದಲ್ಲಿರುವ ಹುಡುಗಿಯ ಕೇರಳ ಶೈಲಿಯಲ್ಲಿದ್ದು, ಸುತ್ತಲಿನ ಆಡುಗಳು ಮೇಕೆಗಳು ನಾಯಿ, ನೈಜವಾಗಿ ಮೂಡಿಬಂದಿವೆ. ಸ್ತ್ರೀಯ ವಸ್ತ್ರ ವರ್ಣಗಳಲ್ಲಿ ವಿರುದ್ಧ ವರ್ಣಗಳ ಬಳಕೆ ಕಾಣಬಹುದು. ಕೆಂಪು ಸೀರೆಗೆ ಬಿಳಿ ವರ್ಣದ ಕುಬ್ಬಸವನ್ನು ಚಿತ್ರಿಸಲಾಗಿದೆ. ಕಲಾವಿದ ವರ್ಣಗಾರಿಕೆಯಲ್ಲಿ ನೈಪುಣ್ಯತೆಯನ್ನು ಕಾಣಬಹುದು. ವಸ್ತ್ರದ ಮೇಲಿನ ನೆರಳು ಬೆಳಕನ್ನು ತೋರಿಸಲಾಗಿದೆ. ಸುತ್ತಲು ಆಡುಗಳು, ಮೇಕೆಗಳು, ನಾಯಿ, ನೈಜವಾಗಿ ಮೂಡಿಬಂದಿವೆ. ಹಿಂದಿರುವ ಪ್ರಕೃತಿ ಆಕಾಶದ ನೆರಳು ಬೆಳಕಿನ ಸಂಯೋಜನೆಯ ಉತ್ತಮವಾಗಿ ಮೂಡಿಬಂದಿವೆ.

ಅಲ್ಲಲ್ಲಿ ಸೂಕ್ಷ್ಮವಾದ ರೇಖೆಗಳು ಬಳಕೆಯನ್ನು ಗಮನಿಸಬಹುದು. ಸ್ತ್ರೀ, ಹುಡುಗಿ, ಆಡುಗಳ, ಬಳಸಿದ ವರ್ಣಗಳ ಸಹಾಯದೊಂದಿಗೆ ಮೆದುಗೊಳಿಸಲಾಗಿದೆ. ಈ ಸಂಯೋಜನೆಯಲ್ಲಿಯು ಕಲಾವಿದನ ಪಾಶ್ಚಾತ್ಯರ ಪ್ರಭಾವ ಶೈಲಿಗಳ ಬಳಕೆಯಿಂದ ಶ್ರೀಮಂತಿಕೆಯ ಬೇಡಿಕೆಗೆ ತಕ್ಕಂತ ಕಲಾಕೃತಿಗಳನ್ನು ರಚಿಸಿ, ಬಡತನವನ್ನೆ ಕಾಣದ ಹಾಗೂ ಅದರ ಪ್ರಭಾವವು ಅವರ ಮೇಲೆ ತೋರಿದಂತೆ ಕಾಣುವುದಿಲ್ಲ.



ಇಂತಹ ಮಧ್ಯಮ ವರ್ಗದ ಕಲಾಕೃತಿಗಳಲ್ಲಿ ಬಿಡಿಸುವ ಪ್ರಯತ್ನ ಕಲಾಕೃತಿ ಇದಾಗಿದೆ. ಒಟ್ಟಾರೆಯಾಗಿ ಇಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಭಾರತೀಯ ಹಳ್ಳಿ ಜೀವನದ ದೃಶ್ಯವನ್ನು ಕಾಣಬಹುದು.

ಲಂಬಾಣಿ ಸ್ತ್ರೀ ಚಿತ್ರ

ಲಂಬಾಣಿ ಸ್ತ್ರೀಯು ಕಟ್ಟಿಗೆಯ ಹೊರೆಯನ್ನು ತಲೆ ಮೇಲೆ ಹೊತ್ತುಕೊಂಡು ನಿಂತಿರುವ ಕಲಾಕೃತಿ ಇದಾಗಿದ್ದು, ಕ್ಯಾನ್ವಾಸ್ ಮೇಲೆ ತೈಲ ವರ್ಣದಿಂದ ರಚಿಸಲಾಗಿದೆ. ಕೂದಲನ್ನು ಅವಳ ಬಲಗೈಯಲ್ಲಿ ಹಿಡಿದುಕೊಂಡಿದ್ದಾಳೆ. ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡು ನಿಂತಿದ್ದಾಳೆ ಹಿನ್ನಲೆಯಲ್ಲಿ ದೂರದ ಬೆಟ್ಟಗಳನ್ನು ಚಿತ್ರಿಸಲಾಗಿದೆ. ವಿಷಯಕ್ಕೆ ತಕ್ಕ ಸಂಯೋಜನೆಯನ್ನು ಕಾಣಬಹುದು.

ಈ ಕಲಾಕೃತಿಯಲ್ಲಿ ಸ್ತ್ರೀಯಲ್ಲಿನ ಸೌಂದರ್ಯವನ್ನು ಕಡಿಮೆಗೊಳಿಸಲಾಗಿದೆ. ತೇಪೆಗಳಂತೆ ಮುಖಭಾವನೆಗಳಿಲ್ಲದೆ. ಚಿತ್ರಿಸಲಾಗಿದೆ. ಅವಳ ಮುಖಭಾಗದಿಂದ ಕುತ್ತಿಗೆ ಕೈ ಕಾಲು, ಸೊಂಟಕ್ಕೆ ಕಂದು ಕೇಸರಿ, ಹಳದಿ, ವರ್ಣಗಳಿದ್ದು ಬ್ರಶ್‌ನ ಹೊಡೆತಗಳನ್ನು ಕಾಣಬಹುದು. ಎಲ್ಲಾ ಕಲಾಕೃತಿಗಳಲ್ಲಿ ಮೆದುವಾಗಿ ಚಿತ್ರಿಸಿದ ಕಲಾವಿದ ಈ ಸಂಯೋಜನೆಯಲ್ಲಿ ಕಲಾಕೃತಿಯಲ್ಲಿ ಸ್ಟ್ರೋಕ್‌ಗಳನ್ನು ಕಾಣಬಹುದು. ಹಾಗೂ ನೆರಳಿನ ಪ್ರಭಾವ ಹೆಚ್ಚಾಗಿ ಹಿನ್ನೆಲೆಯಲ್ಲಿ ಬಳಸಿದ್ದು, ಸ್ತ್ರೀಯ ಮೇಲೆ ಕೆಲವು ಕಡೆ ಅಲ್ಲಲ್ಲಿ ಬೆಳಕನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ಸ್ತ್ರೀಗೆ ಬಳಸಿದ ವರ್ಣನೆಗೆ ಕಟ್ಟಿಗೆವರೆಯಲ್ಲಿ ಕಾಣಬಹುದು. ಬಿಳಿ, ಹಳದಿ, ಕಂದು ವರ್ಣಗಳಿಂದ ಚಿತ್ರಿಸಲಾಗಿದೆ. ನೆರಳು ಬೆಳಕನ್ನು ತೋರಿಸಲಾಗಿದೆ.

ವಸ್ತ್ರದಲ್ಲಿ ಹಳದಿ, ಕೇಸರಿ, ಕಂದು ವರ್ಣಗಳನ್ನು ಬಳಸಿ ಬ್ರಶ್‌ನ ಸಹಾಯದಿಂದ ರಸಬಸದ ಬಣ್ಣದ ಬಳಕೆಯಾಗಿ ವರ್ಣದಲ್ಲಿ ಲೇಯರ್‌ಗಳನ್ನು ಗಮನಿಸಬಹುದು. ಕಲಾವಿದ ವಿಭಿನ್ನವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸ್ತ್ರೀಯ ಹಿನ್ನಲೆಯಲ್ಲಿ ಹಳದಿ, ನೀಲಿ, ಕೇಸರಿ ಕಂದು ವರ್ಣಗಳಿಂದ ಮೋಡ ಹಾಗೂ ಬೆಟ್ಟಗಳ ನೈಜವಾಗಿ ಚಿತ್ರಿಸಿದ್ದು ಕಣ್ಣಿಗೆ ಆನಂದವನ್ನುಂಟು ಮಾಡುತ್ತದೆ.

ಸ್ತ್ರೀಯು ನಿಂತಿರುವ ಜಾಗದಲ್ಲಿ ಅಲ್ಲಲ್ಲಿ ಕಲ್ಲುಗಳನ್ನು ಕಾಣಬಹುದು. ಈ ದೃಶ್ಯಗಳ ಹಿನ್ನೆಲೆ ಹಾಗೂ ಸ್ತ್ರೀಯನ್ನು ಗಮನಿಸಿದಾಗ ಪೋಸ್ಟರ್‌ನಂತೆ ಕಂಡುಬರುತ್ತಿದ್ದು, ನೈಜವಾಗಿ ಚಿತ್ರಿಸಿರುವುದರಲ್ಲಿ ಕಲಾವಿದನ ಚಾಣಾಕ್ಷತನವಿದ್ದು, ಸ್ತ್ರೀಯನ್ನು ಆಕರ್ಷಕವಾಗಿ ನೋಡುಗನ ಗಮನ ಅವಳ ಮೇಲೆ ಬಿದ್ದಂತೆ ಚಿತ್ರಿಸಲಾಗಿದೆ. ನೆರಳು ಹೆಚ್ಚು ಸ್ತ್ರೀಗೆ ತೋರಿಸಿದ್ದು ಬೆಳಕಿನ ಪ್ರಭಾವ ಹಿನ್ನೆಲೆಯಲ್ಲಿ ಕಾಣಬಹುದು. ಎಕ್ಸ್‌ಪ್ರಷನಿಸಂ ಶೈಲಿಯಂತೆ ಚಿತ್ರಿಸಿರುವುದು ಗಮನಾರ್ಹ. ಈ ಅಧ್ಯಾಯವು ಮುಖ್ಯವಾಗಿ ಸಂಯೋಜನ ಸ್ತ್ರೀ ಚಿತ್ರ ಕಲಾಕೃತಿಗಳನ್ನು ಹೊಂದಿದ್ದು, ರವಿವರ್ಮನು ತನ್ನಲ್ಲಿನ ಕಲಾ ಸೌಂದರ್ಯವನ್ನು ಕ್ಯಾನ್ವಾಸ್‌ನ ಮೇಲೆ ರಚನೆ ಮಾಡಿರುವುದು ಸ್ತ್ರೀ ಚಿತ್ರಗಳನ್ನೇ ಆದರೂ ಅವುಗಳಲ್ಲಿ ವ್ಯಕ್ತಿಚಿತ್ರಗಳು ಹಾಗಾಗಿ ಈ ಅಧ್ಯಯನದಲ್ಲಿ ಸಂಯೋಜನೆ ಎಂದಗಾ ಅಕ್ಕ-ಪಕ್ಕದ ಜಡ ವಸ್ತುಗಳು ಸಹ ಸಂಯೋಜನೆಗೊಂಡು ಉತ್ತೇಜನಗೊಂಡಿರುವುದರಿಂದ ಈ ಅಧ್ಯಾಯವು ಸುಲಭವಾಗಿ ತನ್ನ ಕೆಲಸ ಮಾಡಿದೆ.

❖❖❖❖



ಲಕ್ಷ್ಮೀ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಲಕ್ಷ್ಮಿ



ಸರಸ್ವತಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಶಕುಂತಲಾ ಪತ್ರ ಲೇಖನ



ಶಕುಂತಲಾ ಪತ್ರ ಲೇಖನ



ಶಕುಂತಲಾ ಪತ್ರ ಲೇಖನ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಮೇನಕೆ ಮತ್ತು ಶಕುಂತಲಾ



ಶಕುಂತಲಾ ಮತ್ತು ಸಖಿಯರು

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ




ಹಂಸ ಮತ್ತು ದಮಯಂತಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ದಮಯಂತಿ



ದಮಯಂತಿ
(ನಳನು ಬಿಟ್ಟು ಹೋಗಿರುವ ಸಂದರ್ಭ)



ಸೀತಾದೇವಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ


ದ್ರೌಪದಿ ಮತ್ತು ಸಿಂಹಿಕಾ


ಕೃಷ್ಣ ಮತ್ತು ಯಶೋಧೆ



ಕೃಷ್ಣನನ್ನು ಕಾಯುತ್ತಿರುವ ರಾಧೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಮಗುವಿನ ನಿರೀಕ್ಷೆಯ ದೃಶ್ಯ



ಕಾರಾಗೃಹದಲ್ಲಿರುವ ಸ್ತ್ರೀ ದೃಶ್ಯ



ಕನ್ನಡಿ ನೋಡುತ್ತಿರುವ ಸ್ತ್ರೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ದೃಷ್ಟಿ ತೆಗೆಯುತ್ತಿರುವ ಚಿತ್ರಣ



ತಾಯಿ ಮತ್ತು ಮಗು



ಅಪ್ಪ ಬರುತ್ತಿದ್ದಾರೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಮೋಡಿ ಆಟದೊಂದಿಗೆ ಸ್ತ್ರೀ



ತಿಲೋತ್ತಮೆ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ವೀಣೆಯ ಜೊತೆ ಮಲಬಾರ ಸ್ತ್ರೀ



ಸಂಗೀತಗಾರರು

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಮೋಹಿನಿ



ಸ್ತ್ರೀ ಸ್ನಾನದ ಕಲಾಕೃತಿ



ಸ್ನಾನದ ಕೊಠಡಿಯಲ್ಲಿನ ಸ್ತ್ರೀ ದೃಶ್ಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಕುರ್ಚಿಯ ಮೇಲೆ ಕುಳಿತಿರುವ ಸ್ತ್ರೀ



ಹೂ ಮುಡಿದುಕೊಳ್ಳುತ್ತಿರುವ ಸ್ತ್ರೀ



ಚಿಂತಿಸುತ್ತಿರುವ ಸ್ತ್ರೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಮದುಮಗಳು



ಚಂದ್ರೋದಯದಲ್ಲಿ ಸ್ತ್ರೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಪೂಜಾ ಸಾಮಗ್ರಿಗಳೊಂದಿಗೆ ಸ್ತ್ರೀ



ಬಾವಿಯ ಹತ್ತಿರ ಇರುವ ಮಹಿಳೆ



ಕಾದಂಬರಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ



ಅಲೆಮಾರಿ




ಲಂಬಾಣಿ ಸ್ತ್ರೀ




ಹಳ್ಳಿಯ ಸ್ತ್ರೀ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಅಧ್ಯಾಯ : ಐದು

ರವಿವರ್ಮನ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ



ಅಧ್ಯಾಯ : ಐದು

ರವಿವರ್ಮನ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ

ಕಲಾವಿದ ಇರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರವು ಸೂಕ್ಷ್ಮವಾಗಿ ಕಲೆಯ ಮೇಲೆ ಪ್ರಭಾವ ಬೀರುತ್ತದೆ. ಎಲ್ಲ ಕಲಾವಿದರು ತಮ್ಮ ಸಮಾಜ ಅಥವಾ ಸಮುದಾಯದಿಂದ ಪ್ರಭಾವಿತರಾಗುತ್ತಾರೆ. ಚಿತ್ರಕಾರರೂ ಇದಕ್ಕೆ ಹೊರತಾಗಿಲ್ಲ ಒಂದು ಸಮುದಾಯದಲ್ಲಿ ಕಾಲಕ್ರಮದಲ್ಲಿ ವಿಶಿಷ್ಟವಾದ ಕೆಲವು ಸಂಪ್ರದಾಯ ಅಥವಾ ಪರಂಪರೆಗಳು ಹಾಗೂ ಕಲಾ ಪಂಥಗಳು ಹುಟ್ಟಿಕೊಳ್ಳುವವು ಬೆಳೆಯುತ್ತಿರುವ ಕಲಾವಿದರು ಅವುಗಳ ಪ್ರಭಾವಕ್ಕೆ ಸಿಲುಕಿಕೊಳ್ಳುತ್ತಾರೆ.[೧] ಹಾಗೆಯೇ ಕಲೆಯ ಸಂಸ್ಕೃತಿಯಲ್ಲಿ ಬೆಳೆದ ಕಲಾವಿದರು ಕೂಡ ಭಿನ್ನರೀತಿಯಲ್ಲಿ ಪ್ರಭಾವಗೊಂಡು ಸ್ತ್ರೀಚಿತ್ರಗಳನ್ನು ರಚನೆಮಾಡಿರುವುದು ಕಂಡುಬರುತ್ತದೆ.

ಕಲೆಗೂ ಮಾನವನಿಗೂ ನಿಕಟ ಸಂಬಂಧವಿರುವುದರಿಂದ ಸ್ಥಳ, ಸ್ಥಿತಿ, ಘಟನೆಗಳು ಮುಂತಾದ ಪ್ರಭಾವಗಳಿಂದ, ಅನುಭವಗಳಿಂದ ಹಾಗೂ ವಸ್ತುಗಳಿಂದ, ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಪರಿಸರದ (ನಿಸರ್ಗದ) ಪ್ರತಿ ಮಡಿಲಿನಲ್ಲಿರುವ ಮರ, ಗಿಡ, ಹೂ, ಬಳ್ಳಿ ಹೀಗೆ ಅವನು ನೆಲೆಸಿರುವ ಈ ಒಂದು ವಾತಾವರಣವು ಅವನಲ್ಲಿ ಪ್ರೇರಣೆಯನ್ನು ತುಂಬುತ್ತದೆ, ಈ ಪರಿಸರದ ವಾತಾವರಣನವನ್ನು ಕಲಾವಿದ ಅನುಭವಿಸಿದಾಗ ಮಾತ್ರ ಕಲಾತ್ಮಕವಾದ ಚಿತ್ರವನ್ನು ರೂಪಿತವಾಗುತ್ತದೆ, ಅದರಲ್ಲೂ ಜೀವನದಲ್ಲಿ ಏಳು, ಬೀಳುಗಳ ಸಂಪ್ರದಾಯಗಳು ಅವುಗಳ ವಿರುದ್ಧಕ್ರಾಂತಿ ಇತ್ಯಾದಿಗಳನ್ನು ಕಾಣಬಹುದು. ಜೀವನ ಬದಲಾಯಿಸಿದಂತೆ ಜೀವನದ ಮೌಲ್ಯಗಳು ಬದಲಾದಂತೆ ಕಲೆಯು ಬದಲಾಗುತ್ತದೆ. ಹಳೆಯದರ

೦೧. ಡಾ. ಎಸ್. ಸಿ. ಪಾಟೀಲ : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ – ೬೪

ಸ್ಥಾನಕ್ಕೆ ಹೊಸದು ಬಂದು ನಿಲ್ಲುತ್ತದೆ. ಈ ಹೊಸದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ. ಈ ಕಲಾನುಗಣ ಅಭಿವ್ಯಕ್ತಿ ಕ್ರಿಯೆಯಾಗಿ ಹೊರಬರುತ್ತವೆ. ಈ ಕ್ರಿಯೆಯನ್ನು ಸೃಷ್ಟಿ ಕ್ರಿಯೆಯೆಂದು ಹೇಳಬಹುದು.[೨] ಕಲಾವಿದರ ಪ್ರೇರಣಾ ಶಕ್ತಿಯೆಂದರೆ ಸೃಷ್ಟಿ, ಕೆಲ ಕಲಾವಿದ ತನ್ನ ಸುತ್ತಮುತ್ತಲಿನ ಪರಿಸರದ ಪ್ರಭಾವ ಬೀರುತ್ತವೆಂಬುದನ್ನು ಅವನ ಕಾರ್ಯಚಟುವಟಿಕೆಗಳಿಂದ ಗೊತ್ತಾಗುತ್ತದೆ.

ಒಬ್ಬ ಕಲಾವಿದನಾದವನು ಅನ್ಯ ಶಾಸ್ತ್ರವನ್ನು ತನ್ನ ಚಿಂತನ ಶೀಲ ಎಳೆಯ ಸಪ್ತ ಸ್ವರದಲ್ಲಿ ಪರಿಚಯಿಸುತ್ತಿರುತ್ತವೆಂಬುದು ಸಂವೇದನೆಗೆ ಶಕ್ತಿದಾಯಕವಾಗುತ್ತಿರುದೆ, ಅಂದರೆ ಸೃಷ್ಟಿಕ್ರಿಯೆ ಎಷ್ಟರ ಮಟ್ಟಿಗೆ ಪುಷ್ಟಿದಾಯಕವಾದೀತೆಂಬುಗು ಇಲ್ಲಿ ಮುಖ್ಯವಾಗುತ್ತದೆ.[೩] ಚಿತ್ರಕಲೆಯ ರೇಖೆಗಳು, ಆಕಾರ, ತಂತ್ರ, ಪ್ರಭಾವ, ಪ್ರೇರಣೆ, ಶೈಲಿಗಳ ಮೂಲಕ ರೂಪವನ್ನು ತಾಳುತ್ತದೆ. ಸಾಮಾನ್ಯವಾಗಿ ಎಲ್ಲಾ ಕಲಾವಿದರು ಇತರ ಕಲಾವಿದರಿಂದ ಮತ್ತು ಘಟನೆಗಳಿಂದ ಅಲ್ಲದೇ ತಮ್ಮ ಸುತ್ತಮುತ್ತಲಿನ ಸಂಸ್ಕತಿಯಿಂದ ಪರಿಸರದಿಂದ ಪ್ರಭಾವಕ್ಕೆ ಒಳಗಾಗಿರುತ್ತಾರಾದರೂ ಕಲಾಕೃತಿಗಳನ್ನು ರಚಿಸುವುದರಲ್ಲಿ ತನ್ನದೇ ಆದ ತಂತ್ರ, ಶೈಲಿಯನ್ನು ಸಹ ಹೊಂದಿರುತ್ತಾರೆ. ಇಂತಹ ಪ್ರಭಾವ, ಪ್ರೇರಣೆ, ತಂತ್ರ ಶೈಲಿಗಳನ್ನು ಕಲಾವಿದ ರಾಜ ರವಿವರ್ಮ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

ಪ್ರಭಾವ

ಕಲಾವಿದರ ಕುಟುಂಬದಿಂದಲೇ ಬೆಳೆದ ರವಿವರ್ಮ ತನ್ನ ಐದಾರು ವರ್ಷದ ಬಾಲಕನಾಗಿದ್ದಾಗಲೆ ತನ್ನ ಮನೆಯ ಗೋಡೆಗಳನ್ನು ಪ್ರಾಣಿಗಳು ಮತ್ತು ದೈನಂದಿನ ಬದುಕಿನ ಭಾವಗಳನ್ನು ಸೂಚಿಸುವ ಚಿತ್ರಗಳೊಂದಿಗೆ ತುಂಬಿದ್ದು, ಮನೆಯವರ ಬೆದರಿಕೆಯ ನಡುವೆಯೂ ಚಿತ್ರ ರಚನೆಯಲ್ಲಿ ತೊಡಗಿದ್ದು ಮತ್ತು ಈ ಗೀಚುಗಳು ಮತ್ತು ಗೀರುಗಳಲ್ಲಿ ರವಿ ವರ್ಮನ ಮಾವ, (ಚಿಕ್ಕಪ್ಪ) ಕಲಾವಿದರಾದ ರಾಜ ರಾಜ ವರ್ಮ ಅಸಾಧಾರಣ ಪ್ರತಿಭೆಯನ್ನು ಮೊಳಕೆಯನ್ನು ಗುರುತಿಸಿದ. ರವಿವರ್ಮ ಔಪಚಾರಿಕ ಶಿಕ್ಷಣವನ್ನು ಪಡೆಯಲಿಲ್ಲ. ಆತ ಮಲಯಾಳಂ ಮತ್ತು ಸಂಸ್ಕೃತವನ್ನು ಅರಮನೆಗಳಲ್ಲಿ ಇದ್ದ, ಸಂಪ್ರದಾಯಕ್ಕೆ ಅನುಸಾರವಾಗಿ, ಮನೆಯಲ್ಲಿಯೇ ಕಲಿತ ಮತ್ತು ಇದಕ್ಕೆ ರಾಜ ರಾಜವರ್ಮ ಚಿತ್ರರಚನೆಯ ಮೊದಲ ಪಾಠಗಳನ್ನು ಅದರಲ್ಲೂ ವಿಶೇಷವಾಗಿ ವರ್ಣ ಚಿತ್ರರಚನೆಯ ಪಾಠಗಳನ್ನು ಕುರಿತು ಹೇಳಿದನು.

ಅಂದಿನ ದಿನಗಳಲ್ಲಿ ಚಿತ್ರಕಲೆ ಎಂದರೆ ಪ್ರಧಾನವಾಗಿ ದೇವಾಲಯಗಳು ಮತ್ತು ಅರಮನೆಗಳ ಗೋಡೆಗಳ ಮೇಲೆ ಮತ್ತು ಕೆಲವೊಮ್ಮೆ ಗಾಜು ಮತ್ತು ದಂತದ ಮೇಲೆ ಚಿತ್ರಿಸುವುದಾಗಿತ್ತು. ತಂಜಾವೂರಿನ ಮರಾಠಾ ಆಸ್ಥಾನದ ವಿಘಟನೆಯಿಂದಾಗಿ ಅಲ್ಲಿನ ಕಲಾವಿದರು ರಾಜಾಶ್ರಯವನ್ನು ಅರಸುತ್ತಾ ತಿರುವಾಂಕೂರಿಗೆ ವಲಸೆ ಬರುವುದರೊಂದಿಗೆ ಈ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೊಯೊಂದು ಘಟಿಸಿತು. ಅವರು ತಮ್ಮೊಂದಿಗೆ ಕೇರಳದ ಕಲಾವಿದರಿಗೆ ತೀರಾ ಹೊಸದಾದ ಕ್ಯಾನ್‌ವಾಸ್ ತಂದರು. ಆಳಗಿರಿನಾಯುಡು

೦೨. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪುಟ – ೩೩
೦೩. ಡಾ. ಎಸ್. ಸಿ. ಪಾಟೀಲ : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ – ೬



ಅರಮನೆ ಕಲಾವಿದರಾಗಿ ನಿಯುಕ್ತರಾದರು. ಮತ್ತು ಇವರಿಂದ ಆಗಾಗ ಆಸ್ಥಾನಕ್ಕೆ ಭೇಟಿ ನೀಡುತ್ತಿದ್ದ ರಾಜ ರಾಜ ವರ್ಮ ಮಿಶ್ರ ತಂಜಾವೂರ ಶೈಲಿಯ ಮೂಲತತ್ವಗಳನ್ನು ಕಲಿತರು. ನಂತರ ಯುರೋಪಿಯನ್ ಶೈಲಿಯ ಶ್ರೇಷ್ಠ ಭಾವಚಿತ್ರಕಾರ ಮಧುರೆಯ ರಾಮಸ್ವಾಮಿ ನಾಯಕರ್ ಬಂದರು. ತಮ್ಮೊಂದಿಗೆ ಚಿತ್ರ ರಚನೆಯಲ್ಲಿನ ಹೊಸ ಸಾಧನ, ಹೊಸ ಮಾಧ್ಯಮವನ್ನು ತಂದರು ಆದರೆ ಚಿತ್ರರಚನೆಯಲ್ಲಿ ರಹಸ್ಯವಾಗಿ ತಮ್ಮಲ್ಲೇ ಉಳಿಸಿಕೊಂಡರು ಅದುವೇ ತೈಲ. ತೈಲವರ್ಣ, ರವಿವರ್ಮನು ಇವರ ಕಲಾಕೃತಿಗಳ ನೋಡಿ ಪ್ರಭಾವಕ್ಕೆ ಒಳಗಾದ ಅನುಭವ ಪ್ರಥಮವಾಗಿತ್ತು.

ರಾಜ ರಾಜ ವರ್ಮ ತಮ್ಮ ಸೋದರಳಿಯನಾದ ರವಿವರ್ಮನಿಗೆ ಸಾಧ್ಯವಿರಬಹುದಾದ ಎಲ್ಲ ಚಿತ್ರಶೈಲಿಗಳನ್ನು ತಾಂಜಾವೂರ ಶೈಲಿಯನ್ನು ಹೇಳಿಕೊಟ್ಟರು ಆದರೆ ಅದು ಹೆಚ್ಚೇನೂ ಆಗಿರಲಿಲ್ಲ. ಏಕೆಂದರೆ ಸ್ವತಃ ಆತನೇ ಓರ್ವ ಹವ್ಯಾಸಿ ಕಲಾವಿದನಾಗಿದ್ದು ಕೈಲಾದಷ್ಟು ಕಲೆಯನ್ನು ಕಲಿಸುವ ಪ್ರಯತ್ನ ಮಾಡಿದರು. ಆದರೆ ಆತನ ರವಿವರ್ಮನ ರೇಖೆಗಳು ಅಪರೂಪದ ಸಂವೇದನೆಗಳನ್ನು ಅಭಿವ್ಯಕ್ತಿಸಲು ಪ್ರಾರಂಭಿಸಿದವು. ಹುಡುಗನಿಗೆ ಹದಿಮೂರು ವರ್ಷವಾಗಿದ್ದಾಗ ಮೊದಲ ಬಾರಿಗೆ ಆತನನ್ನು ತಿರುವನಂತಪುರದ ಶ್ರೀ ಪದ್ಮನಾಭಾಸ್ವಾಮಿ ದೇವಾಲಯದ ಪಕ್ಕದಲ್ಲಿನ ದೊಡ್ಡ ಅರಮನೆಗೆ ಕೊಂಡೊಯ್ಯಲಾಯಿತು. ರಾಜ ರಾಜ ವರ್ಮ ತನ್ನ ಸೋದರಳಿಯನ ಸಾಧನೆಗಳ ಪಟ್ಟಿಯನ್ನು ಮಾಡಿದ ಸಂಸ್ಕೃತ ಮತ್ತು ಮಲಯಾಳಂನ ಎಲ್ಲಾ ಪ್ರಧಾನ ಅಭಿಜಾತ ಕಾವ್ಯಗಳನ್ನು ಆತ ಕರಗತ ಮಾಡಿಕೊಂಡನು, ಹೀಗೆ ಅರಮನೆಯಲ್ಲಿನ ಕಥಕಳಿ ಪ್ರದರ್ಶನಗಳನ್ನು ನೋಡುವುದರ ಜೊತೆಗೆ ಭಾಗವಹಿಸಿ ಅದನ್ನು ಕಲಿತಿರುವುದು, ಪದಗಳನ್ನು ಸೊಗಸಾಗಿ ಹಾಡುವ ಪ್ರತಿಭೆ ಹೊಂದಿರುವುದು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಆತ ರೇಖಾಚಿತ್ರ, ಭಾವಚಿತ್ರ, ವ್ಯಕ್ತಿಚಿತ್ರ, ಮತ್ತು ವರ್ಣಚಿತ್ರಗಳನ್ನು ರಚಿಸುವ ಕಲಾ ಪ್ರದರ್ಶನಗಳ ನೈಪುಣ್ಯತೆಯನ್ನು ಹೊಂದಿದನು. ರಾಜ ಮನೆತನದಲ್ಲಿನ ನೃತ್ಯ, ವೈಭವೀಕಣರದಿಂದ ಪ್ರಭಾವಿತರಾದರು ಎಂಬುದನ್ನು ಗಟ್ಟಿಗೊಳಿಸಬಹುದು.

ಬಾಲಪ್ರತಿಭೆಯನ್ನು ಪ್ರೋತ್ಸಾಹಿಸಿ ಅವನನ್ನು ರಾಜಾಶ್ರಯದಲ್ಲಿ ಉಳಿದು ಅರಮನೆಯ ಚಾವಡಿ ಹಾದಿಯಲ್ಲಿ ಸುತ್ತಾಡುವ ಶ್ರೀ ಪದ್ಮನಾಭಸ್ವಾಮಿ ದೇವಾಲಯದಲ್ಲಿ, ಕಲಾವಿದರು ಕೆಲಸ ಮಾಡುತ್ತಿದ್ದರು ಅರಮನೆ ಅಲ್ಲಿನ ಭಿತ್ತಿಚಿತ್ರಗಳನ್ನು ಗಮನಿಸುವುದು ವರ್ಣಮಯವಾದ ಅರಮನೆ ಮೆರವಣಿಗೆಳನ್ನು ವೀಕ್ಷಿಸುತ್ತ ಕೇರಳದ ಶೈಲಿಯಲ್ಲಿ ಅರೆ ಬೆತ್ತಲೆಯಾಗಿ ಓಡಾಡುತ್ತಿದ್ದ ಸುಂದರ ಸ್ತ್ರೀಯರತ್ತ ಎವೆಯಿಕ್ಕದೆ ನೋಟ ಬೀರುವುದು ಅವನ ಮನಸ್ಸಿನ ಮೇಲೆ ಪ್ರಭಾವ ಬೀರಿತ್ತು ಮತ್ತು ಯುರೋಪಿಯನ್ ವರ್ಣ ಚಿತ್ರಗಳ ಅದರಲ್ಲೂ ವಿಶೇಷವಾಗಿ ಆಗಷ್ಟೇ ಭಾರತದ ರಾಜ ಸಭೆಗಳಲ್ಲಿ ತನ್ನ ಪ್ರವೇಶವನ್ನು ಪ್ರಕಟಿಸಿದ್ದ ಇಟಲಿಯ ಶ್ರೇಷ್ಠ ಕಲಾವಿದರ ವರ್ಣ ಚಿತ್ರಗಳಲ್ಲಿ ಮಗ್ನನಾಗಿರುವುದು ಬಾಲಕನ ಕಲ್ಪನೆಗೆ ರೆಕ್ಕೆಗಳನ್ನು ಮೂಡಿಸಿದವು ಪುನರ್ ಸೃಷ್ಟಿಗಳು ಆತನಲ್ಲಿ ಕುತೂಹಲವನ್ನು ಮೂಡಿಸಿ ಮಂತ್ರ ಮುಗ್ಧಗೊಳಿಸಿದವು

ಇದರಿಂದ ಹೆಚ್ಚು ಪ್ರಭಾವಕ್ಕೊಳಗಾದನು. ಮಾನವ ಏನೆಲ್ಲ ಮಾಡಬೇಕಾದರೆ ಯಾವ ವಿವಾದದಿಂದಾರೂ ಅವನು ಪ್ರಭಾವಕ್ಕೆ ಒಳಗಾಗಲೇಬೇಕು. ಇದು ಸೃಷ್ಟಿಯ ನಿಯಮವಾಗಿದೆ ಹಾಗೆ ರವಿವರ್ಮನು ಯುರೋಪಿಯನ್ ವರ್ಣ ಚಿತ್ರಗಳಿಗೆ ಒಂದು ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗಿದ್ದಾರೆ. ಏಕೆಂದರೆ, ಸ್ಥಳಿಯ ಕಲಾವಿದರು ಭಿತ್ತಿಚಿತ್ರಗಳ ಚಪ್ಪಟೆಯ ದ್ವಿ-ಆಯಾಮದ ಸೃಷ್ಟಿಗಳಾಗಿದ್ದು, ವಾಸ್ತವತೆಯತ್ತ ಗಮನೀಯವಾದ ಸಂಪ್ರದಾಯ ಮತ್ತು ಶೈಲೀಕರಣಕ್ಕೆ ಬದ್ಧರಾಗಿದ್ದಾರೆ.

ಭಿತ್ತಿಚಿತ್ರಗಳಲ್ಲಿನ ಬಣ್ಣಗಳು, ಆಕಾರಗಳು, ರೇಖೆಗಳು, ತಂತ್ರಗಳು ತನ್ನ ದೃಷ್ಟಿಗೆ ಅಳವಡಿಸಿಕೊಂಡು ಶತ ಶತಮಾನಗಳಿಂದ ಜಡವಾಗಿ ಹಳೆಯದಾಗಿರುವ ತನ್ನ ಕಲಾ ಚಟುವಟಿಕೆಗೆ ಹೊಸದಾದ ಚಲನಶೀಲತೆಯನ್ನು ತುಂಬಬಹುದೆನ್ನ ಅಂಶ ಅರಿತುಕೊಂಡನು ಯುರೋಪಿನ್ ವರ್ಣಚಿತ್ರಗಳು ರವಿವರ್ಮನ ಮನಸ್ಸಿನ ಮೇಲೆ ಬಹಳ ಪ್ರಭಾವನ್ನುಂಟುಮಾಡಿದವು.

ಒಮ್ಮೆ ರವಿವರ್ಮ ಅರಮನೆಯಲ್ಲಿನ ತನ್ನ ಸ್ಟುಡಿಯೋದಲ್ಲಿ ಐವತ್ತು, ಚಿತ್ರಕಲೆ ರಚನೆ ಮಾಡುತ್ತಾ ಕುಳಿತ, ತೈಲವರ್ಣದಲ್ಲಿ ಪ್ರಯೋಗಗಳನ್ನು ನಡೆಸಿದ, ಸ್ವಲ್ಪದಿನಗಳ ನಂತರದಲ್ಲಿ ಆತನಿಗೆ ದೊರೆತ ಪ್ರಸ್ತುತವೊಂದು ಆತನನ್ನು ಹೇಗೆ ಕಾಡಿಸಿತೆನ್ನುವುದನ್ನು ರವಿವರ್ಮ ನೆನಪಿಸಿಕೊಂಡಿದ್ದನ್ನು, ಮೇಜರ್ ಎಡ್‌ವರ್ಡ್‌ಮೂರ್, ಎಫ್.ಆರ್.ಎಸ್. ಇವರ The Hindu theon ಎನ್ನುವ ಈ ಪುಸ್ತಕದಲ್ಲಿನ ಚಿತ್ರಗಳು ಇವನಲ್ಲಿ ರೋಮಾಂಚನವನ್ನುಂಟು ಮಾಡಿದವು. ಸಪ್ತ ಅಶ್ವಗಳನ್ನು ಎಳೆಯುತ್ತಿರುವ ಅರುಣ ರಥವನ್ನು ಅಲಂಕಿರಿಸಿರುವ ಬಾಲ ಸೂರ್ಯದೇವ ಮತ್ತು ದೇವಕಿಯ ಚಿತ್ರಗಳು ಈ ಪುಸ್ತಕದಲ್ಲಿದ್ದವು. ಇದನ್ನು ಕಂಡು ಇನ್ನಷ್ಟು ಪ್ರಭಾವಕ್ಕೊಳಗಾದರು.[೧೪] ರವಿವರ್ಮನು ಉತ್ತೇಕ್ಷೆಗೊಂಡು ಅನೇಕ ಸ್ತ್ರೀ ಕಲಾಕೃತಿಗಳನ್ನು ರಚಿಸಿದನು.

ನಿರಾಶೆಯಿಂದ ಯುವಕ ಕಾಯುತ್ತ ಕುಳಿತ ದೃಷ್ಟಿ ಮತ್ತು ನೆರಳು ಬೆಳಕುಗಳ ತಂತ್ರ ರಹಸ್ಯಗಳ ಕುರಿತು, ರಚನೆಗಳು ಮತ್ತು ಪೂರಕ ಬಣ್ಣಗಳ ಬಗ್ಗೆ ರವಿವರ್ಮನಿಗೆ ತಿಳಿಸಿಕೊಡುವವರಾರೂ ಇರಲಿಲ್ಲ. ತಾಳ್ಮೆಯಿಂದ ಕಾಯುವುದೇ ಅತ್ಯುತ್ತಮ ಸಾಧನ ಎಂದು ಮಹಾರಾಜ ಆಗೊಮ್ಮೆ ಈಗೊಮ್ಮೆ ನೀಡುತ್ತಿದ್ದ ಸಲಹೆಯೇ ರವಿವರ್ಮನಿಗೆ ಸಿಕ್ಕ ಪ್ರೋತ್ಸಾಹವಾಗಿತ್ತು. ಸಂತ ರಾಮಸ್ವಾಮಿನಾಯಕರ ಸಲಹೆ ಪಡೆಯಲು ಹೋಗಿ ಅವರಿಂದಲೂ ನಿರಾಶೆಯಿಂದ ಹಿಂದಿರುಗಿದ ಆತನ ನಂಬುಗೆಯನ್ನು ಮತ್ತಷ್ಟು ಗಟ್ಟಿಗೊಳಿಸಿತು. ಒಮ್ಮೆ ಡಚ್ ಮೂಲದ ಒರ್ವ ಭಾವಚಿತ್ರಕಾರ ಥಿಯೋಡರ್ ಜೆನ್‌ಸನ್ ಮೈಸರಾಯ್ ಸರ್ ಜಾನ್ ಲಾರೆನ್ಸ್‌ರ ಪ್ರಸಂಶಾ ಪತ್ರದೊಂದಿಗೆ ತಿರುವಾಲಕೂರು ಸ್ಥಾವರಕ್ಕೆ ಬೇಟಿ ನೀಡಿದ ಮಹಾರಾಜ ಮತ್ತು ಅತ್ಯಂತ ಸೌಂದರ್ಯವತಿಯಾದ ಆತನ ಹೆಂಡತಿ ನಾಗರ್‌ಕೋಯಿಲ್ ಅಮ್ಮಚ್ಚಿ ಪ್ರತ್ಯೇಕವಾಗಿ ಆತನ ಮುಂದೆ ಚಿತ್ರಗಳಿಗಾಗಿ ಕುಳಿತರು, ಯುರೋಪಿಯನ್ ಶೈಲಿಯ ವರ್ಣ ಚಿತ್ರಕಲೆಯ ಕೆಲವು ಪಾಠಗಳನ್ನು ರವಿವರ್ಮನಿಗೆ ಹೇಳಿಕೊಡಬೇಕೆಂಬ ಆಶಯವಿತ್ತು.[೧೫] ಆದ್ದರಿಂದ ಇನ್ನಷ್ಟು ಪ್ರಭಾವಿತನಾದನು.

೧೪. ಎನ್. ಮರಿಶಾಮಾಚಾರ್ : ರಾಜ ರವಿವರ್ಮ, ಪುಟ – ೧೦
೧೫. ಅದೇ.

ಕಲಾವಿದನು ಕಲಾ ಸೃಷ್ಟಿಯಲ್ಲಿ ತೊಡಗಬೇಕಾದರೆ ಅವನು ಯಾವುದದರೂ ಒಂದು ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗುತ್ತಾನೆ. ಅದಕ್ಕೆ ಕಟ್ಟಳೆಗಳಿಲ್ಲ, ನಿಬಂಧನೆಗಳಿಲ್ಲ, ಪ್ರಭಾವಕ್ಕೊಳಗಾದ ಮೇಲೆಯೇ ಪ್ರಭಾವದಿಂದ ಕಲಾವಿದನು ಉನ್ನತ ಮಟ್ಟಕ್ಕೆ ಬರಲು ಪ್ರಯತ್ನಿಸುತ್ತಾರೆ. ಅಂತಹ ಪ್ರಯತ್ನವನ್ನು ರವಿವರ್ಮನ ಕಲಾಕೃತಿಗಳಲ್ಲಿ ಕಾಣಬಹುದು. ಹೊಸತನವನ್ನು ಉಡುಕುವುದರಲ್ಲಿಯೇ ಅವನ ಮನಸ್ಸು ಹಾತೊರಿಯುತ್ತಿತ್ತು. ಅಂತಹ ಸಮಯದಲ್ಲಿ ಹಿರಿಯ ಮೊಲಾಂಗರ್‌ನ ಸ್ತ್ರೀ ಆಕೃತಿಗಳು ಮತ್ತು ಬೋರ್‌ಗೆರೋವಿನ Triumph of Vanus ಮತ್ತು charity ಕೃತಿಗಳು ಆತನನ್ನು ವಿಶೇಷವಾಗಿ ಸೆಳೆದಿದ್ದವು. ರವಿವರ್ಮನಿಗೆ ಮೊದಲ ಬಾರಿಗೆ ತೈಲವರ್ಣಗಳ ಪೆಟ್ಟಿಗೆಯೊಂದು ದೊರೆತಿದ್ದು ಕೇರಳವರ್ಮ ಬಳಿಯ ಕೋಯಿಲ್ ತಂಪೂರನ್ ಅಂತಹುದೊಂದನ್ನು ಆತನಿಗೆ ಕಾಣಿಕೆಯಾಗಿ ಕೊಡುತ್ತಾರೆ, ಮುಂದೆ ಮಲಯಾಳಿ ಸಾಹಿತ್ಯದಲ್ಲಿ ಬಹುದೊಡ್ಡ ಹೆಸರಾದ ಕೇರಳವರ್ಮ ಈಮುಂಚೆ ಉಲ್ಲೇಖಿಸಲಾಗಿರುವ ರಾಣಿ ಲಕ್ಷ್ಮೀಬಾಯಿಯನ್ನು ವಿವಾಹವಾಗಿದ್ದ ಚಿತ್ರಣವನ್ನು ಕುತೂಹಲಕಾರಿಯಾದ ರವಿವರ್ಮನು ಇವರಿಬ್ಬರ ವರ್ಣಚಿತ್ರವನ್ನು ರಚಿಸಿದನು ಇದು ಪ್ರಥಮ ಗಂಭೀರ ಪ್ರಯತ್ನವನ್ನು ಕಾಣಬಹುದು. ಸ್ವ-ಪ್ರಯತ್ನದ ಹೋರಾಟ ಒಂಭತ್ತು ವರ್ಷಗಳ ಕಾಲ ಕಳೆಯಿತು. ತನ್ನ ಆಶ್ರಯದಾತ ಆತನ ಪತ್ನಿಯನ್ನು ವರ್ಣಚಿತ್ರಕ್ಕಾಗಿ ಕೂರುವಂತೆ ಕೋರಲು ಇದು ಸಕಾಲ ಎಂದು ರವಿವರ್ಮನಿಗೆ ಅನ್ನಿಸಿತು ರವಿವರ್ಮನ ಕೋರಿಕೆಗೆ ಅವರು ಸಂತಸದಿಂದ ಒಪ್ಪಿದರು. ಈ ಪ್ರಯತ್ನದ ಫಲವೇ ಇವರಿಗೂ ಸಂತೋಷದಾಯಕವಾಗಿತ್ತು.

ಕೆಲ ಕಲಾವಿದರು ನಿಸರ್ಗದ ಪ್ರಭಾವಕ್ಕೆ ಒಳಪಡುತ್ತಾರೆ. ಇದಕ್ಕೆ ರವಿವರ್ಮನು ಇಂತಹ ಪ್ರಭಾವವನ್ನು ತನ್ನ ಪತ್ನಿಯ ಭಾವಚಿತ್ರ ರಚನೆಯಲ್ಲಿ ಆತ ಸಾಧಿಸಿದ ಯಶಸ್ಯೇ ಆತನನ್ನು ಮತ್ತೆ ಸ್ತ್ರೀ ಆಕೃತಿಯತ್ತ ಹೊರಳಲು ಪ್ರೇರೇಪಿಸಿತು. ಪ್ರಾರಂಭದ ದಿನಗಳಲ್ಲಿ ರವಿವರ್ಮ ರೂಪದರ್ಶಿಗಳನ್ನು ಔಪಚಾರಿಕವಾಗಿ ತನ್ನ ಚಿತ್ರರಚನಾ ಕಾರ್ಯದಲ್ಲಿ ಬಳಸಿಕೊಂಡ ಬಗ್ಗೆ ಏನೂ ಹೇಳಲು ಸಾಧ್ಯವಿಲ್ಲವಾದರೂ ಆತ ಭಾರತೀಯ ಅಭಿಜಾತ ಕಾವ್ಯದ, ಅದರಲ್ಲಿಯೂ ವಿಶೇಷವಾಗಿ ಮಲಯಾಳದ ನವ-ಅಭಿಜಾತ ಮಣಿಪ್ರವಾಳ ಶೈಲಿಯ 'ನಾಯಿಕಿ'ಯರನ್ನು ಹತ್ತಿರವಾಗಿಸುವ ವಿಧಾನವನ್ನು ಎಚ್ಚರಿಕೆಯಿಂದ ಆಯ್ದುಕೊಂಡ ವಿಷಯ ನಿಶ್ಚಿತವಾಗಿ ಸತ್ಯ, ಸ್ತ್ರೀ ಮೋಹಕತೆಯ ಐಂದ್ರಿಯಿಕ, ಕಾಮೋತ್ತೇಜಕವೂ ಸಹ-ಅಲಂಕರಣ ಇಲ್ಲಿನ ಪ್ರಧಾನ ವಸ್ತುವಾಗಿದೆ. ಆ ವೈವಿಧ್ಯಮಯವಾದ ಭಾವನೆಗಳನ್ನು ಬಿಂಬಿಸುವಂತೆ ಆತನ ಕಲೆಗಳಲ್ಲಿ ಅವರನ್ನು ಮೂಡಿಸಿದ ಅನುಭವವಾಯಿತು.[೬]

ದೇಶದ ಅಭಿಜಾತ ಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಮತ್ತಿತರ ಕಾವ್ಯಗಳು ಹಾಗೂ ಕಾಳಿದಾಸ ಮತ್ತು ಭವ ಭೂತಿಯ ನಾಟಕಗಳ ಕಥಕ್ಕಳಿ ನೃತ್ಯ, ಸಂಗೀತ ಇತ್ಯಾದಿ ಸಂಗತಿಗಳು ಸೂಕ್ಷ್ಮವಾಗಿ ರವಿವರ್ಮನ ಮೇಲೆ ಪ್ರಭಾವ ಬೀರಿದವು. ಕೇವಲ ವ್ಯಕ್ತಿಚಿತ್ರಣ ಭಾವಚಿತ್ರಗಳನ್ನು ಚಿತ್ರಿಸುವುದರಲ್ಲಿಯೇ ನಿಷ್ಟುರತನದ ಎಷ್ಟರಮಟ್ಟಿಗೆಯೆಂದರೆ ಛಾಯಾ ಚಿತ್ರಗಳಿಂದ ಬಹುದೂರವಾಗಿರುತ್ತಾರೆ.

೧೬. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಕಲಾವಿದ ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ, ಪುಟ – ೧೦೪



ಅಲ್ಲದೆ ವ್ಯಕ್ತಿ ಚಿತ್ರರಚನೆಯಲ್ಲಿ ಸಿದ್ಧ ಹಸ್ತನಾಗುವಂತೆ ಯೂರೋಪಿನ ವರ್ಣಚಿತ್ರಗಳನ್ನು ಕರಗತ ಮಾಡಿಕೊಂಡನು. ಅದರಲ್ಲಿಯೂ ಸ್ತ್ರೀ ಪ್ರಗತಿಪರ ರಾಜ ವಂಶದ ಸ್ತ್ರೀ ಗೃಹಿಣಿಯಂತೆ ದಿಟ್ಟ ಮತ್ತು ಮರಾಠಿ ಕುಲದ ಸುಂದರ ಸ್ತ್ರೀಯರಾದಾಗಿನಿಂದಲೂ ಪ್ರಭಾವಿತನಾಗಿ ಕಲಾಕೃತಿಗಳನ್ನು ಚಿತ್ರಿಸುತ್ತಿದ್ದನು.

ರವಿವರ್ಮ ತನ್ನ ಸ್ತ್ರೀ ಚಿತ್ರಗಳಿಗೆ ಬಳಸಿಕೊಳ್ಳುವ ರಂಗಭೂಮಿಯ ಸಂಪನ್ಮೂಲಗಳಿಗೆ ಹಲವು ಬಗೆಯ ಅನುಕರಣೆಗಳಿದ್ದು, ಅದು ಹೆಚ್ಚಾಗಿ ಸಂಬಂಧಿಸಿದ ಕುಟುಂಬದಲ್ಲಿ ಬೆಳೆದವನು. ತನ್ನ ಯೌವ್ವನದ ದಿನಗಳಲ್ಲಿ ರಾಜಾಶ್ರಯದಲ್ಲಿ ರಂಗ ಪ್ರದರ್ಶನಗಳನ್ನು ನೋಡುತ್ತಿದ್ದನು, ಮುಂಬೈ ಮತ್ತು ದಕ್ಷಿಣದಲ್ಲಿ ನೋಡಿದ ಪಾರ್ಸಿ ಮತ್ತು ಮರಾಠಿ ರಂಗಭೂಮಿಯ ಪ್ರದರ್ಶನಗಳು ಅವನ ಮೇಲೆ ನೇರವಾಗಿ ಪ್ರಭಾವ ಬೀರಿದವು. ಪಾರ್ಸಿ ರಂಗಭೂಮಿಯು ಐತಿಹ್ಯ ಆಕೃತಿಗಳ ಸಿದ್ದವಸ್ತುವನ್ನು ಒದಗಿಸಿತು. ಅದು ಅವನಿಗೆ ಆಕೃತಿಗಳು ವಿನ್ಯಾಸಗಳು ಮತ್ತು ಭಾವಾಭಿನಯಗಳನ್ನು ಒಂದು ನಿರ್ದಿಷ್ಟ ರೂಪದಲ್ಲಿಡಲೂ ಸಹಾಯಕವಾಯಿತು.[೭]

ಇದರ ಪ್ರಭಾವದಿಂದ ರಂಗಭೂಮಿಯ ಚಿತ್ರಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಕಲಾತ್ಮಕವಾಗಿ ಹೆಚ್ಚು ಭಾವನಾತ್ಮಕವಾದ, ಯುರೋಪಿನ ಪುನರುಜ್ಜೀವನ ಕಾಲದ ಕಲಾಶೈಲಿಯ ಚಿತ್ರದಲ್ಲಿ ಉಪಯೋಗಿಸುತ್ತಿದ್ದ, ಕನ್ನಡಿ, ಕಿಡಿಕಿ, ಸಾದೃಶ್ಯ ವಸ್ತುವನ್ನು ಪ್ರತಿಯಾಗಿ ಬಳಸಿಕೊಂಡನು. ಅದು ರವಿವರ್ಮನಿಗೆ ಯಥಾವತ್ತಾದ ಭಾವನಾತ್ಮಕ ಸಮಸ್ಯೆಗಳು ಹಾಗೂ ಅದರ ಸರಿಯಾದ ಚಿತ್ರಣದಲ್ಲಿನ ಪ್ರಾಯೋಗಿಕ ಸಮಸ್ಯೆಗಳನ್ನು ನಿವಾರಿಸಲು ಸಹಾಯಕವಾಗುವುದರಿಂದ ಕಲಾತ್ಮಕವಾದುದಾಗಿದೆ. ಅದೇ ಸಮಯದಲ್ಲಿ ಅದು ಅವನಿಗೆ ಪ್ರೇಕ್ಷಕನನ್ನು ಉದಾರ ಅಥವಾ ಸಹೃದಯ ವಿದ್ರಾಹಕ ಅಭಿನಯದಲ್ಲಿ ಅತೀ ಹತ್ತಿರದಿಂದ ಭಾಗವಹಿಸುವಂತೆ ಮಾಡಲು ಒಂದು ಅನೂನ್ಯತೆಯನ್ನು ನೀಡುವ. ಕೆಲವು ಚಿತ್ರಗಳನ್ನು ಗಮನಿಸಬಹುದು. ದ್ರೌಪದಿ ಶೃಂಗಾರ ಮಾಡಿಕೊಳ್ಳಲು ಕುಳಿತ ಸ್ತ್ರೀ ಚಿತ್ರಣವು ರವಿವರ್ಮನ ಸ್ತ್ರೀ ಚಿತ್ರಗಳು ಪಾಶ್ಚಿಮಾತ್ಯ ಶೈಲಿಯಿಂದ ಪ್ರಭಾವಿತನಾಗಿ ಚಿತ್ರಿಸಿದನು ಅದರ ಉದ್ದೇಶವೆಂದರೆ ಬೃಹತ್ ವೈಶಾಲ್ಯವನ್ನು ನೀಡುತ್ತದೆ ಎನ್ನುವುದು ನಮ್ಮ ಭಾರತ ದೇಶದ ಕಲಾವಲಯಕ್ಕೆ ಪುಷ್ಠಿ ನೀಡುತ್ತದೆ ಎನ್ನಬಹುದು.

ನಂತರದ ದಿನಗಳಲ್ಲಿ ಗ್ರೀಕ್, ರೋಮನ್ ಗತಕಾಲದ ಕಲಾಕೃತಿಗಳ ಮನಸಿನಮೇಲೆ ಯಾವ ರೀತಿ ಪ್ರಭಾವ ಬೀರಿದವು ಎಂಬುದನ್ನು ಅವುಗಳು ತನ್ನ ಕಲಾಕೃತಿಯಲ್ಲಿ ಸಂಯೋಜನೆ ಮತ್ತು ಶೃಂಗಾರ ದೃಶ್ಯಗಳು, ನೆರಿಗೆಗಳ ಎಲ್ಲವನ್ನು ಭಾವನಶಾಸ್ತ್ರ ಮತ್ತು ಭಾವಾತಿರೇಕದಂತೆ ಪರಿಣಾಮ ಉಂಟುಮಾಡಿದವು. ಹೀಗೆ ಇದೊಂದೇ ಅಂತಅಲ್ಲ, ಹಲವಾರು ಘಟನೆಗಳಿಂದ ರವಿವರ್ಮನು ಪ್ರಭಾವಿತಗೊಂಡಿದ್ದಾನೆ. ಒಂದೊಂದು ಹಂತದಲ್ಲಿ ಒಂದೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದ್ದಾನೆ. ಹೀಗೆ ಪ್ರಭಾವವೆಂಬುದು ಹೇಳಿದಾಗಲೇ ಬರುವಂಥಹದಲ್ಲ ಅದು ಸಹಜವಾಗಿಯೇ ಉಂಟಾಗುವ

೧೭. ಎನ್. ಮರಿಶಾಮಾಚಾರ್ : ರಾಜ ರವಿವರ್ಮ, ಪುಟ – ೩೭

ಕ್ರಿಯೆಯಾಗಿದೆ ಎನ್ನಬಹುದು. ತನ್ನ ಸ್ತ್ರೀ ಕಲಾಕೃತಿಗಳಲ್ಲಿ ಅಲಂಕಾರಿಕ ಗೃಹದಲ್ಲಿ ಉಯ್ಯಾಲೆಯಲ್ಲಿ ಅಥವಾ ವಿಶ್ರಾಂತಿಯಲ್ಲಿ ಸಂಗೀತ, ವಾದ್ಯಗಳನ್ನು ನುಡಿಸುತ್ತ ಕೇಳುತ್ತ ಪ್ರಭಾವಿತನಾಗಿ ತನ್ನ ಕಲಾಕೃತಿಗಳಲ್ಲಿ ಬಳಸಿಕೊಂಡಿದ್ದಾನೆ. ಇವೆಲ್ಲವುಗಳ ಪ್ರಭಾವವನ್ನು ಕೆಲವು ಕಲಾಕೃತಿಗಳಲ್ಲಿ ಕಾಣಬಹುದು ದೇವತೆಯ ಕಲಾಕೃತಿಯಲ್ಲಿ ಶಕುಂತಲೆಯ ಪತ್ರಲೇಖನ, ಸಂಗೀತಗಳು ದಮಯಂತಿ ಕಲಾಕೃತಿಗಳ ಇತ್ಯಾದಿ ಕಲಾಕೃತಿಗಳಲ್ಲಿ ಮಹಾರಾಷ್ಟ್ರ, ಗುಜರಾತ್, ಸಿದ್ದಿ, ಕೇರಳ ಸ್ತ್ರೀಯ ವಸ್ತು ವಿನ್ಯಾಸಗಳ ಪ್ರಭಾವದಿಂದ ತನ್ನ ಕಲಾಕೃತಿಯಲ್ಲಿ ಬಳಸಿರುವುದು ಕಾಣಬಹುದಾಗಿದೆ. ಕಲಾವಿದನು ಹೆಚ್ಚಾಗಿ ಕೇರಳ ಸ್ತ್ರೀಯರಿಂದ ಪ್ರಭಾವಿತನಾಗಿರುದನ್ನು ಕಾಣಬಹುದು. ಸ್ತ್ರೀಯರಿಂದಲೇ ಕಲಾವಿದನು ಬೆಳಕಿಗೆ ಬರಲು ಕಾರಣಕರ್ತರು ಎಂದರೆ ತಪ್ಪಾಗಲಾರದು.

ಪ್ರೇರಣೆ

ಕಲಾವಿದನಿಗೆ ಅನೇಕ ರೀತಿಯ ವಿಧದಲ್ಲಿ ಪ್ರೇರಣೆ ದೊರಕುತ್ತದೆ. ಕೆಲವೊಮ್ಮೆ ನೇರವಾಗಿ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಕೆಲವೊಮ್ಮೆ ಬೇರೆ ರೀತಿಯಲ್ಲಿ (ಪ್ರತ್ಯೇಕ್ಷ-ಪರೋಕ್ಷ) ಕಲಾವಿದನ ಮನಸ್ಸಿನ ಸ್ಥಿತಿ ಹಾಗೂ ಬುದ್ದಿಶಕ್ತಿಯು ಜಾಗೃತವಾಗಿ ಸಂವೇದನಾ ಶೀಲವಾಗಿರಬೇಕು ಎನ್ನುವುದು ಅತ್ಯವಶ್ಯಕವಾಗಿರುತ್ತದೆ. ಹೀಗೆ ಸಮಾಜದ ಕೋಟಲೆ, ಸಂಘರ್ಷ, ನಿರಾಶೆ ಹಾಗೂ ಉಲ್ಲಾಸ ದ್ವಂದ್ವ ಇವೆಲ್ಲವು ಕಲಾವಿದನ ಸಂವೇದನಾ ಶೀಲ ಮನಸ್ಸನ್ನು ಉತ್ತೇಜಿಸಲು ಸಮರ್ಥವಾಗುತ್ತದೆ.[೧೮]

ರವಿವರ್ಮನ ಬಾಲಕನಾಗಿದ್ದಾಗಲೇ ಬಾಲ ಪ್ರತಿಭೆಯನ್ನು ರವಿವರ್ಮನ ಮಾವ ಚಿಕ್ಕಪ್ಪ ಕಲಾವಿದರಾದ ರಾಜರಾಜವರ್ಮ ಗುರುತಿಸಿ ವರ್ಣಚಿತ್ರಗಳನ್ನು ಕಲಿಯಲು ಪ್ರೇರೇಪಿಸಿದರು. ಇವರ ಪ್ರೋತ್ಸಾಹದಿಂದ ಕಲಾವಿದ ರವಿವರ್ಮ ಗೋಡೆಗಳ ಮೇಲೆ ಗೀಚುವ, ಗೀರುವ ರೇಖೆಗಳು ದೃಢವಾದವು, ಅವರ ಮಾವ ಸಾಧ್ಯವಾದಷ್ಟು ಎಲ್ಲವನ್ನು ಹೇಳಿಕೊಟ್ಟನು. ಬುನಾದಿಯಿಂದಲೇ ಕಲೆಗೆ ಉತ್ತೇಜನೆ ಸಿಕ್ಕಿದ್ದು ಅಲ್ಪ ಸ್ವಲ್ಪವಾದರೂ ರವಿವರ್ಮ ಆಸಕ್ತಿಯಿಂದಲೆ ರೇಖಾ ಚಿತ್ರಗಳನ್ನು ಕಲಿತನು.

ನಂತರ ಹದಿಮೂರು ವರ್ಷದವನಾಗಿದ್ದಾಗ ತನ್ನ ಮಾವನ ಜೊತೆ ಅರಮನೆಗೆ ಹೋಗುವ ಸಂದರ್ಭದಲ್ಲಿ ರಾಜರಿಗೆ ರವಿವರ್ಮನ ಕಲೆಯ ಬಗ್ಗೆ ತಿಳಿಸಿ ಅವರಿಂದಲೂ ಪ್ರೇರಣೆ ದೊರಕಿತು. ಒಂದು ಬಾರಿ ರವಿವರ್ಮ ಮೂರು ಸಣ್ಣ ಚಿತ್ರಗಳನ್ನು ದೇವಿಯರ ಎರಡು ಮತ್ತು ಮಗುವಿನದು ಒಂದು ಮಹಾರಾಜನಿಗೆ ಕಾಣಿಕೆಯಾಗಿ ಒಯ್ದು, ಬಾಲ ಪ್ರಯತ್ನದಿಂದ ಸಂತಸಗೊಂಡ ಮಹಾರಾಜ ಬಾಲಕನು ತನ್ನ ಪ್ರತಿಭೆಯನ್ನು ಬೆಳಸಿಕೊಳ್ಳಲು ತಿರುವಂತಪುರದಲ್ಲಿ ಹೆಚ್ಚಿನ ಅವಕಾಶಗಳಿರುವುದರಿಂದ ಆತ ಅಲ್ಲಿಯೇ ಇರಬೇಕೆಂದು ನಿರ್ಣಯಿಸಿದನು. ಆದ್ದರಿಂದ ಬಾಲಕನಿಗೆ ಇನ್ನಷ್ಟು ಪ್ರೇರಣೆ ದೊರಕಿದಂತಾಯಿತು.

ಮಾನವ ಜೀವನ ಮುಖ್ಯವಾಗಿ ತನು, ಮನ, ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿವೆ,

---

೧೮. ಎನ್. ಮರಿಶಾಮಾಚಾರ್ : ಕೆ. ಕೆ. ಹೆಬ್ಬಾರ್, ಪುಟ – ೧೭

ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾಕಾಲವೂ ಮಾಡುತ್ತಿರುತ್ತದೆ. ತನುವಿಗೆ ಬೇಕಾದ ಆಶನ ವಸತಿ ಸಂಸ್ಕಾರಕ್ಕೆ ಬೇಕಾದ ಉಪಜೀವನ ಮಾರ್ಗವನ್ನು ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ ಕಲೆ, ನೈತಿಕ ಮೌಲ್ಯಗಳ ಆತ್ಮದ ಉದ್ದಾರಕ್ಕಾಗಿ ಧರ್ಮ, ಆಧ್ಯಾತ್ಮ ಪಾರಮಾರ್ಥಿಕ ಮೌಲ್ಯಗಳನ್ನು ಕೊಡಬಲ್ಲುದೇ ನಿಜವಾದ ಶಿಕ್ಷಣವಾಗಿರುತ್ತದೆ.[೯] ರವಿವರ್ಮರ ಬದುಕಿನಲ್ಲಿ ಇಂತಹ ಶಿಕ್ಷಣವನ್ನು ತಾವೇ ಸ್ವಂತ ಪ್ರಯತ್ನಗಳಿಂದ ಪಡೆದುಕೊಂಡಿದ್ದಾರೆ ಎನ್ನಬಹುದು.

ಅರಮನೆಯಲ್ಲಿ ಇದ್ದ ಹಳೆಯ ಚಿತ್ರಗಳನ್ನು ಆತ ಅಧ್ಯಯನ ಮಾಡಿ ಅವುಗಳ ಪ್ರತಿಯನ್ನು ಮಾಡುವುದು, ಚಿತ್ರಕಾರರ ಕಾರ್ಯಗಳನ್ನು ಗಮನಿಸಬಹುದಾಗಿದೆ, ತೈಲವರ್ಣ ಮಾಧ್ಯಮದಲ್ಲೂ ಅಭ್ಯಾಸ ಮಾಡಬಹುದಿತ್ತು. ಈ ಎಲ್ಲಾ ಅವಕಾಶಗಳನ್ನು ಮಹಾರಾಜರು ರವಿವರ್ಮನ ಕಲಾಭಿವೃದ್ಧಿಗೆ ಪ್ರೇರೆಪಿಸಿದರು, ಅರಮನೆಯ ಭಿತ್ತಿ ಚಿತ್ರರಚನೆಯ ಸ್ವರೂಪಗಳು, ಭಿತ್ತಿಬಣ್ಣಗಳು, ರೇಖೆಗಳು, ಆಕಾರಗಳನ್ನು ಗಮನಿಸುತ್ತ, ಯುರೋಪಿಯನ್ ವರ್ಣಚಿತ್ರಗಳ ರಚನೆಯ ಲಾಲಿತ್ಯ ಬೆಳಕಿನಸ್ಪರ್ಷ ಗಮನಿಸುತ್ತ ಈ ತಂತ್ರವನ್ನು ಕರಗತ ಮಾಡಿಕೊಂಡರೆ ದೃಷ್ಟಿಗೆ ಅಳವಡಿಸಿಕೊಂಡು ಶತ ಶತಮಾನಗಳಿಂದ ಜಡವಾಗಿ ಹಳತಾಗಿರುವ ತನ್ನ ನಾಡಿನ ಕಲಾಚಟುವಟಿಕೆಗೆ ಹೊಸದಾದ ಚಲನಶೀಲತೆಯನ್ನು ತುಂಬಬಹುದೆನ್ನುವ ಅಂಶ ರವಿವರ್ಮನಿಗೆ ಅಲೌಕಿಕ ಅರಿವೆಯಂತೆ ತಟ್ಟನೆ ಹೊಳೆಯಿತು.[೧೦] ಇದರಿಂದ ಪ್ರಭಾವ ಪ್ರೇರಣೆಯಿಂದ ಸ್ತ್ರೀಯರ ಭಾವಚಿತ್ರ ಹಾಗೂ ಸಂಯೋಜನ ಚಿತ್ರಗಳನ್ನು ರಚಿಸುವುದಕ್ಕೆ ಪ್ರಾರಂಭಿಸಿದನು ಎನ್ನಬಹುದು.

ತೈಲವರ್ಣಗಳ ಬಳಕೆಯನ್ನು ತಿಳಿಯಲೂ ರಾಮಸ್ವಾಮಿನಾಯಕರ್ ಹೋದಾಗ ನಿರಾಶೆಯಿಂದ ಕುಳಿತಿದ್ದಾಗ ನಾಯಕರ್ ಆರುಮುಗಂ ಪಿಳ್ಳೈ ಎಂಬುವವರು ರವಿವರ್ಮನ ತೈಲವರ್ಣ ಬಳಕೆ ನವೀನ ತಂತ್ರಗಳ ಬಗ್ಗೆ ತಿಳಿಸಿ, ಗುರು ಮತ್ತು ರಾಜ್ಯದ ಉತ್ತರಾಧಿಕಾರಿಯ ಕೋಪಕ್ಕೆ ಈಡಾಗುವ ಸಾಧ್ಯತೆಯ ಬಗ್ಗೆ ಆತ ಎಚ್ಚರಿಕೆವಹಿಸಿದ್ದನು. ಹಾಗಾಗಿ ರಾತ್ರಿ ವೇಳೆ ಆತ ರವಿವರ್ಮನ ಮನೆಗೆ ಹೋಗಿ ಸಾಧ್ಯವಾದಷ್ಟು ಪಾಠಗಳನ್ನು ರಹಸ್ಯವಾಗಿ ಹೇಳಿಕೊಟ್ಟನು ಇದರಿಂದ ತೈಲ ವರ್ಣಗಳ ಬಳಕೆಯ ಬಗ್ಗೆ ತಿಳುವಳಿಕೆ ಮೂಡಿಸಿ ಕಲಾಕೃತಿಯನ್ನು ರಚಿಸಲೂ ಪ್ರೇರಣೆಯನ್ನು ನೀಡಿದರು. ಈ ರೀತಿಯ ವಿದ್ಯಾ ಪ್ರಸಾರದಿಂದ ಕರ, ಉರ, ಶಿರ, ಸಂವರ್ಧನೆಯಾಗುವುದು. ಶಿರವು ಅರಿವನ್ನು, ಸೂಚಿಸುತ್ತದೆ. ಶಿಕ್ಷಣ ಆತ್ಮಕ್ಕೆ ಆನಂದವನ್ನು ಕೊಟ್ಟು ಅಂತಃಕರಣವನ್ನು ಅರಳಿಸಿ ಸದ್ಗುಣಗಳನ್ನು ಮೈಗೂಡಿಸಿಕೊಂಡು.[೧೧] ಬೆಳೆಯಲು ಪ್ರೇರಣೆಯು ರವಿವರ್ಮನಿಗೆ ದೊರಕಿತು.


ರವಿವರ್ಮನಿಗೆ ಮೊದಲಬಾರಿಗೆ ತೈಲವರ್ಣಗಳ ಪೆಟ್ಟಿಗೆಯೊಂದು ದೊರೆತದ್ದು ಕೇರಳ ವರ್ಮವಳಿಯ ಕೋಯಿಲ್ ತಂಪುರನ್ ಕಲೆಯ ಪ್ರೋತ್ಸಾಹಿಸಿದನು ಇದರಿಂದ ಪ್ರೇರಿತರಾಗಿ ಸ್ತ್ರೀ ಭಾವಚಿತ್ರಗಳನ್ನು ಕರಗತ ಮಾಡಿಕೊಂಡರು ಕೇರಳವರ್ಮ, ರಾಣಿ ಲಕ್ಷ್ಮಿಬಾಯಿಯವರ ಭಾವಚಿತ್ರಗಳನ್ನು ಚಿತ್ರಿಸಿದ ಈ

---

೦೯. ಡಾ. ಎಸ್. ಸಿ. ಪಾಟೀಲ : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ – ೧೧೩

೧೦. ಎಸ್. ಮರಿಶಾಮಾಚಾರ್ : ರಾಜ ರವಿವರ್ಮ, ಪುಟ – ೯

೧೧. ಎಸ್. ಸಿ. ಪಾಟೀಲ : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ – ೧೧೪



ವರ್ಣಗಳನ್ನು ಮದ್ರಾಸಿನ ಅಂಗಡಿಯೊಂದರಿಂದ ಬಣ್ಣಗಳನ್ನು ತರಿಸಿದ ರವಿವರ್ಮ ಇವನಿಂದ ಉತ್ತಮವಾದ ಪ್ರೇರಣೆ ದೊರೆತಂತಾಗಿತ್ತು, ನಂತರ ರವಿವರ್ಮನು, ತನ್ನ ಪತ್ನಿ ಭಾವಚಿತ್ರವನ್ನು ರಚಿಸಿದ, ಅರಮನೆಗಳಲ್ಲಿ ಮಹಾರಾಣಿಯರಿಗೆ ಮಹಾರಾಷ್ಟ್ರ, ಗುಜರಾತ್, ಕೇರಳ ಶೈಲಿಗಳಲ್ಲಿ ಅಲಂಕರಿಸಿ ಚಿತ್ರಗಳನ್ನು ರಚಿಸಿದನು. ನಾಟಕದ ಪ್ರಭಾವ ಹಾಗೂ ಯುರೋಪಿಯನ್ ಹೊಳವು ದೇಶಿ ಸೊಗಡನ್ನು ಬೆಳಸಿಕೊಂಡು ಚಿತ್ರಗಳನ್ನು ರಚಿಸಿದನು.

೧೮೭೩ರಲ್ಲಿ ಮದ್ರಾಸಿನಲ್ಲಿ ಗವರ್ನರ್ ಲಾರ್ಡ್ ಹೋಬಾರ್ಟ್‌ನ ಆಶ್ರಯದಲ್ಲಿ ಲಲಿತಕಲೆಗಳ ಪ್ರದರ್ಶನವೊಂದು ನಡೆದಾಗ ರವಿವರ್ಮ ಎರಡು ವರ್ಣಚಿತ್ರಗಳನ್ನು ಪ್ರದರ್ಶನಕ್ಕಾಗಿ ಕಳಿಸಿದ್ದ, ಇವುಗಳಲ್ಲಿ ಒಂದು ಮಲ್ಲಿಗೆಯ ಮೂಲೆಯಿಂದ ತನ್ನ ಕೇಶವನ್ನು ಅಲಂಕರಿಸಿಕೊಳ್ಳುತ್ತಿರುವ ನಾಯರ್ ಸ್ತ್ರೀ ಕಲಾಕೃತಿಯಾಗಿತ್ತು ರವಿವರ್ಮನಿಗೆ ರಾಜಗೌರವ ಸೂಚಕ ಕಡವನ್ನು ನೀಡಲಾಗಿತ್ತು. ಇದರಿಂದ ಮತ್ತಷ್ಟು ಪ್ರೇರಣೆಯನ್ನು ಹೊಂದಿದನು, ಇನ್ನಷ್ಟು ಕಲಾಕೃತಿಗಳ ಬಗ್ಗೆ ಅರಿತುಕೊಳ್ಳಲು ಮಹಾರಾಜನ ಪ್ರೇರಣೆಯಿಂದ ಮದ್ರಾಸ್‌ಗೆ ಬಂದ ದಕ್ಷಿಣದ ಧೀಮಂತ ವಯೋವೃದ್ಧರಾದ ದಿವಾನರು ಬಹುದ್ದೂರ್ ರಘನಾಥ್‌ರಾವ್ ಅವರ ಅಡಿಯಾಗಿದ್ದು. ಅಲ್ಲದೆ ದಿವಾನರು ರವಿವರ್ಮನ ದುಭಾಷಿಯೂ ಆಗಿದ್ದು ರವಿವರ್ಮ ಮುಂದೆ ಸಾಕಷ್ಟು ವರ್ಷಗಳ ನಂತರ ಸಂಭಾಷಿಸಲು ಸಾಕಾಗುವಷ್ಟು ಇಂಗ್ಲೀಷ್ ಜ್ಞಾನವನ್ನು ಪಡೆದನು. ತಮಿಳು ಗುಜುರಾತಿ, ಮರಾಠಿ, ಜರ್ಮನ್ ಭಾಷೆಗಳಲ್ಲಿ ಮಾತನಾಡುವಷ್ಟು ಮಟ್ಟಿಗೆ ಆ ಭಾಷೆಗಳನ್ನು ರವಿವರ್ಮ ಕರಗತ ಮಾಡಿಕೊಂಡನು ಉತ್ತಮವಾದ ಪ್ರೇರಣೆ ದೊರಕಿದಂತಾಯಿತು ಎನ್ನಬಹುದು.

ಮದ್ರಾಸ್ ಪ್ರದರ್ಶನದಲ್ಲಿ ಮೊದಲನೆಯ ಬಹುಮಾನ ನೀಡಿದ ನಂತರ ರಾಜ್ಯಪಾಲರು ಚಿನ್ನದ ಪದಕವನ್ನು ರವಿವರ್ಮನ ಅಲಂಕಾರ ಗೃಹದಲ್ಲಿ ನಾಯರ್ ಸ್ತ್ರೀ ವರ್ಣಚಿತ್ರಕ್ಕೆ ನೀಡಿ ಪ್ರೇರೇಪಿಸಲಾಯಿತು. ಅಂತರಾಷ್ಟ್ರೀಯ ಪ್ರಮಾಣಪತ್ರವೊಂದನ್ನು ನೀಡಿದರು. ೧೮೭೪ ಮದ್ರಾಸ್ ವರ್ಣಚಿತ್ರ ಪ್ರದರ್ಶನಕ್ಕೆ "ಸ್ಯಾರಬತ್ ನುಡಿಸುತ್ತಿರುವ ತಮಿಳು ಸ್ತ್ರೀ" ಸಿದ್ಧಪಡಿಸಿ ಕಳುಹಿಸಿದ ಅದು ಸಹ ಮೊದಲ ಬಹುಮಾನವಾಗಿತ್ತು. ರಾಜ್ಯಪಾಲರು ಚಿನ್ನದ ಪದಕವನ್ನು ತನ್ನದಾಗಿಸಿಕೊಡಲು. ಅದರಿಂದ ಮತ್ತಷ್ಟು ಪ್ರೇರಣೆಯು ದೊರತಂತಾಯಿತು.

೧೮೭೬ ಮದ್ರಾಸ್ ಪ್ರದರ್ಶನಕ್ಕೆ ರವಿವರ್ಮ ಕಳುಹಿಸಿದ ವರ್ಣಚಿತ್ರ ವೃತ್ತಿಜೀವನದಲ್ಲಿ ಮಾತ್ರವಲ್ಲದೇ ಮುಂದಿನ ದಶಕಗಳಲ್ಲಿನ ಇಡೀ ಭಾರತೀಯ ಕಲಾ ಜಗತ್ತಿನಲ್ಲಿಯೇ ಮಹತ್ವದ ಬದಾಲಾವಣೆಯನ್ನು ಮಾಡಲು ಸೃಷ್ಟಿಯಾಯಿತು. ಕಾಳಿದಾಸ ಸಂಸ್ಕೃತ ನಾಟಕದಿಂದ ಆಯ್ದ ಸಂದಂರ್ಭವನ್ನು ಆಧರಿಸಿ ರವಿವರ್ಮನು ರಚಿಸಿದ "ದುಷ್ಯಂತನಿಗೆ ಶಕುಂತಲೆಯ ಪ್ರೇಮಲೇಖನ" ಇದಾಗಿತ್ತು ಕಲಾಕೃತಿ ರವಿವರ್ಮನ ಜೀವನದ ಅದ್ಭುತ ಕಲಾಕೃತಿ ಎಂದು ಹೇಳಬಹುದು. ರಾಜ್ಯಪಾಲರಾದ ಲಾರ್ಡ್ ಬಕಿಂಗ್‌ಹ್ಯಾಂ ಚಿತ್ರ ಪ್ರದರ್ಶನ ಮುಗಿದ ತಕ್ಷಣವೇ ಆ ವರ್ಣಚಿತ್ರವನ್ನು ಕೊಂಡುಕೊಳ್ಳುವುದಾಗಿ ಪ್ರಕಟಿಸಿದ್ದರು ಮತ್ತು

೧೮೫೫ ರಲ್ಲಿ ಶಾಕುಂತಲದ ಅನುವಾದವನ್ನು ಪ್ರಕಟಿಸಿದ್ದ ಸರ್ ಮೋನಯರ್ ವಿಲಿಯಮ್ಸ್ ಮುಂದಿನ ಆವೃತ್ತಿಗಳಲ್ಲಿ ಮುಖಪುಟಗಳಲ್ಲಿ ಆ ಚಿತ್ರವನ್ನು ಮುದ್ರಿಸಲು ಕೋರಿದ. ಇದರಿಂದ ಮತ್ತಷ್ಟು ಕಲಾಕೃತಿಗಳ ರಚನೆಮಾಡುವುದಾಗಿ ರಾಜ್ಯ ಪಾಲರು ಹಾಗೂ ಸರ್ ಮೋನಯರ್ ವಿಲಿಯಮ್ಸ್ ನಿಂದ ಸಲಹೆಗಳನ್ನು ಪಡೆಯುವಲ್ಲಿ ಮತ್ತಷ್ಟು ಪ್ರೇರಿತನಾದನು.

ರವಿವರ್ಮನ ಕಿರಿಯ ಸಹೋದರನಾದ ಸಿ. ರಾಜರಾಜವರ್ಮನಿಂದ ತನ್ನ ಕಲಾಕೃತಿ ರಚನೆಗೆ ಪ್ರೇರಣೆ ದೊರೆಯಿತು. ಮಹಾರಾಜ ವಿಶಾಖಂ ತಿರುನಾಳ್ ಪತ್ರಕ್ಕೆ ಬಂದ ಆಯಿಲಂ ತಿರುನಾಳರೆವರಿಂದಲೂ ರವಿವರ್ಮನಿಂದ ಪ್ರೋತ್ಸಾಹಿಸಿದರು. ಅವರ ಪ್ರೇರಣೆಯಿಂದಲೆ, "ಸೀತಾ ಭೂ ಪ್ರವೇಶ"ವನ್ನು ಚಿತ್ರಿಸಲು ಹೇಳಿದರು. ಈ ಚಿತ್ರ ಮುಂದಕ್ಕೆ ರಾಷ್ಟ್ರೀಯ ನೆಲೆಯಲ್ಲಿ ರವಿವರ್ಮನಿಗೆ ಪ್ರಖ್ಯಾತಿ ದಕ್ಕುವಲ್ಲಿ ಪ್ರಮುಖ ಪಾತ್ರವಹಿಸಿತು. ಬರೋಡದಲ್ಲಿ ಒಂದು ಸಂಚಲನವನ್ನು ಸೃಷ್ಟಿ ಮಾಡಿತು. ಅಷ್ಟೇ ಅಲ್ಲದೆ ಬರೋಡ ಮತ್ತು ಪೂನಾದಲ್ಲಿ ರವಿವರ್ಮನ ಖ್ಯಾತಿಯನ್ನು ದಕ್ಷಿಣದವರಗೂ ಕೊಂಡೊಯ್ದಿತು. ಹೀಗೆ ರಾಜರ ಆಶ್ರಯದಲ್ಲಿ, ಶ್ರೀಮಂತರ ಬೇಡಿಕೆಗಳಿಂದ ಉತ್ತಮವಾದ ಪ್ರೇರಣೆ ದೊರಕಿ, ಪ್ರದರ್ಶನಗಳಲ್ಲಿ ಉತ್ತೇಜನ ಬಹುಮಾನಗಳಿಂದ ಗುರುತಿಸಿಕೊಂಡು ನಂತರ ವರ್ಷಗಳಲ್ಲಿ ರಾಜರ ಆಹ್ವಾನವನ್ನು ಒಪ್ಪಿಕೊಂಡು ಮೈಸೂರು, ಭಾವನಗರ, ಜೈಪುರ, ಗ್ವಾಲಿಯರ್ ಇಂದೂರ್ ಮತ್ತು ಉದಯಪುರ ರಾಜರಿಂದ ಹೆಚ್ಚಾಗಿ, ರಾಜಮನೆತನದಿಂದ, ಯುರೋಪಿಯನ್ ವರ್ಣಗಳಿಗೆ ಮಾರುಹೋಗಿ ಚಿತ್ರಗಳನ್ನು ರಚಿಸಲೂ ಪ್ರೇರಣೆಯನ್ನು ನೀಡಿರುವದರಿಂದ ರಾಜರುಗಳು ಹಾಗೂ ಅವರ ಸ್ವಂತ ಪರಿಶ್ರಮವೆಂದೆ ಹೇಳಬಹುದು ಇವರ ಪ್ರೇರಣೆಯಿಂದ ಬಹಳಷ್ಟು ಸ್ತ್ರೀ ಭಾವಚಿತ್ರಗಳು ಹಾಗೂ ಸಂಯೋಜನ ಚಿತ್ರಣ, ಭಕ್ತಿ ಚಿತ್ರಗಳನ್ನು ರಚಿಸಿದ್ದಾರೆ. ಪುರಾಣಕ್ಕೆ ಸಂಬಂಧಿಸಿದ ಸ್ತ್ರೀ ಚಿತ್ರಗಳನ್ನು ಪ್ರಮುಖವಾಗಿ ಗಮನಸೇಳೆಯುತ್ತವೆ. ಈ ತೀಲವುಗಳ ಪ್ರೇರಣೆಯಿಂದ, ವೀಣೆ ನುಡಿಸುತ್ತಿರುವ ಸ್ತ್ರೀ, ಮಧುಮಗಳು ಸಂಗೀತಗಾರ, ಹಾಲು ಮಾರುವವಳು ಇತ್ಯಾದಿ ಕಲಾಕೃತಿಗಳನ್ನು ಕಾಣಬಹುದು. ಒಬ್ಬ ಕಲಾವಿದನಿಗೆ ಅವನ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸುವುದರಿಂದ ಮಾತ್ರ ಅವನು ಉತ್ತಮವಾಗಿ ಪ್ರಭುದ್ದನಾಗಲೂ ಸಾಧ್ಯ ಎಂಬುದನ್ನು ರವಿವರ್ಮನಿಂದ ಕಾಣಬಹುದಾಗಿದೆ.

ತಂತ್ರ ಮತ್ತು ಶೈಲಿ

ಭೂಮಿಯಲ್ಲಿರುವ ಪ್ರತಿಯೊಂದು ವನ್ಯಜೀವಿಯಿಂದ ಹಿಡಿದು ಮನುಷ್ಯ ಜೀವಿಗಳಲ್ಲಿಯೂ ಅವುಗಳ ಚಲನವಲನಗಳಲ್ಲಿ ತನ್ನದೇ ಆದ ಶೈಲಿ ತೋರಬರುವುದು ಸಹಜ. ಅದರಲ್ಲಿಯ ಕಲಾವಿದರಲ್ಲಿ ಹೆಚ್ಚು ಕಂಡುಬರುತ್ತದೆ. ಒಬ್ಬ ಕಲಾವಿದನು ತನ್ನ ಕೃತಿಗಳನ್ನು ಅನುಕರಣಿ ಮಾಡುವಾಗ ಅದು ಕಲಾಕೃತಿಯ ಶೈಲಿಯನ್ನು ಬಳಸಿಕೊಂಡಿದ್ದಾನೆ ಎನ್ನುವರು, ತಂತ್ರಗಳು ಬೇರೆ ಬೇರೆಯಾದರು ಶೈಲಿಯು ಒಂದೇ ಆಗಿರುತ್ತದೆ. ಈ ಶೈಲಿಗಳು ಮುಂದೆ ಹೊಸತನವನ್ನು ಕಂಡುಕೊಳ್ಳುವಲ್ಲಿ ಸಹಜವಾದ ಮಾರ್ಗವಾಗಿದೆ.



ಉದಾ :- ನಾವು ಕಲಾಕೃತಿಯನ್ನು ನೋಡಿದ ಕೊಡಲೆ ಇದು ಇಂತವರ ಕಲಾಕೃತಿ ಎಂದು ಸುಲಭವಾಗಿ ಕಂಡುಹಿಡಿಯ ಬಹುದಷ್ಟು ಪ್ರಧಾನವಾಗಿ ರೂಪುಗೊಂಡಿದೆ. ಇದು ಪಾಶ್ಚಾತ್ಯರ ಪ್ರಭಾವದಿಂದ ಹೆಚ್ಚು ಬೆಳಕಿಗೆ ಕಂಡು ಬರುತ್ತದೆ.

ಅನೇಕ ಕಲಾವಿದರು ತಮ್ಮಗೆ ತಿಳಿದುತಿಳಿಯದೇನೂ ಆ ಪ್ರದೇಶದ ವಿಶಿಷ್ಟ ಶೈಲಿಯನ್ನು ತಮ ಕಲಾಕೃತಿಗಳಲ್ಲಿ ಅನುಕರಣೆ ಮಾಡುತ್ತಾರೆ. ಅದರಿಂದಲೆ ಪ್ರಭಾವಿತರಾಗುತ್ತಾರೆ. ಇದರಿಂದ ವಿಶಿಷ್ಟವಾಗಿ ಚಿತ್ರ ಶೈಲಿಯನ್ನು ಹೊಂದಿರುವ ಸಾಧ್ಯತೆಗಳನ್ನು ಕಾಣಬಹುದು. ಪ್ರತಿಯೊಬ್ಬ ಕಲಾವಿದನು ಕಲೆಯಲ್ಲಿ ಹೊಸತನವನ್ನು ಕಂಡುಕೊಳ್ಳಲು ಏನಾದರೂ ಹೊಸದನ್ನು ಸೃಷ್ಠಿಸಬೇಕೆಂದು ತನ್ನದೇ ಆದ ಶೈಲಿಯನ್ನು ಕಂಡುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುತ್ತಾರೆ. ಆ ಪ್ರಯತ್ನದಲ್ಲಿ ರವಿವರ್ಮನು ಒಬ್ಬರು ಪ್ರಥಮವಾಗಿ ತೈಲವರ್ಣಗಳಿಂದ ಹೊಸ ಶೈಲಿ ತೋರಿಸಬೇಕು, ಕಂಡುಕೊಳ್ಳಬೇಕು ಎನ್ನುವುದರಲ್ಲಿಯ ಮನಸ್ಸು ಆತೋರೆಯುತ್ತಿತ್ತು.

ಶ್ರೀ ಪದ್ಮನಾಭಸ್ವಾಮಿ ದೇವಾಲಯದಲ್ಲಿ ಬಿತ್ತಿಚಿತ್ರಗಳನ್ನು ಗಮನಿಸುತ್ತ, ಕೇರಳ ಶೈಲಿಯ ಅರೆ ಬೆತ್ತಲೆಯಾಗಿ ಓಡಾಡುತ್ತಿದ್ದ ಸುಂದರ ಸ್ತ್ರೀಯರತ್ತ ನೋಡುವ ಅವರ ಮನಸ್ಸಿನಲ್ಲಿಯೇ ಯುರೋಪಿಯನ್ ವರ್ಣಚಿತ್ರಗಳ ಕರಗತ ಮಾಡುಕೊಳ್ಳುವ ತಂತ್ರಗಳನ್ನು ಮೆಲುಕುಹಾಕುತ್ತ ನೆರಳು ಬೆಳಕು ಗಮನಿಸುತ್ತ ಸಂಪ್ರದಾಯವನ್ನು ಮತ್ತು ದೇಶಿಸೊಗಡನ್ನು ಬಳಸಿ ಹೊಸದಾದ ಅಕಾಡೆಮಿಕ್ ಶೈಲಿಯಲ್ಲಿ ಚಿತ್ರಗಳನ್ನು ರಚಿಸುವುದನ್ನು ಕರಗತ ಮಾಡಿಕೊಂಡರು; ತೈಲಚಿತ್ರಗಳ ಸೌಂದರ್ಯ ಅದರ ಹೊಳಪು ಭಾರತೀಯರ ಮನಮುಟ್ಟುವಂತೆ ತಂತ್ರಗಳನ್ನು ಬಳಸಿ ಚಿತ್ರರಚನೆ ಮಾಡಿದರು.

ರವಿವರ್ಮನ ತಂತ್ರಶೈಲಿಗಳನ್ನು ಗಮನಿಸಿದರೆ ಪಾಶ್ಚತ್ಯದ ಹೆಚ್ಚು ಪ್ರಭಾವದಿಂದ ರಚಿತವಾದ ಕಲಾಕೃತಿಗಳೆ ಆಗಿವೆ, ಭಾರತೀಯ ವಸ್ತು ವಿಷಯ ಮಾತ್ರ ಸ್ತ್ರೀಯರಿಗೆ ಹೆಚ್ಚಾಗಿ ಆಭರಣಗಳು, ದೇಶಿ ವಸ್ತುಗಳನ್ನು ಬಳಸಿ ಪ್ರಧಾನವಾಗಿ ಕಣ್ಣಿಗೆ, ಮನಸ್ಸಿಗೆ ಆದರ್ಶವಾಗುವಂತೆ ಚಿತ್ರಿಸುವ ಶೈಲಿ ಇವರದು. ಇವರು ಹಿನ್ನಲೆಯನ್ನು ಕತ್ತಲೂ ಗೊಳಿಸಿ ಸ್ತ್ರೀಯರ ವರ್ಣಚಿತ್ರವನ್ನು ಪ್ರಧಾನವಾಗಿ ಕಾಣುವಂತೆ ಚಿತ್ರಿಸುವುದು, ಮತ್ತು ನದಿಗಳು ಆಕಾಶದ, ಹೊಲಗದ್ದೆಗಳ ಮತ್ತು ಮೇಘ ಮಂಡಲಗಳನ್ನು ತನ್ನ ಚಿತ್ರಗಳಲ್ಲಿ ಬಳಸಿಕೊಂಡು ಚಿತ್ರಗಳಲ್ಲಿ ಒಂದೇ ಕಡೆಯಿಂದ ಬೆಳಕಿನ ಪರಿಣಾಮವನ್ನು ಕಾಣುವಂತೆ ಚಿತ್ರಿಸುವ ಶೈಲಿ ಇವರದು ಇದೇ ಅಕಾಡೆಮಿಕ್ ಶೈಲಿಯಾಗಿದೆ.

ವರ್ಣಗಳಲ್ಲಿನ ಹೊಳಪು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ನೈಜತೆಗೆ ಹತ್ತಿರವಾದಂತೆ, ಚಿತ್ರಿಸುವ ಶೈಲಿಯನ್ನು ಕರಗತ ಮಾಡಿಕೊಂಡಿರುವುದು ಇವರ ಕಲಾಕೃತಿಗಳನ್ನು ಕೆಲವರು ೧೭ ನೇಯ ಶತಮಾನದ ಸುಪ್ರಸಿದ್ಧ ಚಿತ್ರಕಾರನಾದ ರೆಮ್ ಬ್ಯಾಂಟನಿಗೆ ಹೋಲಿಸುತ್ತಾರೆ.[೧೨]

೧೨. ಅ. ನ. ಕೃಷ್ಣರಾಯ : ಭಾರತೀಯ ಚಿತ್ರಕಲೆಯಲ್ಲಿ ರಾಜ ರವಿವರ್ಮನ ಸ್ಥಾನ, ಪುಟ – ೫೭



* ಇವರಿಬ್ಬರಲ್ಲಿಯು ಸೌಂದರ್ಯದ ಪ್ರೇಮ, ನದಿಗಳು ಆಕಾಶ ಪ್ರಕೃತಿಯ ಪ್ರಭಾವವನ್ನು ಕಾಣಬಹುದು.
* ರೆಮ್ ಬ್ರ್ಯಾಂಟನು ಬೈಬಲ್‌ನಿಂದಲೂ ಕಲಾಕೃತಿಗಳನ್ನು ಚಿತ್ರಿಸಿದ್ದು ರವಿವರ್ಮ, ಪುಣ್ಯಕಾವ್ಯಗಳಿಂದಲೂ ಪ್ರಭಾವಿತನಾಗಿ ಚಿತ್ರಗಳನ್ನು ಚಿತ್ರಿಸಿದ್ದನು.

ಉದಾ :- ರವಿವರ್ಮನ ಕಲಾಕೃತಿಗಳಲ್ಲಿ ಒಂದಾದ ಸಂಗೀತಗಾರರನ್ನು ಗಮನಿಸಬಹುದು.

ತೈಲವರ್ಣ, ಚಿತ್ರಣವನ್ನು ಕಲಿಯಲು ರವಿವರ್ಮನ ಹೋರಾಟವು ಸತ್ಯಾಂಶ ಮತ್ತು ಕಲ್ಪನೆಯ ದಂತಕಥೆಯಾಗಿದೆ, ತಂತ್ರವನ್ನು ಗಳಿಸಲು ಕಲಾವಿದನ ಹೋರಾಟ ಮಾತ್ರವಲ್ಲದೆ, ಶ್ರೇಷ್ಠ ಕಲೆಯನ್ನು ಜ್ಞಾನದ ಆಕಾರವನ್ನು ಗಳಿಸಲೂ ರವಿವರ್ಮ, ಸತತಪ್ರಯತ್ನವನ್ನು ಕಾಣಬಹುದು. ಭಾರತೀಯ ಪರಿಸರಕ್ಕೆ ಯುರೋಪಿಯನ್ ಮಾಧ್ಯಮಗಳನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆಯನ್ನು ಹೊಂದಿದ್ದ ರವಿವರ್ಮ ಹೊರಸತ್ತ ಶೈಲಿ ತಂತ್ರಗಳನ್ನು ತನ್ನ ಸ್ತ್ರೀ ಕಲಾಕೃತಿಗಳಲ್ಲಿ ಬಳಸಿಕೊಂಡು ಮರಾಠಿ, ಗುಜರಾತ್, ಮಹಾರಾಷ್ಟ್ರ, ಕೇರಳ, ತಮಿಳುನಾಡಿನ ವಸ್ತ್ರಗಳನ್ನು ತನ್ನ ಸ್ತ್ರೀ ಯಲ್ಲಿ ಅಳವಡಿಸಿ ಚಿತ್ರಿಸಿ ಜನ ಸಾಮಾನ್ಯರನ್ನು ಸೇರುವಂತಹ ಪ್ರದರ್ಶನ ಹಾಗೂ ಮೃದು ತನಗಳಿಂದ ಆದರ್ಶ ಕಲಾಕೃತಿಗಳನ್ನು ಅಕಾಡೆಮಿಕ್ ಶೈಲಿಯಲ್ಲಿ ಚಿತ್ರಿಸಿದನು. ಹೀಗೆ ಹಂತ ಹಂತವಾಗಿ ಸ್ತ್ರೀ ಭಾವಚಿತ್ರ ಸ್ತ್ರೀವ್ಯಕ್ತಿ ಚಿತ್ರಗಳನ್ನು ನೈಜವಾಗಿ ಚಿತ್ರಿಸುವದನ್ನು ಕರಗತಮಾಡಿಕೊಂಡನು ಹೆಚ್ಚಾಗಿ ಸೌಂದರ್ಯತೆಗೆ ಹಾಗೂ ಆಭರಣಗಳ ಹೊಳಪಿಗೆ, ವಸ್ತ್ರಗಳಲ್ಲಿ ರೇಷ್ಮೆವಿನ್ಯಾಸಕ್ಕೆ ಹೆಚ್ಚು ಗಮನ ಸೇಳೆಯುವಿಕೆ ಚಿತ್ರಿಸುವಂತಹ ಕೌಶಲ್ಯ ಇವರದಾಗಿತ್ತು. ಹೀಗೆ ಕಲಾಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ತನ್ನದೇ ಆದ ಶೈಲಿ ವೃದ್ಧಿಯಾಗ ತೊಡಗಿತ್ತು. ಹೀಗೆ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದರಿಂದ ಅಧ್ಯಯನದ ದೃಷ್ಟಿಯಿಂದ ಅನುಕೂಲ ವಾಯಿತ್ತೆನ್ನಬಹುದಾಗಿ.

* ಸ್ತ್ರೀಭಾವ ಚಿತ್ರಗಳು ವ್ಯಕ್ತಿಚಿತ್ರಗಳು
* ಸ್ತ್ರೀ ಸಂಯೋಜನ ಚಿತ್ರಗಳನ್ನು ಹೆಸರಿಸಬಹುದು.

ಪ್ರಮುಖವಾಗಿ ಸ್ತ್ರೀ ಕಲಾಕೃತಿಗಳನ್ನೊಳಗೊಂಡ ಅಧ್ಯಯನವಾದ್ದರಿಂದ ಸ್ತ್ರೀ ಭಾವಚಿತ್ರ ಹಾಗೂ ವ್ಯಕ್ತಿ ಚಿತ್ರ ಮತ್ತು ಸ್ತ್ರೀ ಸಂಯೋಜನ ಚಿತ್ರಗಳೆಂದು ಎರಡು ಭಾಗಗಳನ್ನು ಮಾಡಿಕೊಂಡು ಅದರೊಳಗಡೆಗಿರುವ ಮುಖ್ಯ ಅಂಶವನ್ನು ಪ್ರಸ್ತುತ ಅಧ್ಯಯನದಲ್ಲಿ ಹೇಳಲಾಗಿದೆ. ರವಿವರ್ಮನು ಸ್ತ್ರೀ ಭಾವಚಿತ್ರ ಹಾಗೂ ವ್ಯಕ್ತಿಚಿತ್ರಗಳಲ್ಲಿ ಸುಂದರವಾದ ವ್ಯಕ್ತಿತ್ವ ಮೈಕಟ್ಟನ್ನು ತೋರಿಸಿದ್ದು, ಹೆಚ್ಚು ಸ್ಥಳೀಯರ ಪ್ರಭಾವ ಎಂದೇ ಹೇಳಬೇಕು. ಸೌಂದರ್ಯವೆಂದರೆ ಹೆಣ್ಣು ಎಂಬಂಶವನ್ನು ಮನನ ಮಾಡಿಕೊಂಡಂತಿದ್ದ ಕಲಾವಿದ ಕ್ಯಾನ್‌ವಾಸ್ ಮತ್ತು ತೈಲವರ್ಣದ ಬಣ್ಣಗಳಲ್ಲಿ ಛಾಯಾಚಿತ್ರದಂತೆ ರೂಪಿಸುತ್ತಿದ್ದ ಹಾಗೆಯೇ ರಾಮಾಯಣ, ಮಹಾಭಾರತದಲ್ಲಿ ಬರುವಂತಹ ಅನೇಕ ಸ್ತ್ರೀಯರನ್ನು ಇಲ್ಲಿ ಚಿತ್ರಿಸಿದ್ದು, ನೇರವಾಗಿ ಹುಡುಗಿಯನ್ನು ಕುಂದಿರಿಸಿಕೊಂಡ ದೇವತೆಗಳ ರೂಪಲಂಕಾರ ಮಾಡಿ ನೋಡುಗರಿಗೆ

ಅಚ್ಚರಿವುಂಟುಮಾಡುತ್ತಿದ್ದ, ಇದೆಲ್ಲಾ ಪಾಶ್ಚಾತ್ಯರ ಪ್ರಭಾವ ಎನ್ನುವುದಕ್ಕೆ ಸಾಧ್ಯವಿಲ್ಲವೆನಿಸಿದರು. ಶೈಲಿಯೆಲ್ಲಾ ಅಲ್ಲಿಯದೇ, ಉತ್ತಮ ಕಲಾಕೃತಿಗಳನ್ನು ಗಮನಿಸಿದಾಗ ಹೆಣ್ಣುಮಕ್ಕಳ ಸೌಂದರ್ಯವನ್ನು ಕನ್ನಡಿಯಂತೆ ಬಿಂಬಿಸಿರುವುದೇ ಇವನ ಚಾಣಾಕ್ಷತನವೆನ್ನಬಹುದು.

❖❖❖❖

ಅಧ್ಯಾಯ - ಆರು

ರವಿವರ್ಮನ ಸ್ತ್ರೀ ಕಲಾಕೃತಿಗಳ ಪ್ರಮುಖ ವೈಶಿಷ್ಟತೆಗಳು

ಅಧ್ಯಾಯ - ಆರು

ರವಿವರ್ಮನ ಸ್ತ್ರೀ ಕಲಾಕೃತಿಗಳ ಪ್ರಮುಖ ವೈಶಿಷ್ಟತೆಗಳು

ಪ್ರತಿಯೊಂದು ಜೀವಿಯಲ್ಲೂ ಕಲೆ ಎಂಬುದು ಮೈಗೂಡಿರುತ್ತದೆ. ಆದನ್ನು ಬಳಸಿಕೊಳ್ಳುವುದು, ಬಿಡುವುದು ಅವರವರ ಜ್ಞಾನಕ್ಕೆ ಸಂಬಂಧಿಸಿದ್ದು, ಹಾಗೆಯೇ ಕಲೆಯಲ್ಲಿ ನಾನಾ ರೀತಿಯ ಕಲೆಗಳನ್ನು ಸೃಷ್ಟಿಮಾಡಿ, ಅದಕ್ಕೊಂದು ನಾಮಕರಣ ಮಾಡಿರುವ ಪ್ರಸ್ತುತ ದಿನಗಳಲ್ಲಿ ಇದು ಇಂತಹದ್ದೆ ಕಲೆ ಎಂದು ಹೇಳುವಂತಹ ಮಾಧ್ಯಮ ಹರಡಿರುವುದಂತೂ ನಿಜ, ಕ್ರಿ.ಪೂ.ದಿಂದ ಕ್ರಿ.ಶ.ದವರೆಗೆ ನಡೆದಂತಹ ಪ್ರಮುಖ ಘಟನೆಗಳನ್ನು ಶೋದಿಸಿದಾಗ ಸಿಗುವಂತಹ ವಸ್ತು ಸ್ಥಿತಿಯ ಪರಿಣಾಮವನ್ನು ಗಂಭೀರವಾಗಿ ಆಲೋಚನೆಯ ಮೂಲಕ ಪ್ರೇರಕ ಶಕ್ತಿಯನ್ನು ತುಂಬ ಬಲ್ಲಂತಹ ಅನೇಕ ಕಲೆಯ ಪಂಗಡಗಳು ಸಿಗುವುದನ್ನು ಇಂದು ನೋಡುತ್ತಿದ್ದೇವೆ.

ಆದಿಮಾನವನು ತನ್ನ ಜೀವಿತಾವಧಿಯಲ್ಲಿ ಜೀವನ ಮಾಡಲು ಕಂಡುಕೊಂಡ ಅನೇಕ ಫಲಿತ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿರುವುದು ಪ್ರಸ್ತುತ ಸಂಶೋಧಕರಿಗೆ ಮಾರ್ಗದರ್ಶನ ವಿದ್ದಂತೆ ಹಾಗೆಯೇ ಅವನು ಹಂತ ಹಂತವಾಗಿ ಪ್ರಬಲಗೊಂಡು ಜೀವಿಗಳಲ್ಲೆ ಬಲಿಷ್ಟವಾಗಿ ಕಾಲಿಡುತ್ತಿರುವ ಪ್ರಪಂಚವನ್ನು ಹುಟ್ಟುಹಾಕುವಲ್ಲಿ ಯಶಸ್ಸನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಮಾನವ ಜೀವಿಯ ಕಲೆಯು ಒಂದು ಪ್ರಮುಖ. ಪ್ರಾಣಿ, ಪಕ್ಷಿಗಳು ತನ್ನ ರಕ್ಷಣೆಯ ಗೂಡನ್ನು ಕಟ್ಟಲು. ಬೇಕಾದ ಸಾಮಾಗ್ರಿಗಳನ್ನು ಅಲೆಮಾರಿಯ ವೇಷದಾರಿಯಲ್ಲಿ ಸಾಗಿ, ಉಪಯುಕ್ತ ವಸ್ತುಗಳನ್ನು ತಂದು, ಸಂರಕ್ಷಣೆಗೆ ಮುಂದಾಗಿ

ಜೀವನ ಮಾಡುತ್ತಿರುವುದನ್ನು ಕಾಣುವುದು. ಹಾಗೆಯೇ ಒಂದು ಪಕ್ಷಿ ಗೂಡನ್ನು ಕಟ್ಟಲು ಒಂದೊಂದೆ ಗರಿಕೆ (ಹುಲ್ಲು)ಯನ್ನು ತಂದು ಸುಮಾರು ವರ್ಷಗಳು ಪಡುವ ಕಷ್ಟದ ಪ್ರತೀಕ ಕೊನೆಗೆ ಒಂದು ಹನಿ ನೀರು ಒಳಗಡೆ ಹೋಗಲು ಸಾಧ್ಯವಾಗುವುದಿಲ್ಲ. ಆ ರೀತಿ ಗೂಡನ್ನ ಕಟ್ಟುತ್ತದೆ. ಅದು ಒಂದು ಕಲೆ ಹೌದಲ್ಲವೆ?

ಮಾನವನು ಪ್ರಾರಂಭದ ದಿನಗಳಲ್ಲಿ ಪರಿಜ್ಞಾನವಿಲ್ಲದೆ, ಅರಿವಿಲದೇ ತನ್ನ ಜೀವನದಲ್ಲಿ ಉಪಯುಕ್ತ ಅಂಶಗಳನ್ನು ಈ ನಾಡಿಗೆ ದಾರಿಯ ರೂಪದಲ್ಲಿ ಪ್ರದರ್ಶಿಸಿದ್ದಾನೆ. ಹಾಗೆಯೇ ಇಂದು ಹಲವು ದಾರಿಗಳಿದ್ದು ಅವುಗಳಲ್ಲಿ ಕಲೆಯು ಮುಖ್ಯ ಸ್ವರೂಪದ್ದಾಗಿದೆ. ಮನುಷ್ಯ ಬೆಲೆಯಲು ಪ್ರೇರಕ ಶಕ್ತಿಯಾಗಿರುವ ಈ ಅಂಶವು ನಾನಾ ರೀತಿಯ ಅಂಶಗಳನ್ನು ಮೈಗೂಡಿಸಿಕೊಳ್ಳುತ್ತಿರುವ, ಹಾಗೆಯೇ ತನ್ನ ತನವನ್ನು ಗಟ್ಟಿಪಡಿಸಿಕೊಳ್ಳುತ್ತಿರುವ ಪ್ರಸ್ತುತ ದಿನಗಳಗಳಲ್ಲಿ ವಿವಿಧ ರೀತಿಯ ಕಲೆಯನ್ನು ನೋಡಬಹುದು.

ವಾತ್ಸಾಯನ ರೂಪಿಸಿರುವ ಕಲೆಗಳಲ್ಲಿ ಅರವತ್ನಾಲ್ಕು ಕಲೆಗಳಿದ್ದು, ಅದರಲ್ಲಿ ಲಲಿತಕಲೆಗಳು ಮುಖ್ಯವಾದವುಗಳಾಗಿವೆ. ಇದರಲ್ಲಿ ಅಡಗಿರುವ ಚಿತ್ರ ಶಿಲ್ಪ ವಾಸ್ತುಶಿಲ್ಪ ಸಾಹಿತ್ಯ, ನೃತ್ಯ ನಾಟಕ ಮತ್ತು ಸಂಗೀತವು ಮಾನವನಲ್ಲಿ ಅಡಗಿರುವ ಪ್ರಗತಿ ಶೀಲ ಜ್ಞಾನವನ್ನು ಅಧ್ಯಯನ ಮಾಡುವ ದೃಷ್ಟಿಯಿಂದಲೂ ಫಲಶೃತಿಯ ಬಲಗಳನ್ನು ಪ್ರದರ್ಶಿಸಲೂ, ಜ್ಞಾನವನ್ನು ವೃದ್ಧಿಗೊಳಿಸಿಕೊಳ್ಳಲೂ, ತನ್ನನ್ನು ತಾನು ಪ್ರಪಂಚಕ್ಕೆ ಪರಿಚಿತರಾಗಲೂ ಉತ್ತಮ ಅವಕಾಶಗಳಿರುವುದರಿಂದ ಪ್ರಬಲ ಪೈಪೋಟಿಯ ನಡುವೆ ಪ್ರಸ್ತುತ ದಿನಗಳಲ್ಲಿ ಅವರ ನೆಚ್ಚಿನ ಕಲೆಯನ್ನು ಪ್ರೀತಿಸಿ, ಆರಾಧಿಸುವವರನ್ನು ಕಾಣಬಹುದಾಗಿದೆ.

ಲಲಿತಕಲೆಗಳಲ್ಲೊಂದಾದ ಚಿತ್ರಕಲೆ ಮತ್ತು ಶಿಲ್ಪಕಲೆಗೆ ಆದಿಮಾನವನ ಇತಿಹಾಸವಿದೆ. ಪ್ರಾರಂಭದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳನ್ನು ರಚನೆಮಾಡಲು ಪ್ರಾರಂಭಿಸಿ, ಬೆಟ್ಟ, ಗುಡ್ಡ, ಕಾಡು, ನಾಡು, ಗವಿಗಳಲ್ಲಿ ವಾಸಿಸುವ ಸ್ಥಿತಿಯಲ್ಲಿ ತಮ್ಮ ನಿತ್ಯದ ಜೀವನ ಹೇಗಿತ್ತು ಎಂಬುದನ್ನು ತಿಳಿಸಲು ಪ್ರಯತ್ನಿಸಿ ಯಶಸ್ಸು ಕಂಡಿದ್ದಾನೆ. ಅಂದಿನದು ಮುಳ್ಳುದಾರಿ, ನಿಧಾನ ಗತಿಯಲ್ಲಿ ಪ್ರವೇಶಮಾಡಿ, ಸ್ವಲ್ಪ ಎಡವಿದರೂ ಬೀಳುವುದು ಖಾಯಂ, ಆದರೆ ಮೈಗೆ ಬಟ್ಟೆಯಲ್ಲ, ಕಾಲಿಗೆ ಚಪ್ಪಲಿ ಇಲ್ಲ ಇವೆರಡೂ ಇಲ್ಲೆಂದರೆ ಅವನೇಗಿದ್ದ ಎಂಬುದನ್ನು ಊಹಿಸಿಕೊಂಡರೆ ಸಾಕು.

ನಮ್ಮನ್ನ ಅಲ್ಲಿಗೆ ಕರೆದೊಯ್ಯುವ ಸ್ಥಿತಿಯಲ್ಲಿ ನಾವಿದ್ದೇವೆ. ಹಾಗೆಯೇ ಚಿತ್ರಕಲೆ ರಚನೆಮಾಡಲು ಬೇಕಾಗಿರುವುದು ಪೆನ್ಸಿಲ್ ಮತ್ತು ಬಣ್ಣಗಳು, ಇಲ್ಲವೆ ಉಳಿ, ಮಳೆ (ಗೋಡೆಗೆ ಬಡಿಯುವ) ರಚನೆ ಮಾಡಲು ಸಿಗುತ್ತಿದ್ದವಾ! ಎಂಬುದು ಆಶ್ಚರ್ಯ ಬೆತ್ತಲೆ ಮಾನವನಾದ್ದರಿಂದ ಜಗತ್ತೇ ಕತ್ತಲೆಯಾಗಿರುವುದಂತೂ ಸ್ಪಷ್ಟ. ಅದೇ ರೀತಿ ಇಲ್ಲಿಯೂ ಕಲ್ಲುಗಳಿಂದಲೇ ಬೆಂಕಿಯನ್ನುರಿಸಿದ್ದು, ಹಣ್ಣು, ಹಂಪಲು, ಗೆಡ್ಡೆ, ಗೆಣಸುಗಳನ್ನೆ ಆಹಾರವನ್ನಾಗಿಸಿ ಕೊಂಡು ಜೀವನದಲ್ಲಿ ಪ್ರಬುದ್ಧತೆಯನ್ನು ಕಂಡುಕೊಡನು. ಕಾಲ ಕಳೆದಂತೆ ತಲೆಗೊಂದಿಷ್ಟು ಜ್ಞಾನ ಬಂದು, ತಮ್ಮ ವೃತ್ತಿ ಬದುಕಿನ ಪರಿಚಯವನ್ನು ಕಲ್ಲು-



ಬಂಡೆಗಳ ಮೇಲೆ ಕಲ್ಲಿನಿಂದಲೇ ಕೆತ್ತಲು ಪ್ರಾರಂಭಿಸಿದ, ಅದು ಅವನಿಗೆ ಹೊಸದು, ದಿನ ಕಳೆದಂತೆ ಬದಲಾದ ಮಾನವ ವಿವಿಧ ರೀತಿಯ ಹಣ್ಣುಗಳನ್ನು ಶೋಧಿಸಿದ, ಅವುಗಳಲ್ಲಿ, ಅದರ ಎಲೆಯಲ್ಲಿ ರಸದ ರೂಪದಲ್ಲಿ ಕಂಡುಬರುವ ಬಣ್ಣಗಳನ್ನು ಉತ್ಪಾದಿಸಿರುವುದರ ಜೊತೆಗೆ ಚಿತ್ರಗಳನ್ನು ರಚನೆಮಾಡಲು ಪ್ರಾರಂಭಿಸಿದ ಅಂದಿನ ಚಿತ್ರಗಳು ಇಂದಿನ ಇತಿಹಾಸ ತಜ್ಞರಿಗೆ ವರವಾಗಿ ಶೋದಿಸಿಡುವಂತಹ ಅಂಶಗಳು ಪ್ರಸ್ತುತ ದಿನಗಳಲ್ಲಿ ಅವಶ್ಯಕವಾಗಿ ಬೇಕಾಗಿದೆ. ಹಾಗೆಯೇ ಚಿತ್ರಕಲೆಯು ತನ್ನ ರೂಪವನ್ನು ಬಲಿಷ್ಟಗೊಳಿಸಿಕೊಂಡಿರುವುದು ಇಂತಹ ಪ್ರಮುಖ ಅಂಶಗಳ ಆಧಾರದ ಮೇಲೆಯೇ ಕಾಲ ಬದಲಾದಂತೆ ಮಾನವ ಅಕ್ಷರಗಳನ್ನು ಕಲಿತ, ಚಿತ್ರಗಳ ಸಂಯೋಜನೆಯನ್ನು ಅರಿತ, ರಾಜ-ಮಹಾರಾಜರ ಆಡಳಿತದ ವೈಭವವನ್ನು ಆರಾಧಿಸುವುದರ ಜೊತಗೆ ಶಾಸನಗಳು, ಹಸ್ತಪ್ರತಿಗಳಂತಹ ಮುಖ್ಯ ಅಂಶಗಳನ್ನು ಕ್ರೋಢೀಕರಿಸಿದ, ದೇಶ ಹಾಗೂ ರಾಜ್ಯದ ಆಡಳಿತವನ್ನು ನಡೆಸುತ್ತಿದ್ದ ಹಿಂದಿನ ರಾಜರು ಮಹಾರಾಜರು ಕಲೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡುತ್ತಿದ್ದರು ಎನ್ನುವುದಕ್ಕೆ ಶತಮಾನಗಳನ್ನು ಕಳೆದರೂ ಪ್ರಸ್ತುತ ದಿನಗಳಲ್ಲಿ ರಚಿತವಾಗಿರುವಂತೆ ಬಿಂಬಿಸುವ ದೇವಾಲಯ, ಕೋಟೆಗಳಲ್ಲಿರುವ ಚಿತ್ರ ಶಿಲ್ಪಗಳೇ ಸಾಕ್ಷಿ.

ಚಿತ್ರ ಮತ್ತು ಶಿಲ್ಪ ಒಂದೇ ನಾಣ್ಯದ ಎರಡು ಮುಖಗಳು ಒಂದನ್ನೊಂದು ಎಂದೂ ಬಿಟ್ಟಿಲ್ಲ, ಬಿಡೋದು ಸಾಧ್ಯವಿಲ್ಲ. ಏಕೆಂದರೆ ಅಂತಹ ಸಂಬಂಧವನ್ನು ಹೊಂದಿದೆ. ಕೆಲ ಕಲಾವಿದರು ಚಿತ್ರವನ್ನು ಆರಾಧಿಸಿದರೆ, ಇನ್ನೂ ಕೆಲವರು ಶಿಲ್ಪವನ್ನು ಆರಾಧಿಸುವರು ಈ ಎರಡು ಮೈಗೂಡಿಸಿಕೊಂಡಾಗ ಅದರ ಅನುಭವವೇ ಬೇರೆ, ಅದರಂತೆ ಚಿತ್ರ, ಶಿಲ್ಪ ರಚನೆ ಮಾಡುವ ಮುನ್ನ "ರೇಖೆ" ತನ್ನ ಪ್ರಾಮುಖ್ಯತೆಯನ್ನ ಪ್ರದರ್ಶಿಸುತ್ತದೆ. ಇದು ಈ ಎರಡು ಮುಖ್ಯ ಕಲೆಗಳ ಪ್ರೇರಕ ಶಕ್ತಿ, ಹೀಗೆ ಹುಟ್ಟಿಕೊಂಡ ಕಲೆಯಲ್ಲಿ ಚಿತ್ರಕಲೆ ರಾಷ್ಟ್ರ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆಯುತ್ತಿರುವುದು ಉತ್ತಮ ಬೆಳವಣಿಗೆ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹದಿನೆಂಟನೆ ಶತಮಾನದಲ್ಲಿಯೇ ಚಿತ್ರಕಲೆಗೆ ಆರ್ಥಿಕ ಬೆಂಬಲ ಬಂತು. ಹಂತ ಹಂತವಾಗಿ, ಚಿತ್ರಕಲಾ ಗ್ಯಾಲರಿಗಳು, ಶಾಲಾ ಕಾಲೇಜುಗಳು ಪ್ರಾರಂಭವಾಗಿರುವ ಅಂಶವನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. ಅನೇಕ ಪಾಶ್ಚಾತ್ಯ ಕಲಾವಿದರು. ವಿವಿಧ ಶೈಲಿಯ ಬಣ್ಣಗಳನ್ನು ತಯಾರಿಸಲು ವಿಜ್ಞಾನಿಗಳಿಗೆ ಬೆಂಬಲವಾಗಿ ನಿಂತು, ವಿಶಿಷ್ಟ ರೀತಿಯ ಕ್ಯಾನ್ವಾಸ್ ತಯಾರಿಕೆ, ಸಜೀವ ವಸ್ತುಗಳಿಗೆ ಜೀವ ತುಂಬುವುದು ಹೀಗೆ ವಿಶಿಷ್ಟಾದ್ವೈ ೖತ ಕೆಲಸಗಳನ್ನು ಮಾಡಿ ಯಶಸ್ಸನ್ನು ಕಂಡಿರುವ ಪಾಶ್ಚಾತ್ಯ ಕಲಾವಿದರು. ಭಾರತದೇಶಕ್ಕೂ ಬಂದು ಕಲೆಯನ್ನ ಹುಟ್ಟುಹಾಕಿದರೂ ಎಂಬ ಅಂಶವು ಇತಿಹಾಸದಿಂದ ತಿಳಿಯಬಹುದಾಗಿದೆ.

ಭಾರತದ ಅನೇಕ ಕಲಾವಿದರು. ೧೮ ಮತ್ತು ೧೯ನೇ ಶತಮಾನದಲ್ಲಿ ಕಲೆಯನ್ನು ವೃತ್ತಿಯಾಗಿ ಬಳಸಿಕೊಂಡು ಹೆಸರಾದವರಲ್ಲೊಬ್ಬರು. ಕೇರಳದ ರಾಜ ರವಿವರ್ಮ ಹೆಸರೇ ಸೂಚಿಸುವಂತೆ ರಾಜರ ವಂಶದಲ್ಲಿ ಬೆಳೆದ ಇವನು ಹುಟ್ಟುತ್ತಲೇ ಚಿತ್ರಕಲೆಯ (ಪೆನ್ಸಿಲ್) ಆಭರಣಗಳನ್ನು ಇಣುಕಿ ನೋಡಿ


ನಕ್ಕವನು, ಮೂರ್‍ನಾಲ್ಕು ವರ್ಷಗಳಲ್ಲಿಯೇ ಪೆನ್ಸಿಲ್‌ನ್ನು ಬಾಚಿಕೊಂಡವನು. ಹನ್ನೆರಡನೇ ವಯಸ್ಸಿನಲ್ಲೇ ಕಲೆಯಲ್ಲಿ ಗುರುತಿಸಿಕೊಂಡವನು, ಹೀಗೆ ಹಂತ ಹಂತವಾಗಿ ಚಿತ್ರಕಲೆಯಲ್ಲಿ ಬೆಳೆಯುತ್ತಾ ಸಾಧನೆಗಯ್ಯುತ್ತಾ ಹೋಗುವವನು. ಅದು ಪ್ರತಿನಿತ್ಯದ ಶ್ರಮದ ಪ್ರತೀಕವೆಂದರೆ ತಪ್ಪಾಗಲಾರದು. ಇವನ ಕಾಲದಲ್ಲಿ ಅಷ್ಟಾಗಿ ಗುರುತಿಸಿಕೊಂಡಿರದ ಭಾರತೀಯ ಕಲೆಯನ್ನು ತಳ್ಳಿ, ಯುರೋಪಿಯನ್ ಕಲಾವಿದರ ಶೈಲಿಗೆ ಮಾರುಹೋದ ರವಿವರ್ಮನು ಅನೇಕ ಭಾವಚಿತ್ರ, ವ್ಯಕ್ತಿಚಿತ್ರ ಮತ್ತು ಸಂಯೋಜನಾ ಚಿತ್ರಗಳನ್ನು ರಚನೆಮಾಡಿದ್ದಾನೆ. ಅಷ್ಟೆ ಯಶಸ್ಸುಗಳಿಸಿದ್ದಾನೆ.

ಭಾರತೀಯ ಹಿಂದೂ-ಪುರಾಣಗಳಲ್ಲಿ ಕಂಡು ಬರುವ ದೇವ ದೇವತೆಗಳ ಪ್ರತಿರೂಪವನ್ನು ಸೆರೆಹಿಡಿಯುವಲ್ಲಿ ಇವರ ಪಾತ್ರ ಪ್ರಮುಖದ್ದು, ರವಿವರ್ಮನು ಹೆಚ್ಚು ಸ್ತ್ರೀ ಚಿತ್ರಗಳನ್ನು ರಚನೆಮಾಡಿದ್ದು, ಅವುಗಳಲ್ಲಿ ಲಕ್ಷ್ಮೀ ಸರಸ್ವತಿ, ದ್ರೌಪದಿ, ಮೇನಕೆ, ರಾಧ. ಹೀಗೆ ಸಾಲು ಸಾಲಾಗಿ ಮುಂದುವರೆದಿರುವುದನ್ನು ಕಾಣಬಹುದು. ಅನೇಕ ಹಿರಿಯ ಇತಿಹಾಸ ತಜ್ಞರು, ವಿಮರ್ಶಕರು, ಕಲಾವಿಮರ್ಶಕರು ರವಿವರ್ಮನ ಕಲಾಕೃತಿಗಳ ಕುರಿತು ತಮ್ಮದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಅದರಲ್ಲಿ ಕೆಲವರು ಉತ್ತಮವಾಗಿವೆ ಎಂದಾದರೆ ಇನ್ನು ಕೆಲವರು ವಿರೋಧಿಸಿರುವುದುಂಟು, ವಿರೋಧಕ್ಕೆ ಕಾರಣಗಳು ಸಾಕಷ್ಟು ಇದ್ದು, ಅದರಲ್ಲಿ ಮುಖ್ಯವಾದದ್ದು, ಪಾಶ್ಚಾತ್ಯ ಕಲೆಗೆ ಮಾರುಹೋಗಿರುವುದರ ಜೊತೆಗೆ ಹಿಂದೂ ದೇವ ದೇವತೆಗಳನ್ನು ರಚಿಸುವ ಸಂದರ್ಭದಲ್ಲಿ ವೇಶ್ಯರನ್ನು ಕರೆದುತಂದು ಆಭರಣಗಳನ್ನು ಅಲಂಕರಿಸಿ ಚಿತ್ರಿಸಿರುವುದು. ಅವು ಪ್ರಸ್ತುತ ಹಿಂದೂ ಸಮಾಜದ ಬಂಧುಗಳ ಮನೆಯಲ್ಲಿರುವುದು ಸರ್ವೇಸಾಮಾನ್ಯ ಆದರೂ ಚಿತ್ರರಚನೆ ಮಾಡುವುದು ಸುಲಭದ ಮಾತಲ್ಲ, ಅಂತಹ ಕೆಲಸಕ್ಕೆ ಸ್ಫೂರ್ತಿ ಸಿಕ್ಕಿರುವುದೇ ದೊಡ್ಡ ಅಂಶ. ಆ ದಿನಗಳಲ್ಲಿ ಬಣ್ಣಗಳು, ಕ್ಯಾನ್ವಾಸ್‌ಗಳು ಭಾರತದಲ್ಲಿ ಸಿಗುತ್ತಿರಲಿಲ್ಲ. ಅಂತಹ ಸ್ಥಿತಿಯಲ್ಲಿ ಪಾಶ್ಚಾತ್ಯ ದೇಶಗಳಿಗೆ ಪ್ರವೇಶಿಸಿ, ಅಲ್ಲಿನ ಹಿರಿಯ-ಕಿರಿಯ ಕಲಾವಿದರೊಂದಿಗೆ ಸಮಾಲೋಚಿಸಿ, ಕಲಾ ಕೃತಿಗಳನ್ನು ವೀಕ್ಷಿಸುವುದರ ಜೊತೆಗೆ ಬಣ್ಣಗಳನ್ನು ತರುತ್ತಿದ್ದರು.

ರವಿವರ್ಮ ಪಾಶ್ಚಾತ್ಯರಿಗೆ ಮಾರು ಹೋಗಿದ್ದು, ಬಣ್ಣಕ್ಕೆ ಮಾತ್ರ, ಚಿತ್ರದ ಕಥೆಗಳೆಲ್ಲಾ ಭಾರತೀಯ ಸಾಂಸ್ಕೃತಿಕತೆಯನ್ನು ಕಟ್ಟಿಕೊಟ್ಟಿವೆ. ರಾಮಾಯಣ ಮತ್ತು ಮಹಾಭಾರತದ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಸುಮಾರು ವರ್ಷಗಳ ನಿರಂತರ ಅಭ್ಯಾಸದಿಂದ ಇದು ಸಾಧ್ಯವಾಗಿದೆ.

ಸ್ತ್ರೀ ಚಿತ್ರ ಕಲಾಕೃತಿಗಳ ವೈಶಿಷ್ಟತೆಗಳು

ರವಿವರ್ಮನ ಕಲಾಕೃತಿಗಳು ೧೮೭೦ರ ನಂತರ ಪ್ರಾರಂಭವಾಗಿ ಈವತ್ತಿಗೂ ಭಾರತೀಯ ಕಲಾವಿದರು ರವಿವರ್ಮನಷ್ಟು ಮದ್ಯಮ ವರ್ಗದ ಜನರ ಮನಸ್ಸನ್ನು ಗೆದ್ದಿರುವಷ್ಟು ಮತ್ತಾವ ಕಲಾವಿದನೂ ಇಲ್ಲವೆಂದರೆ ತಪ್ಪಾಗಲಾರದು ರವಿವರ್ಮನು ಯಾವುದೇ ಕಲಾಶಾಲೆಯಲ್ಲಿ ಕ್ರಮಬದ್ಧವಾಗಿ ಕಲೆಯನ್ನು ಕಲಿತವನಲ್ಲ ಆದರೆ ಅವನಿಗೆ ಕೆಲವು ಚಿತ್ರಗಳು ತುಂಬಾ ಪ್ರಭಾವ ಬೀರಿದವು. ಜೊತೆಗೆ ಭಾರತೀಯ ಸಂಸ್ಕೃತಿ,



ನಾಡು, ಸಿರಿ, ಜಲ ಪ್ರಕೃತಿಯ ಸೌಂದರ್ಯ ತುಂಬಾ ಆಕರ್ಷಣೆಯಾಯಿತು. ತಂಜಾವೂರಿನ ಚಿತ್ರಗಳು ಹೆಚ್ಚು ಪ್ರಭಾವ ಬೀರಿದವು. ಇವನ ಚಿತ್ರಗಳಲ್ಲಿ ಪೌರಾಣಿಕ ಸನ್ನಿವೇಶವುಳ್ಳಂತಹವುಗಳನ್ನು ನೋಡಬಹುದು. ರವಿವರ್ಮನು ಎಂದೂ ಬ್ರಿಟೀಷರಿಗಾಗಿ ಚಿತ್ರವನ್ನು ರಚಿಸಿಲ್ಲ ಬದಲಿಗೆ ಭಾರತೀಯರಿಗಾಗಿ, ಇಲ್ಲಿನ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ ಪರವಾಗಿ, ಹಿಂದೂ ಧರ್ಮದ ಚಿತ್ರಗಳ ರಚನೆ ವಿಶೇಷವಾಗಿ ಈ ಚಿತ್ರಗಳನ್ನು ಆಧುನಿಕತೆಯಿಂದ ಚಿತ್ರಿಸಿದ್ದಾಗಿದೆ.

ರವಿವರ್ಮನು ಭಾರತದ ಪೌರಾಣಿಕ, ದೇವ-ದೇವತೆಗಳು, ಭಾವಚಿತ್ರಗಳು, ವ್ಯಕ್ತಿಚಿತ್ರಗಳಲ್ಲಿ ಪ್ರಮುಖವಾಗಿ, ದಮಯಂತಿ, ಸೀತೆ, ಸಂಗೀತಗಾರರು, ಹಣ್ಣುಮಾರುತ್ತಿರುವ ಹೆಣ್ಣು, ಸುಂದರವಾದ ಹುಡುಗಿ, ಬಾಂಬೆಹುಡುಗಿ, ಕೇರಳದ ಹುಡುಗಿ, ಲಕ್ಷ್ಮಿ, ಸರಸ್ವತಿ, ಮೇನಕೆ ಇನ್ನು ಮುಂತಾದ ವಿಶೇಷವಾದ ಸ್ತ್ರೀಯರ ಕಲಾಕೃತಿಗಳನ್ನು ರಚಿಸಿದ್ದಾನೆ. ರವಿವರ್ಮನ ಚಿತ್ರಗಳು ಮಾಧ್ಯಮ ವರ್ಗದ ಮನೆಗಳಲ್ಲಿ ಹೆಚ್ಚು ಆಲಂಕರಿಸಿದ್ದುದರಿಂದ ಇವನ ಕಲೆಯ ಪರಿಚಯ ಎಲ್ಲಾರಿಗಾಯಿತು.

ಪ್ರಸ್ತುತ ಅಧ್ಯಾಯವು ಸ್ತ್ರೀ ಚಿತ್ರ ಕಲಾಕೃತಿಗಳ ಕುರಿತು ಎಂದಾಗ ಅವುಗಳದ್ದೇ ವಿಶೇಷವಾಗಿ ಅಧ್ಯಯನ ಮಾಡುವುದರಿಂದ ದೇವತೆಗಳ ಕೇಶಾಲಂಕಾರ, ಉಡುಪುಗಳು, ಆಭರಣ ಮುಂತಾದವುಗಳನ್ನು ಸಮಕಾಲೀನವಾಗಿ ಚಿತ್ರಿಸಿದ್ದು, ವಿಶೇಷವಾಗಿ ರವಿವರ್ಮನು ಸ್ತ್ರೀಚಿತ್ರ ರಚನೆಮಾಡುವುದು ಆದಾಗ್ಯೂ ರೂಪದರ್ಶಿಗಳನ್ನು ಕರೆದುಕೊಂಡು ಬಂದು ದೇವತೆಗಳ ಅಲಂಕಾರ ಮಾಡಿ, ಕಲಾಕೃತಿಗೆ ಜೀವಕೊಡುವುದು, ಕೊಟ್ಟಿರುವುದು ಜೊತೆಗೆ ತನ್ನ ಕಲ್ಪನಾಶೀಲ ಸನ್ನಿವೇಶಗಳು, ಪ್ರಕೃತಿ ಚಿತ್ರಗಳು ಕೆಲವೇ ಆದರೂ ಸ್ಪಷ್ಟವಾಗಿ ಅಷ್ಟೆ ಸುಂದರವಾಗಿ ಕಾಣಿಸಿಕೊಂಡಿವೆ.


ರಾಮಾಯಣ-ಮಹಾಭಾರತ ಇತ್ಯಾದಿ ಪುರಾಣ ಪುಣ್ಯಕಥೆಗಳೆಂದರೆ ಈ ಕಲಾವಿದರಿಗೆ ಅಚ್ಚುಮೆಚ್ಚು. ಜೊತೆಗೆ ಕಥಕ್ಕಳಿ ಕಾರ್ಯಕ್ರಮವಿದ್ದಲೆಲ್ಲಾ ತಪ್ಪದೇ ಹಾಜಾರಿ ಹಾಕಿ ಪ್ರದರ್ಶನದಲ್ಲಿ ದೇವರುಗಳು, ದೇವತೆಯರು ಹಾಗೂ ಪೌರಾಣಿಕ ವ್ಯಕ್ತಿಗಳು ಎಂತಹ ಉಡುಪುಗಳನ್ನು ಧರಿಸುವರು ಎಂಬಂಶವನ್ನು ತುಂಬಾ ಸೂಕ್ಷ್ಮವಾಗಿ ಆಲಿಸುತ್ತಿದ್ದ, ಪ್ರದರ್ಶನವನ್ನೂ ನೋಡಿ ಮನೆಗೆ ಬಂದಂತಹ ಸಂದರ್ಭದಲ್ಲಿಯೇ ಇದ್ದಿಲುಗಳನ್ನು ತೆಗೆದುಕೊಂಡು ಗೀಚುತ್ತಿದ್ದುದು. ಅವನ ಕಲಾಪ್ರತಿಭೆಗೆ ಕೈಗನ್ನಡಿಯೆನ್ನಬಹುದು. ಪ್ರಮುಖವಾಗಿ ಸ್ತ್ರೀಯರ ಆಕರ್ಷಣೆ ಇವನಿಗಾಗಿತ್ತು.

ಸ್ತ್ರೀಯ ದುಂಡು ಮೈಕಟ್ಟು, ಆಭರಣ, ವಸ್ತ್ರ, ನಡೆ-ನುಡಿಯ ಸೌಂದರ್ಯವನ್ನು ಯಥಾವತ್ತಾಗಿ ರೂಪುಗೊಳಿಸುವುದನ್ನು ಕಲಿತರು ರವಿವರ್ಮನು ಯುರೋಪಿಯನ್ ಕಲಾವಿದರ ಚಿತ್ರಗಳನ್ನು ನೋಡಿ, ಅವರನ್ನೆ ಅನುಸರಿಸುವಂತೆ ಪಾಶ್ಚಾತ್ಯ ಕಲಾಕೃತಿಗಳು ಇವನ ಮನಸ್ಸಿಗೆ ಗಾಢವಾದ ಪರಿಣಾಮವುಂಟಾಗಿ ಅವರ ಪ್ರಭಾವ ಹೆಚ್ಚಾಯಿತಂತೆ ಹಾಗೆಯೇ ರವಿವರ್ಮನು ಸ್ತ್ರೀ ಕಲಾಕೃತಿಗಳ ರಾಜ ಎಂದರೆ ತಪ್ಪಾಗಲಿಕ್ಕಿಲ್ಲ.

ರವಿವರ್ಮನು ರಚಿಸಿರುವ ಕಲಾ ಕೃತಿಗಳಲ್ಲಿನ ಸ್ತ್ರೀ ಚಿತ್ರಗಳು

* ಅಶೋಕ ವನದಲ್ಲಿ ಸ್ತ್ರೀ
* ಸೈರಂಧ್ರಿ
* ದಮಯಂತಿ
* ಶಕುಂತಲೆ
* ಲಕ್ಷ್ಮಿ
* ಸರಸ್ವತಿ
* ಸೀತಾದೇವಿ
* ಸೀತಾವನವಾಸ
* ಶಕುಂತಲ ಪ್ರಣಯ ಪತ್ರ
* ಮೋಹಿನಿ
* ಹೂ, ಕೀಳುತ್ತಿರುವ ಮಹಿಳೆ
* ಬಿಕ್ಷೆ ನೀಡುತ್ತಿರುವ ಮಹಿಳೆ ಮತ್ತು ದ್ರೌಪದಿಯ ಚಿತ್ರ
* ಅಲೆಮಾರಿಗಳು
* ಹಂಸ ದಮಯಂತಿ
* ಲಂಬಾಣಿ ಸ್ತ್ರೀ ಚಿತ್ರ
* ಊರ್ವಶಿ
* ಮಾಲತಿ
* ವೀಣೆಯನ್ನು ನುಡಿಸುತ್ತಿರುವ ಕಾದಂಬರಿ ಚಿತ್ರ
* ಹಾಲುಮಾರುವ ಸ್ತ್ರೀ
* ವೀಣೆ ಮತ್ತು ಸ್ತ್ರೀ
* ರಾಮಾಯಣದ ಕೆಲವು ದೃಶ್ಯ
* ಭಾರತಮಾತೆ
* ಸಂಗೀತಗಾರರು
* ಮಹಿಳೆ ಹಣ್ಣು ಮಾರುತ್ತಿರುವುದು
* ದೇವತೆಗಳು
* ಮೇನಕೆ
* ಹಸೆಮಣೆಯತ್ತ ಹೊರಟಿರುವ ಮದುಮಗಳು
* ಪಾರಾಸಿ ಸುಂದರಿ
* ಭಾರತದ ಕುರುವನಾರ್
* ರಿಮೆಂಬರಿಂಗ್ ಎ. ಹಿಸ್ಟರಿ
* ಮರಾಠಿ ಮಹಿಳೆ
* ಉಷಾಳ ಕನಸು
* ಕೈದಿಸ್ತ್ರೀ
* ಅಹಲ್ಯ
* ಮಹಾಶ್ವೇತ
* ವನಕನ್ಯೆ ಮತ್ತು ಶಾಕುಂತಲೆ
* ದ್ರೌಪದಿಯ ಚಿತ್ರ

ಮುಖ್ಯವಾಗಿ ಸ್ತ್ರೀ ಚಿತ್ರಗಳನ್ನು ರಚನೆಮಾಡಿರುವುದು. ಸ್ತ್ರೀಯರ ಹಾವ-ಭಾವಗಳ ವಿವಿಧ ಭಂಗಿಗಳ, ಹಿಂದೂ ಸಂಸ್ಕೃತಿಯಲ್ಲಿರುವ ಸುಸಂಸ್ಕೃತವುಳ್ಳಂತವರ ಚಿತ್ರಗಳು ಇಂದಿಗೂ ಅನೇಕ ಗ್ಯಾಲರಿಗಳಲ್ಲಿ ಮಠ, ಮನೆಗಳಲ್ಲಿ ಕಾಣಬಹುದು. ರವಿವರ್ಮನು ತನ್ನ ಬದುಕಿನ ನಿತ್ಯ ಒಡನಾಟದಲ್ಲಿ ಚಿತ್ರಗಳನ್ನು ನೋಡುವುದರ ಜೊತೆಗೆ ರಚನೆ ಮಾಡುವುದು ದೊಡ್ಡ ಕೆಲಸವಾಗಿತ್ತು. ರಾಜರವಿವರ್ಮ ಸ್ತ್ರೀ ಭಾವಚಿತ್ರ, ವ್ಯಕ್ತಿಚಿತ್ರಣ ಹಾಗೂ ಸಂಯೋಜನ ಚಿತ್ರಕಲಾಕೃತಿಗಳನ್ನು ಚಿತ್ರಿಸುವುದರಿಂದಲೆ ಹೆಚ್ಚು ಪ್ರಖ್ಯಾತಿಯನ್ನು ಪಡೆದರು. ರಾಜಮನೆತನದ ಸ್ತ್ರೀಯರ ಜೊತೆ ಮಧ್ಯಮ ವರ್ಗದ ಸ್ತ್ರೀಯರನ್ನು ರೂಪದರ್ಶಿಗಳಾಗಿ



ಬಳಸಿಕೊಂಡು, ಉತ್ತಮವಾದ ಸಂಯೋಜನೆಗಳನ್ನು ಸೃಷ್ಟಿಸಿಕೊಂಡು ತನ್ನ ಕಲಾಕೃತಿಗಳಿಗೆ ಬೇಕಾಗುವಂತಹ ವಸ್ತ್ರ, ಆಭರಣಗಳು, ಭಂಗಿಗಳನ್ನು ಸೃಷ್ಟಿಸಿ ಚಿತ್ರಿಸುತ್ತಿದ್ದರು. ನೋಡುಗರು ಮನಸೆಳೆಯುವಂತಹ ದೃಶ್ಯಗಳ ಕಲ್ಪನೆಗಳನ್ನು ಅವರ ಕಲಾಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಹೆಚ್ಚಾಗಿ, ಸಿದ್ದಿ ಗುಜರಾತಿ, ಮಹಾರಾಷ್ಟ್ರ ಕೇರಳದ, ಕುಟ್ಟಿಗಳು, ಮಳೆಯಾಳಂನ ಅನೇಕ ಸ್ತ್ರೀಯರ ಚಿತ್ರಗಳನ್ನು ಕಾಣಬಹುದು.

ಪ್ರಮುಖ ಅಂಶಗಳು

* ಸ್ತ್ರೀಯರ ಕೇಶಗಳ ವೈಶಿಷ್ಟ್ಯತೆಗಳನ್ನು ಗಮನಿಸಿದರೆ ಉದ್ದನೆಯ ಗುಂಗುರ ಕೂದಲೂ ನೀಳವಾಗಿ ಬಿಟ್ಟಿರುವುದನ್ನು ಹಾಗೂ ಸ್ತ್ರೀಯರ ಎಡ ಭಾಗಕ್ಕೆ ತಲೆಯ ಮೇಲೆ ಸ್ವಲ್ಪ ಹಣೆಯಿಂದ ಮೇಲಕ್ಕೆ ಸಿಂಬೆಕಟ್ಟಿರುವಂತೆ ತುರುಬು ಚಿತ್ರಿಸಲಾಗಿದ್ದು. ಮತ್ತು ಸ್ತ್ರೀಯರ ತಲೆಯ ಹಿಂಭಾಗದಲ್ಲಿ ತುರುಬನ್ನು ಹಾಕಿ ಹೂವಿನಿಂದ ಅಲಂಕರಿಸಿರುವುದನ್ನು ಕಾಣಬಹುದು. ಈ ರೀತಿಯ ಕೇಸವಿನ್ಯಾಸ ಇವರ ಹೆಚ್ಚು ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

* ಸ್ತ್ರೀಯರ ದೇಹ ರಚನೆಯಲ್ಲಿ ಸಮೃದ್ಧಿಯಿಂದ ಕೂಡಿರುವಂತೆ ಚಿತ್ರಿಸಲಾಗಿದೆ. ಪಾಶ್ಚಾತ್ಯ ಸ್ತ್ರೀಯರ ಎತ್ತರವನ್ನು ಇವರ ಕಲಾಕೃತಿಗಳಲ್ಲಿ ಗುರುತಿಸಬಹುದು. ಎತ್ತರಕ್ಕೆ ತಕ್ಕಂತಹ ಗಾತ್ರ, ಪ್ರಮಾಣಗಳನ್ನು ಇವನ ಕಲಾಕೃತಿಗಳಲ್ಲಿ ಕಾಣಬಹುದು. ದುಂಡನೆಯ ಮುಖ ಎಲ್ಲಿಯು ಬಡಕಲೂ ದೇಹಗಳ ರಚನೆ ಕಾಣಸಿಗುವುದಿಲ್ಲ.

* ಮಹಾರಾಷ್ಟ್ರ, ಗುಜರಾತಿ, ಕೇರಳ ಶೈಲಿಯ ವಸ್ತ್ರಗಳನ್ನು ಸ್ತ್ರೀ ಕಲಾಕೃತಿಗಳಲ್ಲಿ ಬಳಸಿಕೊಂಡು ಚಿತ್ರಿಸಿರುವುದನ್ನು ಕಾಣಬಹುದು. ರೇಷ್ಮೆಗಿಂತಲೂ ಹೊಳಪುಳ್ಳ ವಸ್ತ್ರಗಳನ್ನು ಅವರ ಕಲಾಕೃತಿಯಲ್ಲಿ ಚಿತ್ರಿಸಲಾಗಿದೆ. ವಸ್ತ್ರಕ್ಕೆ ತಕ್ಕಂತಹ ವರ್ಣಗಳನ್ನು ಬಳಸಿಕೊಂಡು ವಿರುದ್ಧ ವರ್ಣಗಳಲ್ಲಿ ಚಿತ್ರಿಸಿ ನೋಡುಗರ ಮನಸ್ಸಿಗೆ ನಾಟುವಂತಹ ಚಿತ್ರಗಳನ್ನು ಕಲಾವಿದರ ಕಲಾಕೃತಿಯಲ್ಲಿ ಕಾಣಬಹುದು.

* ವಸ್ತ್ರಕ್ಕೆ ತಕ್ಕಂತಹ ಆಭರಣಗಳ ವಿನ್ಯಾಸಗಳನ್ನು ಬಳಸಿ ಚಿತ್ರಿಸಲಾಗಿದೆ. ಮಹಾರಾಜರ ಆಶ್ರಯದಲ್ಲಿ ಇದ್ದು, ಅಲ್ಲಿರುವ ವೈಭೋಗಗಳನ್ನು ನೋಡುತ್ತ, ರಾಣಿಯರ ಕಲಾಕೃತಿಗಳಲ್ಲಿ ಕಾಣಬಹುದು. ನೋಡುಗನಿಗೆ ಸುಂದರ, ಮನಸೆಳೆಯುವಂತಹ ವಸ್ತ್ರ ವಿನ್ಯಾಸಗಳನ್ನು ಬಳಸಿಕೊಂಡು ಚಿತ್ರಿಸುವುದು ಕಲಾವಿದ ರವಿವರ್ಮನ ಚಾಣಾಕ್ಷತನವಾಗಿರುತ್ತದೆ.

* ನವ್ಯ ಹಾಗೂ ಸಾಂಪ್ರದಾಯಿಕ, ಎರಡು ರೀತಿಯಿಂದಲೂ ವಸ್ತ್ರಗಳನ್ನು ಸ್ತ್ರೀ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

* ವಾದ್ಯಗಳನ್ನು ಹಿಡಿದಿರುವುದು ಕಲಾವಿದನ ಕಲಾಕೃತಿಗಳಲ್ಲಿನ ಸ್ತ್ರೀಯರ ವೈಶಿಷ್ಯತೆಯಾಗಿದೆ. ಪಾಶ್ಚಾತ್ಯರ ಪ್ರಭಾವದಿಂದ ಸ್ತ್ರೀ ಭಾವಚಿತ್ರಗಳಲ್ಲಿ ಅವರ ಪಕ್ಕದಲ್ಲಿ ಹೂದಾನಿಯನ್ನು ಬಳಸಿ ಚಿತ್ರಿಸಿರುವುದನ್ನು ಕಾಣಬಹುದು.

ಭಾರತದ ಮಹಾನ್ ಕಲಾವಿದರಲ್ಲಿ ರವಿವರ್ಮನು ೧೯ನೇ ಶತಮಾನದಲ್ಲಿ ವಿಶೇಷವಾದ ಪ್ರಸಿದ್ಧಿಯನ್ನು ಪಡೆದವನು. ಪಾಶ್ಚಾತ್ಯರ ಪ್ರಭಾವದಿಂದ ಪ್ರೇರಿತರಾದ ಇವನು ಹೆಚ್ಚಾಗಿ ಬಟ್ಟೆಗಳ ಮೇಲೆ ತೈಲವರ್ಣದಿಂದ ಕಲಾಕೃತಿಗಳನ್ನು ರಚಿಸಿದ್ದಾನೆ. ಕೇರಳ ರಾಜ್ಯದಲ್ಲಿದ್ದರೂ ಭಾರತಾದ್ಯಂತ ಪ್ರವೇಶಿಸಿ ಕಲೆಯನ್ನು ಪ್ರಸಾರ ಮಾಡಿದನು. ಹಾಗೆಯೇ ಮೈಸೂರಿನ ರಾಜರ ಕಾಲದ ಅವಧಿಯಲ್ಲಿ ಇಲ್ಲಿಗೆಬಂದು ರಾಜ ಮಹಾರಾಜರ, ರಾಣಿಯರ ಭಾವಚಿತ್ರ, ಸಂಯೋಜನೆ ಚಿತ್ರವನ್ನು ರಚನೆಮಾಡಿದ್ದಾನೆ. ಪ್ರಸ್ತುತ ದಿನಗಳಲ್ಲಿ ಆ ಕಲಾಕೃತಿಗಳು ಅನೇಕ ಗ್ಯಾಲರಿಯಲ್ಲಿ ಕಾಣಬಹುದು. ಹಾಗೆಯೇ ರವಿವರ್ಮನು ಸ್ತ್ರೀ ಚಿತ್ರಕೃತಿಗಳನ್ನು ರಚನೆಮಾಡಿರುವುದೇ ಹೆಚ್ಚು, ಪುರಾಣ, ಕಥೆ, ರಾಮಾಯಣ, ಮಹಾಭಾರತದಂತಹ ದಂತಕಥೆಗಳ ಸನ್ನಿವೇಶಗಳನ್ನು ಹೇಳಿದರೆ ಸಾಕು. ಕ್ಯಾನ್‌ವಾಸ್ ಮೇಲೆ ರಂಜಿಸುವಂತೆ ಚಿತ್ರಿಸುತ್ತಿದ್ದುದು ರವಿವರ್ಮನ ವಿಶೇಷತೆಯಾಗಿತ್ತು.

❖❖❖❖

ಅಧ್ಯಾಯ - ಏಳು

ಸಮಾರೋಪ




ಅಧ್ಯಾಯ - ಏಳು

ಸಮಾರೋಪ

ನಾಡಿನ ಸಂಸ್ಕೃತಿಯನ್ನು ಹೆಚ್ಚಿಸುವಲ್ಲಿ ಕಲಾವಿದರ ಪಾತ್ರ ಬಹುಮುಖ್ಯವಾದದ್ದು. ನಮ್ಮ ದೇಶದ ಶ್ರೀಮಂತಿಕೆಯನ್ನು ಕಲೆಗಳ ಮೂಲಕ, ಕಲಾಕೃತಿ ರಚಿಸುವುದರ ಮೂಲಕ ಕಟ್ಟುವಲ್ಲಿ ಅನೇಕ ಜನರ ಪರಿಶ್ರಮವಿರುತ್ತದೆ. ನಮ್ಮ ನಾಡಿನ ಅಮೂಲ್ಯ ಆಸ್ತಿಗಳಾಗಿದ್ದು, ತನ್ನದೇ ಆದ ಶ್ರೀಮಂತಿಯ ಕೊಡುಗೆಗಳನ್ನು ತನ್ನ ಕಲಾಕೃತಿಗಳ ಮೂಲಕ ಕೊಟ್ಟಿರುವ ರಾಜ ರವಿವರ್ಮ ಕಲೆಗಾಗಿ ತಮ್ಮನ್ನೆ ಅರ್ಪಿಸಿಕೊಂಡು ಸಾವಿರಾರು ಕಲಾಕೃತಿಗಳನ್ನು ಚಿತ್ರಿಸಿದ್ದು ನಾಡಿಗೆ ಅಮೂಲ್ಯವಾದ ಆಸ್ತಿಗಳಾಗಿವೆ.

ಪ್ರಪ್ರಥಮ ಶ್ರೇಷ್ಠ ಕಲಾವಿದರಾದ ರಾಜ ರವಿವರ್ಮರ ಕುರಿತು ಅವರ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರ ಕಲಾಕೃತಿಗಳು ಕಲಾಸಾಧನೆ ಕಲಾಕೃತಿಗಳನ್ನು ಕುರಿತು ಒಂದೆಡೆ ವ್ಯವಸ್ಥಿತವಾಗಿ ದಾಖಲಿಸುವುದರಿಂದ ಇತಿಹಾಸ ಕಟ್ಟುವುದಕ್ಕೆ ಸಹಾಯಕವಾಗುತ್ತದೆ. ಕಲಾವಿದರಿಗೂ ತಕ್ಕ ಮಟ್ಟಿಗೆ ನ್ಯಾಯ ಒದಗಿಸಿದಂತಾಗುತ್ತದೆ. ನಾಡಿನ ಚಿತ್ರಕಲೆಯ ಅಧ್ಯಾಯದಲ್ಲಿ ಇಂತಹ ಕಲಾವಿದರ ಜೀವನ ಹಾಗೂ ಅವರ ಸಾಧನೆ, ಕಲಾಕೃತಿಗಳ ಕೊಡುಗೆಯು ಅಷ್ಟೇ ಮಹತ್ವಪೂರ್ಣವಾದದ್ದು ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ಕಲಾವಿದ ರಾಜ ರವಿವರ್ಮ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣಗಳ ಅಧ್ಯಯನಕ್ಕೆ ಈ ಕಿರುಪ್ರಬಂಧ ರೂಪಗೊಂಡಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ವಸ್ತುವಿನ ನಿರೂಪಣೆಯಾಗಿದೆ. ಯಾವುದೇ ಒಂದು ಅಧ್ಯಯನಕ್ಕೆ ಅಧ್ಯಯನದ ಕ್ರಮ ಮುಖ್ಯವಾಗಿದ್ದು, ಅಧ್ಯಯನವೊಂದಕ್ಕೆ ಸೀಮಿತವಾದ ವಿಷಯವು ಅಗತ್ಯವಾಗಿರುತ್ತದೆ.



ಹೀಗಾಗಿ ಏಳು ಅಧ್ಯಾಯಗಳನ್ನು ಒಳಗೊಂಡಿರುವ ಈ ಸಂಪ್ರಬಂದವು ಒಂದೊಂದು ಅಧ್ಯಯನದಲ್ಲಿ ಅದರ ವ್ಯಾಪ್ತಿಗೆ ಸಂಬಂಧಿಸಿದ ವಿಷಯ ಪದರಗಳನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಏಳು ಅಧ್ಯಯನಗಳ ವಿಶ್ಲೇಷಣೆಗೊಂಡಿದ್ದು ಅವು ಹೀಗಿವೆ.

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ ಮತ್ತು ವೈದಾನಿಕತೆಯ ಕುರಿತು ಚರ್ಚಿಸಲಾಗಿದ್ದು, ಈ ಅಧ್ಯಯನದ ಪ್ರಮುಖ ಉದ್ದೇಶಗಳ ಪ್ರಾಸ್ತಾವಿಕತೆಯ ಜೊತೆ ವಿಷಯಗಳ ಹುಡುಕಿರುವ, ಸಂಶೋಧನೆ ಆಗಿರುವ ಕಲಾ ಸಾಹಿತ್ಯವನ್ನು ಹೇಳುವ ಉದ್ದೇಶವಾಗಿದೆ.

ಅಧ್ಯಾಯ : ಎರಡು

ಕಲಾವಿದ ರವಿವರ್ಮ ಬಾಲ್ಯದ ಬದುಕು, ಬೆಳೆದ ಪರಿಸರ, ಕಲೆಯ ಕಡೆಗೆ ವಾಲಿದ ಮನಸ್ಸು, ಕಲೆಯನ್ನು ಚಿಗುರಿನಲ್ಲಿಯೇ ಗುರುತಿಸಿ ಬೆಳೆಸಿದ ಕಾರಣೀಕರ್ತರಾದ ವ್ಯಕ್ತಿಗಳ ಕುರಿತು ರಾಜಾಶ್ರಯದಲ್ಲಿ ಕಲೆಗೆ ಪ್ರೇರಣೆ ನೀಡಿದ ಮಹಾರಾಜರುಗಳು ಪದ್ಮನಾಭಸ್ವಾಮಿ ದೇವಾಲಯದಲ್ಲಿ ಕಲಾವಿದರ ಕೆಲಸ, ಕೇರಳದ ಶೈಲಿಯ ಸ್ತ್ರೀಯರಿಂದ ಪ್ರೇರಿತರಾಗಿದ್ದು, ಯುರೋಪಿಯನ್ ವರ್ಣಚಿತ್ರಗಳ ಅದರಲ್ಲೂ ವಿಶೇಷವಾಗಿ ಆಗಷ್ಟೇ ಭಾರತದ ರಾಜಸಭೆಗಳಲ್ಲಿ ತನ್ನ ಪ್ರವೇಶವನ್ನು ಪ್ರಕಟಿಸಿದ್ದು, ಇಟಲಿಯ ಶ್ರೇಷ್ಠ ಕಲಾವಿದರ ವರ್ಣಚಿತ್ರಗಳಲ್ಲಿ ಪ್ರೇರಿತನಾಗಿದ್ದು, ತೈಲವರ್ಣಗಳ ಬಳಕೆಯನ್ನು ರಹಸ್ಯವಾಗಿ ಕಲಿತದ್ದು, ಅದರಿಂದ ಏನಾದರೂ ಹೊಸದನ್ನು ಸೃಷ್ಟಿಸುವ ದಿಟ್ಟತನ, ಸ್ತ್ರೀ ಭಾವಚಿತ್ರಗಳು, ಶ್ರೀಮಂತರ ಬೇಡಿಕೆಗಳಿಗನುಗುಣವಾಗಿ ಚಿತ್ರಗಳನ್ನು ಚಿತ್ರಿಸುತ್ತಿದ್ದು, ಕಲಾವಿದ ಬೆಳೆಯಲು ಅವನ ಪರಿಸರ, ಹಾಗೂ ಮಹಾರಾಜರುಗಳ ಪ್ರೇರಣಿ ನೀಡಿದ ಪ್ರಸಂಗಗಳು, ಮುಂದೆ, ರಾಜ ರವಿವರ್ಮನವರು ತನ್ನ ಬದುಕನ್ನೆ ಹಂತ ಹಂತವಾಗಿ ಕಲಾಕೃತಿ ರಚನೆಗೆ ತೊಡಗಿಸಿಕೊಂಡು ಕಲೆಗಾಗಿಯೆ ಜೀವನವನ್ನು ಮುಡಿಪಿಟ್ಟಿರುವುದರ ಬಗ್ಗೆ ಇಲ್ಲಿ ಅವರ ಇಡೀ ಬದುಕನ್ನು ಸ್ಥೂಲವಾಗಿ ಕಟ್ಟಿಕೊಡಲಾಗಿದೆ.

ಅಧ್ಯಾಯ : ಮೂರು

ರವಿವರ್ಮ ತಮ್ಮ ಜೀವನದಲ್ಲಿ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು ಚಿತ್ರಗಳ ವಿಷಯ ವಸ್ತು ರಚನಾಕ್ರಮ ಇವರ ಕೆಲವು ಕಲಾಕೃತಿಗಳ ಹೆಸರುಗಳ ಪರಿಚಯ ವಿಶೇಷವಾಗಿ ಸ್ತ್ರೀ ಭಾವಚಿತ್ರಗಳು ಹಾಗೂ ಸ್ತ್ರೀ ವ್ಯಕ್ತಿಚಿತ್ರಗಳನ್ನು ಪಟ್ಟಿಮಾಡಿ, ಸ್ತ್ರೀ ಕಲಾಕೃತಿಯ ಮಹತ್ವ ಹಾಗೂ ಸ್ತ್ರೀ ಕಲಾಕೃತಿಗಳಿಂದಲೆ ಹೆಚ್ಚು ಪ್ರಖ್ಯಾತಿ ಪಡೆದಿರುವ ಬಗ್ಗೆ ಕುರಿತು ಈ ಅಧ್ಯಾಯನದಲ್ಲಿ ಮಾಹಿತಿಯಿದೆ.

ಅಧ್ಯಾಯ : ನಾಲ್ಕು

ರವಿವರ್ಮ ರಚಿಸಿದ ಸ್ತ್ರೀ ಸಂಯೋಜನ ವರ್ಣಚಿತ್ರಗಳ ವಿಶ್ಲೇಷಣೆಯನ್ನು ಮಾಡಲಾಗಿದ್ದು,

ಇದು ಒಟ್ಟು ಅಧ್ಯಯನದ ಹೃದಯ ಭಾಗದಂತಿದೆ. ರವಿವರ್ಮನವರ ಸಾವಿರಾರು ಸಂಯೋಜನ ವರ್ಣ ಕಲಾಕೃತಿಗಳು ವೈವಿಧ್ಯಮಯವಾಗಿದ್ದು, ವಿವಿಧ ವಸ್ತು ವಿಷಯವನ್ನೂ ತೈಲ ಮಾಧ್ಯಮಗಳಲ್ಲಿ ರಚಿಸಲಾಗಿದೆ. ಅವುಗಳನ್ನು ಇಲ್ಲಿ ವ್ಯವಸ್ಥಿತವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದ್ದು, ಕಲಾಕೃತಿಗಳ ಹಿನ್ನೆಲೆ, ಸಮಯ, ಸಂದರ್ಭ ಬಳಸಿದಂತಹ ಮಾಧ್ಯಮ, ವಸ್ತು ವಿಷಯ, ಕುರಿತು ಇಲ್ಲಿ ವಿಶೇಷವಾಗಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ : ಐದು

ರಾಜ ರವಿವರ್ಮರ ಒಟ್ಟು ಕಲಾಕೃತಿಗಳ ಪ್ರಭಾವ, ಪ್ರೇರಣೆ, ತಂತ್ರ, ಶೈಲಿಗಳ ಕುರಿತು ಆಳವಾದ ಅಧ್ಯಯನ ಇದಾಗಿರುತ್ತದೆ. ಇಲ್ಲಿ ಮುಖ್ಯವಾಗಿ ರವಿವರ್ಮನವರ ಮೇಲೆ ಯುರೋಪಿಯನ್ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ, ವಸ್ತುಗಳು ಹಾಗೂ ವಿಷಯ ಭಾರತೀಯ ಮೂಲದ ಕಲಾ ಪದ್ಧತಿಗಳು ಇವರ ಕಲಾಕೃತಿಗಳ ಮೇಲೆ ಮೂಡಿದ ಪ್ರಭಾವ, ಇವುಗಳ ನಡುವಿನ ಸಾಗರದಂತಹ ರವಿವರ್ಮನ ಕಲಾಕೃತಿಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಅಧ್ಯಾಯ : ಆರು

ಈ ಅಧ್ಯಾಯವು ಮಹತ್ವದ್ದಾಗಿದ್ದು, ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಗಳ ವೈಶಿಷ್ಟ್ಯತೆಯನ್ನು ಹೇಳಿರುವುದು ಮುಖ್ಯವಾಗಿದ್ದು, ಅದರಲ್ಲಿ ವಿವಿಧ ಆಕಾರಗಳನ್ನು ಹೊಂದಿರುವ ಚಿತ್ರಕೃತಿಗಳ ಕುರಿತು ಚರ್ಚಿಸಿರುವುದು ವಿಷೇಶವಾಗಿದೆ.


ಅಧ್ಯಾಯ : ಏಳು

ಈ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಆಯಾ ಅಧ್ಯಾಯಗಳಿಂದ ಹೊರಬಂದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಈ ಅಧ್ಯಾಯ ಒಳಗೊಂಡಿದೆ.

ಅಧ್ಯಯನದ ಫಲಿತಗಳು

* ನಾಡಿನ ಪ್ರಪ್ರಥಮ ಕಲಾವಿದರಾಗಿದ್ದು, ೧೮೪೮ವರೆಗೂ ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು ಅವುಗಳು ವೈವಿಧ್ಯಮಯವಾಗಿವೆ. ಸ್ವಪ್ರಯತ್ನದಿಂದಲೆ ಸಾಧನೆ ಗೈದಿರುವುದನ್ನು ಅವರ ಕಲಾಕೃತಿಗಳಲ್ಲಿ ಕಾಣುವ ವೈಭವೀಕರಣದ ಪರಿಶ್ರಮವನ್ನು ಗುರುತಿಸಬಹುದು.

* ರವಿವರ್ಮ ಒಬ್ಬ ಬಹುಮುಖ ಪ್ರತಿಭೆ ಎಂದು ತಿಳಿಯಲಾಗಿದೆ. ಅವರು ಸಂಸ್ಕೃತ ಮತ್ತು ಮಲಯಾಳಂ ಎಲ್ಲಾ ಪ್ರಧಾನ ಅಭಿಜಾತ ಕಾವ್ಯಗಳನ್ನು ಆತ ಕರಗತ ಮಾಡಿಕೊಂಡಿರುವುದು ಅರಮನೆಯಲ್ಲಿನ ಕಥಕ್ಕಳಿ ಪ್ರದರ್ಶನಗಳಲ್ಲಿ ಭಾಗವಹಿಸಿ ಅದನ್ನು ಕಲಿತಿರುವುದು, ಪದಗಳನ್ನು ಸೊಗಸಾಗಿ ಹಾಡುವ ಪ್ರತಿಭೆ ಹೊಂದಿದ್ದರು ಎನ್ನಲಾಗಿದೆ.



* ಯುರೋಪಿಯನ್ ತೈಲವರ್ಣಗಳನ್ನು ಬಳಸುವ ರೀತಿ, ರಚನೆಯ ಲಾಲಿತ್ಯ, ತಂತ್ರಗಳನ್ನು ಕರಗತ ಮಾಡಿಕೊಂಡು ಭಾರತದ ಶ್ರೇಷ್ಠ ಕಲಾವಿದರಾದರು.

* ಭಾರತೀಯ ಅಭಿಜಾತ ಕಾವ್ಯಗಳ ವಿಷಯ ವಸ್ತುವನ್ನು ಬಳಸಿ, ಸ್ತ್ರೀ ಸಂಯೋಜನ ಚಿತ್ರ ರಚಿಸುವಲ್ಲಿ ಕಲಾನೈಪುಣ್ಯ ಹೊಂದಿದ್ದರು.

* ಯುರೋಪಿಯನ್ ತೈಲ ವರ್ಣಗಳಿಂದ ಉತ್ತಮ ಮೆರುಗನ್ನು ನೀಡಿ ಸ್ತ್ರೀಯರಿಗೆ ವಿಶಿಷ್ಟ ಹೊಳಪು, ಮೆರಗನ್ನು ಕೊಟ್ಟು ನೋಡುಗನ ಗಮನ ಸೆಳೆಯುವಂತಹ ಕಲಾಕೃತಿಗಳ ರಚನೆಯನ್ನು ಕಾಣಬಹುದು.

* ಸ್ತ್ರೀ ದೇವತೆಯ ಚಿತ್ರ ಕಲ್ಪನೆಯನ್ನು ಮೂಡಿಸಿ ಉತ್ತಮವಾದ ಕಲಾಕೃತಿಗಳನ್ನು ರಚಿಸಿ, ಜನಸಾಮಾನ್ಯರಲ್ಲಿ ದೇವರ ಕಲ್ಪನೆಯನ್ನು ಕಣ್ಣ ಮುಂದೆ ಇಟ್ಟು, ಎಲ್ಲಾ ಸಾಮಾನ್ಯ ಜನಕ್ಕೂ ದೊರಕುವಂತೆ ಮಾಡಿದ್ದು ಭಕ್ತಿ ಭಾವನೆಯನ್ನು ಮೂಡಿಸಿದವು ರಾಜ ರವಿವರ್ಮರ ಕಲಾಕೃತಿಗಳು.

* ಇವರ ಕಲಾಕೃತಿಗಳಲ್ಲಿ ರೆಮ್‌ಬ್ರಾಂಟ್ ಪ್ರಭಾವವನ್ನು ಗುರುತಿಸಬಹುದು. ರಾಜ ರವಿವರ್ಮನನ್ನು ರೆಮ್‌ಬ್ರಾಂಟ್ ಎಂದು ಕರೆಯುತ್ತಾರೆ. ಅವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸೌಂದರ್ಯ ಇಬ್ಬರಿಗೂ ನದಿಗಳ ಆಕಾಶದ ಹೊಲಗದ್ದೆಗಳ ಮೇಘಮಂಡಲ ಇತ್ಯಾದಿಗಳ ಕಲಾಕೃತಿಯಲ್ಲಿ ಕಾಣಬಹುದು.

* ಸ್ತ್ರೀ ಕಲಾಕೃತಿಗಳನ್ನು ಹೆಚ್ಚು ಆಕರ್ಷಕ ಹಾಗೂ ವೈಭವಿಕರಿಸಿ ಚಿತ್ರಿಸುತ್ತಿದ್ದರು, ಅವರ ಭಂಗಿಗಳು ಎಂತಹವರನ್ನು ಆಕರ್ಶಿಸುವಂತಿರುವುದನ್ನು ಕಾಣಬಹುದು.

* ಯುರೋಪಿಯನ್ ವರ್ಣ ಹಾಗೂ ಭಾರತೀಯ ಸಾಂಪ್ರದಾಯಿಕ ಚಿತ್ರಗಳನ್ನು ಬಳಸಿ ಅಕೆಡಿಮಿಕ್ ಶೈಲಿಯಲ್ಲಿ ತಂತ್ರ ಪದ್ಧತಿಯ ಪ್ರಭಾವವು ದಟ್ಟವಾಗಿ ಕಂಡುಬರುತ್ತದೆ. ಇದು ಅವರ ವಿಶೇಷತೆಯಾಗಿದ್ದು, ಈ ತಂತ್ರವನ್ನು ಉಪಯೋಗಿಸಿ ಕಲಾಕೃತಿ ರಚಿಸಿ ದೇಶದಾದ್ಯಂತ ಗುರುತಿಸಿಕೊಂಡು, ಭಾರತದೇಶದ ಪ್ರಮುಖ ಪ್ರಥಮ ಕಲಾವಿದರೆನಿಸಿಕೊಂಡಿದ್ದಾರೆ.

* ಸ್ತ್ರೀ ಕಲಾಕೃತಿಗಳು ರವಿವರ್ಮನ ಕಲಾಕೃತಿಗಳಲ್ಲಿ ಗಮನಸೆಳೆಯುತ್ತವೆ. ಈ ಸ್ತ್ರೀಯರಿಂದಲೇ ಹೆಚ್ಚು ಪ್ರಸಿದ್ಧಿಯನ್ನು ಪಡೆದರು ಎಂದರೆ ತಪ್ಪಾಗಲಾರದು.

* ಸ್ತ್ರೀ ಕಲಾಕೃತಿಗಳನ್ನು ದೇವರ ಕಲಾಕೃತಿ ಇದ್ದರೂ, ನಾವೆಲ್ಲರೂ ಪೂಜಿಸುತ್ತಿರುವುದಕ್ಕೆ ಕಾರಣರಾದರು. ರವಿವರ್ಮನವರು ದೇವರ ಪ್ರಮುಖ ಕಲ್ಪನೆಗಳನ್ನು ಮೂಡಿಸಿದರು.

* ರಾಜರ ಮನೆತನದಲ್ಲಿಯೇ ಇದ್ದ ಅವರ ಸ್ತ್ರೀ ಕಲಾಕೃತಿಗಳನ್ನು ಗಮನಿಸಿದಾಗ ಹೆಚ್ಚಾಗಿ ವಿಜೃಂಭಿಸುವ ವಸ್ತ್ರ ವೈಢೂರ್ಯಗಳಿಂದ ರಾರಾಜಿಸುವಂತಹ ಕಲಾಕೃತಿಗಳನ್ನು ಕಾಣಬಹುದು.

* ಸ್ತ್ರೀಯರ ಭಾವನೆಗಳಿಗಿಂತ ಅವರ ವೈಭವಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ತೋರಿದಂತೆ ಕಂಡುಬಂದರೆ ಕಲಾವಿದನ ತಾಳ್ಮೆಯನ್ನು ಗುರುತಿಸಬಹುದು.

* ಕೆಲವು ಕಲಾಕೃತಿಗಳಲ್ಲಿ ಅಂದರೆ ಅಲೆಮಾರಿ, ಗ್ರಾಮೀಣ ದೃಶ್ಯ ಇನ್ನು ಕೆಲವು ಕಲಾಕೃತಿಗಳು ಬಡತನಕ್ಕೆ ಸಂಬಂಧಿಸಿದ ಚಿತ್ರಗಳಿದ್ದು ಅವುಗಳನ್ನು ಚಿತ್ರಿಸುವಲ್ಲಿ ಪ್ರಯತ್ನ ಕಾಣಬಹುದು. ಏಕೆಂದರೆ ಬಡತನದ ದೃಶ್ಯವನ್ನು ಕಂಡಿಲ್ಲದ ಕಾರಣ ಇದ್ದರು ಇರಬಹುದು. ಬಡತನದ ಈ ಕಲಾಕೃತಿಗಳಲ್ಲಿ ವಿಫಲತೆಯನ್ನು ಕಾಣಬಹುದು.

* ಸ್ತ್ರೀಯರ, ಗಾತ್ರ, ಮೈಕಟ್ಟುಗಳನ್ನು ಗಮನಿಸಿದಾಗ ಪಾಶ್ಚಾತ್ಯರ ಪ್ರೇರಣೆ, ಪ್ರಭಾವ ಎದ್ದು ತೋರುತ್ತದೆ. ಅವರ ಅನಾಟಮಿಯಲ್ಲಿ ಸ್ವಲ್ಪ ಕುಂದು-ಕೊರತೆಗಳನ್ನು ಕಾಣಬಹುದು. ಅವರ ವರ್ಣಗಾರಿಕೆಯ ಮುಂದೆ ಈ ಎಲ್ಲ ಅಂಶಗಳು ಮುಚ್ಚಿಹೋಗುತ್ತವೆ.

* ರವಿವರ್ಮನ ಸ್ತ್ರೀ ಕಲಾಕೃತಿಗಳ ಬಗ್ಗೆ ಎಷ್ಟು ಪ್ರಖ್ಯಾತಿ ಹೊಂದಿವೆಯೋ, ಅದೇ ಟೀಕೆಗೊಳಗಾದವು, ಒಬ್ಬ ಕಲಾವಿದ ಅಂದ ಮೇಲೆ ಹೊಗಳಿಕೆ ತೆಗಳಿಕೆಗಳು ಸರ್ವೇಸಾಮಾನ್ಯವಾಗಿದೆ. ಇದರಿಂದ ಕಲಾವಿದರ ಪರಿಸ್ಥಿತಿ ಬೆಳೆಯಬೇಕು ಎನ್ನುವ ಹಂಬಲವಿದ್ದದ್ದು ಇರಬಹುದು.

* ಇವರ ಸ್ತ್ರೀಭಾವ ಚಿತ್ರಣ ಹಾಗೂ ವ್ಯಕ್ತಿಭಾವ ಚಿತ್ರಗಳನ್ನು ಚಿತ್ರಿಸುತ್ತಿದ್ದ ಅಕಾಡೆಮಿಕ್ ಶೈಲಿಯನ್ನು ನಾವು ಇಂದಿಗೂ ಈ ರೀತಿಯಲ್ಲಿಯೇ ಕಲಾಕೃತಿಗಳನ್ನು ರಚಿಸುತ್ತಿರುವುದನ್ನು ಗಮನಿಸಬಹುದು.

* ಭಾರತದ ವಿವಿಧಡೆಯಿರುವ ರಾಜ ರವಿವರ್ಮನ ಸ್ತ್ರೀ ಕಲಾಕೃತಿಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ದಾಖಲಿಸಿ ಪ್ರಸ್ತುತ ಸಂಪ್ರಬಂಧವನ್ನು ಕಟ್ಟಿಕೊಡಲಾಗಿದೆ.

* ಪ್ರಸ್ತುತ ಅಧ್ಯಯನ ವ್ಯಕ್ತಿ ಕೇಂದ್ರಿತ ಅಧ್ಯಯನವಾಗಿರುವುದರಿಂದ ರಾಜ ರವಿವರ್ಮ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣವನ್ನು ಒಂದೆಡೆ ಹಿಡಿದಿಡುವುದು ಪ್ರಮುಖ ಧೋರಣೆ ಈ ಅಧ್ಯಯನದ್ದಾಗಿದೆ.

* ರಾಜ ರವಿವರ್ಮನವರ ಸಮಗ್ರ ಬದುಕು ಮತ್ತು ಸ್ತ್ರೀ ಚಿತ್ರಗಳು ಸಮಗ್ರ ಬದುಕಿನ ಕಲಾಕೃತಿಗಳು ಒಂದೆಡೆ ಸಂಗ್ರಹಿಸಿ ಅವುಗಳ ರಚನಾ ಹಿನ್ನೆಲೆ, ಉದ್ದೇಶ ಪ್ರಸ್ತುತತೆ ಮುಂತಾದವುಗಳನ್ನು ಮಹಾ ಪ್ರಬಂಧದ ರೂಪದಲ್ಲಿ ಹಿಡಿದಿಡುವುದರ ಪ್ರಾಮಾಣಿಕ ಪ್ರಯತ್ನ ಈ ಅಧ್ಯಯನದ ಮುಖ್ಯ ಧ್ಯೇಯವಾಗಿದೆ. ಉಳಿದಂತೆ ರಾಜ ರವಿವರ್ಮನ ಚಿತ್ರಕಲಾ ಬದುಕು, ತೈಲ ವರ್ಣದಲ್ಲಿನ ಸಾಧನೆ, ಇನ್ನೊಂದು ಭಾಗ, ಸ್ತ್ರೀ ಚಿತ್ರಗಳನ್ನು ಚಿತ್ರಿಸುವುದನ್ನು ಕರಗತಮಾಡಿಕೊಂಡು ಪ್ರಖ್ಯಾತಿಯನ್ನು ಪಡೆದಿರುವ ಕಲಾವಿದ ಹೀಗೆ ಅವರ ಬಹುಮುಖ ಪ್ರತಿಭೆಯನ್ನು ಇಲ್ಲಿ ಸ್ಥೂಲವಾಗಿ ಹೇಳುವ ಅವಕಾಶವಿದ್ದು, ಮುಂದಿನ ಅಧ್ಯಯನಕಾರರು ಈ ನಿಟ್ಟಿನಲ್ಲಿ ತಮ್ಮ ಅಧ್ಯಯನವನ್ನು ಕೈಗೊಳ್ಳುವ ಅವಕಾಶವಿರುವುದನ್ನು ಮನಗಾಣಬಹುದು.

❖❖❖❖

ಅನುಬಂಧಗಳು



ಅನುಬಂಧ – ೧

ಸಂಕ್ಷೇಪಗಳು

ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ಕ.ಸಾ.ಪ.ಬೆಂ	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾ.ಶಿ	:	ಕಾಶ್ಯಪ ಶಿಲ್ಪಶಾಸ್ತ್ರ
ಕ್ರಿ.ಶ.	:	ಕ್ರಿಸ್ತ ಶಕ
ಮೈ.ವಿ.ವಿ.	:	ಮೈಸೂರು ವಿಶ್ವವಿದ್ಯಾಲಯ
ಗು.ವಿ.ವಿ.	:	ಗುಲಬರ್ಗಾ ವಿಶ್ವವಿದ್ಯಾಲಯ
ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
ಪ್ರ.ಮೈ.ವಿ.ವಿ.	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ವಿ.ಧ.ಪುರಾಣ	:	ವಿಷ್ಣು ಧರ್ಮೋತ್ತರ ಪುರಾಣ.
ಶಿ.ರ.	:	ಶಿಲ್ಪರತ್ನ
ಪು	:	ಪುಟ
ಕ.ಕ.	:	ಕರಾವಳಿ ಕರ್ನಾಟಕ
ಉ.ಕ	:	ಉತ್ತರ ಕರ್ನಾಟಕ
ದ.ಕ	:	ದಕ್ಷಿಣ ಕನ್ನಡ
ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಅನುಬಂಧ – ೨

ಸ್ತ್ರೀ ಕಲಾಕೃತಿಗಳ ನೆಲೆಗಳು

೧. ಚಿತ್ರ ಆರ್ಟ್ ಗ್ಯಾಲರಿ (ತಿರುವನಂತಪುರಂ, ಕೇರಳ)

* ಶಕುಂತಲ ಮತ್ತು ಸಖಿಯರು
* ಮಹಾರಾಣಿ ಲಕ್ಷ್ಮೀ ಬಾಯಿ
* ವೀಣೆ ಮತ್ತು ಸ್ತ್ರೀ
* ದಮಯಂತಿ
* ದಿ ಜಿಪ್ಸಿಸ್

೨. ರಂಗ ವಿಲಾಸ ಪ್ಯಾಲೆಸ್ (ತಿರುವನಂತಪುರಂ, ಕೇರಳ)

* ಅಪ್ಪ ಬರುತ್ತಿದ್ದಾರೆ.
* ಹೂವನ್ನು ಮುಡಿದುಕೊಳ್ಳುತ್ತಿರುವ ಸ್ತ್ರೀ
* ಮಲಬಾರಿನ ಹುಡುಗಿ ಮತ್ತು ವೀಣೆ
* ಮಹಾರಾಷ್ಟ್ರದ ಸ್ತ್ರೀ
* ಚಿಂತಿಸುತ್ತಿರುವ ಸ್ತ್ರೀ
* ಮಗುವಿನ ನಿರೀಕ್ಷಣೆಯ ಚಿತ್ರ
* ಶಕುಂತಲ ಪತ್ರ ಲೇಖನ
* ವಾದ್ಯದೊಂದಿಗೆ ಸ್ತ್ರೀ
* ಕೃಷ್ಣ ಮತ್ತು ಯಶೋಧ
* ರಾಣಿಯ ಭಾವಚಿತ್ರ
* ಸ್ನಾನದ ಕೊಠಡಿಯಲ್ಲಿ ಸ್ತ್ರೀ
* ಸ್ತ್ರೀ ಮಂತ ಮಹಿಳೆ
* ಮದುಮಗಳು
* ರಾಣಿಯ ಭಾವಚಿತ್ರ
* ಮಹಾರಾಣಿ ಸೇತು ಲಕ್ಷ್ಮೀಬಾಯಿ
* ಗೋಡೆಗೆ ನಿಂತಿರುವ ಸ್ತ್ರೀ

೩. ಸರ್ಕಾರಿ ಮ್ಯೂಸಿಯಂ (ಚೆನ್ನೈ)

* ಸೀತಾ ವನವಾಸ
* ಯಶೋಧ ಮತ್ತು ಕೃಷ್ಣ
* ಮಹಿಳೆ ಮತ್ತು ಕನ್ನಡಿ

೪. ಸಾಲರ್‌ಜಂಗ್ ಮ್ಯೂಸಿಯಂ (ಹೈದ್ರಾಬಾದ್)

* ಕೇರಳದ ಸ್ತ್ರೀ
* ನಿರಾಶದಾಯಕವಾದ ಸುದ್ಧಿ
* ಕೇರಳದ ಸ್ತ್ರೀ
* ಕತ್ತಿ ಹಿಡಿದುಕೊಂಡು ನಿಂತ ಸ್ತ್ರೀ

೫. ಶ್ರೀಭವಾನಿ ಮ್ಯೂಸಿಯಂ (ಹೈದ್ರಾಬಾದ್)

* ದಮಯಂತಿ
* ಮಲೆಯಾಳಿ ಸ್ತ್ರೀ

೬. ಜಗನ್‌ಮೋಹನ್ ಪ್ಯಾಲೆಸ್ (ಗ್ಯಾಲರಿ), ಮೈಸೂರು

* ದಮಯಂತಿ (ಪತ್ರ ಬರೆಯುತ್ತಿರುವುದು)
* ಹಾಲು ಮಾರುವವಳು
* ಸಂಗೀತಗಾರರು
* ಹಂಸ ದಮಯಂತಿ

೭. ಸೈಯ್ಯಾಜಿರಾಮ್ ಆರ್ಟ್ ಗ್ಯಾಲರಿ, ಬರೋಡ

* ಸರಸ್ವತಿ



ರಾಜಾರವಿವರ್ಮನ ಕಲಾಕೃತಿಗಳ ನೆಲೆಗಳು

* ಕೌದಿರ್, ಪಟೋಮ್ ಮತ್ತು ರಂಗವಿಲಾಸ ಪ್ಯಾಲೆಸ್, ತಿರುವನಂತಪುರಂ, ಕೇರಳ
* ಶ್ರೀ ಚಿತ್ರ ಆರ್ಟ್ ಗ್ಯಾಲರಿ, ತಿರುವನಂತಪುರಂ, ಕೇರಳ
* ಸೈಯ್ಯಾಜಿರಾಮ್ ಆರ್ಟ್ ಗ್ಯಾಲರಿ, ಬರೋಡ, ಗುಜರಾತ್
* ಶ್ರೀ ಆರ್ಟ್ ಗ್ಯಾಲರಿ, ಕೇರಳ
* ಹುಜುರ ಮಹಡಿ ಪ್ಯಾಲೆಸ್, ತಂಜಾವೂರು, ತಮಿಳುನಾಡು
* ಡಾ. ಎಂ. ಎ. ಚಿದಂಬರಂ, ಚೆನ್ನೈ, ತಮಿಳುನಾಡು
* ಔಂದ್ ವಸ್ತುಸಂಗ್ರಹಾಲಯ, ಔಂದ್, ಮಹಾರಾಷ್ಟ್ರ
* ಶಿವಾಜಿ ಮ್ಯೂಸಿಯಂ, ಮುಂಬೈ, ಮಹಾರಾಷ್ಟ್ರ
* ಸಾಲರ್‌ಜಂಗ್ ಮ್ಯೂಸಿಯಂ, ಹೈದ್ರಾಬಾದ್, ಆಂಧ್ರಪ್ರದೇಶ
* ತಂಜಾವೂರ್, ತಮಿಳುನಾಡು
* ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ನವದೆಹಲಿ
* ಕೇಂದ್ರ ಲಲಿತಕಲಾ ಅಕಾಡೆಮಿ (ಸರ್ಕಾರಿ ಆರ್ಟ್ ಗ್ಯಾಲರಿ), ನವದೆಹಲಿ
* ಮುಂಬೈ ಕಲಾ ಅಕಾಡೆಮಿ, ಮುಂಬೈ
* ಜಗನ್ ಮೋಹನ್ ಪ್ಯಾಲೆಸ್, (ಗ್ಯಾಲರಿ) ಮೈಸೂರು
* ಗೋವಾ ಮ್ಯೂಸಿಯಂ, ಗೋವಾ
* ಪ್ರಕಾಶ್ ಪ್ಯಾಲೆಸ್, ಶಿವನಿವಾಸ್ ಪ್ಯಾಲೆಸ್, ಮತ್ತು ಶಂಭು ನಿವಾಸ್ ಪ್ಯಾಲೆಸ್, ಉದಯಪುರ, ರಾಜಸ್ಥಾನ
* ಬಿರ್ಲಾ ಅಕಾಡೆಮಿ ಆರ್ಟ್ ಅಂಡ್ ಸ್ಕಲ್ಪಚರ್, ಕಲ್ಕತ್ತ
* ವಿಕ್ಟೋರಿಯಾ ಮೆಮೋರಿಯಲ್ ಹಾಲ್, ಕಲ್ಕತ್ತ
* ಹೆಚ್. ಹೆಚ್. ಮಹಾರಾಜ ವಿಶ್ವವಿದ್ಯಾಲಯ, ತಿರುವನಂತಪುರಂ
* ಮಾಧವನ್ ನಾಯರ್ ಫೌಂಡೇಶನ್, ಕೊಚ್ಚಿ, ಕೇರಳ
* ಸರ್ಕಾರಿ ಮ್ಯೂಸಿಯಂ, ಚೈನ್ನೈ
* ಟಾಟಾ ಇನ್ಸ್‌ಟಿಟೂಟ್ ಆಫ್ ಫಂಡಮೆಂಟಲ್ ರೀಸರ್ಚ್ ಸೆಂಟರ್, ಕಲ್ಕತ್ತ

ಹೀಗೆ ಇನ್ನೂ ಅನೇಕ ಭಾರತದಾದ್ಯಂತ ಕಲಾಕೃತಿಗಳು ಸಂಗ್ರಹಕಾರರಲ್ಲಿ ಸಂಗ್ರಹಗೊಂಡಿದ್ದು, ಹೊರದೇಶದಲ್ಲೂ ಕಲಾಕೃತಿಗಳು ಸಂಗ್ರಹಗೊಂಡಿವೆ. ರಾಯಲ್ ಅಕಾಡೆಮಿ ಆಫ್ ಲಂಡನ್, ಅಮೇರಿಕಾ, ಫ್ರಾನ್ಸ್ ಮುಂತಾದ ಸರ್ಕಾರಿ ಹಾಗೂ ಖಾಸಗಿ ಸಂಗ್ರಹಾಲಯದಲ್ಲಿ ರವಿ ವರ್ಮನವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಗ್ರಂಥಋಣ

೧. **ಪುರಾಣನಾಮ ಚೂಡಾಮಣಿ** - **ಬೆನಗಲ್ ರಾಮರಾವ್ ಪಾನ್ಯಂ ಸುಂದರ ಶಾಸ್ತ್ರಿ**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು
೨೦೧೦

೨. **ವರ್ಣ ಸಂಚಯ** - **ಡಾ. ಎಸ್.ಸಿ. ಪಾಟೀಲ**
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಲಕಲ್
೨೦೧೦

೩. **ವಿ.ಟಿ. ಕಾಳೆ** - **ಡಾ.ಎಸ್.ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೨೦೦೪

೪. **ಭಾರತೀಯ ಕಲೆ** - **ಎನ್. ಮರಿಶಾಮಾಚಾರ್**
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು
೨೦೦೧

೫. **ಭಾರತದಲ್ಲಿ ಸಮಕಾಲೀನ ಕಲೆ** - **ಎಸ್ ಮರಿಶಾಮಾಚಾರ್**
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು
೧೯೮೭

೬. **ಭಾರತೀಯರು ಚಿತ್ರಕಲೆಯಲ್ಲಿ ರಾಜರವಿವರ್ಮನ ಸ್ಥಾನ** - **ಅ.ನ.ಕೃ.**
ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು
೧೯೬೪

೭. **ದೃಶ್ಯಕಲಾವಿದರು** - **ಎನ್. ಮರಿಶಾಮಾಚಾರ್**
ಪ್ರಸಾರಾಂಗ ಕ.ವಿ.ವಿ. ಹಂಪಿ,
೨೦೦೩

೮. **ದೃಶ್ಯಕಲಾ ಪ್ರಪಂಚ** - **ಎನ್. ಮರಿಶಾಮಾಚಾರ್**
ಸಿ.ಎಂ.ಎಸ್. ಪ್ರಕಾಶನ, ಬೆಂಗಳೂರು
೨೦೦೭

೧೦. **ಕರ್ನಾಟಕ ಜನಪದ ಚಿತ್ರಕಲೆ** – **ಡಾ. ಎಸ್. ಸಿ. ಪಾಟೀಲ**
ವೀರಶೈವ ಅಧ್ಯಯನ ಸಂಸ್ಥೆ,
ಗದಗ
೧೯೯೩

೧೧. **ದೃಷ್ಟಿ-ಸೃಷ್ಟಿ** - **ಡಾ. ಶಿವಾನಂದ ಎಚ್. ಬಂಟನೂರು**
ಅಲಕಾ ಪ್ರಕಾಶನ, ಬಿಜಾಪೂರ
೨೦೦೯

೧೨. **ಸಂಯೋಜನೆ** - **ಎನ್. ಮರಿಶಾಮಾಚಾರ್**
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು
೧೯೯೯.

೧೩. **ಕಲಾದಿಗ್ಗಜರು** – **ಎನ್ ಮರಿಶಾಮಾಚಾರ್**
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು
೨೦೦೯

೧೪. **Divine Lithography**
Enrico Castelli and Giovanni
Aprile il Tamburo Parlante,
New Delhi - 2005

೧೫. **ಕಲಾ ಸಂವೇದನೆಯ ಒಳನೋಟಗಳು** - **ಕೆ.ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೭

೧೬. **ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ** - **ಕೆ.ವಿ. ಸುಬ್ರಹ್ಮಣ್ಯಂ**
ಸ್ಪಂದನ ಚಿತ್ರಕಲಾವಿದರ ಬಳಗ,
ಬೆಂಗಳೂರು
೧೯೯೫

೧೭. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣಗಳ ಬಳಕೆ** - **ಕೆ.ವಿ. ಕಾಳೆ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ
೨೦೦೦

೧೮. **ಕಲೆಯ ನೆಲೆ** - **ಡಾ. ವಿ.ಕೃ. ಗೋಕಾಕ್**
ನಿರ್ದೇಶಕರು, ಪ್ರಸಾರಾಂಗ, ಮೈಸೂರು
೧೯೭೮

೧೯. **ಕರ್ನಾಟಕದ ಕಲೆಗಳು ಕನ್ನಡ ನಾಡಿನ ಕಲಾವಿದರು** - **ಪಿ.ಆರ್. ತಿಪ್ಪೇಸ್ವಾಮಿ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೯೮೬

೨೦. **ಕಲಾ ಸಿದ್ಧಾಂತ** - **ವಿ.ಕೃ.ಗೋಕಾಕ**
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
೨೦೦೪

೨೧. **ಕಲೆ ಮತ್ತು ಕಲಾನುಭವ** - **ಚಂದ್ರಕಾಂತ ಕುಸನೂರು**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೨೦೦೮

೨೨. **ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು** - **ಡಾ. ಲಕ್ಷ್ಮಿದೇವಿ ಗವಾಯಿ**
ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ
೨೦೦೩


೨೩. **ಕಲಾ ಚರಿತ್ರೆ** - **ಅಶೋಕ ಟಿ. ಅಕ್ಕಿ,**
ಎಂ.ಎಸ್. ಶಾಬಾದಿಮಠ,
ಬುಕ್‌ಡೀಪೋ, ಗದಗ
೧೯೮೫

೨೪. **ಕಲಾ ಪ್ರಪಂಚ** - **ಡಾ. ಶಿವರಾಮ ಕಾರಂತ**
ಸಪ್ನ ಬುಕ್ ಹೌಸ್, ಬೆಂಗಳೂರು
೧೯೭೮

೨೫. **ಚಿತ್ರಕಲಾ ಪ್ರಪಂಚ** - **ಪ್ರಸಂ. ಪಿ.ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೩

೨೬. **ಚಿತ್ರಕಲೆ** - **ಅ.ನ.ಕೃ.**
ವೆಂಕಟಯ್ಯ ಆ್ಯಂಡ್ ಸನ್ಸ್
ಮೈಸೂರು
೧೯೭೦

೨೭. **ಚಿತ್ರಕಲಾ ಚಿಂತನೆ** - **ಶಂಕರ ಪಾಟೀಲ**
ಪ್ರಗತಿ ಪ್ರಕಾಶನ, ದಾವಣಗೆರೆ
೧೯೯೫



೨೮. ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು - ಡಾ. ಎಸ್.ಸಿ. ಪಾಟೀಲ್
ಸ್ಕೂಲ್ ಆಫ್ ಆರ್ಟ್, ಧಾರವಾಡ,
೧೯೯೬

೨೯. **Raja Ravivarma** - **Parsram Mangharam**
The Peinter Prinec, 1848 - 1906

❖❖❖❖